www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ

ಮನೆಯಿಂದಲೇ ಕಚೇರಿ ಕೆಲಸ ಮಾಡುತ್ತಿದ್ದ ಉದ್ಯೋಗಿಗಳು ಕಚೇರಿಗೆ ಹೋಗಲು ಶುರು ಮಾಡಿದ್ದಾರೆ. ಈ ಸಂದರ್ಭದಲ್ಲಿ ಕುಟುಂಬದ ಸುರಕ್ಷತೆಗೂ ಕಾಳಜಿ ಇರಬೇಕಾಗುತ್ತದೆ

ಚರ್ಚೆ ಮುಸ್ಲಿಮರು ಪಾಕಿಸ್ತಾನಕ್ಕೆ ಹೋಗಲಿ ಎನ್ನುವವರು ಹಿಂದೂಗಳೇ ಅಲ್ಲ: ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿಕೆ 9

ಷರತ್ತುಬದ್ಧ ಮಾತುಕತೆ: ರೈತರ ತಿರಸ್ಕಾರ 5A

ಪಕ್ಷ ವಿರೋಧಿ ಕೃತ್ಯ: ಶೀಘ್ರ ಕ್ರಮ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
52,386 ▼	15,689 ▼	₹49,300 (ಬೆಂಗಳೂರು) ▼	₹70,700 (ಬೆಂಗಳೂರು) ▼	74.64 ▲

ರಾಜ್ಯ ಕೋವಿಡ್ ಅಂಕಿ–ಅಂಶ

28,67,158 ▲	ಒಟ್ಟು ಸೋಂಕಿತರು (28,64,868 ನಿನ್ನೆಯ ವಿವರ)
37,906 ▼	ಸಕ್ರಿಯ ಪ್ರಕರಣಗಳು
27,93,498 ▲	ಗುಣಮುಖರಾದವರು
35,731 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	2,290 ▼
ಗುಣಮುಖ	3,045 ▼
ಸಾವು	68 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

‘ಎಸ್ಸೆಸ್ಸೆಲ್ಸಿ ಪರೀಕ್ಷೆ: ರಹಸ್ಯ ಕಾರ್ಯಸೂಚಿ ಇಲ್ಲ’ 6

ಇಂದಿನ ಪಾಡ್‌ಕಾಸ್ಟ್ ವಿಶೇಷ
ವಚನವಾಣಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

1,500 ಆಮ್ಲಜನಕ ಉತ್ಪಾದನಾ ಘಟಕ ಶೀಘ್ರ ಆರಂಭ: ಪ್ರಧಾನಿಗೆ ಮಾಹಿತಿ

3ನೇ ಅಲೆ ಎದುರಿಸಲು ಸಿದ್ಧತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್–19ರ ಎರಡನೇ ಅಲೆ ಸಂದರ್ಭದಲ್ಲಿ ವೈದ್ಯಕೀಯ ಆಮ್ಲಜನಕ, ಆಸ್ಪತ್ರೆಯಲ್ಲಿ ಹಾಸಿಗೆ, ವೆಂಟಿಲೇಟರ್‌ನಂತಹ ಸೌಕರ್ಯಗಳ ಭಾರಿ ಕೊರತೆಯು ದೊಡ್ಡ ಬಿಕ್ಕಟ್ಟು ಸೃಷ್ಟಿಸಿತ್ತು. ಹಾಗಾಗಿ, ಇಂತಹ ಸೌಲಭ್ಯಗಳ ಹೆಚ್ಚಳಕ್ಕೆ ಕೇಂದ್ರ ಸರ್ಕಾರ ಮುಂದಾಗಿದೆ.

ದೇಶದಾದ್ಯಂತ ವೈದ್ಯಕೀಯ ಆಮ್ಲಜನಕ ಪೂರೈಕೆ ಹೆಚ್ಚಳದ ಯೋಜನೆಯ ಪ್ರಗತಿ ಪರಿಶೀಲನೆ ಸಭೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ನಡೆಸಿದ್ದಾರೆ. 1500ಕ್ಕೂ ಹೆಚ್ಚು ಪಿಎಸ್‌ಎ ಮಾದರಿಯ ಆಮ್ಲಜನಕ ಉತ್ಪಾದನೆ ಘಟಕಗಳು ಶೀಘ್ರವೇ ಕಾರ್ಯಾರಂಭ ಮಾಡಲಿವೆ ಎಂಬ ಮಾಹಿತಿಯನ್ನು ಪ್ರಧಾನಿಗೆ ಅಧಿಕಾರಿಗಳು ನೀಡಿದ್ದಾರೆ. ಈ ಘಟಕಗಳ ಮೂಲಕ, ನಾಲ್ಕು ಲಕ್ಷ ಹಾಸಿಗೆಗಳಿಗೆ ಆಮ್ಲಜನಕ ಒದಗಿಸಬಹುದು ಎಂದು ಹೇಳಲಾಗಿದೆ.

ದೇಶದಾದ್ಯಂತ ವಿವಿಧ ಆಸ್ಪತ್ರೆಗಳಲ್ಲಿ ಈ ಘಟಕಗಳು ತಲೆ ಎತ್ತಲಿವೆ. ಪಿಎಂ–ಕೇರ್ಸ್ ನಿಧಿ, ವಿವಿಧ ಸಚಿವಾಲಯಗಳು ಮತ್ತು ಸಾರ್ವಜನಿಕ ವಲಯದ ಉದ್ದಿಮೆಗಳ ಮೂಲಕ ಈ ಘಟಕಗಳ ವೆಚ್ಚವನ್ನು ಭರಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

> **ನಿರ್ಬಂಧಗಳಿಗೆ ವಿನಾಯಿತಿ ಕೊಡಲಾಗಿದೆ ಎಂದರೆ ಎರಡನೇ ಅಲೆ ಮುಗಿಯಿತು ಎಂದಲ್ಲ. ಅಪಾಯ ಇನ್ನೂ ಇದೆ. ಪ್ರವಾಸಿ ತಾಣಗಳಲ್ಲಿ ಅಪಾಯ ಹೆಚ್ಚು**
> **ಲವ ಅಗರ್‌ವಾಲ್,** ಕೇಂದ್ರ ಆರೋಗ್ಯ ಸಚಿವಾಲಯದ ಜಂಟಿ ಕಾರ್ಯದರ್ಶಿ

ಜಿಲ್ಲಾ ಮಟ್ಟದ ಸರ್ಕಾರಿ ಆಸ್ಪತ್ರೆಗಳಲ್ಲಿ ಪಿಎಸ್‌ಎ ಮಾದರಿಯ ಆಮ್ಲಜನಕ ಉತ್ಪಾದನೆ ಘಟಕಗಳನ್ನು ಆರಂಭಿಸಬೇಕು. ರಾಜ್ಯ ಸರ್ಕಾರಗಳ ಜತೆಗಿನ ಸಮನ್ವಯದಲ್ಲಿ ಆದಷ್ಟು ಬೇಗನೆ ಇವುಗಳ ಕೆಲಸ ಆರಂಭ ಆಗಬೇಕು ಎಂದು ಪ್ರಧಾನಿ ಮೋದಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದರು.

ಆಮ್ಲಜನಕ ಘಟಕಗಳ ನಿರ್ವಹಣೆಗೆ ಆಸ್ಪತ್ರೆ ಸಿಬ್ಬಂದಿಗೆ ತರಬೇತಿ ನೀಡಬೇಕು. ಪ್ರತಿ ಜಿಲ್ಲೆಯಲ್ಲಿಯೂ ತರಬೇತಿ ಪಡೆದ ಸಿಬ್ಬಂದಿ ಇರಬೇಕು ಎಂದು ಮೋದಿ ಸೂಚಿಸಿದ್ದರು.

ಮೈಮರೆತರೆ ಅಪಾಯ

ದಿನವೂ ವರದಿಯಾಗುವ ಕೋವಿಡ್–19ರ ಹೊಸ ಪ್ರಕರಣಗಳ ಸಂಖ್ಯೆ ಹತ್ತು ಪಟ್ಟು ಕಡಿಮೆಯಾಗಿದ್ದರೂ ಭಾರತವು ಸಾಂಕ್ರಾಮಿಕದ ಅಪಾಯದಿಂದ ಹೊರಗೆ ಬಂದಿದೆ ಎಂದು ಹೇಳಲಾಗದು. ಹೊಸ ಪ್ರಕರಣಗಳು ಸಂಖ್ಯೆಯು ಎರಡು ವಾರಗಳಿಂದ ಕಡಿಮೆ ಆಗುತ್ತಿಲ್ಲ ಮತ್ತು ಅವು ಮಹಾರಾಷ್ಟ್ರ ಮತ್ತು ಕೇರಳದಿಂದಲೇ ವರದಿ ಆಗುತ್ತಿವೆ.

ಹೊಸ ಪ್ರಕರಣಗಳ ಸಂಖ್ಯೆಯು ಸತತ ಮೂರು ವಾರ 10 ಸಾವಿರದ ಒಳಗೆ ಬರಬೇಕು ಎಂದು ನೀತಿ ಆಯೋಗದ ಸದಸ್ಯ ವಿ.ಕೆ. ಪಾಲ್ ಹೇಳಿದ್ದಾರೆ. ಆದರೆ, ಜೂನ್ ಕೊನೆಯ ವಾರದಿಂದಲೇ ಪ್ರತಿ ದಿನ ದೃಢಪಡುವ ಹೊಸ ಪ್ರಕರಣಗಳ ಸಂಖ್ಯೆಯು 35,000ದಿಂದ 48,000ದ ನಡುವೆ ಇದೆ. ಇದು ಮೊದಲ ಅಲೆಯಲ್ಲಿ ಒಂದು ದಿನ ಪತ್ತೆಯಾದ ಪ್ರಕರಣಗಳ ಗರಿಷ್ಠ ಸಂಖ್ಯೆ 97,894ರ ಮೂರನೇ ಒಂದಕ್ಕಿಂತ ಹೆಚ್ಚು. ಎರಡನೇ ಅಲೆಯಲ್ಲಿ ಒಂದು ದಿನ ದೃಢಪಟ್ಟ ಹೊಸ ಪ್ರಕರಣಗಳ ಗರಿಷ್ಠ ಸಂಖ್ಯೆ 4,14,188ಕ್ಕೆ ಹೋಲಿಸಿದರೆ ಈ ಸಂಖ್ಯೆ ಕಡಿಮೆ ಅನಿಸುತ್ತದೆ. ಆದರೆ, ಪ್ರತ್ಯೇಕವಾಗಿ ನೋಡಿದಾಗ ಈಗ ದಾಖಲಾಗುತ್ತಿರುವ ಪ್ರಕರಣಗಳ ಸಂಖ್ಯೆ ದೊಡ್ಡದೇ ಆಗಿದೆ.

ಕಳೆದ ವಾರ ಶೇ 53ರಷ್ಟು ಪ್ರಕರಣಗಳು ಕೇರಳ (ಶೇ 32) ಮತ್ತು ಮಹಾರಾಷ್ಟ್ರದಿಂದ (ಶೇ 21) ವರದಿ ಆಗಿದ್ದವು. 66 ಜಿಲ್ಲೆಗಳಲ್ಲಿ ಕೋವಿಡ್ ದೃಢಪಡುವಿಕೆ ಪ್ರಮಾಣವು ಶೇ 10ಕ್ಕಿಂತಲೂ ಹೆಚ್ಚು ಇದೆ. ರಾಜಸ್ಥಾನದ 10, ಕೇರಳದ ಎಂಟು, ಮಹಾರಾಷ್ಟ್ರ ಮತ್ತು ಒಡಿಶಾದ ತಲಾ ಎರಡು ಜಿಲ್ಲೆಗಳು ಇವುಗಳಲ್ಲಿ ಸೇರಿವೆ. ಅದಲ್ಲದೆ, ಈಶಾನ್ಯ ಭಾರತದ ರಾಜ್ಯಗಳಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದು ಕೂಡ ಕಳವಳಕ್ಕೆ ಕಾರಣವಾಗಿದೆ.

ಕೋವಿಡ್ ಪ್ರಸರಣ ತಡೆ ಮಾರ್ಗಸೂಚಿಯನ್ನು ಜನರು ಪಾಲಿಸಬೇಕು, ಈ ವಿಚಾರದಲ್ಲಿ ಮೈಮರೆಯುವಂತಿಲ್ಲ ಎಂದು ಪಾಲ್ ಹೇಳಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

‘ಇದೇ 20ರ ವೇಳೆಗೆ ಪಿಯುಸಿ ಫಲಿತಾಂಶ’

ಬೆಂಗಳೂರು: ‘ದ್ವಿತೀಯ ಪಿಯುಸಿ ಪರೀಕ್ಷೆಯ ಫಲಿತಾಂಶವನ್ನು ಇದೇ 20ರ ವೇಳೆಗೆ ಪ್ರಕಟಿಸಲಾಗುವುದು’ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಹೇಳಿದರು.

ಫಲಿತಾಂಶವನ್ನು ಎಸ್ಸೆಸ್ಸೆಲ್ಸಿ ಮತ್ತು ಪ್ರಥಮ ಪಿಯುಸಿ ಅಂಕಗಳ ಆಧಾರದಲ್ಲಿ ನಿರ್ಣಯಿಸಲಾಗುತ್ತದೆ. ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಮತ್ತು ಪ್ರಥಮ ಪಿಯುಸಿಯಲ್ಲಿ ಪಡೆದಿದ್ದ ಅಂಕಗಳನ್ನು ಎಸ್‌ಟಿಎಸ್ ವೆಬ್ ಪೋರ್ಟಲ್‌ನಲ್ಲಿ https://sts.karnataka.gov.in/SATSPU/# ಈ ಲಿಂಕ್ ಬಳಸಿ ಪರಿಶೀಲಿಸಬಹುದು.

ಫಲಿತಾಂಶ ಅಥವಾ ಅಂಕಗಳಲ್ಲಿ ವ್ಯತ್ಯಾಸಗಳಿದ್ದರೆ ಶಾಲೆ, ಕಾಲೇಜಿನ ಮೂಲಕ ಇದೇ 12ರ ಒಳಗೆ ಸಂಪರ್ಕಿಸಿ ಮಾಹಿತಿ ನೀಡಬೇಕು. ಪ್ರಾಂಶುಪಾಲರು ಅದನ್ನು ಸರಿಪಡಿಸಿ ಇಲಾಖೆಗೆ ಮಾಹಿತಿ ನೀಡಬೇಕು ಎಂದು ಸೂಚಿಸಲಾಗಿದೆ.

ಎಲ್ಲ ವಿದ್ಯಾರ್ಥಿಗಳಿಗೆ ಪ್ರವೇಶ: ‘ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ನೋಂದಾಯಿಸಿದ್ದ ಎಲ್ಲ ವಿದ್ಯಾರ್ಥಿಗಳನ್ನು ಪಿ.ಯು ಪ್ರವೇಶಕ್ಕೆ ಅವಕಾಶ ನೀಡಲು ಸರ್ಕಾರ ಅಗತ್ಯ ಕ್ರಮ ವಹಿಸಲಿದೆ’ ಎಂದು ಸುರೇಶ್ ಕುಮಾರ್ ಹೇಳಿದ್ದಾರೆ.

ಸಿಇಟಿ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ಪರೀಕ್ಷೆ (ಸಿಇಟಿ-2021) ಬರೆಯಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಅವಧಿಯನ್ನು ಇದೇ ಜುಲೈ 16ರವರೆಗೆ ವಿಸ್ತರಿಸಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಶುಲ್ಕ ಪಾವತಿಗೆ ಇದ್ದ ಅವಧಿಯನ್ನು ಇದೇ 19ರವರೆಗೂ ಅವಕಾಶ ಕಲ್ಪಿಸಲಾಗಿದೆ. ಪೋಷಕರು ಮತ್ತು ವಿದ್ಯಾರ್ಥಿಗಳು ಮನವಿ ಮಾಡಿದ ಕಾರಣಕ್ಕೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ.

ವಿಶೇಷ ವರ್ಗದ ಪ್ರಮಾಣ ಪತ್ರಗಳನ್ನು ಸಲ್ಲಿಸಲು ಇದೇ 14ರಿಂದ 20ರವರೆಗೆ ಅವಕಾಶ ನೀಡಲಾಗಿದೆ.

ಪ್ರಮಾಣಪತ್ರ ಸಲ್ಲಿಕೆ: ಎನ್‌ಸಿಸಿ, ಕ್ರೀಡೆ, ರಕ್ಷಣೆ, ರಕ್ಷಣೆ (ನಿವೃತ್ತ), ಸ್ಕೌಟ್ಸ್ ಅಂಡ್ ಗೈಡ್ಸ್ ವರ್ಗಗಳಡಿ ಮೀಸಲಾತಿ ಬಯಸುವ ಅಭ್ಯರ್ಥಿಗಳು ನಿಗದಿಪಡಿಸಿರುವ, ತಮಗೆ ಹತ್ತಿರವಾದ ಯಾವುದಾದರೂ ಕೇಂದ್ರಕ್ಕೆ ತೆರಳಿ ಪ್ರಮಾಣ ಪತ್ರಗಳನ್ನು ಸಲ್ಲಿಸಬಹುದಾಗಿದೆ.

ಹೆಚ್ಚಿನ ವಿವರಗಳಿಗೆ http://kea.kar.nic.in ವೆಬ್‌ತಾಣ ನೋಡಬಹುದು.

ಕೈಕುಳಿಯಿಂದ ಮೆಗ್ಗರ್ ಸ್ಫೋಟದವರೆಗೆ ಬೇಬಿಬೆಟ್ಟ!

ಕಲ್ಲು ಒಡೆಯುತ್ತಿದ್ದ ಗ್ರಾಮಸ್ಥರು ಈಗ ಗಣಿ ಕಾರ್ಮಿಕರು

ಕಲ್ಲುಗಣಿ ಸುತ್ತಮುತ್ತ

● ಎಂ.ಎನ್.ಯೋಗೇಶ್

ಮಂಡ್ಯ: ಪಾಂಡವಪುರ ತಾಲ್ಲೂಕಿನ ಬೇಬಿಬೆಟ್ಟದಲ್ಲಿ ಎಂಟು ದಶಕಗಳ ಹಿಂದೆ ಕೈಕುಳಿ ಮೂಲಕ ಆರಂಭಗೊಂಡ ಕಲ್ಲು ಗಣಿ ಚಟುವಟಿಕೆಯ ಹಾದಿ ಇಂದಿನ ಅತ್ಯಾಧುನಿಕ ಮೆಗ್ಗರ್ ಸ್ಫೋಟದವರೆಗೆ ಅಪಾರ ಪ್ರಮಾಣದ ಪ್ರಕೃತಿ ಸಂಪತ್ತು ನಾಶಗೊಳಿಸಿದೆ.

ಕೆಆರ್‌ಎಸ್ ಜಲಾಶಯ ನಿರ್ಮಾಣಕ್ಕಾಗಿ ಕಲ್ಲು ಒಡೆಯಲು ತಮಿಳುನಾಡು, ಆಂಧ್ರಪ್ರದೇಶದಿಂದ ಭೋವಿ ಸಮಾಜದ ಕಾರ್ಮಿಕರನ್ನು ಕರೆತರಲಾಗಿತ್ತು. ಜಲಾಶಯ ನಿರ್ಮಾಣದ ನಂತರ ಇಲ್ಲಿಯೇ ಉಳಿದ ಅವರಿಗೆ ಮೈಸೂರು ಮಹಾರಾಜರು ಬೇಬಿಬೆಟ್ಟದ ಬಳಿ ಭೂಮಿ ಮಂಜೂರು ಮಾಡಿ, ಬದುಕಿಗೆ ಬೆಟ್ಟದ ವ್ಯಾಪ್ತಿಯಲ್ಲಿ ಕೈಕುಳಿ ನಡೆಸಲು ಅರೆಗುತ್ತಿಗೆ ನೀಡಿದ್ದರು.

ನಾಲ್ಕು ತಲೆಮಾರುಗಳಿಂದ ಬೇಬಿಬೆಟ್ಟದ ಸಮೀಪದ ‘ಕಾವೇರಿಪುರ’ ಗ್ರಾಮದಲ್ಲಿರುವ ಅವರ ಬಳಿ ರಾಜರು ಕೊಟ್ಟ ದಾನಪತ್ರಗಳು ಈಗಲೂ ಇವೆ. ಆದರೆ ಕೈಕುಳಿ ಮಾಯವಾಗಿದ್ದು ದೊಡ್ಡ ಗಣಿ ಯಂತ್ರಗಳು ಬಂದಿವೆ. ಕಲ್ಲುಕುಟಿಗರು ಈಗ ಗಣಿ ಕಾರ್ಮಿಕರಾಗಿದ್ದಾರೆ.

ಶ್ರೀರಂಗಪಟ್ಟಣ, ನಾಗಮಂಗಲ ತಾಲ್ಲೂಕಿನ ಗಣಿಗಾರಿಕೆಗಿಂತ ಬೇಬಿಬೆಟ್ಟದ ಗಣಿಗಾರಿಕೆ ಈಗ ಚರ್ಚೆಯ ಕೇಂದ್ರ. ಕಾರಣ– ಕೆಆರ್‌ಎಸ್ ಜಲಾಶಯ. ಬೇಬಿಬೆಟ್ಟದಲ್ಲಿ ನಡೆಯುತ್ತಿರುವ ಗಣಿಸ್ಫೋಟದಿಂದ 8 ಕಿ.ಮೀ ದೂರದ ಕೆಆರ್‌ಎಸ್ ಜಲಾಶಯಕ್ಕೆ ಧಕ್ಕೆ ಇದೆ ಎಂಬ ಅಭಿಪ್ರಾಯ ದಶಕದ ಹಿಂದೆಯೇ ಕೇಳಿಬಂದಿತ್ತು. ಆದರೆ ಅಧಿಕೃತವಾಗಿ ಅಧ್ಯಯನ ನಡೆದಿರಲಿಲ್ಲ.

10ನೇ ಪುಟ ನೋಡಿ

ಬೇಬಿಬೆಟ್ಟ ಗಣಿಗಾರಿಕೆ ಪ್ರದೇಶದ ಚಿತ್ರಣ

ಅಂಕಿ-ಅಂಶಗಳು

106	ಗಣಿ ಗುತ್ತಿಗೆ
68	ಕ್ರಷರ್

ಬೇಬಿಬೆಟ್ಟದ ಕಲ್ಲು ಗಣಿ ವಿವರ

32	ಮೊದಲಿನ ಗಣಿ ಗುತ್ತಿಗೆ
30	ಇತ್ತೀಚೆಗೆ ರದ್ದತಿ
2	ಚಾಲ್ತಿ
500	ಅಕ್ರಮ ಗಣಿ ಅಂದಾಜು

> **ಕೆಆರ್‌ಎಸ್ ನಾರ್ತ್ ಬ್ಯಾಂಕ್‌ನಿಂದ 8 ಕಿ.ಮೀ ದೂರದಲ್ಲಿರುವ 5 ಗಣಿ, ಪರಿಸರ ಅನುಮೋದನೆ ಪಡೆಯದ 25 ಗಣಿ ಅನುಮತಿ ರದ್ದು ಮಾಡಲಾಗಿದೆ**
> **ಪದ್ಮಜಾ,** ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಹಿರಿಯ ಭೂವಿಜ್ಞಾನಿ

‘ಕೆಆರ್‌ಎಸ್ : ಅಕ್ರಮ ಗಣಿಗಾರಿಕೆ ದಾಖಲೆ ಬಹಿರಂಗ’

ಬೆಂಗಳೂರು: ‘ಮಂಡ್ಯ ಜಿಲ್ಲೆಯ ಕೆ.ಆರ್.ಎಸ್ ಅಣೆಕಟ್ಟೆಗೆ ಹಾನಿ ಮಾಡಬಹುದಾದ ಸುಮಾರು 40 ಕ್ಕೂ ಹೆಚ್ಚು ಅಕ್ರಮ ಕಲ್ಲು ಗಣಿಗಳು ಸುತ್ತಮುತ್ತಲಿನ ಪ್ರದೇಶದಲ್ಲಿವೆ. ಈ ಅಕ್ರಮ ಗಣಿ ದಂಧೆಯ ಸಂಪೂರ್ಣ ದಾಖಲೆಗಳನ್ನು ಮುಂದಿನ ವಾರ ಬಹಿರಂಗಪಡಿಸಲಾಗುವುದು’ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅಶ್ವತ್ಥ ನಾರಾಯಣ ಗೌಡ ಹೇಳಿದ್ದಾರೆ.

10ನೇ ಪುಟ ನೋಡಿ

ಫಾರ್‌ಎವರ್‌ಮಾರ್ಕ್ ಐಕಾನ್™ ಕಲೆಕ್ಷನ್

ನಿಮ್ಮ ವಜ್ರದ ಗಾತ್ರವನ್ನು ಆರಿಸಿರಿ

VVS ಕ್ಲ್ಯಾರಿಟಿ, E/F ಕಲರ್, 18 ಕೆರೆಟ್ ಚಿನ್ನದಲ್ಲಿ ಆಳವಡಿಸಿದ ಫಾರ್‌ಎವರ್‌ಮಾರ್ಕ್ ಐಕಾನ್ ಉಂಗುರದ ಬೆಲೆಗಳು.

0.25 ಕೆರೆಟ್ ರೂ. 75,000/- | 0.5 ಕೆರೆಟ್ ರೂ. 2,15,000/- | 1 ಕೆರೆಟ್ ರೂ. 8,60,000/-

ಪ್ರಾಮಾಣಿಕತೆಯ ಹೆಗ್ಗುರುತು

ಜಗತ್ತಿನಲ್ಲಿ 1%ಕ್ಕೂ ಕಡಿಮೆ ಡೈಮಂಡ್‌ಗಳು ಫಾರ್‌ಎವರ್‌ಮಾರ್ಕ್ ಆಗಬಹುದು. ಪ್ರತಿಯೊಂದು ಫಾರ್‌ಎವರ್ ಮಾರ್ಕ್ ಡೈಮಂಡ್‌ನಲ್ಲಿ ಅನನ್ಯವಾದ ಐಡೆಂಟಿಫಿಕೇಶನ್ ನಂಬರ್ ಲೇಖಿಸಲಾಗಿದೆ ಮತ್ತು ಐಡೆಂಟಿಫಿಕೇಶನ್ ಕಾರ್ಡ್‌ನೊಂದಿಗೆ ಬರುತ್ತದೆ. ಐಕಾನ್ ಉಂಗುರಗಳೊಂದಿಗೆ ಫಾರ್‌ಎವರ್‌ಮಾರ್ಕ್ ಗ್ರೇಡಿಂಗ್ ರಿಪೋರ್ಟ್ ಕೂಡ ಪ್ರಸ್ತುತಪಡಿಸಲಾಗುತ್ತದೆ.

FOREVERMARK
A DIAMOND IS FOREVER

DE BEERS GROUP
FOREVERMARK.COM

© Forevermark Limited 2020. Forevermark™, ®, A DIAMOND IS FOREVER™ are Trade Marks of The De Beers Group.

Abaran 23598600 | Apranje Jewellers 22121819 | C. Krishniah Chetty 7625035227 | GRT Jewellers 9741574343 | Joyalukkas 25589916 | Malabar Gold & Diamonds 41283916
Neelkanth jewellers 9606333525 | PMJ Jewels 8008019281 | Senco Gold & Diamonds 18001030017

ನಿಮಗಾಗಿ...
“ಜಯನಗರ”ದಲ್ಲಿ
(4th Block, ಲಲಿತ ಜ್ಯೂವೆಲ್ಲರಿ ಪಕ್ಕದಲ್ಲಿ)
ಹೊಸತು ಹೊಸದಾಗಿ!! ದೊಡ್ಡದಾಗಿ ಅತಿ ದೊಡ್ಡದಾಗಿ!!
5 ಸಾವಿರ ಮಾಸ್ಟರ್ ಡಿಸೈನರ್‌ಗಳು, 2 ಲಕ್ಷ ವೆರೈಟಿಗಳೊಂದಿಗೆ
Inauguration & Lighting of lamp
by



Ms. Priyanka Upendra
Film Actress

Guests of Honor

Ms. Roopamouli
Founder - Sahaya Hastha Trust & Pinkathon Ambassador

Ms. Reena Suvarna
ACP, Bangalore North

ಗ್ರ್ಯಾಂಡ್ ಇನಾಗ್ಯುರೇಶನ್ ಆಫರ್
ಅತಿ ದೊಡ್ಡ ಶಾಪಿಂಗ್ ಮಾಲ್

ಇಂದು...
ಬೆಳಗ್ಗೆ 10.41 ನಿಮಿಷಕ್ಕೆ
ಶುಭ ಆರಂಭ

ಆಶಾಡಾ ಸೇಲ್
UPTO 50% off
• ಕಂಚಿಪಟ್ಟು • ಡಿಸೈನರ್ ಫ್ಯಾನ್ಸಿ ಸಾರೀಸ್ • ಗಾಗ್ರಾಸ್ • ಸಲ್ವಾರ್ಸ್ • ಡ್ರೆಸ್ ಮೆಟೀರಿಯಲ್ಸ್ • ವೆಸ್ಟರ್ನ್ ವೇರ್ • ಮೆನ್ಸ್ ವೇರ್ • ಕಿಡ್ಸ್ ವೇರ್

*Conditions Apply. doocreative.com

ಕಳಾನಿಕೇತನ್®
ಜಯನಗರ, 4th Block, ಲಲಿತ ಜ್ಯೂವೆಲ್ಲರಿ ಪಕ್ಕದಲ್ಲಿ, ಬೆಂಗಳೂರು 2, ಫೋನ್.: 9663146662
ಮಾರತ್‌ಹಳ್ಳಿ, ಜಯನಗರ, ಮಲ್ಲೇಶ್ವರಂ ನಲ್ಲಿ ಕೂಡ ಕೊಡುಗೆಗಳು ಅನ್ವಯವಾಗುತ್ತವೆ.

ಶ್ರೀವಸಿಷ್ಠ ಸೊಸೈಟಿ ಮೇಲೆ ಪೊಲೀಸರ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀವಸಿಷ್ಠ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ವಿರುದ್ಧ ದಾಖಲಾಗಿರುವ ವಂಚನೆ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಹನುಮಂತನಗರ ಪೊಲೀಸರು, ಆರೋಪಿಗಳ ಮನೆ ಹಾಗೂ ಸೊಸೈಟಿ ಕಚೇರಿ ಮೇಲೆ ಶುಕ್ರವಾರ ದಾಳಿ ಮಾಡಿದರು.

ಪ್ರಕರಣದ ಆರೋಪಿಗಳಾದ ಸೊಸೈಟಿಯ ಅಧ್ಯಕ್ಷ ವೇಂಕಟ ನಾರಾಯಣ ಹಾಗೂ ನಿರ್ದೇಶಕ ಕೃಷ್ಣಪ್ರಸಾದ್ ಈಗಾಗಲೇ ಪೊಲೀಸರ ಎದುರು ಹಾಜರಾಗಿ ಹೇಳಿಕೆ ನೀಡಿದ್ದಾರೆ.

'ಸೊಸೈಟಿಯಲ್ಲಿ ಹೂಡಿಕೆ ಮಾಡಿದ್ದ ಹಣವನ್ನು ಹಲವರಿಗೆ ಸಾಲ ನೀಡಲಾಗಿದೆ. ಆದರೆ, ಅವರು ಸಾಲ ವಾಪಸು ನೀಡಿಲ್ಲ. ನಾವು ಯಾರಿಗೂ ವಂಚನೆ ಮಾಡಿಲ್ಲ. ಆ ಉದ್ದೇಶವೂ ನಮಗಿಲ್ಲ' ಎಂಬುದಾಗಿ ಆರೋಪಿಗಳು ಹೇಳಿರುವುದಾಗಿ ಗೊತ್ತಾಗಿದೆ. ಈ ಬಗ್ಗೆ ಪೊಲೀಸರು ಪರಿಶೀಲನೆ ನಡೆಸುತ್ತಿದ್ದಾರೆ.

'ಆರೋಪಿಗಳು ಹಾಗೂ ಸಾಲ ಪಡೆದಿದ್ದ ಕೆಲವರ ಪಟ್ಟಿ ಸಿದ್ಧಪಡಿಸಲಾಗಿತ್ತು. ಗಿರಿನಗರ, ಶಂಕರಪುರ ಹಾಗೂ ಹನುಮಂತನಗರದಲ್ಲಿರುವ ಅವರ ಮನೆಗಳ ಮೇಲೆ ನ್ಯಾಯಾಲಯದ ವಾರಂಟ್ ಪಡೆದು ದಾಳಿ ಮಾಡಲಾಯಿತು. ಸೊಸೈಟಿ ಕಚೇರಿಯಲ್ಲೂ ಪರಿಶೀಲನೆ ನಡೆಸಲಾಯಿತು. ಕೆಲ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಹೆಚ್ಚುತ್ತಿರುವ ದೂರುಗಳು: ಸೊಸೈಟಿಯಿಂದ ಆದ ವಂಚನೆ ಬಗ್ಗೆ ದೂರು ನೀಡುವವರ ಸಂಖ್ಯೆ ಹೆಚ್ಚುತ್ತಿದೆ.

'3,899 ಮಂದಿ ₹ 289 ಕೋಟಿ ಹೂಡಿಕೆ ಮಾಡಿರುವುದಕ್ಕೆ ದಾಖಲೆಗಳು ಸಿಕ್ಕಿವೆ. ಅದರಲ್ಲಿ ₹ 254 ಕೋಟಿ ಸಾಲ ನೀಡಲಾಗಿದೆ. ವಂಚನೆ ಮೊತ್ತ ಎಷ್ಟು ಎಂಬುದು ತನಿಖೆಯಿಂದ ತಿಳಿಯಬೇಕು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಬಿಬಿಎಂಪಿಯ ಭೋಗ್ಯ ಆಸ್ತಿ ವಶಕ್ಕೆ ಕ್ರಮ'

ಪ್ರಜಾವಾಣಿ ವಾರ್ತೆ

ಗೌರವ್ ಗುಪ್ತ

ಬೆಂಗಳೂರು: 'ನಗರದಲ್ಲಿ ಭೋಗ್ಯ ಪಡೆದಿರುವ ಬಿಬಿಎಂಪಿ ಆಸ್ತಿಗಳನ್ನು ಅಡವಿಟ್ಟು ಬ್ಯಾಂಕ್‌ನಿಂದ ಸಾಲ ಪಡೆದಿರುವ ಪ್ರಕರಣಗಳು ಗಮನಕ್ಕೆ ಬಂದಿವೆ. ಭೋಗ್ಯ ಅವಧಿ ಮೀರಿರುವ ಆಸ್ತಿಗಳನ್ನು ಕೂಡಲೇ ವಶಕ್ಕೆ ಪಡೆಯಲಾಗುವುದು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿದ ಅವರು, 'ಬಿಬಿಎಂಪಿಗೆ ಹಲವು ಕಡೆ ಕಟ್ಟಡಗಳು, ಜಮೀನುಗಳ ಅವಶ್ಯಕತೆ ಇದೆ. ಸಾರ್ವಜನಿಕ ಉದ್ದೇಶಕ್ಕೆ ಇವುಗಳನ್ನು ವಶಕ್ಕೆ ಪಡೆಯುವ ಅವಶ್ಯಕತೆ ಇದೆ' ಎಂದು ಅವರು ಹೇಳಿದರು.

ಬಿಬಿಎಂಪಿಯ 116 ಆಸ್ತಿಗಳ ಭೋಗ್ಯ ಅವಧಿ ಮುಕ್ತಾಯವಾಗಿದೆ.

ಕೋವಿಡ್: ಎಚ್ಚರ ತಪ್ಪಿದರೆ ಅಪಾಯ

'ಆರ್ಥಿಕ ಚಟುವಟಿಕೆಗಳು ನಡೆಯಲಿ ಎಂಬ ಉದ್ದೇಶದಿಂದ ಅನ್‌ಲಾಕ್ ಮಾಡಲಾಗಿದೆ. ಆದರೆ, ಸಾರ್ವಜನಿಕರು ಅನವಶ್ಯಕವಾಗಿ ಹೊರಗಡೆ ಓಡಾಡಿದರೆ ನಗರದಲ್ಲಿ ಮತ್ತೆ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುವ ಅಪಾಯವಿದೆ' ಎಂದು ಗೌರವ್ ಗುಪ್ತ ಎಚ್ಚರಿಸಿದರು.

'ನಗರದಲ್ಲಿ ನಿತ್ಯ 500ರಿಂದ 600 ಪ್ರಕರಣಗಳು ವರದಿಯಾಗುತ್ತಿವೆ. ಅದರಲ್ಲಿಯೂ ಮಹದೇವಪುರ ಮತ್ತು ಪೂರ್ವ ವಲಯಗಳಲ್ಲಿ ಹೆಚ್ಚು ಪ್ರಕರಣಗಳು ಪತ್ತೆಯಾಗುತ್ತಿವೆ. ಹೆಚ್ಚು ಪ್ರಕರಣಗಳು ಕಂಡು ಬರುತ್ತಿರುವ ಸ್ಥಳಗಳನ್ನು ಕಂಟೈನ್‌ಮೆಂಟ್ ವಲಯ ಎಂದು ವಿಂಗಡಿಸಿ, ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ಅಲ್ಲದೆ, ಕೋವಿಡ್ ಪರೀಕ್ಷೆ ಹೆಚ್ಚಳಕ್ಕೂ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದರು.

'ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಕೋವಿಡ್ ಚಿಕಿತ್ಸೆ ಪಡೆದ ಬಿಪಿಎಲ್ ಕುಟುಂಬದ ಸದಸ್ಯರ ಸಂಪೂರ್ಣ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸುತ್ತಿದೆ' ಎಂದೂ ಅವರು ಹೇಳಿದರು.

ಪಾದಚಾರಿ ಮಾರ್ಗ ಒತ್ತುವರಿ ಮಾಡಿದರೆ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಪಾದಚಾರಿ ಮಾರ್ಗಗಳಲ್ಲಿ ಕಟ್ಟಡಗಳ ತ್ಯಾಜ್ಯ ಅಥವಾ ಭಗ್ನಾವಶೇಷ ಹಾಕುವುದು, ವಾಹನ ನಿಲ್ಲಿಸುವುದು ಅಥವಾ ತಳ್ಳುವ ಗಾಡಿಗಳ ಮೂಲಕ ವ್ಯಾಪಾರ ಮಾಡುವುದನ್ನು ನಿಷೇಧಿಸಲಾಗಿದೆ. ಇದನ್ನು ಉಲ್ಲಂಘಿಸಿದವರಿಗೆ ₹10 ಸಾವಿರ ದಂಡ ವಿಧಿಸುವುದರೊಂದಿಗೆ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಬಿಬಿಎಂಪಿ ಎಚ್ಚರಿಸಿದೆ.

ನಗರದ ವಿಲ್ಸನ್ ಗಾರ್ಡನ್ ಬಳಿಯ ಪಾದಚಾರಿ ಮಾರ್ಗದಲ್ಲಿ ಕಟ್ಟಡದ ತ್ಯಾಜ್ಯ ಸುರಿದವರಿಗೆ ₹10 ಸಾವಿರ ದಂಡ ವಿಧಿಸಲಾಗಿದೆ ಎಂದೂ ಪಾಲಿಕೆಯು ಪ್ರಕಟಣೆಯಲ್ಲಿ ತಿಳಿಸಿದೆ.



ಸರ್ಕಾರ 'ಸಹಕಾರ ಸಚಿವಾಲಯ' ರಚಿಸಿದೆ

ನೈಜೀರಿಯಾ ಪ್ರಜೆ ವಿರುದ್ಧ 'ಪಿಐಟಿ-ಎನ್‌ಡಿಪಿಎಸ್'

ಬೆಂಗಳೂರು: 'ವೀಸಾ ಅವಧಿ ಮುಗಿದರೂ ನಗರದಲ್ಲಿ ಅನಧಿಕೃತವಾಗಿ ನೆಲೆಸಿ ಡ್ರಗ್ಸ್ ಜಾಲದಲ್ಲಿ ತೊಡಗಿದ್ದ ನೈಜೀರಿಯಾ ಪ್ರಜೆಯನ್ನು 'ಮಾದಕ ದ್ರವ್ಯ ಹಾಗೂ ನಿದ್ರಾಜನ್ಯ ವಸ್ತುಗಳ ಅಕ್ರಮ ಸಾಗಣೆಕೆ ತಡೆ (ಪಿಐಟಿ-ಎನ್‌ಡಿಪಿಎಸ್)' ಕಾಯ್ದೆಯಡಿ ಒಂದು ವರ್ಷ ಜೈಲಿನಲ್ಲಿ ಇರಿಸಲು ಆದೇಶ ಹೊರಡಿಸಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಹೇಳಿದರು.

ಈ ಬಗ್ಗೆ ಟ್ವೀಟ್ ಮಾಡಿರುವ ಅವರು, 'ವಾಸಸ್ಥಳಗಳನ್ನು ಬದಲಾಯಿಸುತ್ತಿದ್ದ ಆರೋಪಿ, ಡ್ರಗ್ಸ್ ಮಾರಾಟದಲ್ಲಿ ತೊಡಗಿದ್ದ. ಆತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದರು' ಎಂದಿದ್ದಾರೆ.

ಡ್ರಗ್ಸ್ ಮಾರಾಟ ಹಾಗೂ ಸಾಗಣೆ ವಿರುದ್ಧ ಕಾರ್ಯಾಚರಣೆ ನಡೆಸುತ್ತಿರುವ ಪೊಲೀಸರು, ಪದೇ ಪದೇ ಕೃತ್ಯದಲ್ಲಿ ಭಾಗಿಯಾಗುವವರ ವಿರುದ್ಧ ಪಿಐಟಿ ಎನ್‌ಡಿಪಿಎಸ್ ಕಾಯ್ದೆ ಪ್ರಯೋಗಿಸುತ್ತಿದ್ದಾರೆ. ಈ ಹಿಂದೆಯೂ ಹಲವರನ್ನು ಇದೇ ಕಾಯ್ದೆಯಡಿ ಜೈಲಿಗಟ್ಟಿದ್ದರು.

ರಿಯಾಯಿತಿ ಮುಂದುವರಿಸಿದ 'ಭೀಮ ಜ್ಯುವೆಲರ್ಸ್'

ಬೆಂಗಳೂರು: ಚಿನ್ನಾಭರಣಗಳ ಮಾರಾಟ ಕಂಪನಿಯಾದ 'ಭೀಮ ಜ್ಯುವೆಲರ್ಸ್' ಈಚೆಗೆ ಘೋಷಿಸಿದ್ದ ಕೆಲವು ರಿಯಾಯಿತಿ ಯೋಜನೆಗಳ ಅವಧಿಯನ್ನು ಭಾನುವಾರದವರೆಗೆ ವಿಸ್ತರಿಸಿದೆ.

'ಚಿನ್ನವನ್ನು ಅತಿ ಕನಿಷ್ಠ ದರಕ್ಕೆ, ಅಂದರೆ ಪ್ರತಿ ಗ್ರಾಂಗೆ ₹ 3,599ರಂತೆ ಖರೀದಿಸಬಹುದು. ಪ್ರತಿ ಕ್ಯಾರಟ್ ವಜ್ರ ಖರೀದಿ ಮೇಲೆ ₹ 7,500 ರಿಯಾಯಿತಿ ಹಾಗೂ ಉಚಿತವಾಗಿ 1 ಗ್ರಾಂ ಚಿನ್ನದ ನಾಣ್ಯ ಸಿಗುತ್ತದೆ' ಎಂದು ಪ್ರಕಟಣೆ ಹೇಳಿದೆ.

'ಭೀಮ ಜ್ಯುವೆಲರ್ಸ್' ಕಂಪನಿಯು ನಗರದ ಮಲ್ಲೇಶ್ವರದಲ್ಲಿ ಹೊಸ ಮಳಿಗೆಯನ್ನು ಈಚೆಗೆ ತೆರೆದಿದೆ. ನವೀಕರಿಸಲಾಗಿರುವ ಜಯನಗರದ ಮಳಿಗೆಯನ್ನು ಕೂಡ ಗ್ರಾಹಕರಿಗೆ ಮುಕ್ತವಾಗಿಸಲಾಗಿದೆ.

ಹದಿನೈದು ವರ್ಷಗಳ ನಂತರ ಪೊಲೀಸರಿಗೆ ಸೆರೆ ಸಿಕ್ಕ ಆರೋಪಿಗಳು

ಕೊಲೆ ಪ್ರಕರಣ: ಸುಳಿವು ನೀಡಿದ ಬೆರಳಚ್ಚು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಯಶವಂತಪುರ ಠಾಣೆ ವ್ಯಾಪ್ತಿಯಲ್ಲಿ 2006ರಲ್ಲಿ ನಡೆದಿದ್ದ ಶಶಿಧರನ್ ಎಂಬುವರ ಕೊಲೆ ಪ್ರಕರಣ ಸಂಬಂಧ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಆರೋಪಿ ಜೈವೀರು, ಆತನ ಸ್ನೇಹಿತರಾದ ಅವಿನಾಶ್, ಮೋಸಿನ್ ಖಾನ್ ಬಂಧಿತರು. ಕೊಲೆ ಪ್ರಕರಣದಲ್ಲಿ ತನಿಖೆ ನಡೆಸಿದ್ದ ಪೊಲೀಸರು, 'ಆರೋಪಿಗಳು ಪತ್ತೆಯಾಗಿಲ್ಲ' ಎಂದು ನ್ಯಾಯಾಲಯಕ್ಕೆ ಸಿ-ರಿಪೋರ್ಟ್ ಸಲ್ಲಿಸಿದ್ದರು. ಇತ್ತೀಚೆಗೆ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕೃತ್ಯ ಎಸಗಿದ್ದ ಆರೋಪಿಗಳು ಪೊಲೀಸರಿಗೆ ಸಿಕ್ಕಿಬಿದ್ದಿದ್ದರು. ಅವರ ಬೆರಳಚ್ಚು ಪರಿಶೀಲಿಸಿದಾಗ, 15 ವರ್ಷಗಳ ಹಿಂದೆ ನಡೆದಿದ್ದ ಕೊಲೆ ರಹಸ್ಯ ಬಯಲಾಗಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಚಿಕ್ಕಬಳ್ಳಾಪುರ ಪೊಲೀಸರು ಬಂಧಿಸಿದ್ದ ಆರೋಪಿಗಳನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗಿದೆ. ಮೂವರು ತಪ್ಪೊಪ್ಪಿಕೊಂಡಿದ್ದಾರೆ' ಎಂದೂ ತಿಳಿಸಿದರು.

ವಿಡಿಯೊ ಗೇಮ್ ಮಳಿಗೆ ಮಾಲೀಕ: 'ಶಶಿಧರನ್ ಅವರು ಯಶವಂತಪುರ ಬಿ.ಕೆ.ನಗರದ 11ನೇ ಅಡ್ಡರಸ್ತೆಯಲ್ಲಿ ವಿಡಿಯೋ ಗೇಮ್ ಮಳಿಗೆ ನಡೆಸುತ್ತಿದ್ದರು. ಆರೋಪಿಗಳು ಸೇರಿದಂತೆ ಹಲವರು ಗೇಮ್ ಆಡಲು ಮಳಿಗೆಗೆ ಬರುತ್ತಿದ್ದರು. 2006ರ ನವೆಂಬರ್ 5ರಂದು ಶಶಿಧರನ್ ಅವರ ಕೈ- ಕಾಲು ಕಟ್ಟಿಹಾಕಿ ಕೊಲೆ ಮಾಡಲಾಗಿತ್ತು' ಎಂದು ಅಧಿಕಾರಿ ಹೇಳಿದರು.

'ಹೆಚ್ಚು ಗೇಮ್ ಆಡುತ್ತಿದ್ದ ಆರೋಪಿಗಳಿಗೆ ಹಣದ ಕೊರತೆ ಉಂಟಾಗಿತ್ತು. ಮಳಿಗೆಗೆ ಹೋದರೆ ಕೊಡಲು ಹಣವಿರಲಿಲ್ಲ. ಆರೋಪಿಯೊಬ್ಬನ ಮನೆಯಲ್ಲಿ ಕಂಪ್ಯೂಟರ್ ಇತ್ತು. ಆದರೆ, ಅದರಲ್ಲಿ ಗೇಮ್‌ಗಳು ಇರಲಿಲ್ಲ. ಮಳಿಗೆಗೆ ಹೋಗಿದ್ದ ಆರೋಪಿಗಳು, ಕಂಪ್ಯೂಟರ್‌ನಲ್ಲಿದ್ದ ಗೇಮ್ ಫೈಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಮುಂದಾಗಿದ್ದರು. ಇದು ಗೊತ್ತಾಗಿ ಶಶಿಧರನ್ ಬೈದಿದ್ದರು. ಅದರಿಂದ ಸಿಟ್ಟಾದ ಆರೋಪಿಗಳು, ಮನೆಯಿಂದ ಹಗ್ಗ ತಂದು ಕೈ ಕಾಲುಗಳನ್ನು ಕಟ್ಟಿ ಶಶಿಧರನ್ ಅವರನ್ನು ಕೊಲೆ ಮಾಡಿ ಪರಾರಿಯಾಗಿದ್ದರು' ಎಂದೂ ಅಧಿಕಾರಿ ವಿವರಿಸಿದರು.

ಬೆರಳಚ್ಚು ಸುಳಿವು: 'ಸುಲಿಗೆ ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದ ಆರೋಪಿಗಳು, ಹಲವು ಜಿಲ್ಲೆಗಳಲ್ಲಿ ಕೃತ್ಯ ಎಸಗಿದ್ದ ಮಾಹಿತಿ ಇತ್ತು. ಯಶವಂತಪುರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಸುಲಿಗೆ ಪ್ರಕರಣದ ಬಗ್ಗೆಯೂ ತನಿಖೆ ಕೈಗೊಂಡು ಆರೋಪಿಗಳ ಬೆರಳಚ್ಚು ಪರಿಶೀಸಲಾಗುತ್ತಿತ್ತು. ಆರೋಪಿ ಜೈವೀರು ಬೆರಳಚ್ಚು, ಶಶಿಧರ್ ಕೊಲೆ ಪ್ರಕರಣಕ್ಕೆ ಹೋಲಿಕೆಯಾಯಿತು. ಅದೇ ಸುಳಿವಿನಿಂದಲೇ ಆರೋಪಿಗಳು ಸಿಕ್ಕಿಬಿದ್ದರು' ಎಂದೂ ಅಧಿಕಾರಿ ಹೇಳಿದರು.

ಬಿಜೆಪಿ ತೊರೆದು ಶುಕ್ರವಾರ ಆಮ್ ಆದ್ಮಿ ಪಕ್ಷಕ್ಕೆ ಸೇರಿದ ಮಾಜಿ ಶಾಸಕ ಎಚ್.ಡಿ. ಬಸವರಾಜು ಅವರನ್ನು ಆಮ್ ಆದ್ಮಿ ಪಕ್ಷದ ರಾಜ್ಯ ಸಂಚಾಲಕ ಪೃಥ್ವಿ ರೆಡ್ಡಿ ಅವರು ಪಕ್ಷದ ಧ್ವಜ ನೀಡಿ ಬರಮಾಡಿಕೊಂಡರು

ಮಾಜಿ ಶಾಸಕ ಎಚ್.ಡಿ.ಬಸವರಾಜು ಆಮ್ ಆದ್ಮಿ ಪಕ್ಷಕ್ಕೆ ಸೇರ್ಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿರಾಜಪೇಟೆಯ ಮಾಜಿ ಶಾಸಕ ಎಚ್.ಡಿ. ಬಸವರಾಜು ಶುಕ್ರವಾರ ಬಿಜೆಪಿ ತೊರೆದು ಆಮ್ ಆದ್ಮಿ ಪಕ್ಷವನ್ನು ಸೇರಿದರು.

ಬೆಂಗಳೂರು ಪ್ರೆಸ್ ಕ್ಲಬ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲೇ ಆಮ್ ಆದ್ಮಿ ಪಕ್ಷದ ರಾಜ್ಯ ಸಂಚಾಲಕ ಪೃಥ್ವಿ ರೆಡ್ಡಿ ಪಕ್ಷದ ಧ್ವಜ ನೀಡುವ ಮೂಲಕ ಬಸವರಾಜು ಅವರನ್ನು ಬರಮಾಡಿಕೊಂಡರು. ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಹಲವು ಮುಖಂಡರು ಉಪಸ್ಥಿತರಿದ್ದರು.

ಬಸವರಾಜು 1994 ಮತ್ತು 2004ರಲ್ಲಿ ವಿರಾಜಪೇಟೆ ಕ್ಷೇತ್ರದ ಶಾಸಕರಾಗಿ ಆಯ್ಕೆಯಾಗಿದ್ದರು. ಇತ್ತೀಚೆಗೆ ದೆಹಲಿಗೆ ತೆರಳಿ ಆಮ್ ಆದ್ಮಿ ಪಕ್ಷದ ಮುಖ್ಯಸ್ಥ ಹಾಗೂ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರೊಂದಿಗೆ ಮಾತುಕತೆ ನಡೆಸಿದ್ದರು.

ಪಕ್ಷ ಸೇರ್ಪಡೆ ಬಳಿಕ ಮಾತನಾಡಿದ ಅವರು, 'ಎರಡೂ ಕಡೆಗಳಲ್ಲಿ ನಮ್ಮದೇ ಬಿಜೆಪಿ ಸರ್ಕಾರ ಇದೆ. ರಾಜ್ಯದಲ್ಲಿ, ಕೇಂದ್ರದಲ್ಲಿ ಎರಡೂ ಕಡೆಗಳಲ್ಲಿ ಆಡಳಿತವಿದ್ದರೂ, ಜನಪರ ಕೆಲಸ ಮಾಡುತ್ತಿಲ್ಲ. ಭ್ರಷ್ಟಾಚಾರ ಹೆಚ್ಚಾಗಿದ್ದು, ರೋಸಿ ಹೋಗಿದ್ದೇನೆ. ಜನಪರವಾದ ಕೆಲಸ ಮಾಡಬಲ್ಲ ಭರವಸೆಯನ್ನು ಆಮ್ ಆದ್ಮಿ ಪಕ್ಷದಲ್ಲಿ ಕಂಡಿದ್ದೇನೆ. ಈ ಕಾರಣದಿಂದ ಬಿಜೆಪಿ ತೊರೆದು ಆಮ್ ಆದ್ಮಿ ಪಕ್ಷ ಸೇರಿದ್ದೇನೆ' ಎಂದರು.

ಬಿಎಸ್‌ಡಬ್ಲ್ಯುಎಂಎಲ್: ಸರ್ಫರಾಜ್ ಖಾನ್ ನೇಮಕ

ಪ್ರಜಾವಾಣಿ ವಾರ್ತೆ

ಸರ್ಫರಾಜ್ ಖಾನ್

ಬೆಂಗಳೂರು: ರಾಜಧಾನಿಯ ಕಸದ ಸಮಸ್ಯೆ ನಿವಾರಣೆಗೆ ರಚಿಸಲಾಗಿರುವ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕರನ್ನಾಗಿ ಬಿಬಿಎಂಪಿ ಘನತ್ಯಾಜ್ಯ ನಿರ್ವಹಣಾ ವಿಭಾಗದ ಜಂಟಿ ಆಯುಕ್ತ ಸರ್ಫರಾಜ್ ಖಾನ್ ಅವರನ್ನು ನೇಮಕ ಮಾಡಲಾಗಿದೆ.

ಕಂಪನಿಯ ಮುಖ್ಯನಿರ್ವಹಣಾ ಅಧಿಕಾರಿಯೂ ಆಗಿರುವ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಈ ನೇಮಕ ಮಾಡಿದ್ದಾರೆ.

ಕಂಪನಿಯ ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಒಪ್ಪಂದಗಳಿಗೆ ಸಹಿ ಹಾಕುವ, ನಿರ್ಧಾರ ಕೈಗೊಳ್ಳುವ ಅಧಿಕಾರವನ್ನು ಸರ್ಫರಾಜ್ ಖಾನ್ ಅವರಿಗೆ ನೀಡಲಾಗಿದೆ.

2021ರ ಮೇ 22ರಂದು 2013ರ ಕಂಪನಿ ಕಾಯ್ದೆಯ ಅನ್ವಯ, ಬಿಎಸ್‌ಡಬ್ಲ್ಯುಎಂಎಲ್ ರಚನೆಯಾಗಿದೆ. ಕಂಪನಿಯ ಮೊದಲ ನಿರ್ದೇಶಕರ ಮಂಡಳಿ ಸಭೆಯು ಶುಕ್ರವಾರ ನಡೆದಿದ್ದು, ಸಭೆಯ ನಿರ್ಣಯದಂತೆ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

ಚಿತ್ರೋದ್ಯಮದ ಕಾರ್ಮಿಕರಿಗೆ ದಿನಸಿ ಕಿಟ್ ವಿತರಣೆ: ಕೃಷಿ ಸಚಿವ ಬಿ.ಸಿ. ಪಾಟೀಲ, ಸ್ಥಳ-ಬಿ.5, ಜಯಮಹಲ್, ಬೆಳಿಗ್ಗೆ 10

'ದೇಶ ಮೊದಲು' ವೆಬಿನಾರ್ ಸರಣಿ: ವಿಷಯ-'ಭಾರತೀಯ ಫಾರ್ಮಾ ವಲಯ: ಅವಕಾಶಗಳು ಮತ್ತು ಸವಾಲುಗಳು', ಭಾಗವಹಿಸುವವರು-ದೀಪಕ್ ಸಪ್ರ, ಮಂದಾರ್ ಕೋಡ್ಲುಗ್ಲೆ, ಆಯೋಜನೆ-ಅನಂತಕುಮಾರ್ ಪ್ರತಿಷ್ಠಾನ, ಸಂಜೆ 4 (ಆನ್‌ಲೈನ್ ಕಾರ್ಯಕ್ರಮ)

'ಸಾರ್ವಜನಿಕ ವಲಯ ಮತ್ತು ಪ್ರಜಾಪ್ರಭುತ್ವ' ಕುರಿತು ಉಪನ್ಯಾಸ: ಅರ್ಥಶಾಸ್ತ್ರಜ್ಞ ಪ್ರೊ.ಪ್ರಭಾತ್ ಪಟ್ನಾಯಕ್, ಆಯೋಜನೆ-ಸಾರ್ವಜನಿಕ ವಲಯದ ರಕ್ಷಣೆಗಾಗಿ ಬೆಂಗಳೂರು, ಸಂಜೆ 7 (ಆನ್‌ಲೈನ್ ಕಾರ್ಯಕ್ರಮ)

ಡ್ರಗ್ಸ್: ಎರಡು ಕಡೆ ಸಿಸಿಬಿ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಸಾಗಣೆ ಹಾಗೂ ಮಾರಾಟ ವಿರುದ್ಧ ಕಾರ್ಯಾಚರಣೆ ಮುಂದುವರಿಸಿರುವ ಸಿಸಿಬಿ ಪೊಲೀಸರು, ನಗರದ ಎರಡು ಕಡೆ ದಾಳಿ ಮಾಡಿದ್ದಾರೆ. ₹ 15 ಲಕ್ಷ ಮೌಲ್ಯದ ಮಾದಕ ವಸ್ತು ಜಪ್ತಿ ಮಾಡಿದ್ದು, ಆರು ಮಂದಿಯನ್ನು ಬಂಧಿಸಿದ್ದಾರೆ.

'ನಗರದಲ್ಲಿ ತಮ್ಮದೇ ಜಾಲ ರೂಪಿಸಿಕೊಂಡು ಡ್ರಗ್ಸ್ ಮಾರಾಟ ಮಾಡುತ್ತಿದ್ದ ವಿದೇಶಿ ಪ್ರಜೆ, ಇಬ್ಬರು ಪೆಡ್ಲರ್‌ಗಳು ಸೇರಿ 6 ಮಂದಿಯನ್ನು ಸೆರೆ ಹಿಡಿಯಲಾಗಿದೆ. ಅವರ ಬಳಿ 28 ಕೆ.ಜಿ ಗಾಂಜಾ ಸಿಕ್ಕಿದೆ' ಎಂದು ಪೊಲೀಸರು ಹೇಳಿದರು.

ಆರೋಪಿಗಳಿಂದ ಜಪ್ತಿ ಮಾಡಲಾದ ಡ್ರಗ್ಸ್ ಪೊಟ್ಟಣ

'ಆಂಧ್ರಪ್ರದೇಶದ ಪೆಡ್ಲರ್‌ಗಳ ಜೊತೆ ನಂಟು ಹೊಂದಿದ್ದ ಆರೋಪಿಗಳು, ಅವರಿಂದಲೇ ಗಾಂಜಾ ಖರೀದಿ ಮಾಡುತ್ತಿದ್ದರು. ನಂತರ, ಬೆಂಗಳೂರಿಗೆ ಗಾಂಜಾ ತಂದು ಅಕ್ರಮವಾಗಿ ಸಂಗ್ರಹಿಸಿಟ್ಟುಕೊಳ್ಳುತ್ತಿದ್ದರು. ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಕಂಪನಿಗಳ ಉದ್ಯೋಗಿಗಳಿಗೆ ಗಾಂಜಾ ಮಾರುತ್ತಿದ್ದರು' ಎಂದೂ ಅವರು ತಿಳಿಸಿದರು.

'ಆರೋಪಿಗಳ ಕೃತ್ಯದ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿತ್ತು. ಗಾಂಜಾ ಇರಿಸಿದ್ದ ಸ್ಥಳಗಳ ಮೇಲೆ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಲಾಗಿದೆ. ಕೃತ್ಯದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿರುವ ಮಾಹಿತಿ ಇದೆ' ಎಂದೂ ಹೇಳಿದರು.

ಬೆದರಿಸಿ ಮೊಬೈಲ್ ಸುಲಿಗೆ

ಬೆಂಗಳೂರು: ರಸ್ತೆಯಲ್ಲಿ ನಡೆದು ಕೊಂಡು ಹೋಗುವ ಸಾರ್ವಜನಿಕರನ್ನು ಬೆದರಿಸಿ ಮೊಬೈಲ್ ಸುಲಿಗೆ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಕೆಂಗೇರಿ ಪೊಲೀಸರು ಬಂಧಿಸಿದ್ದಾರೆ.

ಲೋಕೇಶ್ ಹಾಗೂ ಚೇತನ್ ಬಂಧಿತರು. ಅವರಿಂದ ₹ 1 ಲಕ್ಷ ಮೌಲ್ಯದ 5 ಮೊಬೈಲ್, ಎರಡು ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ.

ದೆಹಲಿಯಿಂದ ವಾಪಸ್ ಆದ ಡಿವಿಎಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸಚಿವ ಸಂಪುಟ ವಿಸ್ತರಣೆಯ ವೇಳೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಸಂಸದ ಡಿ.ವಿ.ಸದಾನಂದಗೌಡ ಅವರು ಶುಕ್ರವಾರ ಸಂಜೆ ನಗರಕ್ಕೆ ಮರಳಿದರು. ಆಗ ಪಕ್ಷದ ಕಾರ್ಯಕರ್ತರು ಅವರಿಗೆ ಆತ್ಮೀಯ ಸ್ವಾಗತ ಕೋರಿದರು.

ವಿಮಾನನಿಲ್ದಾಣದ ಬಳಿ ಸಾಕಷ್ಟು ಸಂಖ್ಯೆಯಲ್ಲಿ ಸೇರಿದ್ದ ಬಿಜೆಪಿ ಕಾರ್ಯಕರ್ತರು ಪ್ರಧಾನಿ ಮೋದಿ, ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ, ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಸದಾನಂದಗೌಡ ಪರ ಜಯ ಘೋಷಣೆ ಹಾಕಿದರು. ಸದಾನಂದಗೌಡರು ಮುಂದಿನ ಮುಖ್ಯಮಂತ್ರಿ ಆಗಲಿ ಎಂದೂ ಕೆಲವರು ಘೋಷಣೆ ಕೂಗಿದರು.

ಡಿ.ವಿ.ಸದಾನಂದಗೌಡರಿಗೆ ವಿಮಾನ ನಿಲ್ದಾಣದಲ್ಲಿ ಸ್ವಾಗತ ಕೋರಿದ ಬೆಂಬಲಿಗರು

ಅವರು ವಿಮಾನನಿಲ್ದಾಣದಿಂದ ಹೊರ ಬರುತ್ತಿದ್ದಂತೆ 'ನಮ್ಮ ಸಂಸದರು ನಮ್ಮ ಹೆಮ್ಮೆ,ನಿಮ್ಮ ಜೊತೆ ನಾವಿದ್ದೇನೆ' ಎಂಬ ಫಲಕಗಳನ್ನು ಪ್ರದರ್ಶಿಸಿದರು. ವಿಮಾನ ನಿಲ್ದಾಣದಿಂದ ಮನೆಗೆ (ಆರ್. ಎಂ.ವಿ. 2ನೇ ಹಂತ) ತೆರಳುವ ಮಾರ್ಗದಲ್ಲಿ ಶೆಟ್ಟಿಗೆರೆ, ದೊಡ್ಡಜಾಲ, ಮೀನುಕುಂಟೆ, ಹೊಸೂರು, ಶೆಟ್ಟಿಹಳ್ಳಿ ಮುಂತಾದ ಕಡೆ ವಾಹನ ನಿಲ್ಲಿಸಿ ಹೂಮಳೆಗೈದರು. ಇದರಿಂದ ಗೌಡರು ಗದ್ಗದಿತರಾದ ಪ್ರಸಂಗವೂ ನಡೆಯಿತು.

ಕೆಲವು ಕಡೆಗಳಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಸದಾನಂದಗೌಡರು, 'ಅಧಿಕಾರದಿಂದ ಇಳಿದಾಗಲೂ ಇಷ್ಟೊಂದು ಪ್ರೀತಿ, ಅಭಿಮಾನ ತೋರಿಸಿದ ಕಾರ್ಯಕರ್ತರ ಋಣ ತೀರಿಸಲು ಸಾಧ್ಯವಿಲ್ಲ. ಇನ್ನಷ್ಟು ಸೇವೆ ಮಾಡಲು ಪ್ರೇರಣೆ ಸಿಕ್ಕಿದೆ. ಪಕ್ಷವನ್ನು ಇನ್ನಷ್ಟು ಗಟ್ಟಿಯಾಗಿ ಸಂಘಟಿಸೋಣ. ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರವನ್ನು ಬಿಜೆಪಿಯ ಭದ್ರಕೋಟೆಯಾಗಿಸೋಣ. ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಎಲ್ಲಾ ವಿಧಾನಸಭಾ ಕ್ಷೇತ್ರಗಳನ್ನು ಗೆಲ್ಲಬೇಕು' ಎಂದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿ ಅವರು, ' ಮುಂಬರುವ ದಿನಗಳಲ್ಲಿ ಪಕ್ಷ ಯಾವ ಕೆಲಸವನ್ನು ಹೇಳುತ್ತದೆಯೋ ಅದನ್ನು ಮಾಡಲು ಸಿದ್ಧನಿದ್ದೇನೆ' ಎಂದು ಅವರು ಹೇಳಿದರು.

ಸಹಾಯಧನ ದುರ್ಬಳಕೆ ತಡೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಣ್ಣ ಕೈಗಾರಿಕೆಗಳನ್ನು ಉತ್ತೇಜಿಸಲು ಸರ್ಕಾರ ನೀಡುವ ಸಹಾಯಧನವನ್ನು ದುರ್ಬಳಕೆ ಮಾಡಿಕೊಳ್ಳಲು ಕೆಲವರು ಬೇನಾಮಿ ಅರ್ಜಿಗಳನ್ನು ಸಲ್ಲಿಸುತ್ತಿರುವ ದೂರುಗಳು ಬರುತ್ತಿವೆ. ಈ ಕುರಿತು ಪರಿಶೀಲಿಸಿ, ಕ್ರಮ ಜರುಗಿಸಬೇಕು ಎಂದು ಸಣ್ಣ ಕೈಗಾರಿಕಾ ಸಚಿವ ಸಿ.ಸಿ. ಪಾಟೀಲ ಅಧಿಕಾರಿಗಳಿಗೆ ಸೂಚಿಸಿದರು.

ವಿಕಾಸಸೌಧದಲ್ಲಿ ಶುಕ್ರವಾರ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಅಭಿವೃದ್ಧಿ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಿದ ಅವರು, 'ಕೆಲವರು ಸಹಾಯಧನ ಪಡೆದ ಬಳಿಕ ಕೈಗಾರಿಕೆಗಳನ್ನೇ ನಡೆಸುವುದಿಲ್ಲ ಎಂಬ ಆರೋಪಗಳಿವೆ. ಸಹಾಯಧನ ದುರ್ಬಳಕೆ ತಡೆಯಲು ನಿರಂತರವಾಗಿ ತಪಾಸಣೆ ನಡೆಸಿ, ಕೈಗಾರಿಕಾಗಳು ಕಾರ್ಯನಿರ್ವಹಿಸುತ್ತಿರುವುದನ್ನು ಖಾತರಿಪಡಿಸಿಕೊಳ್ಳಬೇಕು' ಎಂದು ನಿರ್ದೇಶನ ನೀಡಿದರು.

ಸಿ.ಸಿ.ಪಾಟೀಲ

ಕೈಗಾರಿಕಾ ನೀತಿಯಡಿ ಕಳೆದ ವರ್ಷ ಅತಿಸಣ್ಣ, ಸಣ್ಣ ಮತ್ತು ಮಧ್ಯಮ (ಎಂಎಸ್‌ಎಂಇ) ಕೈಗಾರಿಕೆಗಳಿಗೆ ₹ 114 ಕೋಟಿ ಸಹಾಯಧನ ಬಿಡುಗಡೆ ಮಾಡಲಾಗಿದೆ. ಕೃಷಿ ನೀತಿಯಡಿ ₹ 165 ಕೋಟಿ ಬಿಡುಗಡೆ ಮಾಡಲಾಗಿದೆ. ಸಣ್ಣ ಕೈಗಾರಿಕೆಗಳ ಉತ್ಪನ್ನಗಳ ಮೇಲಿನ ರಿಯಾಯಿತಿ ಮತ್ತು ಪ್ರೋತ್ಸಾಹಧನಕ್ಕೆ ₹ 105.84 ಕೋಟಿ, ತೆಂಗಿನ ನಾರಿನ ವಲಯಕ್ಕೆ ತೆಂಗು ಭಾಗ್ಯ ಯೋಜನೆಯಡಿ ₹ 10 ಕೋಟಿ ಮತ್ತು ಎಂಎಸ್‌ಎಂಇ ಕ್ಷೇತ್ರಕ್ಕೆ ಪೂರಕವಾಗಿ ಮೂಲಸೌಕರ್ಯ ಅಭಿವೃದ್ಧಿಗೆ ₹ 53.49 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ವಿವರಿಸಿದರು.

ವಿ.ವಿ ಗ್ರೂಪ್‌ನಲ್ಲಿ ಅಶ್ಲೀಲ ವಿಡಿಯೊ ಹಾಕಿದ ಪ್ರಾಧ್ಯಾಪಕ

ಮಂಗಳೂರು: ಪರೀಕ್ಷೆಗೆ ಸಂಬಂಧಿಸಿದ ವಿಷಯಗಳನ್ನು ಚರ್ಚೆ ಮಾಡಲು ಮಂಗಳೂರು ವಿಶ್ವವಿದ್ಯಾಲಯ ರಚಿಸಿರುವ ಟೆಲಿಗ್ರಾಂ ಗ್ರೂಪ್‌ನಲ್ಲಿ ಕೊಡಗಿನ ಕಾಲೇಜು ಪ್ರಾಧ್ಯಾಪಕರೊಬ್ಬರು ಅಶ್ಲೀಲ ವಿಡಿಯೊ ಪೋಸ್ಟ್ ಮಾಡಿದ್ದು, ಇದೀಗ ವಿವಾದಕ್ಕೆ ಕಾರಣವಾಗಿದೆ.

ಈ ಸಂಬಂಧ, ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಲಾಗುವುದು ಎಂದು ಮಂಗಳೂರು ವಿ.ವಿ. ಪರೀಕ್ಷಾಂಗ ಕುಲಸಚಿವ ಪ್ರೊ.ಪಿ.ಎಲ್.ಧರ್ಮ ಹೇಳಿದ್ದಾರೆ.

'ಆನ್‌ಲೈನ್ ಶಿಕ್ಷಣಕ್ಕೆ ನಿರ್ದಿಷ್ಟ ರೂಪುರೇಷೆ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲ್ಯಾಪ್‌ಟ್ಯಾಪ್ ಎದುರು ಕುಳಿತು ಬೋಧಿಸುವುದು, ಕೈಯಲ್ಲಿ ಮೊಬೈಲ್ ಹಿಡಿದು ಮನೆಯಲ್ಲೆಲ್ಲಾ ಅಡ್ಡಾಡುತ್ತಾ ಪಾಠ ಆಲಿಸುವುದು ಆನ್‌ಲೈನ್ ಶಿಕ್ಷಣದ ಕ್ರಮವಲ್ಲ. ಈಗ ಈ ಪದ್ಧತಿ ಅನಿವಾರ್ಯ. ಕೋವಿಡ್ ನಂತರವೂ ಇದು ಮುಂದುವರಿಯಬೇಕು. ಇದಕ್ಕೆ ನಿರ್ದಿಷ್ಟ ರೂಪುರೇಷೆ ಅಗತ್ಯ' ಎಂದು ರಾಷ್ಟ್ರೀಯ ಮಾನ್ಯತಾ ಮಂಡಳಿಯ ಮುಖ್ಯಸ್ಥ ಪ್ರೊ.ಕೆ.ಕೆ.ಅಗರವಾಲ್ ತಿಳಿಸಿದರು.

ಡಾ.ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯವು ಕೆರಿಯರ್ ಲ್ಯಾಬ್ಸ್ ಸಹಯೋಗದಲ್ಲಿ 'ಕೋವಿಡ್ ನಂತರದ ಉನ್ನತ ಶಿಕ್ಷಣದಲ್ಲಿನ ಸವಾಲುಗಳು ಹಾಗೂ ಅವಕಾಶಗಳು' ವಿಷಯದ ಕುರಿತು ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ವೆಬಿನಾರ್‌ನಲ್ಲಿ ಅವರು ಮಾತನಾಡಿದರು.

'ಕೋವಿಡ್ ಸಮಯದಲ್ಲಿ ಮಕ್ಕಳು ಭೌತಿಕ ತರಗತಿಗಳಿಂದ ದೂರ ಉಳಿಯಬೇಕಾಗಿದೆ. ಹೀಗಾಗಿ ಆನ್‌ಲೈನ್ ಮೂಲಕ ಶಿಕ್ಷಣ ನೀಡಲಾಗುತ್ತಿದೆ. ಇದು ಪರ್ಯಾಯ ವ್ಯವಸ್ಥೆಯಷ್ಟೆ. ಆನ್‌ಲೈನ್ ಶಿಕ್ಷಣ ಬಹಳ ಒಳ್ಳೆಯದ್ದು, ಇದರಿಂದ ಎಲ್ಲ ಸಮಸ್ಯೆಗಳು ಬಗೆಹರಿಯುತ್ತವೆ ಎಂದು ಭಾವಿಸುವುದು ತಪ್ಪು' ಎಂದರು.

'ಕೋವಿಡ್‌ಗೂ ಮುನ್ನ ಮಕ್ಕಳು ಮೊಬೈಲ್ ಬಳಸುವುದನ್ನು ಎಲ್ಲರೂ ವಿರೋಧಿಸುತ್ತಿದ್ದರು. ಆನ್‌ಲೈನ್ ತರಗತಿಗಳು ಶುರುವಾದ ಮೇಲೆ ಅವುಗಳ ಬಳಕೆ ಅನಿವಾರ್ಯವಾಗಿದೆ. ಮಕ್ಕಳಿಂದ ಮೊಬೈಲ್ ಅನ್ನು ಅರ್ಧ ಗಂಟೆ ದೂರವಿಟ್ಟರೂ ಅವರು ಖಿನ್ನತೆಗೆ ಒಳಗಾಗಿಬಿಡುತ್ತಾರೆ. ಒಂದು ದಿನ ಮೊಬೈಲ್ ಬಳಸಲೇಬಾರದು ಎಂದು ತಾಕೀತು ಮಾಡಿದ್ದೇ ಆದರೆ ಶೇ 25ರಷ್ಟು ಮಕ್ಕಳನ್ನು ಆಸ್ಪತ್ರೆಗಳಿಗೆ ದಾಖಲಿಸಬೇಕಾಗುತ್ತದೆ. ಅಷ್ಟರ ಮಟ್ಟಿಗೆ ಅವರು ಮೊಬೈಲ್ ಗೀಳು ಬೆಳೆಸಿಕೊಂಡಿದ್ದಾರೆ. ಎಂಜಿನಿಯರಿಂಗ್ ಹಾಗೂ ದೂರ ಶಿಕ್ಷಣವನ್ನು ಆನ್‌ಲೈನ್‌ನಲ್ಲಿ ನೀಡಲು ಸಾಧ್ಯವೇ ಇಲ್ಲ ಎಂದು ಕೆಲ ವರ್ಷಗಳ ಹಿಂದೆ ಶಿಕ್ಷಣ ತಜ್ಞರು ಸುಪ್ರೀಂಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದ್ದರು. ಆದರೆ ಈಗ ಇದೊಂದು ಅತ್ಯುತ್ತಮ ವೇದಿಕೆ ಎಂದು ನಾವೆಲ್ಲಾ ಪ್ರತಿಪಾದಿಸುತ್ತಿದ್ದೇವೆ' ಎಂದು ತಿಳಿಸಿದರು.

ಡಿಆರ್‌ಡಿಒ ಮಾಜಿ ಮುಖ್ಯಸ್ಥ ಡಿ.ಎನ್.ರೆಡ್ಡಿ, ವರ್ಕಿ ಡೇಟಾ ಸರ್ವಿಸಸ್‌ನ ಸಿಇಒ ಖಾಸಿಂ ಕಿರ್ಮಾನಿ, ಆರ್‌ಲೇ ಸಮೂಹದ ನಿರ್ದೇಶಕ ಟಿಂಚೌಲ್ಸ್ ಇದ್ದರು.

ಸ್ವಯಂ ಉದ್ಯೋಗಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆಯಡಿ ಸ್ವಉದ್ಯೋಗ ಆರಂಭಿಸಲು ಇಚ್ಛಿಸುವ ನಿರುದ್ಯೋಗಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಆಸಕ್ತರು www.kviconline.gov.in ಇಲ್ಲಿ ಅರ್ಜಿ ಸಲ್ಲಿಸಬೇಕು. **ವಿಳಾಸ:** ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಬೆಂಗಳೂರು ನಗರ ಜಿಲ್ಲಾ ಕಚೇರಿ, ಜಸ್ಮಾ ಭವನ ರಸ್ತೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ರಾಮನಗರ ವಿಭಾಗ, ಸಂಚಾರ ಶಾಖೆ, ಮೊದಲನೇ ಮಹಡಿ, ವಾಹನ ನಿಲ್ದಾಣ, ಐಜೂರು ವೃತ್ತ, ರಾಮನಗರ–562159.

ಸಂಖ್ಯೆ: ಕರಾಸಾ.ರಾನವಿ.ಸಂ.ವಾ/427/428/21-22 ದಿನಾಂಕ: 08.07.2021

"ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ ಸಂ.01/21-22 & ಅಲ್ಪಾವಧಿ ಮ್ಯಾನ್ಯುಯಲ್ ಟೆಂಡರ್ ಪ್ರಕಟಣೆ ಸಂ:02/21-22"

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ ಇವರು, ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಆನೇಕಲ್, ಕನಕಪುರ ಹಾಗೂ ಚನ್ನಪಟ್ಟಣ ಬಸ್ ನಿಲ್ದಾಣ / ಘಟಕದ ಹತ್ತಿರದಲ್ಲಿ ಖಾಲಿಯಿರುವ ವಾಣಿಜ್ಯ ಮಳಿಗೆಗೆ ಸ್ಥಳಕ್ಕೆ 5 ವರ್ಷಗಳವರೆಗೆ/ತೆರೆದ ಸ್ಥಳದ ಮಳಿಗೆಗೆ ಹಾಗೂ ದ್ವಿಚಕ್ರ/ಕಾರು ನಿಲುಗಡೆಯ ಸ್ಥಳಕ್ಕೆ 03 ವರ್ಷಗಳವರೆಗೆ ಇ-ಟೆಂಡರ್ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡಲು ದಿನಾಂಕ 22.07.2021 ರಂದು 14.00 ಗಂಟೆಗೆ ಇ-ಟೆಂಡರ್ ನಡೆಸಲು/ತೆರೆಯಲು ಸಮಯವನ್ನು ನಿಗದಿಪಡಿಸಲಾಗಿರುತ್ತದೆ. ದಿನಾಂಕ 09.07.2021 ರಿಂದ ಇ-ಟೆಂಡರ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ-ಟೆಂಡರ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://www.eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ದಿನಾಂಕ 20.07.2021ರ ಮಧ್ಯಾಹ್ನ 14:00 ಗಂಟೆಯವರೆಗೆ ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕವಾಗಿರುತ್ತದೆ. ಹಾಗೂ ಕೋಡಂಬಳ್ಳಿ ನಿಲ್ದಾಣದಲ್ಲಿ ಖಾಲಿ ಇರುವ ವಾಣಿಜ್ಯ ಮಳಿಗೆಗೆ ಮ್ಯಾನ್ಯುಯಲ್ ಟೆಂಡರ್ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ದಿನಾಂಕ 22.07.2021 ರಂದು 12.00 ಗಂಟೆಗೆ ವಿಭಾಗೀಯ ಕಛೇರಿಯಲ್ಲಿ ಅರ್ಜಿದಾರರು/ಪ್ರತಿನಿಧಿಗಳ ಎದುರು ಮ್ಯಾನ್ಯುಯಲ್ ಟೆಂಡರನ್ನು ನಡೆಸಲಾಗುವುದು. ಮ್ಯಾನ್ಯುಯಲ್ ಟೆಂಡರ್ ಅರ್ಜಿಗಳನ್ನು ದಿನಾಂಕ 09.07.2021 ರಿಂದ ದಿನಾಂಕ 20.07.2021ರ 15.00 ಗಂಟೆಗಳವರೆಗೆ ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕರಾರಸಾ ಸಂಸ್ಥೆ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ–562159 ರಲ್ಲಿ ಸಂಪರ್ಕಿಸಲು ಕೋರಲಾಗಿದೆ. ದೂ.ಸಂ: 080–27272306 ಹಾಗೂ ವಿಭಾಗ ಸಂಚಲನಾಧಿಕಾರಿಗಳ ಮೊಬೈಲ್ ಸಂ: 7760990852.

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ
ರಾಮನಗರ ವಿಭಾಗ : ರಾಮನಗರ

ವಾ.ಸಾ.ಸಂ.ಇ/ಬೆಂ.ನಗರ/785/ಆಕಾರ್/2021–22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಲಾಕ್‌ಡೌನ್ ತೆರವಾದ ನಂತರ ಏರುಗತಿ ಪಡೆದ ಪ್ರವಾಸಿಗರ ಸಂಖ್ಯೆ ● ಕೋವಿಡ್ ಮಾರ್ಗಸೂಚಿಗಳ ಪಾಲನೆ

ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ಜೀವಕಳೆ

● ಜಿ.ಶಿವಕುಮಾರ

ಉದ್ಯಾನಕ್ಕೆ ಭೇಟಿ ನೀಡಿದ್ದ ಪ್ರವಾಸಿಗರು ಪ್ರಾಣಿಗಳನ್ನು ಕಣ್ತುಂಬಿಕೊಂಡರು –ಪ್ರಜಾವಾಣಿ ಚಿತ್ರ–ರಂಜು ಪಿ.

ಕೋವಿಡ್‌ನಿಂದಾಗಿ ಆದಾಯಕ್ಕೆ ದೊಡ್ಡ ಹೊಡೆತ ಬಿದ್ದಿದೆ. ಇಂತಹ ಪರಿಸ್ಥಿತಿಯಲ್ಲಿ ಟಿಕೆಟ್ ದರ ಕಡಿತಗೊಳಿಸುವ ಅಥವಾ ಹೊಸ ರಿಯಾಯಿತಿ ಪ್ರಕಟಿಸುವ ಯಾವ ಆಲೋಚನೆಯೂ ಇಲ್ಲ

ವನಶ್ರೀ ವಿಪಿನ್ ಸಿಂಗ್, ಕಾರ್ಯನಿರ್ವಾಹಕ ನಿರ್ದೇಶಕಿ, ಬನ್ನೇರುಘಟ್ಟ ಜೈವಿಕ ಉದ್ಯಾನ

ಪ್ರಜಾವಾಣಿ ವಿಶೇಷ

ಬೆಂಗಳೂರು: ಲಾಕ್‌ಡೌನ್‌ನಿಂದಾಗಿ ಪ್ರವಾಸಿಗರಿಲ್ಲದೆ ಭಣಗುಡುತ್ತಿದ್ದ ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ಮತ್ತೆ ಜೀವಕಳೆ ಬಂದಿದೆ. ಕೋವಿಡ್ ಕಾರಣ ಮನೆಗಳಲ್ಲೇ 'ಬಂಧಿ'ಯಾಗಿದ್ದ ಪ್ರಾಣಿ ಪ್ರಿಯರು ಉದ್ಯಾನದತ್ತ ಮುಖ ಮಾಡುತ್ತಿದ್ದಾರೆ. ವೀಕ್ಷಕರ ಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಿರುವ ಕಾರಣ ಉದ್ಯಾನದ ಬೊಕ್ಕಸಕ್ಕೂ ಹಣದ ಹರಿವು ನಿಧಾನವಾಗಿ ಹೆಚ್ಚುತ್ತಿದೆ.

2019ರ ಏಪ್ರಿಲ್‌ನಿಂದ 2020ರ ಮಾರ್ಚ್ 15ರವರೆಗೆ ಒಟ್ಟು 16.16 ಲಕ್ಷ ಮಂದಿ ಉದ್ಯಾನಕ್ಕೆ ಭೇಟಿ ನೀಡಿದ್ದರು. ಈ ಅವಧಿಯಲ್ಲಿ ₹31.99 ಕೋಟಿ ಆದಾಯ ಸಂಗ್ರಹವಾಗಿತ್ತು. ರಾಜ್ಯದಲ್ಲಿ ಕೋವಿಡ್ ಕಾಣಿಸಿಕೊಂಡ ನಂತರ ಪ್ರವಾಸಿಗರ ಸಂಖ್ಯೆ ಇಳಿಮುಖವಾಯಿತು. ಹೀಗಾಗಿ ವರಮಾನಕ್ಕೂ ದೊಡ್ಡ ಪೆಟ್ಟು ಬಿದ್ದಿತ್ತು. ಪ್ರಾಣಿಗಳ ಆಹಾರ, ಸಿಬ್ಬಂದಿ ವೇತನ ಹಾಗೂ ನಿರ್ವಹಣೆಗಾಗಿ ಉದ್ಯಾನಕ್ಕೆ ಮಾಸಿಕ ₹2 ಕೋಟಿ ವೆಚ್ಚವಾಗುತ್ತದೆ. ಲಾಕ್‌ಡೌನ್ ಅವಧಿಯಲ್ಲಿ ಈ ಮೊತ್ತ ಹೊಂದಿಸುವುದೇ ಸವಾಲಾಗಿ ಪರಿಣಮಿಸಿತ್ತು.

'ಲಾಕ್‌ಡೌನ್ ತೆರವುಗೊಂಡ ನಂತರದ ಮೊದಲ ದಿನವೇ (ಜುಲೈ1) 450 ಮಂದಿ ಉದ್ಯಾನಕ್ಕೆ ಭೇಟಿ ನೀಡಿದ್ದರು. ಜುಲೈ ಎರಡರಂದು ಈ ಸಂಖ್ಯೆ 800ರಷ್ಟಿತ್ತು. ಬಳಿಕ ವಾರಾಂತ್ಯ ಕರ್ಫ್ಯೂ ಇದ್ದಿದ್ದರಿಂದ ಜನ ಇತ್ತ ಸುಳಿಯಲಿಲ್ಲ. ಜುಲೈ 5ರ ನಂತರ ಪ್ರವಾಸಿಗರ ಸಂಖ್ಯೆ ಏರುಮುಖವಾಗಿದೆ. ಪ್ರತಿನಿತ್ಯ 800 ರಿಂದ 900 ಜನ ಬರುತ್ತಿದ್ದಾರೆ. ವಾರಾಂತ್ಯಗಳಲ್ಲಿ ಈ ಸಂಖ್ಯೆ ದ್ವಿಗುಣಗೊಳ್ಳುವ ನಿರೀಕ್ಷೆ ಇದೆ' ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕಿ ವನಶ್ರೀ ವಿಪಿನ್ ಸಿಂಗ್ 'ಪ್ರಜಾವಾಣಿ'ಗೆ ತಿಳಿಸಿದರು.

'ಪ್ರಾಣಿಗಳ ಆಹಾರ, ಸಿಬ್ಬಂದಿ ವೇತನ ಹಾಗೂ ನಿರ್ವಹಣೆಗಾಗಿಯೇ ವರ್ಷಕ್ಕೆ ₹25 ಕೋಟಿ ವೆಚ್ಚವಾಗುತ್ತದೆ. ಈ ಮೊತ್ತಕ್ಕಿಂತ ಹೆಚ್ಚು ಹಣ ಸಂಗ್ರಹವಾದರೆ ಅದನ್ನು ಆದಾಯವೆಂದು ಪರಿಗಣಿಸಲಾಗುತ್ತದೆ. ಆ ಮೊತ್ತವನ್ನು ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸುತ್ತೇವೆ. ಕೋವಿಡ್‌ನಿಂದಾಗಿ ನಮಗೆ ದೊಡ್ಡ ಪ್ರಮಾಣದ ನಷ್ಟ ಉಂಟಾಗಿದೆ. ಅದರಿಂದ ಚೇತರಿಸಿಕೊಳ್ಳಲು ಸಾಕಷ್ಟು ಸಮಯ ಬೇಕಾಗುತ್ತದೆ' ಎಂದರು.

ಮಾರ್ಗಸೂಚಿ ಪಾಲನೆ: 'ಸರ್ಕಾರ ಹೊರಡಿಸಿರುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಲಾಗುತ್ತಿದೆ. ಪ್ರವಾಸಿಗರನ್ನು ಹೊತ್ತೊಯ್ಯುವ 'ಸಫಾರಿ' ವಾಹನಗಳಿಗೆ ನಿತ್ಯವೂ ಸೋಂಕು ನಿವಾರಕ ಸಿಂಪಡಣೆ ಮಾಡಲಾಗುತ್ತಿದೆ. ಉದ್ಯಾನದ ಆವರಣದಲ್ಲಿ ಶುಚಿತ್ವಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ಕೊರೊನಾ ಸೋಂಕು ತಗಲುವ ಭೀತಿಯಿಂದ ಕೆಲವರು ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳಲ್ಲಿ ತಯಾರಿಸಿದ ಆಹಾರ ಸೇವಿಸಲು ಹಿಂಜರಿಯುತ್ತಿದ್ದಾರೆ. ಅಂತಹವರು ಮನೆಯಿಂದಲೇ ಊಟ ತರಬಹುದು. ಅದನ್ನು ಉದ್ಯಾನದ ಆವರಣದಲ್ಲಿರುವ ರೆಸ್ಟೋರೆಂಟ್‌ನಲ್ಲೇ ಕುಳಿತು ಸೇವಿಸಬಹುದು. ಅದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ' ಎಂದು ಹೇಳಿದರು.

'https://bannerghatta biologicalpark.org/ ವೆಬ್‌ಸೈಟ್‌ಗೆ ಭೇಟಿ ನೀಡಿದರೆ ಉದ್ಯಾನದ ಸಂಪೂರ್ಣ ಮಾಹಿತಿ ಲಭ್ಯವಾಗಲಿದೆ. ಈ ವೆಬ್‌ಸೈಟ್ ಮೂಲಕವೇ ಟಿಕೆಟ್ ಕೂಡ ಕಾಯ್ದಿರಿಸಬಹುದು. ಪ್ರಾಣಿಗಳನ್ನು ದತ್ತು ಪಡೆಯುವ ಪ್ರಕ್ರಿಯೆ ಮಾಹಿತಿಯೂ ಇಲ್ಲಿ ಲಭ್ಯವಾಗಲಿದೆ. ಇದನ್ನೆಲ್ಲಾ ತಿಳಿದುಕೊಂಡು ವ್ಯವಸ್ಥಿತ ಯೋಜನೆಯೊಂದಿಗೆ ಕುಟುಂಬ ಸಮೇತರಾಗಿ ಜನ ಉದ್ಯಾನಕ್ಕೆ ಭೇಟಿ ನೀಡಿದರೆ ಒಳ್ಳೆಯದು. ಪ್ರಾಣಿಗಳಿಂದಲೂ ಸೋಂಕು ಹರಡುತ್ತದೆ ಎಂಬುದು ತಪ್ಪು ಕಲ್ಪನೆ. ಅಂತಹ ಅಂಜಿಕೆ ಯಾರಿಗೂ ಬೇಡ' ಎಂದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹೊರಗೆ ಹೋಗುವಾಗ ಮಾಸ್ಕ್ ತಪ್ಪದೇ ಧರಿಸಿ

ಕಾಂಗ್ರೆಸ್ ಸೇರಲು ನಿರ್ಮಾಪಕ ಸಾ.ರಾ. ಗೋವಿಂದು ಒಲವು?

ಪ್ರಜಾವಾಣಿ ವಾರ್ತೆ

ಚಿತ್ರ ನಿರ್ಮಾಪಕ ಸಾ.ರಾ. ಗೋವಿಂದು ಶುಕ್ರವಾರ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿಮಾಡಿ ಮಾತುಕತೆ ನಡೆಸಿದರು. ಮಾಜಿ ಶಾಸಕ ಮಧು ಬಂಗಾರಪ್ಪ ಕೂಡ ಇದ್ದರು

ಬೆಂಗಳೂರು: ಚಿತ್ರ ನಿರ್ಮಾಪಕ ಸಾ.ರಾ. ಗೋವಿಂದು ಕಾಂಗ್ರೆಸ್ ಸೇರಲು ಉತ್ಸುಕರಾಗಿದ್ದು, ಪಕ್ಷದ ಮುಖಂಡರನ್ನು ಭೇಟಿಯಾಗಿ ಸಮಾಲೋಚನೆ ನಡೆಸುತ್ತಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಶುಕ್ರವಾರ ಭೇಟಿ ಮಾಡಿ ಕೆಲಕಾಲ ಚರ್ಚೆ ನಡೆಸಿದ್ದಾರೆ.

ಇದೇ 17ರಂದು ಬಸವೇಶ್ವರ ನಗರದಲ್ಲಿ ಪಡಿತರ ಕಿಟ್ ವಿತರಣೆ ಕಾರ್ಯಕ್ರಮವೊಂದನ್ನು ಆಯೋಜಿಸಿದ್ದಾರೆ. ಅದರಲ್ಲಿ ಪಾಲ್ಗೊಳ್ಳುವಂತೆ ಆಹ್ವಾನ ನೀಡಲು ತೆರಳಿದ್ದ ಗೋವಿಂದು, ಪಕ್ಷ ಸೇರ್ಪಡೆ ಕುರಿತೂ ಪೂರ್ವಭಾವಿ ಚರ್ಚೆ ನಡೆಸಿದ್ದಾರೆ. ಶೀಘ್ರದಲ್ಲಿ ಈ ಕುರಿತು ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ ಎಂಬ ಮಾಹಿತಿ ಲಭಿಸಿದೆ.

ಗೋವಿಂದು ಅವರು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನೂ ಇತ್ತೀಚೆಗೆ ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಜುಲೈ 17ರ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ ನಾಯಕರು, ಮುಖಂಡರಿಗೆ ಆಹ್ವಾನ ನೀಡಿದ್ದಾರೆ. ವಿಧಾನಸಭಾ ಚುನಾವಣೆಗೂ ಮೊದಲೇ ಪಕ್ಷ ಸೇರುವ ಯೋಚನೆಯಲ್ಲಿದ್ದಾರೆ ಎಂದು ಮೂಲಗಳು ಹೇಳಿವೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಗೋವಿಂದು, 'ಕಾರ್ಯಕ್ರಮಕ್ಕೆ ಆಹ್ವಾನ ನೀಡಲು ಶಿವಕುಮಾರ್ ಅವರನ್ನು ಭೇಟಿ ಮಾಡಿದ್ದೆ. ಪಕ್ಷ ಸೇರ್ಪಡೆ ಕುರಿತು ಅಂತಿಮ ನಿರ್ಧಾರ ಕೈಗೊಂಡ ಬಳಿಕ ಹೇಳುವೆ' ಎಂದು ತಿಳಿಸಿದರು.

ಶಾಸಕ ಎಚ್‌.ಕೆ. ಪಾಟೀಲ, ಮಾಜಿ ಶಾಸಕ ಮಧು ಬಂಗಾರಪ್ಪ ಕೂಡ ಡಿ.ಕೆ. ಶಿವಕುಮಾರ್ ಅವರ ನಿವಾಸಕ್ಕೆ ಶುಕ್ರವಾರ ಭೇಟಿ ನೀಡಿದ್ದು, ಪಕ್ಷ ಸಂಘಟನೆಗೆ ಸಂಬಂಧಿಸಿದಂತೆ ಚರ್ಚೆ ನಡೆಸಿದ್ದಾರೆ.

ವಾಣಿಜ್ಯ ವಾಹನಗಳ ಚಾಲಕರಿಗೆ ಪರಿಹಾರ: ಷರತ್ತು ಸಡಿಲಿಸಲು ಸಚಿವ ಹೆಬ್ಬಾರ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕ ಅಪಘಾತ ಪರಿಹಾರ ಯೋಜನೆ ಅಡಿಯಲ್ಲಿ ಚಾಲಕರು ಪರಿಹಾರ ಪಡೆಯಲು ವಿಧಿಸಿರುವ ಷರತ್ತುಗಳನ್ನು ಸಡಿಲಿಕೆ ಮಾಡುವಂತೆ ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಕಾರ್ಮಿಕ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಶುಕ್ರವಾರ ವಿಕಾಸಸೌಧದಲ್ಲಿ ರಾಜ್ಯ ಅಸಂಘಟಿತ ಕಾರ್ಮಿಕರ ಭದ್ರತಾ ಮಂಡಳಿಯ ಸಭೆ ನಡೆಸಿದ ಅವರು, 'ಚಾಲಕರು ಪರಿಹಾರ ಪಡೆಯಲು ಇರುವ ತೊಡಕುಗಳನ್ನು ನಿವಾರಿಸಬೇಕು. ಷರತ್ತುಗಳನ್ನು ಸಡಿಲಿಕೆ ಮಾಡಿ, ಈ ಕುರಿತು ವ್ಯಾಪಕ ಪ್ರಚಾರ ನಡೆಸಬೇಕು' ಎಂದು ನಿರ್ದೇಶನ ನೀಡಿದರು.

ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಹಾಗೂ ಅಸಂಘಟಿತ ಕಾರ್ಮಿಕರಿಗೆ ಇಲಾಖೆಯಿಂದ ನೀಡುವ ಸೌಲಭ್ಯಗಳ ಕುರಿತು ಜಾಗೃತಿ ಮೂಡಿಸಲು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಿಸಲು ಪೂರ್ವಸಿದ್ಧತೆ ನಡೆಸಬೇಕು ಎಂದು ಸೂಚಿಸಿದರು.

ಅಸಂಘಟಿತ ಕಾರ್ಮಿಕರ ಅನುಕೂಲಕ್ಕಾಗಿ ಪ್ರತ್ಯೇಕ ಮಂಡಳಿ ಹಾಗೂ ಹೊಸ ಯೋಜನೆಗಳನ್ನು ರೂಪಿಸುವ ಕುರಿತು ಸಚಿವರು ಅಧಿಕಾರಿಗಳ ಜತೆ ಸಮಾಲೋಚನೆ ನಡೆಸಿದರು.

ಪ್ರಶಸ್ತಿ ಮೊತ್ತ ಹೆಚ್ಚಳ: ಅಸಂಘಟಿತ ಕಾರ್ಮಿಕರಿಗೆ ಇಲಾಖೆಯಿಂದ ನೀಡುವ ಪ್ರಶಸ್ತಿಯ ಮೊತ್ತವನ್ನು ಪ್ರಥಮ ಸ್ಥಾನಕ್ಕೆ ₹ 15,000ದಿಂದ ₹ 20,000ಕ್ಕೆ, ದ್ವಿತೀಯ ಸ್ಥಾನಕ್ಕೆ ₹ 15,000ಕ್ಕೆ, ತೃತೀಯ ಸ್ಥಾನಕ್ಕೆ ₹ 10,000ಕ್ಕೆ ಹಾಗೂ ಸಮಾಧಾನಕರ ಬಹುಮಾನದ ಮೊತ್ತವನ್ನು ₹ 1,000ದ ಬದಲಿಗೆ ₹ 5,000ಕ್ಕೆ ಹೆಚ್ಚಿಸುವ ತೀರ್ಮಾನವನ್ನು ಸಭೆಯಲ್ಲಿ ಕೈಗೊಳ್ಳಲಾಗಿದೆ.

ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಜಿ. ಕಲ್ಪನಾ, ಕಾರ್ಮಿಕ ಆಯುಕ್ತ ಅಕ್ರಂ ಪಾಷಾ ಸಭೆಯಲ್ಲಿದ್ದರು.

ರಾಜ್ಯಪಾಲ ಗೆಹಲೋತ್ ಪ್ರಮಾಣವಚನ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರದ ಮಾಜಿ ಸಚಿವ ಥಾವರಚಂದ್ ಗೆಹಲೋತ್ ಅವರು ರಾಜ್ಯದ ನೂತನ ರಾಜ್ಯಪಾಲರಾಗಿ ಭಾನುವಾರ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ರಾಜಭವನದ ಗಾಜಿನ ಮನೆಯಲ್ಲಿ ಭಾನುವಾರ ಬೆಳಿಗ್ಗೆ 10.30ಕ್ಕೆ ನಡೆಯುವ ಸಮಾರಂಭದಲ್ಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕಾ ಅವರು ನೂತನ ರಾಜ್ಯಪಾಲರಿಗೆ ಅಧಿಕಾರ ಮತ್ತು ಗೋಪ್ಯತೆಯ ಪ್ರಮಾಣವಚನ ಬೋಧಿಸಲಿದ್ದಾರೆ.

ಹಾಲಿ ರಾಜ್ಯಪಾಲ ವಜುಭಾಯಿ ವಾಲಾ ಅವರ ಅವಧಿ ಪೂರ್ಣಗೊಂಡಿದೆ. ಅವರ ಸ್ಥಾನಕ್ಕೆ ಥಾವರಚಂದ್ ಅವರನ್ನು ನೇಮಕ ಮಾಡಲಾಗಿದೆ.

ರಾಜ್ಯಪಾಲರಾಗಿ ನೇಮಕಗೊಂಡ ಬಳಿಕ ಅವರು, ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ಸಚಿವ ಸ್ಥಾನ ಹಾಗೂ ರಾಜ್ಯಸಭೆ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿದ್ದರು.

ಅಡಿಗಾಸ್ ಯಾತ್ರಾದಿಂದ ಭಾರತ ದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವಾಸೋದ್ಯಮ ಕ್ಷೇತ್ರದಲ್ಲಿ 26 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಅಡಿಗಾಸ್ ಯಾತ್ರಾ ಸಂಸ್ಥೆಯು ಪ್ರವಾಸಿಗರಿಗಾಗಿ ಭಾರತ ದರ್ಶನ ಕಾರ್ಯಕ್ರಮ ರೂಪಿಸಿದೆ.

'ಪ್ರವಾಸಿಗರನ್ನು ಸುಲಭವಾಗಿ ಹಾಗೂ ವಿಶೇಷ ರಿಯಾಯಿತಿಯೊಂದಿಗೆ ಕಾಶಿ, ಗಯಾ, ಚಾರ್‌ಧಾಮ, ಅಸ್ಸಾಂ, ಅರುಣಾಚಲ ಪ್ರದೇಶ, ಮೇಘಾಲಯ, ನಾಗಾಲ್ಯಾಂಡ್, ಮಣಿಪುರ, ಮಿಜೋರಾಂ, ತ್ರಿಪುರ, ಸಿಕ್ಕಿಂ, ಡಾರ್ಜಿಲಿಂಗ್, ವೈಷ್ಣೋದೇವಿ ಹೀಗೆ ಅನೇಕ ಪ್ರಸಿದ್ಧ ಹಾಗೂ ಮನಮೋಹಕ ತಾಣಗಳಿಗೆ ಕರೆದೊಯ್ಯಲಾಗುತ್ತದೆ. ಪ್ರವಾಸಿಗರು ತಾವು ಇಚ್ಛಿಸಿದ ದಿನಗಳಲ್ಲಿ ಕುಟುಂಬ ಹಾಗೂ ಸ್ನೇಹಿತರೊಂದಿಗೆ ಪ್ರವಾಸ ಮಾಡಬಹುದು' ಎಂದು ಸಂಸ್ಥೆಯ ಸಂಸ್ಥಾಪಕ ಕೆ.ನಾಗರಾಜ ಅಡಿಗ ತಿಳಿಸಿದ್ದಾರೆ.

'ಕಾಶ್ಮೀರ, ಶಿಮ್ಲಾ, ಮನಾಲಿ, ನೈನಿತಾಲ್ ಹಾಗೂ ಅಂಡಮಾನ್ ಪ್ರವಾಸ ಕೈಗೊಳ್ಳುವವರಿಗೆ ವಿಶೇಷ ವ್ಯವಸ್ಥೆ ಮಾಡಲಾಗಿದೆ. ಮಧುಚಂದ್ರಕ್ಕೆ ಹೋಗಲು ಸಿದ್ಧವಿರುವ ನವಜೋಡಿಗಳನ್ನು ಗಮನದಲ್ಲಿಟ್ಟುಕೊಂಡು ವಿಶೇಷ ಪ್ಯಾಕೇಜ್ ರೂಪಿಸಲಾಗಿದೆ. ಸಂಸ್ಥೆಯು ನೇಪಾಳ, ಭೂತಾನ್, ಮುಕ್ತಿನಾಥ, ಲಡಾಖ್ ಹಾಗೂ ಇತರ 40 ಸ್ಥಳಗಳಿಗೆ ಪ್ರವಾಸ ಆಯೋಜಿಸಿದೆ. 5ರಿಂದ 10ದಿನಗಳ ಈ ಪ್ರವಾಸಕ್ಕೆ ಈಗಾಗಲೇ ದಿನಾಂಕವನ್ನೂ ನಿಗದಿಪಡಿಸಲಾಗಿದೆ. 9 ದಿನಗಳ ಕಾಶಿ–ಗಯಾ ಯಾತ್ರೆಯೂ ನಿಗದಿಯಾಗಿದೆ. ಆಸಕ್ತರು ಹೆಸರು ನೋಂದಾಯಿಸಿಕೊಳ್ಳಬಹುದು. 12 ತಿಂಗಳ ಮಾಸಿಕ ಯೋಜನೆಯನ್ನೂ ಜಾರಿಗೊಳಿಸಲಾಗಿದ್ದು, ಪ್ರವಾಸಿಗರು ಇದರ ಪ್ರಯೋಜನ ಪಡೆದುಕೊಳ್ಳಬಹುದು' ಎಂದು ಅವರು ಹೇಳಿದ್ದಾರೆ.

ಹೆಚ್ಚಿನ ಮಾಹಿತಿಗೆ: www.adigasyatra.com ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

ಸಂಪರ್ಕಕ್ಕೆ: 7022259002 (ಹುಬ್ಬಳ್ಳಿ), 7022259008 (ಬಸವನಗುಡಿ), 7022259003 (ಮಲ್ಲೇಶ್ವರ).

ತೋಟಗಾರಿಕೆ ಇಲಾಖೆ ನಿರ್ದೇಶಕರಾಗಿ ನಾಗೇಂದ್ರ ಪ್ರಸಾದ್ ನೇಮಕ

ಬೆಂಗಳೂರು: ಮೂವರು ಐಎಎಸ್ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ ಶುಕ್ರವಾರ ಆದೇಶ ಹೊರಡಿಸಿದ್ದು, ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ (ರೇರಾ) ಕಾರ್ಯದರ್ಶಿಯಾಗಿದ್ದ ಕೆ.ನಾಗೇಂದ್ರ ಪ್ರಸಾದ್ ಅವರನ್ನು ತೋಟಗಾರಿಕಾ ಇಲಾಖೆ ನಿರ್ದೇಶಕರನ್ನಾಗಿ ನೇಮಿಸಲಾಗಿದೆ.

ತೋಟಗಾರಿಕೆ ಇಲಾಖೆ ನಿರ್ದೇಶಕರ ಹುದ್ದೆಯಲ್ಲಿದ್ದ ಫೌಝಿಯಾ ತರನ್ನುಮ್ ಅವರನ್ನು ಕೊಪ್ಪಳ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ನಾಗೇಂದ್ರ ಪ್ರಸಾದ್ ಅವರಿಗೆ ರೇರಾ ಕಾರ್ಯದರ್ಶಿ ಹುದ್ದೆಯ ಹೆಚ್ಚುವರಿ ಪ್ರಭಾರವನ್ನೂ ವಹಿಸಲಾಗಿದೆ.

ಕರ್ನಾಟಕ ಖನಿಜ ನಿಗಮದ ವ್ಯವಸ್ಥಾಪಕ ನಿರ್ದೇಶಕ ಶಿವಾನಂದ ಕಾಪಸಿ ಅವರಿಗೆ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ವ್ಯವಸ್ಥಾಪಕ ನಿರ್ದೇಶಕರ ಹೆಚ್ಚುವರಿ ಪ್ರಭಾರವನ್ನೂ ವಹಿಸಿ ಆದೇಶ ಹೊರಡಿಸಲಾಗಿದೆ.

ಸಹಾಯಧನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕೋವಿಡ್ ಎರಡನೇ ಅಲೆಯಿಂದ ಸಂಕಷ್ಟಕ್ಕೆ ಸಿಲುಕಿರುವ ನೇಕಾರರಿಗೆ ಸರ್ಕಾರ ಘೋಷಿಸಿರುವ ₹3 ಸಾವಿರ ಪರಿಹಾರಧನ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಜಿಲ್ಲೆಯಲ್ಲಿನ ವಿದ್ಯುತ್ ಮಗ್ಗ ವಲಯದಲ್ಲಿರುವ 18ರಿಂದ 65 ವರ್ಷದೊಳಗಿನ ನೇಕಾರರು ಪರಿಹಾರ ಪಡೆಯಲು ಅರ್ಹರು. ಅರ್ಹ ಫಲಾನುಭವಿಗಳು https://sevasindhu.karnataka.gov.in ಪೋರ್ಟಲ್ ಮೂಲಕ ಜುಲೈ 30ರೊಳಗೆ ಅರ್ಜಿ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ.

ವಿಳಾಸ: ಉಪನಿರ್ದೇಶಕರ ಕಚೇರಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ, ಕೆ.ಆರ್.ವೃತ್ತ, ಸಂಪರ್ಕಕ್ಕೆ: 99454 89903, 77609 29151.

ನಿಧನ ವಾರ್ತೆ

ಸಚಿವ ಗೋಪಾಲಯ್ಯ ಅವರಿಗೆ ಮಾತೃವಿಯೋಗ



ಕಾಳಮ್ಮ ಚೆನ್ನಿಗಪ್ಪ

ಬೆಂಗಳೂರು: ಅಬಕಾರಿ ಸಚಿವ ಕೆ. ಗೋಪಾಲಯ್ಯ ಅವರ ತಾಯಿ ಕಾಳಮ್ಮ ಚೆನ್ನಿಗಪ್ಪ (92) ಅವರು ಶುಕ್ರವಾರ ಬೆಳಿಗ್ಗೆ ನಿಧನರಾದರು.

ಕಾಳಮ್ಮ ಅವರಿಗೆ ಐವರು ಪುತ್ರರು ಹಾಗೂ ನಾಲ್ವರು ಪುತ್ರಿಯರು ಇದ್ದಾರೆ.

ಕಾಮಾಕ್ಷಿಪಾಳ್ಯದ ವೃಷಭಾವತಿ ನಗರದ 11ನೇ ಮುಖ್ಯರಸ್ತೆಯಲ್ಲಿರುವ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಹಾಲಪ್ಪನಗುಡ್ಡ ಬಳಿಯ ಚೆನ್ನಿಗಪ್ಪ ಕಾಳಮ್ಮ ಫಾರ್ಮ್‌ನಲ್ಲಿ ಶುಕ್ರವಾರ ಸಂಜೆ ಅಂತ್ಯಕ್ರಿಯೆ ನಡೆಸಲಾಯಿತೆಂದು ಕುಟುಂಬದವರು ತಿಳಿಸಿದ್ದಾರೆ.

ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ನಿ.,
ನಂ.14, ರಜತಾ ಭವನ, 1ನೇ ಮುಖ್ಯರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104.
ದೂ. 23300497 41159606 , ಫ್ಯಾಕ್ಸ್ : 23359600 ಇ–ಮೇಲ್ : vjn@jscbl.com

ಸ್ವಾಧೀನ ಸೂಚನೆ ನಿಯಮ 8(1)ರಡಿಯಲ್ಲಿ (ಸ್ಥಿರಾಸ್ತಿಗಳಿಗಾಗಿ)

ಕೆಳಸಹಿದಾರರು **ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ.,** ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002 ರ ಅನ್ವಯ ಮತ್ತು ಸೆಕ್ಯೂರಿಟಿ ಇಂಟ್ರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ 2002 ನಿಯಮ 3 ಅನ್ನು ಓದಿಕೊಂಡಂತೆ ಪ್ರಕರಣ 13(12)ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ ಸೂಚನೆ ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ ಸೂಚನೆಯಲ್ಲಿ ತಿಳಿಸಿರುವ ಮೊಬಲಗು **ದಿನಾಂಕ 22.02.2021** ರಂದು ಇದ್ದಂತೆ **ರೂ.5,71,72,984/–** (ರೂಪಾಯಿ ಐದು ಕೋಟಿ ಎಪ್ಪತ್ತೊಂದು ಲಕ್ಷದ ಎಪ್ಪತ್ತೆರಡು ಸಾವಿರದ ಒಂಭೈನೂರ ಎಂಭತ್ತ ನಾಲ್ಕು ಮಾತ್ರ) ಪಾವತಿ ಮಾಡಲು **ಸಾಲಗಾರರಾದ: ಮೆ॥ ಭಾವನಾ ಕನ್‌ಸ್ಟ್ರಕ್ಷನ್ಸ್,** ಇದರ ಮಾಲೀಕರಾದ **ಶ್ರೀಮತಿ ಭಾವನಾ ಪ್ರವೀಣ್,** ನಂ.07, ನೆಲಮಹಡಿ, ಮುತ್ತಯ್ಯ ಕಾಂಪೌಂಡ್ ನಾಗರಬಾವಿ ಸರ್ಕಲ್, ನಾಗರಬಾವಿ, ಬೆಂಗಳೂರು–560072, ವಾಸ ನಂ.326, 10ನೇ ಕ್ರಾಸ್, 5ನೇ ಮೇನ್, 4ನೇ ಸ್ಟೇಜ್, ವಿಜಯನಾಯಕ ಲೇಔಟ್, ನಾಗರಬಾವಿ, ಬೆಂಗಳೂರು–560072, **ಜಾಮೀನುದಾರರು: ಶ್ರೀ ರಾಜ್‌ಕುಮಾರ್ ಡಿ.ಎ** ಬಿನ್ ಲೇಟ್ ದಾಸೇ ಗೌಡ, ನಂ.309, 1ನೇ ಬಿ ಮೇನ್, 6ನೇ ಕ್ರಾಸ್, 4ನೇ ಸ್ಟೇಜ್, 9ನೇ ಬ್ಲಾಕ್, ವಿನಾಯಕ ಲೇಔಟ್, ನಾಗರಬಾವಿ, ಬೆಂಗಳೂರು–072 ಇವರಿಗೆ ದಿನಾಂಕ: **22.02.2021** ರಂದು ಡಿಮ್ಯಾಂಡ್ ನೋಟಿಸ್‌ನ್ನು ನೀಡಲಾಗಿತ್ತು.

ಸಾಲಗಾರರು/ಸಹ–ಸಾಲಗಾರರು/ಜಾಮೀನುದಾರರು/ಅಡಮಾನುದಾರರು ಸದರಿ ಮೊಬಲಗನ್ನು ಮರುಪಾವತಿಸದೇ ಇರುವುದರಿಂದ ಈ ಕೆಳಗೆ ಸಹಿ ಮಾಡಿರುವವರು ಕೆಳಗೆ ವಿವರಿಸಲಾದ ಆಸ್ತಿಯನ್ನು ಈ ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್ 13(8) ರೊಂದಿಗೆ ನಿಯಮ 8ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ **ದಿನಾಂಕ: 08.07.2021** ರಂದು ಸ್ವಾಧೀನ ಪಡಿಸಿಕೊಳ್ಳಲಾಗಿದೆ ಎಂದು ಸಾಲಗಾರರಿಗೆ ಈ ಮೂಲಕ ತಿಳಿಯಪಡಿಸಿದೆ.

ನಿರ್ದಿಷ್ಟವಾಗಿ ಸಾಲಗಾರರು/ಜಾಮೀನುದಾರರು/ಅಡಮಾನುದಾರರು ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಕೆಳಗೆ ವಿವರಿಸಿದ ಆಸ್ತಿಯೊಂದಿಗೆ ವ್ಯವಹರಿಸದಂತೆ ಈ ಮೂಲಕ ಎಚ್ಚರಿಸುತ್ತಿದ್ದೇವೆ ಹಾಗೂ ಅಂತಹ ಯಾವುದೇ ವ್ಯವಹಾರಗಳು **ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ, ವಿಜಯನಗರ, ಬೆಂಗಳೂರು** ಇವರಿಗೆ ಸಂದಾಯವಾಗತಕ್ಕ ಮೊಬಲಗು **ರೂ.6,06,49,274/–** (ರೂಪಾಯಿ ಆರು ಕೋಟಿ ಆರು ಲಕ್ಷದ ನಲವತ್ತೊಂಭತ್ತು ಸಾವಿರದ ಇನ್ನೂರ ಎಪ್ಪತ್ತೇಳು ಮಾತ್ರ) ದಿನಾಂಕ **02.07.2021** ರಿಂದ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ.

ಸಾಲಗಾರರ / ಜಾಮೀನುದಾರರಾದ ಗಮನಕ್ಕೆ ತರುವುದೇನೆಂದರೆ ಭದ್ರತಾ ಸ್ವತ್ತುಗಳನ್ನು ಹಿಂಪಡೆಯುವ ಕಾಲಾವಕಾಶ ಉಪ ಕಾಯಿದೆ 8 ಮತ್ತು ಕಾಯಿದೆಯ ಸೆಕ್ಷನ್ 13ರ ಅನ್ವಯ ಇರುತ್ತದೆ.

ಹೈಪೋಥೆಕೇಟೆಡ್ ಸ್ವತ್ತುಗಳ ವಿವರಗಳು ಮತ್ತು ಜಾಮೀನುದಾರರ ಅಡಮಾನದ ಆಸ್ತಿಗಳ ವಿವರಗಳು ಆಸ್ತಿಯು ಶ್ರೀ ರಾಜ್‌ಕುಮಾರ್ ಡಿ.ಎ ರವರಿಗೆ ಸೇರಿದೆ:

ಸ್ಥಿರಾಸ್ತಿ ನಂ.310, ಇಂಟರ್‌ಮೀಡಿಯಟ್ 78ಎ–01ಜಿ, ಸರ್ವೆ ನಂ. 17,18/1 ರಿಂದ 6, 20, 23, 30, 31, 32, 36/1, 37, 64, 71, 95, 96, 97, 98, 112(19), 135 ರಿಂದ 137 (17), ನಾಗರಬಾವಿ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಜಿಲ್ಲೆ, ಹೆಚ್‌ಬಿಸಿಎಸ್ ಲಿ., ರವರಿಂದ ನಿರ್ಮಿತವಾದ ಖಾಸಗಿ ಲೇಔಟ್, ಬೆಂಗಳೂರು ಮತ್ತು ವಿಸ್ತೀರ್ಣ: ಪೂರ್ವದಿಂದ ಪಶ್ಚಿಮ: 60.00 ಅಡಿ, ಮತ್ತು ಉತ್ತರದಿಂದ ದಕ್ಷಿಣ: 40.00 ಅಡಿ., ಒಟ್ಟಾರೆ ವಿಸ್ತೀರ್ಣ 2400.00 ಚ.ಅಡಿ. ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ನಿವೇಶನ ನಂ.303, ಉತ್ತರಕ್ಕೆ: ನಿವೇಶನ ನಂ.309, ದಕ್ಷಿಣಕ್ಕೆ: ನಿವೇಶನ ನಂ.311.

ದಿನಾಂಕ : 08.07.2021 | ಸಹಿ/– ಅಧಿಕೃತ ಅಧಿಕಾರಿ
ಸ್ಥಳ : ಬೆಂಗಳೂರು | ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ.,

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ DIAGEO INDIA
ಕಾರ್ಪೊರೇಟ್ ಐಡೆಂಟಿಟಿ ನಂಬರ್: L01551KA1999PLC024991
ನೋಂದಾಯಿತ ಕಛೇರಿ: 'ಯುಬಿ ಟವರ್', # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001.
ಫೋನ್: +91 80 4544 8000 ಫ್ಯಾಕ್ಸ್: +91 80 3985 6862
ಇಮೇಲ್: investor.india@diageo.com ವೆಬ್‌ಸೈಟ್: www.diageoindia.com

ಸದಸ್ಯರಿಗೆ ಸೂಚನೆ – ಇಮೇಲ್ ವಿಳಾಸ ಮತ್ತು ಬ್ಯಾಂಕ್ ಖಾತೆ ವಿವರಗಳನ್ನು ನೋಂದಾಯಿಸಿ

ಮುಂದುವರಿದ COVID -19 ಸಾಂಕ್ರಾಮಿಕದಿಂದ ಉಂಟಾಗುವ ಅಡೆತಡೆಗಳನ್ನು ಗಮನದಲ್ಲಿಟ್ಟುಕೊಂಡು, ಕಂಪನಿಯ 22 ನೇ ವಾರ್ಷಿಕ ಸಾಮಾನ್ಯ ಸಭೆ ("ಎಜಿಎಂ") ವಿಡಿಯೋ ಕಾನ್ಫರೆನ್ಸಿಂಗ್ ("VC") / ಇತರ ಆಡಿಯೋ–ವಿಷುಯಲ್ ವಿಧಾನಗಳ ("OAVM") ಮೂಲಕ ನಡೆಯಲಿದೆ. ಕಂಪೆನಿಗಳ ಕಾಯ್ದೆ, 2013 ("ಆಕ್ಟ್") ಮತ್ತು ಅಲ್ಲಿ ಮಾಡಿದ ನಿಯಮಗಳು ಮತ್ತು ಸೆಕ್ಯುರಿಟೀಸ್ ಅಂಡ್ ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾ (ಪಟ್ಟಿ ಕಟ್ಟುಪಾಡುಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) ನಿಯಮಗಳು, 2015 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020 ರೊಂದಿಗೆ ಓದಿ ಏಪ್ರಿಲ್ 08, 2020, ಏಪ್ರಿಲ್ 13, 2020 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 17/2020, ಮೇ 5, 2020 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 20/2020 ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿದ ಜನವರಿ 13, 2021 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 02/2021 ಮತ್ತು ಮೇ 12, 2020 ರ ಸುತ್ತೋಲೆ ಸಂಖ್ಯೆ ಸೆಬಿ/ಈಎಚ್‌ಒ/ಸಿಎಫ್‌ಡಿ/ಸಿಎಂಡಿ1/ಸಿಐಆರ್/ಪಿ/2020/79 ಮತ್ತು 20 ಜನವರಿ 2021ರ ದಿನಾಂಕದ ಸುತ್ತೋಲೆ ಸಂಖ್ಯೆ ಸೆಬಿ/ಎಚ್‌ಒ/ಸಿಎಫ್‌ಡಿ/ಸಿಎಂಡಿ2/ಸಿಐಆರ್/ಪಿ/2021/11.

ಈ ಸುತ್ತೋಲೆಗಳಿಗೆ ಅನುಗುಣವಾಗಿ, 2020-21ರ ಆರ್ಥಿಕ ವರ್ಷದ ಎಜಿಎಂ ಮತ್ತು ವಾರ್ಷಿಕ ವರದಿಯನ್ನು (ಒಟ್ಟಾರೆಯಾಗಿ ವಾರ್ಷಿಕ ವರದಿ ಎಂದು ಕರೆಯಲಾಗುತ್ತದೆ) ಸದಸ್ಯರು ಮತ್ತು ಇತರ ವ್ಯಕ್ತಿಗಳಿಗೆ ಇಮೇಲ್ ಮೂಲಕ ಮಾತ್ರ ಕಳುಹಿಸಲಾಗುತ್ತದೆ, ಕಂಪನಿಯಲ್ಲಿ ಯಾರ ಇಮೇಲ್ ವಿಳಾಸಗಳನ್ನು ನೋಂದಾಯಿಸಲಾಗಿದೆಯೋ ಅಥವಾ ಠೇವಣಿ ಭಾಗವಹಿಸುವವರೊಂದಿಗೆ ("ಡಿಪಿ"). ವಾರ್ಷಿಕ ವರದಿಯನ್ನು ಕಂಪನಿಯ ವೆಬ್‌ಸೈಟ್ www.diageoindia.com ಮತ್ತು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಲ್ಲಿ, ಅಂದರೆ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ www.nseindia.com ಮತ್ತು ಬಿಎಸ್ಇ ಲಿಮಿಟೆಡ್ www.bseindia.com ನಲ್ಲಿ ಲಭ್ಯವಾಗಲಿದೆ.

ಡಿಮೆಟೀರಲೈಸ್ಡ್ ಮೋಡ್‌ನಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು, ತಮ್ಮ ಇಮೇಲ್ ವಿಳಾಸಗಳನ್ನು ತಮ್ಮ ಡಿಪಿಯೊಂದಿಗೆ ನೋಂದಾಯಿಸದ/ನವೀಕರಿಸದಿರುವವರು, ತಮ್ಮ ಇಮೇಲ್ ವಿಳಾಸಗಳನ್ನು ಸಂಬಂಧಿತ ಡಿಪಿಯಲ್ಲಿ ನೋಂದಾಯಿಸಲು/ನವೀಕರಿಸಲು ಕೋರಲಾಗಿದೆ. ಕಂಪನಿಯೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸದ/ನವೀಕರಿಸದ ಭೌತಿಕ ಮೋಡ್‌ನಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು, bglsta@integratedindia.in ನಲ್ಲಿ ಕಂಪನಿಯ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟರಿಗೆ ("ಆರ್‌ಟಿಎ") ಬರೆಯುವ ಮೂಲಕ ನೋಂದಾಯಿಸಲು/ನವೀಕರಿಸಲು ಕೋರಲಾಗಿದೆ. ಹೆಸರು, ಫೋಲಿಯೊ ಸಂಖ್ಯೆ, ಪಿನ್ ಕೋಡ್‌ನೊಂದಿಗೆ ವಿಳಾಸ, ಸಂಪರ್ಕ ಸಂಖ್ಯೆ, ಜೊತೆಗೆ ಪ್ಯಾನ್ ಕಾರ್ಡ್‌ನ ಸ್ವಯಂ ದೃಢೀಕರಿಸಿದ ಪ್ರತಿಗಳು ಮತ್ತು ವಿಳಾಸ ಪುರಾವೆ (ಆಧಾರ್ ಕಾರ್ಡ್/ಮತದಾರರ ಗುರುತಿನ ಚೀಟಿ/ಪಾಸ್‌ಪೋರ್ಟ್) ಅನ್ನು ನಮೂದಿಸಿದ ಸಹಿ ಕೋರಿಕೆ ಪತ್ರ. ಅಂತೆಯೇ, ವಾರ್ಷಿಕ ವರದಿಯನ್ನು ಸ್ವೀಕರಿಸಲು ಮೇಲೆ ಸೂಚಿಸಿದಂತೆ ಸದಸ್ಯರು ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಲು/ನವೀಕರಿಸಲು ವಿನಂತಿಸಲಾಗಿದೆ.

ತಮ್ಮ ಸಂಪೂರ್ಣ ಬ್ಯಾಂಕ್ ವಿವರಗಳನ್ನು ನೋಂದಾಯಿಸದ/ನವೀಕರಿಸದ ಸದಸ್ಯರು ತಮ್ಮ ಡಿಪಿಯಲ್ಲಿ ಸೂಚಿಸಿದ ರೂಪದಲ್ಲಿ ಅಗತ್ಯ ವಿವರಗಳು ಮತ್ತು ದಾಖಲೆಗಳನ್ನು ಸಲ್ಲಿಸುವ ಮೂಲಕ ಷೇರುಗಳನ್ನು ಡಿಮೆಟರಲೈಸ್ಡ್ ಮೋಡ್‌ನಲ್ಲಿ ಹೊಂದಿದ್ದರೆ ತಮ್ಮ ಸಂಪೂರ್ಣ ಬ್ಯಾಂಕ್ ವಿವರಗಳನ್ನು ತಮ್ಮ ಸಂಬಂಧಿತ ಡಿಪಿಯಲ್ಲಿ ನೋಂದಾಯಿಸಲು/ನವೀಕರಿಸಲು ಕೋರಲಾಗುತ್ತದೆ. ಭೌತಿಕ ಮೋಡ್‌ನಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು, ತಮ್ಮ ಸಂಪೂರ್ಣ ಬ್ಯಾಂಕ್ ವಿವರಗಳನ್ನು ನೋಂದಾಯಿಸದ/ನವೀಕರಿಸದ, ಕಂಪನಿಯ ಆರ್‌ಟಿಎಗೆ bglsta@integratedindia.in ನಲ್ಲಿ ಬರೆದು ತಮ್ಮ ಸಂಪೂರ್ಣ ಬ್ಯಾಂಕ್ ವಿವರಗಳನ್ನು ನೋಂದಾಯಿಸಲು/ನವೀಕರಿಸಲು ಕೋರಲಾಗಿದೆ. ಸಂಖ್ಯೆ, ಬ್ಯಾಂಕ್ ವಿವರಗಳು (ಬ್ಯಾಂಕ್ ಖಾತೆ ಸಂಖ್ಯೆ, ಬ್ಯಾಂಕ್ ಹೆಸರು, ಶಾಖೆಯ ಹೆಸರು ಮತ್ತು ವಿಳಾಸ, ಐಎಫ್‌ಎಸ್‌ಸಿ, ಎಂಐಸಿಆರ್ ವಿವರಗಳು) ಜೊತೆಗೆ ಪ್ಯಾನ್ ಕಾರ್ಡ್‌ನ ಸ್ವಯಂ ದೃಢೀಕರಿಸಿದ ಪ್ರತಿಗಳು ಮತ್ತು ಹೆಸರಿನೊಂದಿಗೆ ರದ್ದಾದ ಚೆಕ್ ಅಥವಾ ರದ್ದಾದ ಚೆಕ್‌ನಲ್ಲಿ ಮೊದಲ ಹೋಲ್ಡರ್ ಹೆಸರು ಕಾಣಿಸದಿದ್ದರೆ, ಮೊದಲು ಪಾಸ್–ಪುಸ್ತಕದ ಪುಟದಲ್ಲಿ ಖಾತೆದಾರರ ಹೆಸರು ಗೋಚರಿಸುತ್ತದೆ.

ಸದಸ್ಯರು ಎಜಿಎಂನಲ್ಲಿ ವಿಸಿ/ಒಎವಿಎಂ ಸೌಲಭ್ಯದ ಮೂಲಕ ಮಾತ್ರ ಭಾಗವಹಿಸಬಹುದು. ಎಲೆಕ್ಟ್ರಾನಿಕ್ ಮತದಾನ ವ್ಯವಸ್ಥೆ ("ಇ–ಮತದಾನ") ಮೂಲಕ ಸದಸ್ಯರು ಎಜಿಎಂ ಪ್ರಕಟಣೆಯಲ್ಲಿ ಸೂಚಿಸಿರುವಂತೆ ವ್ಯವಹಾರದಲ್ಲಿ ತಮ್ಮ ಮತಗಳನ್ನು ಚಲಾಯಿಸಬಹುದು. ಎಜಿಎಂ ಸಮಯದಲ್ಲಿ ಕಂಪನಿಯು ದೂರಸ್ಥ ಇ–ಮತದಾನ ಸೌಲಭ್ಯ ಮತ್ತು ಇ–ಮತದಾನದ ಸೌಲಭ್ಯವನ್ನು ಒದಗಿಸಲಿದೆ. ದೂರಸ್ಥ ಇ–ಮತದಾನ ಪ್ರಾರಂಭವಾದ ನಂತರ ಡಿಮೆಟೀರಿಯಲೈಸ್ಡ್ ಮೋಡ್, ಭೌತಿಕ ಮೋಡ್ ಮತ್ತು ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರು ತಮ್ಮ ಮತಗಳನ್ನು ಚಲಾಯಿಸಬಹುದು.

ಯಾವುದೇ ಪ್ರಶ್ನೆಯ ಸಂದರ್ಭದಲ್ಲಿ, ಸದಸ್ಯರು ನೋಂದಾಯಿತ ಕಚೇರಿ ವಿಳಾಸ, ಮೇಲೆ ನೀಡಲಾದ ಇಮೇಲ್ ಐಡಿ ಅಥವಾ ನಮ್ಮ ಆರ್‌ಟಿಎಯನ್ನು ಸಂಪರ್ಕಿಸಬಹುದು.

0ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ ಪರವಾಗಿ

ದಿನಾಂಕ : 9ನೇ ಜುಲೈ 2021 | ಮಿತ್ತಲ್ ಸಂಘ್ವಿ
ಸ್ಥಳ : ಮುಂಬಯಿ | ಕಂಪನಿ ಕಾರ್ಯದರ್ಶಿ

ಕೊಡಿಗೇಹಳ್ಳಿ ಗ್ರಾಮ ಪಂಚಾಯತ್ ಕಾರ್ಯಾಲಯ
ಕೊಡಿಗೇಹಳ್ಳಿ, ಕಸಬಾ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಕರ್ನಾಟಕ ಸರ್ಕಾರ
E.Mail:pdodb.kodigehalli007@gmail.com
ನಂ.ಬಾಗ್ರಾಪಂ/ಪ್ರಕಟಣೆ/ /2021–22 ದಿನಾಂಕ:–09.07.2021.

ಟೆಂಡರ್ ಪ್ರಕಟಣೆ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ ಕೊಡಿಗೇಹಳ್ಳಿ ಗ್ರಾಮ ಪಂಚಾಯಿತಿ ಇವರ ವತಿಯಿಂದ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಿಗೆ ಕುಡಿಯುವ ನೀರಿನ ಸ್ಥಾವರಗಳ ನಿರ್ವಹಣೆ ಮತ್ತು ಸಾಮಗ್ರಿಗಳ ಸರಬರಾಜು ಮಾಡಲು ಕೆಪಿಡಬ್ಲ್ಯು ಯಲ್ಲಿ ನೊಂದಾಯಿತರಾದ ದರ್ಜೆ–3 ಮತ್ತು ಮೇಲ್ಪಟ್ಟ ಸೂಕ್ತ ತಾಂತ್ರಿಕ ಹಣಕಾಸು ವ್ಯವಸ್ಥಾಪನೆ ಸಾಮರ್ಥ್ಯವುಳ್ಳ ಗುತ್ತಿಗೆದಾರರು ಮತ್ತು ನೊಂದಾಯಿತ ಸರಬರಾಜುದಾರರಿಗೆ ಈ ಕೆಳಕಂಡ ಸಾಮಗ್ರಿಗಳನ್ನು ಸರಬರಾಜು ಮಾಡಲು ಮತ್ತು ದುರಸ್ಥಿ ಮಾಡಲು ಅಗತ್ಯ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಒಂದು ವರ್ಷದ ಅವಧಿಗೆ ಸೀಮಿತವಾಗಿ ಸಾಮಾಗ್ರಿಗಳ ದರ ಪಟ್ಟಿ ವಾರ್ಷಿಕ ಅರ್ಜಿಗಳನ್ನು ಸಲ್ಲಿಸಲು ಟೆಂಡರ್ ಆಹ್ವಾನಿಸಲಾಗಿದೆ.

ಕ್ರ. ಸಂ	ಕಾಮಗಾರಿಗಳು ಮತ್ತು ಸರಕು ಸರಬರಾಜು ವಿವರಗಳು	ಅಂದಾಜು ಮೊತ್ತ (ಲಕ್ಷಗಳಲ್ಲಿ) ಬೇಡಿಕೆಗೆ ತಕ್ಕಂತೆ	ಇ.ಎಂ.ಡಿ (ರುಪಾಯಿಗಳಲ್ಲಿ)	ಟೆಂಡರ್ ಫಾರಂ ಬೆಲೆ (ರುಪಾಯಿಗಳಲ್ಲಿ)
1	1 ವರ್ಷದ ಅವಧಿಗೆ ಕೊಳವೆ ಬಾವಿಗಳು ಕುಡಿಯುವ ನೀರಿನ ಸರಬರಾಜು ಪಂಪು ಮೋಟಾರು ರಿಪೇರಿ ಮತ್ತು ನಿರ್ವಹಣೆ	4.90	9800	100/–
2	ಜಿ.ಐ ಪೈಪ್ ಮತ್ತು ಬಿಡಿ ಭಾಗಗಳು	4.50	9000	100/–
3	ಪಿವಿಸಿ ಪೈಪ್ ಮತ್ತು ಬಿಡಿ ಭಾಗಗಳು	4.50	9000	100/–
4	ವಿವಿಧ ಸಾಮರ್ಥ್ಯದ ಮೋಟಾರ್ ಮತ್ತು ಪಂಪ್‌ಗಳು	4.90	9800	100/–
5	ವಿವಿಧ ಸಾಮರ್ಥ್ಯದ ಕೇಬಲ್ ಮತ್ತು ಕಂಟ್ರೋಲ್ ಪ್ಯಾನಲ್	4.80	9600	100/–
6	ವಿವಿಧ ಸಾಮರ್ಥ್ಯದ ಸಿ.ಎಫ್.ಎಲ್ ಸೆಟ್ ಮತ್ತು ಇತರೆ ಬಿಡಿ ಭಾಗಗಳು	4.95	9900	100/–
7	ವಿವಿಧ ಸಾಮರ್ಥ್ಯದ ಎಲ್.ಇ.ಡಿ ಬಲ್ಬ್‌ಗಳು ಮತ್ತು ಇತರೆ ವಿದ್ಯುತ್ ಸಾಮಗ್ರಿಗಳು	4.90	9800	100/–
8	ಬ್ಲೀಚಿಂಗ್/ಮೆಲಾಥಿನ್/ಫಿನಾಯಿಲ್	4.90	9800	100/–

ಷರತ್ತುಗಳು:–
1. ಸದರಿ ಸಾಮಗ್ರಿಗಳು ಉತ್ತಮ ಗುಣಮಟ್ಟದಿಂದ ಕೂಡಿರಬೇಕು. 2. ಸದರಿ ಸಾಮಗ್ರಿಗಳನ್ನು ದೋಷಪೂರಿತವಾದಲ್ಲಿ ಬೇರೆ ಸಾಮಗ್ರಿಗಳನ್ನು ಸರಬರಾಜು ಮಾಡಬೇಕು. 3. ಸಾಮಗ್ರಿ ಸರಬರಾಜುದಾರರು ಟಿನ್/ಪಾನ್/ಜಿ.ಎಸ್.ಟಿ ನಂಬರ್ ಕಡ್ಡಾಯವಾಗಿ ಹೊಂದಿರತಕ್ಕದ್ದು. 4. ಟೆಂಡರ್ ಆಯ್ಕೆಯಾದ ಸರಬರಾಜುದಾರರು ಕಡ್ಡಾಯವಾಗಿ ಟೆಂಡರ್ ನಲ್ಲಿ ನಮೂದಿರುವ 2020–21 ರ ವರ್ಷಾಂತ್ಯದವರೆಗೆ ಸಾಮಗ್ರಿಗಳನ್ನು ಸರಬರಾಜು ಮಾಡುವುದು. 5. ಟೆಂಡರ್ ದಾರರು ಐ ಎಸ್ ಐ ಮುದ್ರೆ ಇರುವ ಸಾಮಗ್ರಿಗಳನ್ನೇ ಸರಬಾಜು ಮಾಡತಕ್ಕದ್ದು. 6. ಟೆಂಡರ್ ನ್ನು,ಪುರಸ್ಕರಿಸುವ, ತಿರಸ್ಕರಿಸುವ ಅಥವಾ ಮುಂದೂಡುವ ಅಧಿಕಾರ ಗ್ರಾಮ ಪಂಚಾಯಿತಿಗೆ ಇರುತ್ತದೆ. 7. ಪ್ರಕಟಣೆ ಹೊರಡಿಸಿದ ದಿನಾಂಕದಿಂದ ದಿನಾಂಕಃ 28/07/2021 ರಂದು ಸಂಜೆ 5.00 ಗಂಟೆಯವರೆಗೆ ಟೆಂಡರ್ ಫಾರಂ ನೀಡಲಾಗುವುದು. 8. ಭರ್ತಿ ಮಾಡಿದ ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕಃ 29/07/2021 ಅಂತಿಮ ದಿನವಾಗಿರುತ್ತದೆ. 9. ದಿನಾಂಕಃ 31/07/2021 ರಂದು ಬೆಳಿಗ್ಗೆ 11.30 ಗಂಟೆಗೆ ಟೆಂಡರ್ ತೆರೆಯಲಾಗುವುದು. 10. ಹೆಚ್ಚಿನ ಮಾಹಿತಿಗಾಗಿ ಹಾಗೂ ಟೆಂಡರ್ ಫಾರಂ ನ್ನು ಪಡೆಯಲು ಕಛೇರಿ ವೇಳೆಯಲ್ಲಿ ಗ್ರಾಮ ಪಂಚಾಯಿತಿಯನ್ನು ಸಂಪರ್ಕಿಸುವುದು. ದೂರವಾಣಿ ಸಂಖ್ಯೆ– 9945297115, 9902785406, 9113888985.

ಸಹಿ/– **ಅಧ್ಯಕ್ಷರು**, ಕೊಡಿಗೇಹಳ್ಳಿ ಗ್ರಾಮ ಪಂಚಾಯಿತಿ, ದೊಡ್ಡಬಳ್ಳಾಪುರ ತಾಲ್ಲೂಕು | ಸಹಿ/– **ಪಂಚಾಯಿತಿ ಅಭಿವೃದ್ಧಿ ಅಧಿಕಾರಿ**, ಕೊಡಿಗೇಹಳ್ಳಿ ಗ್ರಾಮ ಪಂಚಾಯಿತಿ ದೊಡ್ಡಬಳ್ಳಾಪುರ ತಾಲ್ಲೂಕು



ಮತ್ತೆ ಕಚೇರಿಯತ್ತ ಕುಟುಂಬದ ಸುರಕ್ಷತೆಗೂ ಇರಲಿ ಚಿತ್ತ

ಕೋವಿಡ್‌ಗೆ ಸಂಬಂಧಿಸಿದ ನಿರ್ಬಂಧಗಳನ್ನು ಸಡಿಲಿಸಲಾಗುತ್ತಿದೆ. ಲಸಿಕೆ ನೀಡುವ ಕಾರ್ಯಕ್ರಮವೂ ವೇಗ ಪಡೆದುಕೊಂಡಿದೆ. ಹೀಗಾಗಿ ಮನೆಯಿಂದಲೇ ಕಚೇರಿ ಕೆಲಸ ಮಾಡುತ್ತಿದ್ದ ಉದ್ಯೋಗಿಗಳು ಕಚೇರಿಗೆ ಹೋಗಲು ಶುರು ಮಾಡಿದ್ದಾರೆ. ಆದರೆ ಬಹುತೇಕ ಪೋಷಕರಿಗೆ ಹೊಸ ಸಹಜತೆಯ ಜೊತೆ ಹೊಂದಿಕೊಳ್ಳಲು ಕೊಂಚ ಸಮಯದ ಅವಶ್ಯಕತೆ ಇದೆ.

ರೇಷ್ಮಾ

ಲಾಕ್‌ಡೌನ್ ಎಂಬುದನ್ನು ಪ್ರೇಮಲತಾ ಮನಸ್ಸಿನಲ್ಲಿ ಎಷ್ಟು ಒತ್ತಡ ಇಟ್ಟುಕೊಂಡು ಎದುರಿಸಿದಳೋ ಅವಳಿಗೇ ಗೊತ್ತು. ಹೊರಗಡೆ ಹೋಗಬೇಕೆಂಬ ತುಡಿತವಿದ್ದರೂ ಕೂಡ ಮನೆಯೊಳಗೇ ಇದ್ದು, ಕುಟುಂಬದವರ ಜೊತೆ ವನವಾಸವೆಂಬಂತೆ ಕಳೆಯಬೇಕಾಯಿತು. ಆದರೆ ಈಗ ಸರ್ಕಾರ ಲಾಕ್‌ಡೌನ್ ನಿಯಮಗಳನ್ನು ಸಡಿಲಿಸುತ್ತಿದ್ದಂತೆ ಆಕೆಯ ಮನಸ್ಸಿನೊಳಗೆ ಇನ್ನೊಂದು ರೀತಿಯ ತಳಮಳ ಶುರುವಾಗಿದೆ. ಹೊರಗಡೆ ಹೋಗಲು, ಬೇರೆಯವರ ಜೊತೆ ಬೆರೆಯಲು ವಿಪರೀತ ಭಯ. ಆಕೆಗೆ, ಆಕೆಯ ಪತಿಗೆ ಮನೆಯಿಂದಲೇ ಕಚೇರಿಯ ಕೆಲಸ ಒಗ್ಗಿಕೊಂಡುಬಿಟ್ಟಿದೆ. ಮೆಟ್ರೋದಲ್ಲೋ ಅಥವಾ ಬಸ್‌ನಲ್ಲೋ ಕಚೇರಿಗೆ ಹೋಗುವುದು ಹೇಗೆಂಬ ಚಿಂತೆ. ಎಲ್ಲಕ್ಕಿಂತ ಹೆಚ್ಚಾಗಿ ಚಿಕ್ಕ ಮಗಳನ್ನು, ವಯಸ್ಸಾದ ಅತ್ತೆ- ಮಾವನನ್ನು ಈ ಹೊಸ ಬದುಕಿಗೆ ಹೇಗೆ ಸನ್ನದ್ಧಗೊಳಿಸುವುದು ಎಂಬ ಆತಂಕ.

ಪ್ರೇಮಲತಾ ಮಾತ್ರವಲ್ಲ, ಹೊರಗಡೆ ದುಡಿಯುವ ಹಲವು ಮಹಿಳೆಯರು ಇದೇ ರೀತಿಯ ತಳಮಳವನ್ನು ಅನುಭವಿಸುತ್ತಿದ್ದಾರೆ. ಮನೆಯಿಂದ ಕಚೇರಿಗೆ ಹೋಗುವಾಗ ಕುಟುಂಬದ ಸದಸ್ಯರ ಸುರಕ್ಷತೆಯ ಬಗ್ಗೆ ದುಗುಡ ತುಂಬಿಕೊಂಡೇ ಹೊರಗೆ ಅಡಿಯಿಡುವುದು, ಪ್ರತಿಯೊಬ್ಬರೂ ಮಾಸ್ಕ್ ಧರಿಸಿ ಓಡಾಡುವಾಗ ಮನಸ್ಸಿನೊಳಗೆ ಅವ್ಯಕ್ತ ಭಯ ಉಂಟಾಗುವುದು, ಮಾಸ್ಕ್ ಅನ್ನು ಪದೇ ಪದೇ ಸರಿಪಡಿಸಿಕೊಳ್ಳುವುದು, ಕ್ಯಾಬ್ ಸೀಟ್ ಅನ್ನು ಸ್ಯಾನಿಟೈಸ್ ಮಾಡುವಾಗ ವಿಪರೀತ ಕಾಳಜಿ... ಇವೆಲ್ಲ ಬಹುತೇಕರ ಅನುಭವಕ್ಕೆ ಬಂದಿದೆ. ಕಚೇರಿಯಲ್ಲಿ ಸೂಕ್ತ ಎಚ್ಚರಿಕೆ ತೆಗೆದುಕೊಂಡರೂ ವಾಪಸ್ಸು ಮನೆಯೊಳಗೆ ಕಾಲಿಡುವವರೆಗೂ ಒಂದು ರೀತಿಯ ಕಳವಳ. ಮನೆಗೆ ಬಂದ ಮೇಲೆ ಮಕ್ಕಳು, ಹಿರಿಯರಿಗೆ ತಮ್ಮಿಂದ ಏನಾಗಿ ಬಿಡುವುದೋ ಎಂಬ ಹೆದರಿಕೆ.

ಇದು ಹೆಚ್ಚು ಕಡಿಮೆ ಎಲ್ಲ ದುಡಿಯುವ ಹೆಣ್ಣುಮಕ್ಕಳ ಮನಸ್ಸನ್ನು ಆವರಿಸಿಕೊಂಡು ಬಿಟ್ಟಿದೆ. ಲಾಕ್‌ಡೌನ್ ಶುರುವಾದಾಗ ಮನಸ್ಸಿನೊಳಗೆ ಆವರಿಸಿದ್ದ ಹೆದರಿಕೆ ನಿಧಾನವಾಗಿ ಕಡಿಮೆಯಾಗಿ ಮನೆಯಿಂದಲೇ ಕಚೇರಿ ಕೆಲಸ, ಮಕ್ಕಳಿಗೆ ಆನ್‌ಲೈನ್ ತರಗತಿಗೆ ನೆರವಾಗುವುದು, ಹೆಚ್ಚುವರಿ ಅಡುಗೆ, ಮನೆಗೆಲಸ ಎಂದು ಹೊಂದಿಕೊಂಡಿದ್ದವರಿಗೆ ಹೊರಗೆ ಹೋಗುವುದೆಂದರೆ ಕಳವಳ.

'ಸಹಜತೆಗೆ ವಾಪಸ್ಸು ಹೊಂದಿಕೊಳ್ಳುವಾಗ ಈ ರೀತಿಯ ತಳಮಳ ಸಾಮಾನ್ಯ. ಇದನ್ನು ರೀಎಂಟ್ರಿ ಸಮಸ್ಯೆಯ ಲಕ್ಷಣ ಎನ್ನಬಹುದು' ಎನ್ನುತ್ತಾರೆ ಆಪ್ತ ಸಮಾಲೋಚಕ ರೋಹಿತ್ ವಿಶ್ವನಾಥ್.

ಮುನ್ನೆಚ್ಚರಿಕೆ ಇರಲಿ..

ಹೊಸ ಬದಲಾವಣೆಗೆ ಹೊಂದಿಕೊಳ್ಳುವಾಗ ಕೆಲವು ಮುನ್ನೆಚ್ಚರಿಕೆಗಳು ಅಗತ್ಯ. 'ಅಂತರ ಕಾಪಾಡಿಕೊಳ್ಳುವುದು ಮಾತ್ರವಲ್ಲ, ಕಚೇರಿಯಲ್ಲಿ ಸಹೋದ್ಯೋಗಿಗಳ ಜೊತೆ ಕೆಲಸಕ್ಕೆ ಸಂಬಂಧಿಸಿದಂತೆ ದೂರ ನಿಂತು ಮಾತನಾಡುವುದನ್ನು ರೂಢಿಸಿಕೊಳ್ಳುತ್ತಿದ್ದೇನೆ' ಎನ್ನುತ್ತಾರೆ ಈಗೆಂಟು ದಿನಗಳಿಂದ ಕಚೇರಿಗೆ ಹೋಗಿ ಬರುತ್ತಿರುವ ಒಳಾಂಗಣ ವಿನ್ಯಾಸಕಿ ಮಂದಾರ ಕುಲಕರ್ಣಿ.

ಮಾನಸಿಕವಾಗಿ ಕೆಲವು ಹೊಂದಾಣಿಕೆ ಮಾಡಿಕೊಳ್ಳುತ್ತ ಹೋದರೆ ಈ ಹೊಸ ಸಹಜತೆಗೆ ಹೊಂದಿಕೊಳ್ಳುವುದು ಕಷ್ಟವೇನಲ್ಲ ಎನ್ನುತ್ತಾರೆ ರೋಹಿತ್. 'ಇದಕ್ಕಾಗಿ ಮೊದಲು ನಿಮ್ಮ ಕುಟುಂಬದ ಸದಸ್ಯರಿಗೆ ಹಿಂದೆ ಅನುಸರಿಸುತ್ತಿದ್ದ ನಿತ್ಯದ ಅಭ್ಯಾಸಗಳನ್ನು ಅನುಸರಿಸುವಂತೆ ಪ್ರೇರಣೆ ನೀಡಬೇಕು' ಎಂಬುದು ಅವರ ಸಲಹೆ. ಅಂದರೆ ಬೆಳಿಗ್ಗೆ ಅಲಾರ್ಮ್ ಇರಿಸಿಕೊಂಡು ಏಳುವುದು, ವ್ಯಾಯಾಮ, ಸ್ನಾನ, ಉಪಾಹಾರ, ಕಚೇರಿಗೆ ಹೊರಡಲು ಸಿದ್ಧತೆ, ಮಕ್ಕಳಿಗೆ ಆನ್‌ಲೈನ್ ತರಗತಿಗೆ ಸಿದ್ಧಪಡಿಸುವುದು (ಶಾಲೆ ಇನ್ನೂ ಶುರುವಾಗಿಲ್ಲವಲ್ಲ..).. ಹೀಗೆ ಈ ಹಿಂದಿನ ವಾಡಿಕೆಯನ್ನು ಪುನರಾರಂಭಿಸಿದರೆ ಹೊಸ ಸಹಜತೆಯನ್ನೂ ಹೆಚ್ಚಿನ ಸಮಸ್ಯೆಯಿಲ್ಲದೇ ಅಳವಡಿಸಿಕೊಳ್ಳಬಹುದು.

- ಸಾಮಾಜಿಕವಾಗಿ ಸ್ನೇಹಿತರು, ಬಂಧುಗಳು ಎಂದು ಸದ್ಯಕ್ಕೆ ಆರಾಮವಾಗಿ ಬೆರೆಯಲು ಸಾಧ್ಯವಾಗದಿದ್ದರೂ, ಅಂತರ ಕಾಪಾಡಿಕೊಂಡು ಕೆಲವೇ ಕೆಲವು ಮಂದಿಯ ಜೊತೆ ಸೇರಬಹುದು.
- ಕೋವಿಡ್‌ಗಿಂತ ಮುಂಚೆ ಇದ್ದ ಬದುಕಿನ ಬಗ್ಗೆ ನೆನಪುಗಳನ್ನು ಹಂಚಿಕೊಳ್ಳುವುದರಿಂದ ಕೂಡ ಮುಂದಿನ ಜೀವನದ ಕುರಿತ ಭಯವನ್ನು ಮರೆಯಬಹುದು.
- ಕುಟುಂಬದವರ ಸುರಕ್ಷತೆಯ ನಿಟ್ಟಿನಲ್ಲಿ ಶುಚಿತ್ವ, ಅಂತರ ಪಾಲಿಸುವುದು ಈಗಲೂ ಮುಖ್ಯ.

ಮನೆಯವರ ಕಾಳಜಿಯೂ ಇರಲಿ

ವರ್ಷದಿಂದ ಮನೆಯಿಂದಲೇ ಕಚೇರಿ ಕೆಲಸ ಮಾಡಿ ಹಲವರಿಗೆ ಬೇಸರವಾಗಿರುವುದು ನಿಜ. ಇದರೊಂದಿಗೆ ಕಚೇರಿ ಕೆಲಸವೇ ಬೆಸ್ಟ್ ಎಂಬ ಅಭಿಪ್ರಾಯವೂ ಹಲವರಲ್ಲಿದೆ. ಹಾಗಾಗಿ ಸಂಭ್ರಮದಿಂದ ಕಚೇರಿ ಕೆಲಸಕ್ಕೆ ಹಾಜರಾಗುತ್ತಿದ್ದಾರೆ. ಆದರೆ ಕೆಲಸದ ನಡುವೆ ಮನೆಯವರ ಮೇಲಿನ ಕಾಳಜಿಯನ್ನು ಮರೆಯಬಾರದು.

- ಕೆಲಸ ಮುಗಿಸಿ ಮನೆಗೆ ಬಂದಾಕ್ಷಣ ಮಕ್ಕಳನ್ನು ಅಥವಾ ಹಿರಿಯರನ್ನು ನೇರವಾಗಿ ಮುಟ್ಟಿ ಅಥವಾ ಅವರೊಂದಿಗೆ ಸಂಪರ್ಕ ಸಾಧಿಸುವುದು ಬೇಡ.
- ಮನೆಗೆ ಬಂದ ಕೂಡಲೇ ಸ್ನಾನ ಮಾಡಿ, ಬಟ್ಟೆಯನ್ನು ಆ್ಯಂಟಿಸೆಪ್ಟಿಕ್ ಲಿಕ್ವಿಡ್‌ನಲ್ಲಿ ನೆನೆಸಿ ತೊಳೆದು ಹಾಕುವ ಕ್ರಮ ರೂಢಿಸಿಕೊಳ್ಳಿ.
- ಸಾಧ್ಯವಾದರೆ ಕಚೇರಿಗೆ ಬಳಸುವ ಬ್ಯಾಗ್, ಛತ್ರಿಯಂತಹ ವಸ್ತುಗಳನ್ನು ಯಾರೂ ಬಳಸದ ಕೋಣೆಯಲ್ಲಿ ಇರಿಸಿ.

ಕಚೇರಿಗೆ ಕೆಲಸಕ್ಕೆ ಹೋಗುವ ಮುನ್ನ

ಮನೆಯಿಂದ ಹೊರಗಡೆ ಹೊರಡುವಾಗಲೇ ಸಾಧ್ಯವಾದಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಿ.

- ಮಾಸ್ಕ್ ಧರಿಸಿಕೊಂಡು ತಪ್ಪದೇ ಸ್ಯಾನಿಟೈಸರ್ ಹಾಗೂ ಹ್ಯಾಂಡ್‌ವಾಷ್‌ಗಳನ್ನು ಬ್ಯಾಗ್‌ನಲ್ಲಿ ಇರಿಸಿಕೊಳ್ಳಿ.
- ಕಚೇರಿಯಲ್ಲಿ ಟಿಶ್ಯೂ, ಸ್ಯಾನಿಟೈಸರ್ ನೀಡುವ ಕ್ರಮವಿದ್ದರೂ ನೀವು ವೈಯಕ್ತಿಕವಾಗಿ ನಿಮ್ಮ ಬಳಕೆಗೆ ಪ್ರತ್ಯೇಕವಾಗಿ ಸ್ಯಾನಿಟೈಸರ್ ಹಾಗೂ ಟಿಶ್ಯೂ ತೆಗೆದುಕೊಂಡು ಹೋಗಿ.
- ಮೆಟ್ರೊ ಅಥವಾ ಬಸ್ಸಿನಲ್ಲಿ ಓಡಾಡುವಾಗ ಸಾಧ್ಯವಾದಷ್ಟು ಅಂತರ ಕಾಪಾಡಿಕೊಳ್ಳಿ.
- ನಿಮ್ಮ ಬಳಿ ಸ್ವಂತ ವಾಹನವಿದ್ದರೆ ಸ್ವಲ್ಪ ದಿನದ ಮಟ್ಟಿಗೆ ಅದನ್ನೇ ಬಳಸುವುದು ಸೂಕ್ತ.
- ಮೊದಲಿನಂತೆ ಕಚೇರಿಗೆ ಹೋದ ಕೂಡಲೇ ಶೇಕ್ ಹ್ಯಾಂಡ್ ಮಾಡುವುದು, ತಬ್ಬಿಕೊಳ್ಳುವುದು, ಹತ್ತಿರ ಕುಳಿತು ಮಾತನಾಡುವುದು ಮುಂತಾದುವಕ್ಕೆ ಬ್ರೇಕ್ ಹಾಕಿ.
- ಮನೆಯಿಂದಲೇ ಊಟ, ಕಾಫಿ–ತಿಂಡಿಯನ್ನು ಡಬ್ಬಿಯಲ್ಲಿ ತುಂಬಿಕೊಂಡು ಹೋಗುವುದು ಉತ್ತಮ. ಕಚೇರಿಯಲ್ಲೂ ನಿಮ್ಮದೇ ನೀರಿನ ಬಾಟಲ್, ಊಟದ ಡಬ್ಬಿ, ಚಮಚ ಮುಂತಾದವುಗಳ ಬಳಸಿ.
- ಒಂದು ವೇಳೆ ನಿಮಗೆ ಆರೋಗ್ಯ ಸಮಸ್ಯೆ ಕಾಣಿಸಿಕೊಂಡರೆ ಕಚೇರಿಗೆ ಹೋಗದೇ ಮನೆಯಲ್ಲೇ ಉಳಿಯಿರಿ. ಇದರಿಂದ ನಿಮಗೂ ಹಾಗೂ ನಿಮ್ಮ ಸಹೋದ್ಯೋಗಿಗಳಿಗೂ ಒಳ್ಳೆಯದು.
- ಕಚೇರಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಟಾಯ್ಲೆಟ್ ಅಥವಾ ರೆಸ್ಟ್‌ರೂಮ್ ಬಳಸುವ ಮುನ್ನ ಎಚ್ಚರವಿರಲಿ.
- ಕಚೇರಿ ಒಳಗೆ ಪ್ರವೇಶಿಸುವ ಮೊದಲು ಥರ್ಮಲ್ ಸ್ಕ್ಯಾನಿಂಗ್ ಮಾಡಿಸಿಕೊಳ್ಳಿ.
- ಕಚೇರಿ ವಾತಾವರಣದಲ್ಲೂ ಆದಷ್ಟು ಹೊರಗಿನ ವ್ಯಕ್ತಿಗಳ ಭೇಟಿ ಮಾಡದೇ ಇರುವುದು ಸೂಕ್ತ.
- ಕಚೇರಿಯ ಒಳಗೆ ಇರುವಾಗ ಫೇಸ್‌ಮಾಸ್ಕ್ ಧರಿಸಿಯೇ ಇರಿ.
- ಕಚೇರಿಯಲ್ಲಿ ಒಂದಿಷ್ಟು ದಿನ ಲಿಫ್ಟ್ ಬಳಕೆ ನಿಲ್ಲಿಸಿ.
- ಕಚೇರಿಯಲ್ಲಿ ನಿಮಗೆಂದೇ ಪ್ರತ್ಯೇಕ ಕಂಪ್ಯೂಟರ್, ಲ್ಯಾಪ್‌ಟಾಪ್ ಇಲ್ಲದಿದ್ದರೆ ಪ್ರತಿ ದಿನ ಬಂದ ಕೂಡಲೇ ಸ್ಯಾನಿಟೈಸ್ ಮಾಡಿ ಬಳಸಿ.

ನೀವು ಈ ನಿಯಮಗಳನ್ನು ಪಾಲಿಸುವುದರಿಂದ ನಿಮಗೆ ನಿಮ್ಮ ಸುರಕ್ಷತೆ ಮಾತ್ರವಲ್ಲ ನಿಮ್ಮ ಕುಟುಂಬದ ಸುರಕ್ಷತೆಗೂ ಪ್ರಾಮುಖ್ಯತೆ ನೀಡಿದಂತಾಗುತ್ತದೆ.

ಹರಿಯಾಲಿ ಪನೀರ್ ಟಿಕ್ಕಾ, ದಹಿ ಬ್ರೆಡ್



ನಳಪಾಕ

ಹೇಮಲತಾ ಆರ್. ಕೆ.

ಹರಿಯಾಲಿ ಪನೀರ್ ಟಿಕ್ಕಾ

ಬೇಕಾಗುವ ಸಾಮಗ್ರಿಗಳು: ಪನೀರ್ – 200 ಗ್ರಾಂ, ಹಸಿಮೆಣಸಿನಕಾಯಿ – 4, ಬೆಳ್ಳುಳ್ಳಿ – 10 ಎಸಳು, ಶುಂಠಿ – 1 ಇಂಚು, ಕೊತ್ತಂಬರಿ – ಸ್ವಲ್ಪ, ಪುದಿನ – ಸ್ವಲ್ಪ, ಹುರಿದ ಕಡಲೆಹಿಟ್ಟು – ಕಾಲು ಚಮಚ, ಚಾಟ್ ಮಸಾಲ – 1 ಚಮಚ, ಜೀರಿಗೆ ಪುಡಿ – ಅರ್ಧ ಚಮಚ, ಉಪ್ಪು – ರುಚಿಗೆ ತಕ್ಕಷ್ಟು, ಅರ್ಧ ನಿಂಬೆಹಣ್ಣಿನ ರಸ, ಕಸೂರಿ ಮೇಥಿ – 1 ಚಮಚ, ಗಟ್ಟಿಮೊಸರು – ಅರ್ಧ ಕಪ್, ಅರಿಸಿನ – ಕಾಲು ಚಮಚ, ಕ್ಯಾಪ್ಸಿಕಂ – 1, ಟೊಮೆಟೊ – 1, ಈರುಳ್ಳಿ – 1

ತಯಾರಿಸುವ ವಿಧಾನ: ಪುದಿನ, ಕೊತ್ತಂಬರಿ ಸೊಪ್ಪು, ಹಸಿಮೆಣಸಿನಕಾಯಿ, ಶುಂಠಿ ಹಾಗೂ ಬೆಳ್ಳುಳ್ಳಿಯನ್ನು ಹಾಕಿ ರುಬ್ಬಿಕೊಂಡು, ಮಿಶ್ರಣವನ್ನು ಒಂದು ಬಟ್ಟಲಿಗೆ ಹಾಕಿ, ಅದಕ್ಕೆ ಗಟ್ಟಿಮೊಸರು, ಚಾಟ್ ಮಸಾಲ, ಜೀರಿಗೆ ಪುಡಿ, ಹುರಿದ ಕಡಲೆಹಿಟ್ಟು, ಉಪ್ಪು, ಅರಿಸಿನ ಹಾಕಿ ಚೆನ್ನಾಗಿ ಕಲೆಸಿಕೊಳ್ಳಿ. ಇದಕ್ಕೆ ಚೌಕಾಕಾರದಲ್ಲಿ ಕತ್ತರಿಸಿಕೊಂಡ ಪನೀರ್, ಈರುಳ್ಳಿ, ಕ್ಯಾಪ್ಸಿಕಂ, ಟೊಮೆಟೊ ಹಾಕಿ ಕಲೆಸಿ ಅರ್ಧಗಂಟೆ ನೆನೆಯಲು ಬಿಡಿ. ನೆನೆದ ಪನೀರ್ ಅನ್ನು ಒಂದು ಕಡ್ಡಿ ಅಥವಾ ಕಂಬಿಗೆ ಚುಚ್ಚಿಕೊಳ್ಳಿ, ಕ್ಯಾಪ್ಸಿಕಂ ನಂತರ ಈರುಳ್ಳಿ, ಆಮೇಲೆ ಟೊಮೆಟೊ, ಪನೀರ್.. ಹೀಗೆ ಒಂದರ ನಂತರ ಒಂದನ್ನು ಕಡ್ಡಿಗೆ ಚುಚ್ಚಿ. ನಂತರ ಕಾದ ಹೆಂಚಿನ ಮೇಲೆ ಜೋಡಿಸಿಕೊಂಡು ಎಲ್ಲಾ ಬದಿ ಬೆಣ್ಣೆ ಹಾಕಿ ಹುರಿದುಕೊಂಡರೆ ಪನೀರ್ ಟಿಕ್ಕಾ ತಯಾರಾಗುವುದು.

ರೆಸಿಪಿ ವಿಡಿಯೊಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ದಹಿ ಬ್ರೆಡ್

ಬೇಕಾಗುವ ಸಾಮಗ್ರಿಗಳು: ಬ್ರೆಡ್ – 4 ತುಂಡುಗಳು, ಮೊಸರು – ಅರ್ಧ ಲೀಟರ್, ಈರುಳ್ಳಿ – 1, ಕ್ಯಾರೆಟ್ – 1, ಕೊತ್ತಂಬರಿ ಸೊಪ್ಪು – ಸ್ವಲ್ಪ, ಖಾರದ ಪುಡಿ – ಅರ್ಧ ಚಮಚ, ಚಾಟ್ ಮಸಾಲೆ – 1 ಚಮಚ, ಉಪ್ಪು – ರುಚಿಗೆ ತಕ್ಕಷ್ಟು, ಖಾರಬೂಂದಿ – 100 ಗ್ರಾಂ, ಸಕ್ಕರೆ – 1 ಚಮಚ

ತಯಾರಿಸುವ ವಿಧಾನ: ಮೊದಲು ಬ್ರೆಡ್ ಅಂಚುಗಳನ್ನು ಕತ್ತರಿಸಿಕೊಳ್ಳಿ. ನಂತರ ಹೆಂಚಿನ ಮೇಲೆ ಹಾಕಿ ಎರಡೂ ಬದಿ ಸುಟ್ಟುಕೊಳ್ಳಬೇಕು. ಬ್ರೆಡ್ ತಣ್ಣಗಾದ ನಂತರ ಒಂದು ಪ್ಲೇಟ್‌ನಲ್ಲಿ ಬ್ರೆಡ್ ಅನ್ನು ಇಟ್ಟು ಅದಕ್ಕೆ ಸಕ್ಕರೆ ಬೆರೆಸಿದ ಮೊಸರನ್ನು ಹಾಕಿ. ನಂತರ ಹೆಚ್ಚಿದ ಈರುಳ್ಳಿ, ತುರಿದ ಕ್ಯಾರೆಟ್, ಕೊತ್ತಂಬರಿ ಸೊಪ್ಪು ಮೇಲೆ ಉದುರಿಸಿ. ಅದಕ್ಕೆ ಚಾಟ್ ಮಸಾಲೆ, ಖಾರದ ಪುಡಿ, ರುಚಿಗೆ ತಕ್ಕಷ್ಟು ಉಪ್ಪು ಉದುರಿಸಿ ಕೊನೆಯದಾಗಿ ಖಾರಬೂಂದಿ ಹಾಕಿದರೆ ರುಚಿಯಾದ ದಹಿ ಬ್ರೆಡ್ ಸಿದ್ಧ.

(ಲೇಖಕಿ: ಹೇಮಾಸ್ ಕುಕ್ಕಿಂಗ್ ಯೂಟ್ಯೂಬ್ ಚಾನೆಲ್ ನಿರ್ವಾಹಕಿ)

ಮುಟ್ಟಿನ ದಿನಗಳಲ್ಲೂ ಮಾಡಿ ವ್ಯಾಯಾಮ

ಸುಕೃತ ಎಸ್.

ಫಿಟ್‌ನೆಸ್ ಕುರಿತು ಇಂದಿನ ಯುವತಿಯರು ಹೆಚ್ಚಿನ ಒಲವು ಬೆಳೆಸಿಕೊಂಡಿದ್ದಾರೆ. ನಿತ್ಯ ಜಿಮ್‌ಗೆ ಹೋಗುವವರ ಸಂಖ್ಯೆಯೂ ಸಾಕಷ್ಟಿದೆ. ಹಾಗೆಯೇ ಬೆಳಿಗ್ಗೆ ಅಥವಾ ಸಂಜೆ ಜಾಗಿಂಗ್ ಎಂದು ಬೆವರು ಸುರಿಸುವವರೂ ಬಹಳಷ್ಟು ಮಂದಿ. ಆದರೆ ಮುಟ್ಟಿನ ಆ ಮೂರು ದಿನಗಳಲ್ಲಿ ವ್ಯಾಯಾಮ ಮಾಡಬಹುದೇ ಎಂಬ ಪ್ರಶ್ನೆ ಹಲವು ಯುವತಿಯರನ್ನು ಕಾಡುವುದು ಸಹಜ. ಆ ದಿನಗಳಲ್ಲಿ ದೇಹಕ್ಕೆ ಮತ್ತು ಮನಸ್ಸಿಗೆ ಆಗುವಂತಹ ಕಿರಿಕಿರಿ, ಹೊಟ್ಟೆ ನೋವು, ಕಾಲು ಸೆಳೆತ ಮೊದಲಾದವು ಇದಕ್ಕೆ ಕಾರಣವಿರಬಹುದು. ವ್ಯಾಯಾಮ, ವೇಗದ ನಡಿಗೆ ಅಥವಾ ಓಟ, ಯೋಗಾಸನಗಳನ್ನು ಮಾಡಿದಾಗ ಸ್ರಾವ ಜಾಸ್ತಿಯಾದರೆ ಎಂಬ ಭಯವೂ ಕೆಲವರಲ್ಲಿದೆ. ಆದರೆ ಈ ರೀತಿ ಭಯಪಡುವ ಕಾರಣವಿಲ್ಲ ಎನ್ನುತ್ತಾರೆ ವೈದ್ಯರು.

'ಹೆಣ್ಣಿನ ದೈನಂದಿನಲ್ಲಿ ಮುಟ್ಟು ಎನ್ನುವುದು ಒಂದು ಸಹಜ ಪ್ರಕ್ರಿಯೆ. ನಿತ್ಯವೂ ನಾವು ತಿನ್ನುತ್ತೇವೆ, ನೀರು ಕುಡಿಯುತ್ತೇವೆ. ಮೂತ್ರ ಮಾಡುತ್ತೇವೆ; ಶೌಚ ಮಾಡುತ್ತೇವೆ. ಇವು ಎಷ್ಟು ಸಹಜವೋ ಮುಟ್ಟು ಸಹ ಅಷ್ಟೇ ಸಹಜವಾದುದು. ಬೇರೆ ಎಲ್ಲಾ ದಿನಗಳಲ್ಲೂ ನಿಮ್ಮ ದೈನಂದಿನ ಚಟುವಟಿಕೆ ಏನು ಇರುತ್ತದೋ, ಮುಟ್ಟಿನ ದಿನಗಳಲ್ಲೂ ಅದನ್ನು ಮಾಡಬಹುದು. ಅದರಿಂದ ದೇಹಕ್ಕೆ ಯಾವ ಹಾನಿಯೂ ಇಲ್ಲ' ಎನ್ನುತ್ತಾರೆ ಪ್ರಸೂತಿ ತಜ್ಞೆ ಡಾ. ಮೇಖಲಾ.

ವ್ಯಾಯಾಮ ಮಾಡಿ

ಇಂದಿಗೂ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರು ತಮ್ಮ ಮುಟ್ಟಿನ ದಿನಗಳಲ್ಲಿ ತೋಟದ ಕೆಲಸ, ಗದ್ದೆ ಕೆಲಸ ಎಲ್ಲವನ್ನೂ ಮಾಡುತ್ತಾರೆ. ಪೇಟೆ- ಪಟ್ಟಣಗಳಲ್ಲಿ ಮಹಿಳೆಯರು ಮನೆಗೆಲಸ ಮಾಡಿಕೊಂಡು, ಕಚೇರಿ ಕೆಲಸವನ್ನೂ ಮಾಡಿಕೊಂಡು, ಮಕ್ಕಳನ್ನೂ ನೋಡಿಕೊಳ್ಳುತ್ತಾರೆ. ಆದ್ದರಿಂದ, ಮುಟ್ಟಿನ ದಿನಗಳಲ್ಲಿ ಖಂಡಿತವಾಗಿಯೂ ವ್ಯಾಯಾಮ ಮಾಡಬಹುದು ಎನ್ನುವುದು ತಜ್ಞರ ಅಭಿಮತ. ಹಾಗಾದರೆ, ಮುಟ್ಟಿನ ದಿನಗಳಲ್ಲಿ ಯಾವ ರೀತಿ ವ್ಯಾಯಾಮ ಮಾಡಬಹುದು?

'ಮುಟ್ಟಿನ ಮೊದಲ ಎರಡು ದಿನಗಳಲ್ಲಿ ಸೊಂಟ ನೋವು, ಕಾಲು ನೋವು, ಹೆಚ್ಚಿಗೆ ರಕ್ತಸ್ರಾವ ಆಗುತ್ತದೆ. ಇದರಿಂದ ಕಿರಿಕಿರಿ ಎನ್ನಿಸಬಹುದು. ಇಂಥ ಸಮಯದಲ್ಲಿ ನಿತ್ಯಕ್ಕಿಂತ ಕಡಿಮೆ ಪ್ರಮಾಣದ ವ್ಯಾಯಾಮ ಮಾಡುವುದು ಒಳಿತು. ಮುಟ್ಟಾದ ದಿನಗಳಲ್ಲಿ ಯೋಗ ಮಾಡಬಾರದು ಎನ್ನುವ ನಂಬಿಕೆ ಸಹ ತಪ್ಪು' ಎನ್ನುವುದು ಡಾ. ಮೇಖಲಾ ಅವರ ಅಭಿಪ್ರಾಯ.

'ತಿಂಗಳಿಗೆ ಸರಿಯಾಗಿ ಮುಟ್ಟಾಗದ ಸಮಸ್ಯೆ ಇರಬಹುದು, ಋತುಬಂಧ ಸಮೀಪಿಸಿದಾಗ ಅನಿಯಮಿತವಾಗಿ ಮುಟ್ಟಿನ ತೊಂದರೆ ಇರಬಹುದು. ಈ ಎಲ್ಲಾ ಸಂದರ್ಭದಲ್ಲೂ ಸ್ವಲ್ಪ ಜಾಗರೂಕರಾಗಿ ಕಡಿಮೆ ವ್ಯಾಯಾಮ ಮಾಡುವುದು ಒಳ್ಳೆಯದು. ಮುಟ್ಟಿನ ದಿನಗಳಲ್ಲಿ ವ್ಯಾಯಾಮ ಮಾಡಿದರೆ ತಲೆ ಸುತ್ತುತ್ತದೆ, ದೇಹ ತುಂಬಾ ದುರ್ಬಲ ಆಗುತ್ತದೆ, ಮನೆಯಲ್ಲೇ ಪೂರ್ತಿ ಆರಾಮ ಮಾಡಬೇಕು ಎಂದುಕೊಳ್ಳುವುದು ಸರಿಯಲ್ಲ. ಒಬ್ಬೊಬ್ಬರ ದೇಹ ರಚನೆ ಒಂದು ರೀತಿಯದು. ಈ ರೀತಿಯ ಲಕ್ಷಣ ಕಂಡರೆ ವೈದ್ಯರನ್ನು ಸಂಪರ್ಕಿಸಿ' ಎಂದು ಡಾ. ಮೇಖಲಾ ಅವರು ಸಲಹೆ ನೀಡುತ್ತಾರೆ.

ಲಾಭಗಳು

ಋತುಸ್ರಾವವಿದ್ದಾಗ ವ್ಯಾಯಾಮ ಮಾಡಿದರೆ ಕೆಲವು ಸಮಸ್ಯೆಗಳನ್ನು ಕಡಿಮೆ ಮಾಡಿಕೊಳ್ಳಬಹುದು. ಉದಾಹರಣೆಗೆ ಕಿಬ್ಬೊಟ್ಟೆ ನೋವು, ಸೆಳೆತ, ಖಿನ್ನತೆ, ಭಾವನೆಗಳ ಏರುಪೇರು, ಸುಸ್ತು ಮೊದಲಾದವುಗಳು ಕಡಿಮೆಯಾಗುತ್ತವೆ. ವ್ಯಾಯಾಮದಿಂದ 'ಫೀಲ್ ಗುಡ್ ಹಾರ್ಮೋನ್' ಉತ್ಪಾದನೆ ಜಾಸ್ತಿಯಾಗಿ ಖಿನ್ನತೆ ಕಡಿಮೆಯಾಗುತ್ತದೆ. ಹಾಗೆಯೇ ಮುಟ್ಟಿಗೆ ಮುನ್ನದ ಮಾನಸಿಕ ಕಿರಿಕಿರಿ (ಪಿಎಂಎಸ್) ಕೂಡ ಮಾಯವಾಗುತ್ತದೆ. ಕೆಲವು ಬಗೆಯ ಯೋಗಾಸನಗಳಿಂದ ಹೊಟ್ಟೆನೋವು, ಸೆಳೆತ ಕಮ್ಮಿಯಾಗುತ್ತದೆ.

ಮುಟ್ಟಿನ ಸಂದರ್ಭದಲ್ಲಿ ವ್ಯಾಯಾಮ ಮಾಡುವಾಗ ಕೆಲವು ಮುನ್ನೆಚ್ಚರಿಕೆ ತೆಗೆದುಕೊಳ್ಳುವುದು ಸೂಕ್ತ. ಮುಜುಗರವಾಗುವುದನ್ನು ತಪ್ಪಿಸಲು ಸರಿಯಾದ ಟ್ರ್ಯಾಕ್ ಸೂಟ್ ಧರಿಸಿ ವ್ಯಾಯಾಮ ಮಾಡಿ. ನಂತರ ಸ್ನಾನ ಮಾಡುವುದರಿಂದ ದೇಹ, ಮನಸ್ಸಿಗೆ ಉಲ್ಲಾಸವೆನಿಸುತ್ತದೆ.

ಯಾರು ಏನೇ ಹೇಳಿದರೂ, ಕೇಳಿದರೂ ಎಲ್ಲದಕ್ಕಿಂತ ಮುಖ್ಯವಾಗಿದ್ದು ನಿಮ್ಮ ದೇಹ. ನಿಮ್ಮ ದೇಹಕ್ಕೆ ವ್ಯಾಯಾಮ ಬೇಕು ಎನಿಸಿದರೆ ನೀವು ಖಂಡಿತ ಮಾಡಬಹುದು. ಇಲ್ಲ ನೋವಿದೆ, ಕಿರಿಕಿರಿ ಇದೆ, ಇಂದು ವ್ಯಾಯಾಮ ಮಾಡಲು ಸಾಧ್ಯವಾಗುತ್ತಿಲ್ಲ ಎನ್ನಿಸಿದರೆ ಖಂಡಿತ ಮಾಡಬೇಡಿ. ಮುಟ್ಟಿನ ದಿನಗಳಲ್ಲೂ ಸಹ ನೀವು ಸಹಜ ಜೀವನ ನಡೆಸಬಹುದು. ಎಲ್ಲಾ ರೀತಿಯ ಚಟುವಟಿಕೆಗಳಲ್ಲೂ ಪಾಲ್ಗೊಳ್ಳಬಹುದು.

ಡಾ. ಮೇಖಲಾ, ಪ್ರಸೂತಿ ತಜ್ಞೆ, ಮಂಗಳೂರು

ಇಳಿವಯಸ್ಸಿನ ಲೈಂಗಿಕ ಆಕರ್ಷಣೆ

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

- **ತಂದೆ 75 ವರ್ಷದ ನಿವೃತ್ತ ಸರ್ಕಾರೀ ನೌಕರರು. ಅಮ್ಮನ ಜೊತೆಗೆ ವಾಸಿಸುತ್ತಾರೆ. ನಾವಿಬ್ಬರು ಹೆಣ್ಣಮಕ್ಕಳಿಗೆ ಮದುವೆಯಾಗಿದೆ. ನಾನು ನೌಕರಿಯಲ್ಲಿರುವುದರಿಂದ ಮಗಳನ್ನು ಅವರ ಬಳಿ ಬಿಟ್ಟಿದ್ದೇನೆ. ಇತ್ತೀಚೆಗೆ ಮನೆಗೆ ಹೋದಾಗ ಅವರಿಗೆ ನೀಲಿಚಿತ್ರಗಳನ್ನು ನೋಡುವ ಅಭ್ಯಾಸವಿರುವುದನ್ನು ನೋಡಿ ದಂಗಾದೆ. ನನಗೆ ಅವರ ಜೊತೆ ಇರುವುದಕ್ಕೆ ಅಸಹ್ಯವಾಗುತ್ತದೆ. ಇದು ಎಷ್ಟು ಸರಿ ಮತ್ತು ಇದನ್ನು ಬಿಡಿಸುವುದು ಹೇಗೆ? ನನ್ನ 10 ವರ್ಷದ ಮಗಳು ಅಲ್ಲಿರುವುದು ಸುರಕ್ಷಿತವೇ? ಮನೆಯಲ್ಲಿ ಆರೋಗ್ಯಕರ ವಾತಾವರಣ ಬೇಕಾಗಿದೆ. ಪರಿಹಾರ ತಿಳಿಸಿ.**

ಹೆಸರು, ಊರು ತಿಳಿಸಿಲ್ಲ.

ನಿಮ್ಮ ತಂದೆಯವರ ವರ್ತನೆ ನಿಮ್ಮಲ್ಲಿ ಅಸಹ್ಯ, ಆತಂಕದ ಭಾವನೆಗಳನ್ನು ಮೂಡಿಸುವುದು ಸಹಜ. ನಿಮ್ಮ ತಾಯಿಯೇ ಅದನ್ನು ಸಹಿಸಿಕೊಂಡಿರುವಾಗ ಅವರನ್ನು ತಿದ್ದುವ ಜವಾಬ್ದಾರಿಯನ್ನು ನೀವು ಹೊರುವುದು ಹೇಗೆ ಸಾಧ್ಯ? ನೀವು ಯೋಚಿಸಬೇಕಾಗಿರುವುದು ನಿಮ್ಮ ಮತ್ತು ಪೋಷಕರ ಸಂಬಂಧದ ಕಡೆಗೆ ಮತ್ತು ನಿಮ್ಮ ಮಗಳ ಸುರಕ್ಷಿತ ಬೆಳವಣಿಗೆಯ ಕುರಿತಾಗಿ ಮಾತ್ರ. ಮೊದಲನೆಯದಾಗಿ ಅವರ ವರ್ತನೆಯ ಬಗೆಗೆ ಅವರೊಂದಿಗೆ ಮುಕ್ತವಾಗಿ ನಿಮ್ಮ ಅಸಹ್ಯ ಮತ್ತು ಆತಂಕಗಳ ಬಗೆಗೆ ಮಾತನಾಡಿ. ಅವರಿಗೆ ಪ್ರೀತಿ, ಗೌರವನ್ನು ತೋರಿಸಬೇಕೆಂದು ನಿಮ್ಮ ಆಸೆಯಾಗಿದ್ದರೂ ಇಂತಹ ವರ್ತನೆ ಅದಕ್ಕೆ ಹೇಗೆ ಅಡ್ಡಬರುತ್ತಿದೆ ಎಂದು ತಿಳಿಸಿ. ಅಗತ್ಯವಿದ್ದರೆ ಅವರು ಮನೋಚಿಕಿತ್ಸಕರ ಸಹಾಯ ಪಡೆಯಲು ವ್ಯವಸ್ಥೆ ಮಾಡುತ್ತೇನೆ ಎಂದು ತಿಳಿಸಿ. ಜೊತೆಗೆ ಅವರ ಅಭ್ಯಾಸವನ್ನು ಸಂಪೂರ್ಣವಾಗಿ ಮುಚ್ಚಿದ ಕೋಣೆಗೆ ಸೀಮಿತಗೊಳಿಸಿಕೊಳ್ಳದಿದ್ದರೆ ಮನೆಗೆ ಬರುವುದು ನಿಮಗೆ ಸಾಧ್ಯವಿಲ್ಲ ಎಂದೂ ತಿಳಿಸಿ. ಎರಡನೆಯದಾಗಿ ನಿಮ್ಮ ಮಗಳ ಸುರಕ್ಷಿತ ಬೆಳವಣಿಗೆಯ ದೃಷ್ಟಿಯಿಂದ ಅವಳನ್ನು ನಿಮ್ಮ ಜೊತೆ ಇಟ್ಟುಕೊಳ್ಳುವ ವ್ಯವಸ್ಥೆಯನ್ನು ಮಾಡಿಕೊಳ್ಳುವುದು ಒಳಿತು. ತಾತನ ವರ್ತನೆಯ ಬಗೆಗೆ ಅವಳಿಗೆ ಈಗಾಗಲೇ ತಿಳಿದಿದ್ದರೆ ಅವಳ ಮನಸ್ಸಿನಲ್ಲಿ ಮೂಡಿರಬಹುದಾದ ಗೊಂದಲ, ಕಿರಿಕಿರಿಗಳನ್ನೂ ನಿಭಾಯಿಸಲೂ ಸಹಾಯ ಮಾಡಬೇಕಾಗುತ್ತದೆ. ಅವಳ ವಯಸ್ಸಿಗೆ ಸೂಕ್ತವಾದ ಲೈಂಗಿಕ ಶಿಕ್ಷಣವನ್ನು ನೀಡುವುದೂ ನಿಮ್ಮದೇ ಜವಾಬ್ದಾರಿಯಲ್ಲವೇ? ನಮ್ಮ ಸಮಾಜ ಸಂಸ್ಕೃತಿಗಳಲ್ಲಿ ಮಕ್ಕಳಿಗೆ ಲೈಂಗಿಕ ಶಿಕ್ಷಣ ನೀಡುವ ಕುರಿತಾಗಿ ಪೋಷಕರಲ್ಲಿ ಹಿಂಜರಿಕೆ, ಅಜ್ಞಾನಗಳಿವೆ. ಹಾಗಾಗಿ ನೀವೇ ಲೈಂಗಿಕ ಮನೋಚಿಕಿತ್ಸಕರ ಸಹಾಯ ಪಡೆಯಬಹುದು.

- **22ರ ವಿದ್ಯಾರ್ಥಿ. ಓದುವುದಕ್ಕೆ ಶುರಮಾಡಿದ ತಕ್ಷಣ ಲೈಂಗಿಕ ಆಸಕ್ತಿಗಳ ಕಡೆ ಗಮನ ಹರಿಯುತ್ತದೆ. ಏನು ಮಾಡಬೇಕು?**

ಸುನಿಲ್, ಊರಿನ ಹೆಸರಿಲ್ಲ.

- **ಲೈಂಗಿತೆಯಿಂದ ದೂರ ಇರುವುದು ಹೇಗೆ ಮತ್ತು ಅದರ ಕುರಿತು ಯೋಚನೆ ಮಾಡದಿರುವುದು ಹೇಗೆ?**
- **ಪದವಿ ಮುಗಿಸಿ ಸ್ಪರ್ಧಾತ್ಮಕ ಪರೀಕ್ಷೆಗೆ ಓದುತ್ತಿದ್ದೇನೆ. ನೀಲಿಚಿತ್ರ ನೋಡುವ ಅಭ್ಯಾಸವಿದೆ. ಹುಡುಗಿಯರನ್ನು ನೋಡಿದರೆ ಲೈಂಗಿಕ ಆಕರ್ಷಣೆಯುಂಟಾಗುತ್ತದೆ. ತರಗತಿಯಲ್ಲಿ ಸರಿಯಾಗಿ ಪಾಠ ಕೇಳಲಾಗುತ್ತಿಲ್ಲ. ಪರಿಹಾರವೇನು?**

ಹೆಸರು, ಊರು ತಿಳಿಸಿಲ್ಲ.

ದೇಹ ಲೈಂಗಿಕ ಸಂಬಂಧಕ್ಕೆ ಸಿದ್ಧವಾಗುವಷ್ಟು ಬೆಳವಣಿಗೆಯಾದ ಕೂಡಲೇ ಪ್ರಕೃತಿ ಹಾರ್ಮೋನ್‌ಗಳ ಮೂಲಕ ಮನಸ್ಸಿನಲ್ಲಿ ಆಕರ್ಷಣೆಯನ್ನು ಹುಟ್ಟಿಸುತ್ತದೆ. ಇಂತಹ ಪ್ರಕೃತಿ ನಿಯಮವನ್ನು ತಡೆಯಲು ಪ್ರಯತ್ನಿಸಿದರೆ ಜೀವನಮಾನವೆಲ್ಲಾ ಲೈಂಗಿಕ ಆಸಕ್ತಿಯನ್ನು ಕಳೆದುಕೊಳ್ಳಬೇಕಾಗುತ್ತದೆ. ಆದರೆ ಲೈಂಗಿಕ ಆಕರ್ಷಣೆಯನ್ನು ಬದ್ಧ ಸಂಗಾತಿಯನ್ನು ಹುಡುಕಿಕೊಳ್ಳುವವರೆಗೆ ನಿಭಾಯಿಸಲು ಸಾಧ್ಯ. ಲೈಂಗಿಕ ಆಕರ್ಷಣೆ ನಿರಂತರವಾಗಿ ಯಾರನ್ನೂ ಕಾಡುವುದಿಲ್ಲ. ನಿಮ್ಮ ವಿದ್ಯಾಭ್ಯಾಸ, ಭವಿಷ್ಯಗಳ ಕುರಿತಾಗಿ ನಿಮ್ಮೊಳಗಿರುವ ಹಿಂಜರಿಕೆ, ಕೀಳರಿಮೆ, ಅಸ್ಪಷ್ಟತೆ ಮುಂತಾದವುಗಳಿಂದ ಮೂಡುವ ಮಾನಸಿಕ ನೋವನ್ನು ಮರೆಯಲು ಕಾಮದ ಆಕರ್ಷಣೆಯನ್ನು ಬಳಸುತ್ತಿದ್ದೀರಿ. ಲೈಂಗಿಕ ಆಕರ್ಷಣೆಯನ್ನು ಒಪ್ಪಿಕೊಳ್ಳುತ್ತಲೇ ಓದುವ ವಿಷಯಗಳನ್ನು ಆಕರ್ಷಕವಾಗಿ ಮಾಡಿಕೊಳ್ಳುವುದು ಹೇಗೆ ಎಂದು ಯೋಚಿಸಿ. ನಿಮ್ಮ ಹಿಂಜರಿಕೆ, ಕೀಳರಿಮೆಗಳ ಮೂಲವೆಲ್ಲಿರಬಹುದು? ಅವುಗಳನ್ನು ನಿಭಾಯಿಸುವುದನ್ನು ಕಲಿತರೆ ಕಾಮದ ಆಕರ್ಷಣೆ ಪ್ರೇರಕ ಶಕ್ತಿಯಾಗಬಹುದೇ ಹೊರತು ನಿಮ್ಮ ಓದು, ವೃತ್ತಿಗಳಿಗೆ ಅಡ್ಡಬರಲಾರದು.

- **28ರ ಅವಿವಾಹಿತ. ನನಗೆ ಎಷ್ಟೇ ದಣಿವಾಗಿದ್ದರೂ ಹಗಲು ಅಥವಾ ರಾತ್ರಿ ನಿದ್ದೆಯೇ ಬರುತ್ತಿಲ್ಲ. ಇದಕ್ಕೆ ಪರಿಹಾರ ತಿಳಿಸಿ.**

ದೇವೇಂದ್ರಪ್ಪ, ಊರಿನ ಹೆಸರಿಲ್ಲ.

ಯದ್ಧಭೂಮಿಯಲ್ಲಿರುವ ಸೈನಿಕರಿಗೆ ಸಹಜವಾಗಿ ನಿದ್ದೆ ಮಾಡುವುದು ಕಷ್ಟವಾಗುವುದು ಏಕೆ ಗೊತ್ತೇ? ಅವರ ಮನಸ್ಸಿನಾಳದಲ್ಲಿ ಯಾವ ಕ್ಷಣದಲ್ಲಾದರೂ ಎದುರಾಗಬಹುದಾದ ಅಪಾಯದ ನಿರೀಕ್ಷೆ ಇರುತ್ತದೆ. ಆಗ ಮೆದುಳು ಅಡ್ರಿನಾಲಿನ್, ಕಾರ್ಟಿಸೋಲ್ ಮುಂತಾದ ಹಾರ್ಮೋನ್‌ಗಳನ್ನು ಸೃಜಿಸುವ ವ್ಯವಸ್ಥೆ ಮಾಡಿ ಅಪಾಯಕ್ಕೆ ಸಿದ್ಧವಾಗಿರುವಂತೆ ಆಳದ ನಿದ್ದೆಯನ್ನು ತಪ್ಪಿಸುತ್ತದೆ. ನಿಮ್ಮ ಮನಸ್ಸಿನಾಳದಲ್ಲಿ ಇಂತದೇ ಆತಂಕ ಸೇರಿಕೊಂಡಿರಬಹುದಲ್ಲವೇ? ನಿಮ್ಮ ಬುದ್ಧಿಗೆ ಅದು ತೋಚದಿರಬಹದು. ಇಂತಹ ಆತಂಕ, ಒತ್ತಡಗಳನ್ನು ನಿಭಾಯಿಸುವುದನ್ನು ಕಲಿತಾಗ ಮೆದುಳಿನಿಂದ ಅಪಾಯದ ಸೂಚನೆಗಳು ಬರುವುದಿಲ್ಲ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ.

bhoomika@prajavani.co.in

ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಭರ್ತಿ ಪ್ರಕ್ರಿಯೆ: ಪ್ರಾದೇಶಿಕ ಅಸಮಾನತೆಯ ಕೂಗು

ಪಠ್ಯಕ್ರಮ ಸಮಿತಿ: ಬೆಂಗಳೂರಿಗೇ ಪ್ರಾಧಾನ್ಯ!

• ಸದಾಶಿವ ಎಂ.ಎಸ್

ಪ್ರಜಾವಾಣಿ ವಿಶೇಷ

ಕಾರವಾರ: ರಾಜ್ಯದಲ್ಲಿ 1,242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಭರ್ತಿಗೆ ಸ್ಪರ್ಧಾತ್ಮಕ ಪರೀಕ್ಷಾ ಪಠ್ಯಕ್ರಮ ರೂಪಿಸುವ ಪ್ರಕ್ರಿಯೆ ಆರಂಭವಾಗಿದೆ. ಆದರೆ, ಇದಕ್ಕಾಗಿ ರಚಿಸಲಾಗಿರುವ ಸಮಿತಿಯ ಸದಸ್ಯರಾಗಿ ಬೆಂಗಳೂರು ಮತ್ತು ಸುತ್ತಮುತ್ತಲಿನ ಜಿಲ್ಲೆಗಳ ಉಪನ್ಯಾಸಕರನ್ನೇ ಬಹುಸಂಖ್ಯೆಯಲ್ಲಿ ನೇಮಿಸಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿದೆ.

80 ಉಪನ್ಯಾಸಕರನ್ನು ಒಳಗೊಂಡಿರುವ ಸಮಿತಿಯಲ್ಲಿ ಬೆಂಗಳೂರಿನವರೇ 67 ಉಪನ್ಯಾಸಕರಿದ್ದಾರೆ. ಕೋಲಾರ, ರಾಮನಗರ, ಮೈಸೂರು ಜಿಲ್ಲೆಯ ಬೆರಳೆಣಿಕೆಯಷ್ಟು ಮಂದಿಯಿದ್ದಾರೆ. ಉತ್ತರ ಕರ್ನಾಟಕ ಭಾಗದಿಂದ ನರಗುಂದ ಮತ್ತು ಜಮಖಂಡಿಯಿಂದ ಮಾತ್ರ ತಲಾ ಒಬ್ಬರು ಉಪನ್ಯಾಸಕರು ಸಮಿತಿಯಲ್ಲಿದ್ದಾರೆ.

'ಕರಾವಳಿ, ಉತ್ತರ ಕರ್ನಾಟಕದಲ್ಲಿ ಪರೀಕ್ಷಾ ಪಠ್ಯಕ್ರಮ ಸಿದ್ಧಪಡಿಸಲು ಅರ್ಹರಾದ, ಅನುಭವಿ ಉಪನ್ಯಾಸಕರಿಲ್ಲ ಎಂದು ಬಿಂಬಿಸಲು ಇಲಾಖೆ ಈ ಧೋರಣೆ ಹೊಂದಿದೆಯೇ ಎಂಬ ಶಂಕೆ ಇದೆ. ಪ್ರಶ್ನೆ ಪತ್ರಿಕೆ ಸಿದ್ಧಪಡಿಸುವಲ್ಲಿ ಪ್ರಾದೇಶಿಕ ತಾರತಮ್ಯ ಏಕೆ' ಎಂದು ಉತ್ತರ ಕನ್ನಡದ ಉಪನ್ಯಾಸಕರೊಬ್ಬರು ಪ್ರಶ್ನಿಸಿದರು.

'ಈ ಬಗ್ಗೆ ಪ್ರಶ್ನಿಸಿದರೆ ಕೋವಿಡ್ ನೆಪ ಹೇಳುತ್ತಾರೆ. ಆದರೆ, ಈಗ ನೇಮಿಸಲಾಗಿರುವ ಸಮಿತಿ ಸದಸ್ಯರಿಗೆ ಅವರು ಸಿದ್ಧಪಡಿಸಿದ ಪಠ್ಯಕ್ರಮವನ್ನು ಪಿ.ಡಿ.ಎಫ್ ಮತ್ತು ಇ-ಮೇಲ್ ಮೂಲಕ ಕಳುಹಿಸುವಂತೆ ಕಾಲೇಜು ಶಿಕ್ಷಣ ಇಲಾಖೆಯ ಮುಖ್ಯ ಆಡಳಿತಾಧಿಕಾರಿ ಸೂಚಿಸಿದ್ದಾರೆ. ಅಲ್ಲದೇ ತರಬೇತಿ ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗುತ್ತಿದೆ. ಆದ್ದರಿಂದ ಸಾಂಕ್ರಾಮಿಕ ಸೋಂಕು ನೆಪ ಮಾತ್ರವಷ್ಟೇ' ಎಂದು ಬೇಸರ ವ್ಯಕ್ತಪಡಿಸಿದರು.

'ಜ್ಯೇಷ್ಠತೆ ಆಧರಿಸಿ ಸಮಿತಿಗೆ ಪರಿಗಣಿಸಲಾಗಿದೆ ಎಂದರೂ ಕೆಲ ವಿಷಯಗಳಿಗೆ ಸಹಾಯಕ ಪ್ರಾಧ್ಯಾಪಕರನ್ನು ನೇಮಿಸಲಾಗಿದೆ. ಇದರ ಬದಲು ವಿಶ್ವವಿದ್ಯಾಲಯಗಳ ಪ್ರೊಫೆಸರ್‌ಗಳನ್ನು ನೇಮಿಸಬಹುದಿತ್ತು. ಬ್ಯಾಂಕಿಂಗ್ ಪರೀಕ್ಷೆಗಳ ಮಾದರಿಯಲ್ಲಿ ಬೇರೆ ರಾಜ್ಯಗಳ ಉಪನ್ಯಾಸಕರಿಗೆ ಹೊರ ಗುತ್ತಿಗೆ ಕೊಡಬಹುದಿತ್ತು. ಆದರೆ, ಆ ರೀತಿ ಮಾಡದೇ ಕೇವಲ ಬೆಂಗಳೂರು ಮತ್ತು ಸುತ್ತಮುತ್ತಲಿನ ಉಪನ್ಯಾಸಕರನ್ನೇ ಪಠ್ಯಕ್ರಮ ಸಿದ್ಧಪಡಿಸಲು ನೇಮಿಸಿರುವುದರ ಬಗ್ಗೆ ಸ್ಪಷ್ಟತೆಯಿಲ್ಲ' ಎಂದು ಹೇಳಿದರು.

ಈ ಸಂಬಂಧ ಪ್ರತಿಕ್ರಿಯೆ ಪಡೆಯಲು ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತ ಪ್ರದೀಪ್.ಪಿ ಅವರಿಗೆ 'ಪ್ರಜಾವಾಣಿ' ಹಲವು ಸಲ ಕರೆ ಮಾಡಿದರೂ ಸ್ವೀಕರಿಸಲಿಲ್ಲ.

'ವರ್ಗಾವಣೆ ಮಾಡಿಸಿಕೊಂಡರು'

'2017ರಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಆಯ್ಕೆಯಾದ ಹೆಚ್ಚಿನವರು ಬೆಂಗಳೂರು ಸುತ್ತಮುತ್ತಲಿನವರು. ಅವರನ್ನು ಬೇರೆ ಬೇರೆ ಜಿಲ್ಲೆಗಳಿಗೆ ನೇಮಿಸಲಾಯಿತು. ಆದರೆ, ಬಹುತೇಕ ಮಂದಿ ನಿಯೋಜನೆ ಮೂಲಕ ವರ್ಗಾವಣೆ ಮಾಡಿಸಿಕೊಂಡರು. ಇದರಿಂದ ಕರಾವಳಿ ಜಿಲ್ಲೆಗಳಲ್ಲಿ ಉಪನ್ಯಾಸಕರ ಸಮಸ್ಯೆ ಬಗೆಹರಿಯಲೇ ಇಲ್ಲ' ಎನ್ನುತ್ತಾರೆ ಉಪನ್ಯಾಸಕರೊಬ್ಬರು. 'ಕಳೆದ ಬಾರಿಯೂ ಪಠ್ಯಕ್ರಮ ಸಮಿತಿಯಲ್ಲಿ ಬೆಂಗಳೂರಿನವರೇ ಅಧಿಕ ಸಂಖ್ಯೆಯಲ್ಲಿದ್ದರು. ಈ ಬಾರಿಯೂ ಹಾಗೇ ಆಗಿದೆ. ಪಾರದರ್ಶಕತೆ ಅಗತ್ಯವಿದೆ' ಎಂದು ಅವರು ಆಗ್ರಹಿಸುತ್ತಾರೆ.

ಮಕ್ಕಳಾಟ

ನಗರದ ಸಪ್ತಗಿರಿ ಬಡಾವಣೆಯ ರಸ್ತೆಯಲ್ಲಿ ಮಳೆ ನೀರು ನಿಂತಿದ್ದು, ಅದರ ಪಕ್ಕದಲ್ಲೇ ಮಕ್ಕಳು ಸೈಕಲ್ ಅಭ್ಯಾಸ ಮಾಡುತ್ತಿದ್ದ ದೃಶ್ಯ ಶುಕ್ರವಾರ ಕಂಡುಬಂತು –ಪ್ರಜಾವಾಣಿ ಚಿತ್ರ

ಮಳೆ: 7 ಜಿಲ್ಲೆಗಳಲ್ಲಿ 'ರೆಡ್ ಅಲರ್ಟ್'

ಬೆಂಗಳೂರು: 'ಮುಂಗಾರು ಬಿರುಸುಗೊಂಡಿರುವುದರಿಂದ ಕರಾವಳಿ ಹಾಗೂ ಒಳನಾಡಿನ ಹಲವು ಜಿಲ್ಲೆಗಳಲ್ಲಿ ಜುಲೈ 11ರಿಂದ 13ರವರೆಗೆ ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ' ಎಂದು ಹವಾಮಾನ ಇಲಾಖೆ ತಿಳಿಸಿದೆ.

'ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಕೊಡಗು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇರುವುದರಿಂದ ಮೂರೂ ದಿನ 'ರೆಡ್ ಅಲರ್ಟ್' ಘೋಷಿಸಲಾಗಿದೆ'.

'ಕರಾವಳಿ ಜಿಲ್ಲೆಗಳಲ್ಲಿ ಶನಿವಾರವೂ ಹೆಚ್ಚು ಮಳೆಯಾಗಲಿದೆ. ಈ ಭಾಗದಲ್ಲಿ ಗಂಟೆಗೆ ಗರಿಷ್ಠ 60 ಕಿ.ಮೀ ವೇಗದಲ್ಲಿ ಗಾಳಿ ಬೀಸುತ್ತಿರುವುದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು' ಎಂದು ಎಚ್ಚರಿಸಿದೆ.

'ಯಾದಗಿರಿ, ವಿಜಯಪುರ, ಕಲಬುರ್ಗಿ, ಹಾವೇರಿ, ಗದಗ, ಧಾರವಾಡ, ಬೀದರ್, ಬಾಗಲಕೋಟೆ, ಚಾಮರಾಜನಗರ, ಮೈಸೂರು ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಸಹಿತ ಭಾರಿ ಮಳೆಯಾಗುವ ಮುನ್ಸೂಚನೆ ಇರುವುದರಿಂದ ಜು.10ರಿಂದ 13ರವರೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ'. 'ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಮಾತ್ರ ಹೆಚ್ಚು ಮಳೆಯಾಗಲಿದ್ದು, ಉಳಿದ ಜಿಲ್ಲೆಗಳಲ್ಲಿ ಮೋಡ ಕವಿದ ವಾತಾವರಣದೊಂದಿಗೆ ಚದುರಿದಂತೆ ಮಳೆಯಾಗಬಹುದು' ಎಂದೂ ಮಾಹಿತಿ ನೀಡಿದೆ.

ಜುಲೈ 25ಕ್ಕೆ ಕೆ-ಸೆಟ್ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಮೈಸೂರು: ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಯನ್ನು (ಕೆ-ಸೆಟ್) ಮೈಸೂರು ವಿಶ್ವವಿದ್ಯಾನಿಲಯವು ಜುಲೈ 25ಕ್ಕೆ ಮರುನಿಗದಿ ಮಾಡಿದೆ. ಕೋವಿಡ್ ಲಾಕ್‌ಡೌನ್ ನಿಂದ ಪರೀಕ್ಷೆಯನ್ನು ಎರಡು ಬಾರಿ ಮುಂದೂಡಲಾಗಿತ್ತು.

ಸುಮಾರು 85 ಸಾವಿರ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿ ಮೂರು ತಿಂಗಳಾಗಿದ್ದು, ಪರೀಕ್ಷೆ ದಿನಾಂಕ ಪ್ರಕಟಣೆಗೆ ಕಾಯುತ್ತಿದ್ದರು. ಈ ಕುರಿತು 'ಪ್ರಜಾವಾಣಿ'ಯಲ್ಲಿ 'ಕೆ-ಸೆಟ್ ಪರೀಕ್ಷೆ: ದಿನ ನಿಗದಿಗೆ ಪರದಾಟ' ಎಂಬ ವಿಶೇಷ ವರದಿ ಪ್ರಕಟವಾಗಿತ್ತು.

ವರದಿ ಪರಿಣಾಮ

'25ರಂದು ಬೇರಾವುದೇ ಪರೀಕ್ಷೆ ಇಲ್ಲ. ಹೀಗಾಗಿ, ಆ ದಿನ ಅಂತಿಮಗೊಳಿಸಿದ್ದೇವೆ. ಕೋವಿಡ್–19 ಮಾರ್ಗಸೂಚಿ ಪ್ರಕಾರವೇ ಪರೀಕ್ಷೆ ನಡೆಸುತ್ತೇವೆ' ಎಂದು ಕೆ-ಸೆಟ್ ಸಂಯೋಜಕ ಪ್ರೊ.ಎಚ್.ರಾಜಶೇಖರ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಬೆಂಗಳೂರು, ಮೈಸೂರು, ಬೆಳಗಾವಿ, ಬಳ್ಳಾರಿ, ವಿಜಯಪುರ, ದಾವಣಗೆರೆ, ಧಾರವಾಡ, ಕಲಬುರ್ಗಿ, ಮಂಗಳೂರು, ಶಿವಮೊಗ್ಗ ಮತ್ತು ತುಮಕೂರಿನಲ್ಲಿರುವ ನೋಡೆಲ್ ಕೇಂದ್ರಗಳಲ್ಲಿ 41 ವಿಷಯಗಳಲ್ಲಿ ಪರೀಕ್ಷೆ ನಡೆಯಲಿದೆ.

ಹೆಚ್ಚಿನ ಮಾಹಿತಿಗೆ http://kset.uni-mysore.ac.in.

ಷರತ್ತುಬದ್ಧ ಮಾತುಕತೆ: ರೈತರ ತಿರಸ್ಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ಕಳೆದ ಏಳು ತಿಂಗಳಿಂದ ನಡೆಸುತ್ತಿರುವ ಪ್ರತಿಭಟನೆ ಕೈಬಿಟ್ಟು ಸರ್ಕಾರದ ಜತೆಗೆ ಮಾತುಕತೆಗೆ ಬನ್ನಿ ಎಂದು ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಮಾಡಿದ ಮನವಿಯನ್ನು ರೈತರು ಶುಕ್ರವಾರ ತಿರಸ್ಕರಿಸಿದ್ದಾರೆ.

'ಸರ್ಕಾರ ಬಯಸುವುದು ಷರತ್ತುಬದ್ಧ ಮಾತುಕತೆ. ಇಂಥ ಮಾತುಕತೆ ನಮಗೆ ಬೇಕಿಲ್ಲ' ಎಂದು ಭಾರತೀಯ ಕಿಸಾನ್ ಯೂನಿಯನ್ ನಾಯಕ ರಾಕೇಶ್ ಟಿಕಾಯತ್ ಹೇಳಿದ್ದಾರೆ. ಮೂರು ಕೃಷಿ ಕಾಯ್ದೆಗಳ ರದ್ದತಿಗಾಗಿನ ಹೋರಾಟವನ್ನು ಕೈಬಿಡುವಂತೆ ಕೇಂದ್ರ ಸರ್ಕಾರ ಮಾಡಿದ ಮನವಿಯನ್ನು ರೈತರು ಒಪ್ಪಲು ಸಾಧ್ಯವೇ ಇಲ್ಲ ಎಂದಿದ್ದಾರೆ.

ಕೃಷಿ ಮೂಲಸೌಕರ್ಯ ನಿಧಿಯ ಅಡಿಯಲ್ಲಿ (ಎಐಎಫ್), ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು (ಎಪಿಎಂಸಿ) ಕೂಡ ಇನ್ನು ಮುಂದೆ ನೆರವು ಪಡೆಯಬಹುದು ಎಂದು ತೋಮರ್ ಗುರುವಾರ ಪ್ರಕಟಿಸಿದ್ದರು. ಆದರೆ, ಕೃಷಿ ಕಾಯ್ದೆಗಳಿಂದಾಗಿ ಎಪಿಎಂಸಿಗಳು ಮುಚ್ಚಿ ಹೋಗುತ್ತವೆ ಎಂಬ ಭಯ ರೈತರದು.

ಎಐಎಫ್ ವ್ಯಾಪ್ತಿಗೆ ಬರುವುದರಿಂದ ಎಪಿಎಂಸಿಗಳ ಬಲವರ್ಧನೆ ಸಾಧ್ಯ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೂ ಹೇಳಿದ್ದರು.

ಆದರೆ, ಸರ್ಕಾರದ ಈ ವಾದವನ್ನು ಅಲ್ಲಗಳೆದಿರುವ ರಾಕೇಶ್ ಟಿಕಾಯತ್, ಖಾಸಗಿ ಮಾರುಕಟ್ಟೆಗಳಿಗೆ ಸಿಗುವಷ್ಟು ವಹಿವಾಟು ಎಪಿಎಂಸಿಗಳಿಗೆ ಸಿಗದು ಎಂದಿದ್ದಾರೆ.

'ಈ ಋತುವಿನಲ್ಲಿ, ಮಧ್ಯಪ್ರದೇಶದ 38 ಎಪಿಎಂಸಿಗಳ ಪೈಕಿ ಒಂದು ಸಮಿತಿಯು ಕೂಡ ಒಂದೇ ಒಂದು ಕ್ವಿಂಟಲ್‌ನಷ್ಟು ಗೋಧಿಯ ವಹಿವಾಟನ್ನು ನಡೆಸಿಲ್ಲ. ಬಹಳಷ್ಟು ಎಪಿಎಂಸಿಗಳಿಗೆ, ತಮ್ಮ ಸಿಬ್ಬಂದಿಗೆ ಸಂಬಳ ಕೊಡಲೂ ಹಣವಿಲ್ಲ. ಮುಂದಿನ ಕೆಲ ವರ್ಷಗಳಲ್ಲಿ, ಕಡಿಮೆ ತೆರಿಗೆ ಭರಿಸುವ ಸೌಲಭ್ಯವಿರುವ ಖಾಸಗಿ ಮಾರುಕಟ್ಟೆ ಸಂಸ್ಥೆಗಳ ಏಳಿಗೆಯಾಗಿ, ಎಪಿಎಂಸಿಗಳು ಬಾಗಿಲು ಹಾಕುವುದು ನಿಶ್ಚಿತ' ಎಂದು ಕಳವಳ ವ್ಯಕ್ತಪಡಿಸಿದರು.

ಕಳೆದ ವರ್ಷ ನ.26ರಿಂದ, ದೆಹಲಿಯ ಗಾಜಿಪುರ, ಸಿಂಘು ಹಾಗೂ ಟಿಕ್ರಿ ಗಡಿಯಲ್ಲಿ ಪಂಜಾಬ್. ಹರಿಯಾಣ ಉತ್ತರ ಪ್ರದೇಶದ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ರೈತರು ಬೆಳೆಯ ಕಟಾವಿಗೆ ತೆರಳಿರುವುದರಿಂದ ಹಾಗೂ ಬೇಸಿಗೆ ಬೆಳೆಯ ಸಿದ್ಧತೆಗಾಗಿ ಹಳ್ಳಿಗಳಿಗೆ ಮರಳಿರುವುದರಿಂದ, ಕಳೆದ ಒಂದೆರಡು ತಿಂಗಳಿನಲ್ಲಿ ಪ್ರತಿಭಟನಾ ಸ್ಥಳಗಳಲ್ಲಿ ರೈತರ ಸಂಖ್ಯೆ ತುಸು ಕಡಿಮೆಯಾಗಿದೆ.

'ಮದುವೆ, ವಿಚ್ಛೇದನಕ್ಕೆ ಏಕರೂಪ ನಾಗರಿಕ ಸಂಹಿತೆ ಅಗತ್ಯ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಮದುವೆ, ವಿಚ್ಛೇದನ ಹಾಗೂ ಉತ್ತರಾಧಿಕಾರಕ್ಕೆ ಸಂಬಂಧಿಸಿದಂತೆ ಏಕರೂಪ ನಾಗರಿಕ ಸಂಹಿತೆಯನ್ನು ರೂಪಿಸುವುದು ಇಂದಿನ ತುರ್ತು' ಎಂದು ದೆಹಲಿ ಹೈಕೋರ್ಟ್ ಪ್ರತಿಪಾದಿಸಿದೆ.

'ಈಗ ಹಲವಾರು ವೈಯಕ್ತಿಕ ಕಾನೂನುಗಳು ಜಾರಿಯಲ್ಲಿವೆ. ಇವುಗಳು ಸೃಷ್ಟಿಸುವ ಸಂಘರ್ಷ, ವಿರೋಧಾಭಾಸಗಳಿಂದ ನಾಗರಿಕರು ತೊಂದರೆ ಅನುಭವಿಸುವುದನ್ನು ತಪ್ಪಿಸಬೇಕಾದರೆ, ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸುವುದು ಅಗತ್ಯ' ಎಂದು ನ್ಯಾಯಮೂರ್ತಿ ಪ್ರತಿಭಾ ಎಂ.ಸಿಂಗ್ ಅವರಿರುವ ಏಕಸದಸ್ಯ ನ್ಯಾಯಪೀಠ ಹೇಳಿತು.

'ದೇಶಕ್ಕೆ ಏಕರೂಪ ನಾಗರಿಕ ಸಂಹಿತೆ ಅಗತ್ಯ ಎಂಬುದು ಸಂವಿಧಾನದ 44ನೇ ವಿಧಿಯ ಆಶಯ. ಇದು ಕೇವಲ ಭರವಸೆಯಾಗಿ ಉಳಿಯಬಾರದು ಎಂದು ಸಹ ಇದೇ ವಿಧಿ ಹೇಳುತ್ತದೆ. ಇಂಥ ಸಂಹಿತೆಯನ್ನು ರೂಪಿಸಿ, ಜಾರಿಗೊಳಿಸಬೇಕು ಎಂದು ಅನೇಕ ಪ್ರಕರಣಗಳಿಗೆ ಸಂಬಂಧಿಸಿ ತೀರ್ಪುಗಳನ್ನು ಪ್ರಕಟಿಸಿದ ಸಂದರ್ಭಗಳಲ್ಲಿ, ಸುಪ್ರೀಂಕೋರ್ಟ್ ಈ ಆಶಯವನ್ನು ಪುನರುಚ್ಚರಿಸುತ್ತಲೇ ಬಂದಿದೆ' ಎಂದು ಅವರು ಹೇಳಿದರು.

'ಸಮಾಜದಲ್ಲಿ ಈಗ ಸಾಕಷ್ಟು ಬದಲಾವಣೆ ಕಾಣಬಹುದು. ಧರ್ಮ, ಜಾತಿ ಹಾಗೂ ಸಮುದಾಯಗಳೆಂಬ ಬೇಲಿಗಳು ಕಣ್ಮರೆಯಾಗುತ್ತಿವೆ. ಸಮಾನತೆ ಮನೆ ಮಾಡುತ್ತಿದೆ. ಹೀಗಾಗಿ ಮದುವೆ, ವಿಚ್ಛೇದನ ಹಾಗೂ ಆಸ್ತಿಗಳ ಉತ್ತರಾಧಿಕಾರಕ್ಕೆ ಸಂಬಂಧಪಟ್ಟಂತೆ ಏಕರೂಪ ಸಂಹಿತೆ ಇಂದಿನ ಅಗತ್ಯ' ಎಂದರು.

'ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸುವಂತೆ ಮೂರು ದಶಕಗಳ ಹಿಂದೆಯೇ ತೀರ್ಪೊಂದನ್ನು ಪ್ರಕಟಿಸುವಾಗ ಮೊದಲ ಬಾರಿ ನಿರ್ದೇಶನ ನೀಡಲಾಗಿತ್ತು. ಈ ವರೆಗೆ ಈ ನಿಟ್ಟಿನಲ್ಲಿ ಯಾವುದೇ ಪ್ರಗತಿಯಾಗಿಲ್ಲ' ಎಂದೂ ಅಸಮಾಧಾನ ವ್ಯಕ್ತಪಡಿಸಿದರು. 'ಸೂಕ್ತ ಕ್ರಮಕ್ಕಾಗಿ, ಈ ತೀರ್ಪಿನ ಪ್ರತಿಯನ್ನು ಕಾನೂನು ಸಚಿವಾಲಯದ ಕಾರ್ಯದರ್ಶಿಗೆ ತಲುಪಿಸಬೇಕು' ಎಂದು ಸೂಚಿಸಿದರು.

ವಾಟ್ಸ್‌ಆ್ಯಪ್ ಖಾಸಗಿತನ ನೀತಿಗೆ ಸದ್ಯಕ್ಕೆ ತಡೆ

ನವದೆಹಲಿ (ಪಿಟಿಐ): 'ದತ್ತಾಂಶ ಸಂರಕ್ಷಣಾ ಮಸೂದೆ' ಜಾರಿಗೆ ಬರುವತನಕ, ತನ್ನ ಹೊಸ ಖಾಸಗಿತನ (ಗೋಪ್ಯತಾ) ನೀತಿಯನ್ನು ತಡೆಹಿಡಿಯಲಾಗುವುದು ಎಂದು ದೆಹಲಿ ಹೈಕೋರ್ಟ್‌ಗೆ ವಾಟ್ಸ್‌ಆ್ಯಪ್ ಸಂಸ್ಥೆ ಶುಕ್ರವಾರ ತಿಳಿಸಿದೆ. ಸಂಸತ್ತು ಅನುಮತಿ ನೀಡಿದರೆ ಮಾತ್ರ ಅದನ್ನು ಜಾರಿಗೆ ತರುತ್ತೇವೆ ಎಂದು ಸ್ಪಷ್ಟಪಡಿಸಿದೆ.

ವಾಟ್ಸ್‌ಆ್ಯಪ್‌ನ ಖಾಸಗಿತನ ನೀತಿಯನ್ನು ಒಪ್ಪಿಕೊಳ್ಳದ ಬಳಕೆದಾರರಿಗೆ ಯಾವುದೇ ಒತ್ತಡ ಹೇರುವುದಿಲ್ಲ ಎಂದು ನ್ಯಾಯಮೂರ್ತಿಗಳಾದ ಡಿ.ಎನ್. ಪಟೇಲ್ ಮತ್ತು ಜ್ಯೋತಿ ಸಿಂಗ್ ಅವರ ಪೀಠದೆದುರು ವಾಟ್ಸ್‌ಆ್ಯಪ್ ತಿಳಿಸಿತು.

'ನಾವು ಖಾಸಗಿತನ ನೀತಿ ತಡೆಹಿಡಿಯಲು ಸ್ವಯಂಪ್ರೇರಣೆಯಿಂದ ಒಪ್ಪಿಕೊಂಡಿದ್ದೇವೆ. ನೀತಿ ಒಪ್ಪಿಕೊಳ್ಳಿ ಎಂದು ನಾವು ಜನರಿಗೆ ಒತ್ತಾಯಿಸುವುದಿಲ್ಲ' ಎಂದು ವಾಟ್ಸ್‌ಆ್ಯಪ್ ಪರ ಹಾಜರಿದ್ದ ಹಿರಿಯ ವಕೀಲ ಹರೀಶ್ ಸಾಳ್ವೆ ತಿಳಿಸಿದರು. ಸಾಳ್ವೆ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಕೋರ್ಟ್, 'ಅನುಷ್ಠಾನವನ್ನು ತಡೆಹಿಡಿಯಲಾಗಿದ್ದರೂ, ನೀತಿ ಇನ್ನೂ ಅಸ್ತಿತ್ವದಲ್ಲಿದೆ. ನೀವು ಅದನ್ನು ಕಾರ್ಯಗತಗೊಳಿಸುತ್ತಿಲ್ಲ ಸರಿ. ಆದರೆ ನೀತಿಯು ಯಾವುದೇ ದಿನ ಮತ್ತೆ ಜಾರಿಯಾಗಬಹುದು' ಎಂದಿತು.

'ದತ್ತಾಂಶ ಸಂರಕ್ಷಣಾ ಮಸೂದೆಯು ಕಾನೂನಾಗಿ ಜಾರಿಯಾಗುವವರೆಗೂ ನೀತಿ ಜಾರಿ ಮಾಡುವುದಿಲ್ಲ' ಎಂದು ಸಾಳ್ವೆ ಪುನರುಚ್ಚರಿಸಿದರು. 'ಸಂಸತ್ತಿನ ಕಾನೂನು ಬರುವವರೆಗೂ ನಾವು ಏನನ್ನೂ ಮಾಡುವುದಿಲ್ಲ. ಇದು ನಮ್ಮ ಬದ್ಧತೆ. ಸಂಸತ್ತು ಅನುಮತಿ ನೀಡಿದರೆ ಸರಿ. ಇಲ್ಲದಿದ್ದರೆ ಅದು ದುರದೃಷ್ಟ' ಎಂದರು.

ವ್ಯಕ್ತಿಯ ದತ್ತಾಂಶವನ್ನು ಸರ್ಕಾರಿ ಮತ್ತು ಖಾಸಗಿ ಕಂಪನಿಗಳು ಬಳಸುವುದನ್ನು ನಿಯಂತ್ರಿಸಲು ವೈಯಕ್ತಿಕ ದತ್ತಾಂಶ ಸಂರಕ್ಷಣಾ ಮಸೂದೆಯು ಪ್ರಯತ್ನಿಸುತ್ತದೆ. ಮಸೂದೆಯನ್ನು ಪರಿಶೀಲಿಸಿ ವರದಿ ನೀಡುವ ಸಂಸತ್ತಿನ ಜಂಟಿ ಸಮಿತಿಯ ಅವಧಿಯನ್ನು ಮುಂಗಾರು ಅಧಿವೇಶನದವರೆಗೆ ವಿಸ್ತರಿಸಲಾಗಿದೆ.

ಕಾಲಾವಕಾಶಕ್ಕೆ ಮನವಿ

ವಾಟ್ಸ್‌ಆ್ಯಪ್‌ನ ಹೊಸ ಗೋಪ್ಯತೆ ನೀತಿಯ ಬಗ್ಗೆ ತನಿಖೆ ನಡೆಸಲು ನಿರ್ದೇಶನ ನೀಡಿರುವ ಭಾರತದ ಸ್ಪರ್ಧಾ ಆಯೋಗದ (ಸಿಸಿಐ) ಆದೇಶ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳನ್ನು ಕೋರ್ಟ್ ವಿಚಾರಣೆ ನಡೆಸಿತು. ತನಿಖೆಗೆ ಮಧ್ಯಂತರ ತಡೆ ನೀಡುವಂತೆ ಕಳೆದ ತಿಂಗಳು ವಾಟ್ಸ್‌ಆ್ಯಪ್ ಅರ್ಜಿ ಹಾಕಿತ್ತು.

'ಗೋಪ್ಯತೆ ನೀತಿ ಜಾರಿ ಈಗ ಸ್ಥಗಿತಗೊಂಡಿದೆ. ಆದರೆ ಸಿಸಿಐ ವಿಚಾರಣೆ ಮುಂದುವರಿದಿದೆ' ಎಂದು ವಾಟ್ಸ್‌ಆ್ಯಪ್ ಪರ ವಕೀಲ ಹರೀಶ್ ಸಾಳ್ವೆ ಹೇಳಿದರು. ಸಿಸಿಐ ನೀಡಿರುವ ಪ್ರಶ್ನಾವಳಿಗೆ ಉತ್ತರಿಸಲು ವಾಟ್ಸ್‌ಆ್ಯಪ್‌ಗೆ ಜುಲೈ ತಿಂಗಳ ಕೊನೆಯವರೆಗೆ ಕಾಲಾವಕಾಶ ನೀಡುವಂತೆ ಅವರು ಕೋರಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Hosur Road

"SITE, BUILDING, Residential, Commercial for sale 30x40 and 40x60 HOSA Road, HSR Layout, Nagarabhavi. 9880080388"

Hoskote

HOSKOTE 30X60 SITE For SALE at Kanakanagar, Sir. M. Visveshwaraiah Layout, Hoskote. Contact: 9880843416, 9743535151.

Hebbal

AVAILABLE/WANTED BDA Plots Arkavathy Layout, R.T.Nagar, Thanisandra, Hebbal, Jakkur, Yelahanka, HBR, Immediate_settlement. "SPACELINKS" 9845129934.

Indiranagar

SITES for Sale- 58 Sites measuring 30x40, 30x50, 40x60, 40x65, single owner for 80 years. DC converted property 2.5km from Indiranagar, Rs.14000 per Square feet. Contact: 7899809339

Kanakapura Road

SALE 30X50 Site at Concord Nappa Valley, Kanakpura Road, NearArt of Living. Owner: 8217587882.

Lingarajapuram

SITE FOR SALE KSFC Layout Corner Site East Facing A-KHATHA No.58 Lingarajapura (Total Sqft Area-2860) Contact 9986258271

Mysore Road

SUPER OFFER/BASE RATES BMRDA & RERA Approved 60x90 Villa Plots for Sale,Mysore Road,Near Big Banyan Tree, Contact: 9880577955

Vishweshwariah Layout

VISHWESHWARAIAH LAYOUT BDA SITE SALE 6th-BLOCK, 40x60 EAST FACE 5000/-Negotiable 40ft Road Contact: 9341733480/ 8892901567

BDA SITE 30x40 Vishveshwaraiah Layout North Facing, 6000/- Sft, Good Location, Genuine Buyers, Contact :9844603127

Yelahanka

YELAHANKA NEW_TOWN. House in 60x90 site for SALE. Landmark 'Girias'. Inspection only on Sat&Sunday. Contact 9845033443/ 9980946638. estatespoint@gmail.com

REAL ESTATE BUYING

Sites

Out-Station

IMMEDIATE PURCHASE 30x40 site, East/North facing, Near V.R Pearl, Nisarga Layout Hoskote, Contact: 9845402737

Arkavathy Layout

BDA SITES WANTED Arkavathi, Anjanapura, Banashankari 6th Stage, Vishweswaraiah, Kempegowda, Any BDA Layout. Contact: SAPTHAGIRI. 9900268073, 9448068073.

HRBR Layout

WANTED 20X30, 30x40, 40x60 HRBR, HBR, OMBR, Arkavathi, Kanakashree, Ramiah NorthCity, Genuine buyers 'FALCON REAL ESTATE' HRBR 3rd Block, Nehru Road, Opp to Udupi Restaurant. 080-48140875/ 98454 47868

BUILDERS ESSENTIAL

Water Proofing Materials

LEAKAGE... LEAKAGE... Old/New-Building, Sump, Bathroom, Wallcrack, Skylight, Terrace Waterproofing done by New-Technology-9880916988

Water Proofing

WE-FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

RENTAL PROPERTIES

Accommodation Available

Commercial

RENT: GROUND Basaveswrnagar 800 Sqft. Vijayanagar MC Layout 1500 Sqft. For Office/ Godown. 9844076553, 9844084962.

FOR RENT: New Building PREFAB Steel-Structure 25000 sqft suitable for E-Commerce,Warehouse, Pharma,IT, Garment, Manufacturing Etc., EPIP-KIADB Zone, Mahadevapura behind Graphite india, GOOGLE LOCATION: 12°58'39.8'N 77°42'25.2"E, CONTACT: 9845001628, 7483445170, 9972190450

OFFICE SPACE/ Commercial Complex 19th Main, HSR Layout,Sector-1, Bengaluru. 11,500 Sqft, 4 Floors (Each floor 2400 sqft) Cellar / Partially covered terrace) 15 KVA GD Set Power Backup with passenger lift. Floor wise also considered. 9449379035 9986551735

NEWLY CONSTRUCTED factory shed 15,000 sq.ft. Celler Ground, 1st floor , Power 132 HP with Heavy Duty Lift. Located at Magadi road near embassy school CONTACT:- linksgroup@hotmail.com Vinod 8496961123, 23322297, 23424368

COMMERCIAL SPACE for Lease or Rent 450 sq. ft First floor, #126, Kilari Road, Gandhinagar, Bangalore. Contact: 8095673991/ 9901646263

Flats

JANPRIYA SUNKADAKATE Two Bedroom Corner Flat for Lease or Rent Contact 9886789567

Industrial And Factory

INDUSTRIAL_SHED WAREHOUSE_SPACE Require 5000sqft_to 1,00,000sqft For_Rent Surrounding Bangalore Hosur_Road Bommasandra Mysore_Road old_Madras_Road Ready_to_move-in Call:9740803686 9620137615

House

HOUSE FOR_RENT at subramanyanagar 2BHK semifurnished for Rs.26,000, also site for sale at Gayatrinagar. 9845045008

JOB OPPORTUNITIES

Accounts & Finance

WANTED ACCOUNTANT age 30+ with 5 years experience and very good knowledge of Tally & Computer Operation for a firm in Chamarajpet. Call: 080-26603729 for an interview. Email CV: office@mahemdraperfumery.com

MANAGER ACCOUNTS&FINANCE wanted urgently, with minimum 5 years experience for a manufacturing company office at MG Road Bangalore with half a billion rupees turnover. Please respond independirector@gmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Engg/ Production Technical

WANTED EXPERIENCED CNC OPERATORS (VMC). 'VINUMAC' 205A,Peenya 3rd phase,Bangalore-58 Contact: 080-28391959, 28394512 Email: admin@vinumac.com

Marketing & Sales

MARKETING PERSONNEL required for HEALTHCARE/ MEDICAL PRODUCTS. Contact in confidence: glider.bangalore@gmail.com, www.gliderindia.in/ 9073671512

Teachers/ Professors

WANTED QUALIFIED & Experienced Science and Mathematics TEACHERS for Highschool. 'SOWBHAGYA SCHOOL' Kavalbyrasandra, R.T.Nagar, Bangalore-32 Contact: 9886179210 sowbhagyaschool@gmail.com

Wanted

PATHI SILKS Hiring out new retail showroom on Richmond Road Sales Executive (for sarees) age group 18 to 40 with minimum 3-4 years in saree retail industry, Benifits Salary, commission. Walk-in Interview between 11am to 3pm. address: 9/1, Classiccourt, Richmond Road, Bangalore-560025.

EDUCATIONAL

Admission

ONE SITTING: B.TECH/ M.TECH/MBA/MCA/M.Sc/ BBA/BCA/B.Com/BA/B.Ed/ LLB/B.Pharm/ D.Pharm. All courses Recognised by UGC/Govt of India. Last Date: 10-07-2021. Asha Institute: Bangalore- 560085. Ph: 9448460103/ 7093438248.

PUBLIC NOTICE

PUBLIC NOTICE

Notice regarding the proposed mortgage

"We hereby give public notice that we propose to accept the property comprised in Survey No.149/1 & 149/2 in Bommasandra Village, Anekal Taluk, Bangalore District, having an extend of 1200 sq.ft. belonging to Mr. R. Murugeshan, S/o. Mr. Rangaswamy residing at Dharmaraju Nagar, Peddamulapalli, Kuppam Road, Krishnagiri, Tamil Nadu as security by way of mortgage by deposit of title deeds for the purpose of securing a loan. It is represented to us by him/her/them that the original of their title deed(s) registered as Document No. 9569/04-05 dated 19-08-2004 of Mr. R. Murugeshan, S/o. Rangaswamy, Sub Registrar's Anekal Office has been lost due to shifting the House. Therefore, we propose to accept the certified copy of the said document in respect of the above property for deposit. If anyone has any claim whatsoever over the said property, he may prefer the same before us with in 7 days, from the date of this publication failing which it will be taken that theere no subsisting encumbrance on the said property."

Dated 10-07-2021 Anilkumar S
Manager & Branch Head
Federal Bank Ltd.
Balagaranahalli Branch, Anekal Taluk
Tel: 76 76 22 08 06

BUSINESS

Business Offers

Distributors

DISTRIBUTORS REQUIRED for HEALTHCARE/ MEDICAL PRODUCTS. Contact in confidence: glider.bangalore@gmail.com, www.gliderindia.in/ 9073671512

Finance

NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

WEEKEND CORNER

LÉON FERTILIZER PVT. LTD.
Marketing of 100% Water Soluble mixture fertilizers
As per the provisions of S.O.2900(E) dated 24th October, 2015 issued By ministry of agriculture and farmers welfare, New Delhi, we intend To market the following100% Water Soluble mixture of Fertilizers In the districts Kolar, Chikkaballapur, Bengalore Rural, Tumkur, Mysore, Belgam, and Vijayapura of Karnataka state.
N : P : K
1) 19:19:19 2) 13:40:13 3) 0 :0:50
LEON FERTILIZER PVT.LTD,
No. 284, 3rd main, 11th cross, Kirloskar layout, Banavara main road, Bangalore - 560073. Karnataka.

General

WANTEDAPPARELS Jacket Factory upto 100Machines preferably Peenya Blore, Budget 50lakh to 100lakh, Whatsapp- 6362844475, Contact- knerajeev@gmail.com

PERSONAL

Announcements

I,PADMA GOVINDA Rao, W/o M.Govinda Rao,residing at-Flat No.B-101, Block-B,Grand Gandharva apartments 1st-Main, Kenchanahalli, R.R.Nagar, Bangalore-560098, declare that N.S.Padma and Padma Govinda Rao belongs to me only i.e Padma Govinda Rao, sworn-before Notary N.Sandhya vide-affidavit dated.07-07-2021, Bangalore.

Change of Name

I, JAIPREET SINGH R/@ No.70, 6th Cross, Ashirwad Colony, Horamavu, Bengaluru 560043 have changed my name to JAIPREET SINGH CHAMAN vide affidavit dated 22-06-2021 before notary Lakshminarayana Bengaluru

I, SARALA POOVAIAH alias SARALA DAS alias SARALA DASS residing at No.S1, 3rd Floor, Gold Classic Apartment, near ITC Factory Lioyds Road, Frazer Town, Bangalore North-560005 have changed my name to SARALA DASS vide affidavit dated 11/09/2020 sworn before notary K.C.Achaiah, Bangalore

I, SUGANYA D/O late Rev, R.M Jayapaul Daniel, Residing at no. 231/1, LJKES Campus, Chikkabanavara Post, Abbigere, Bangalore-560090, changed my name to J. Sylvania Suganya Daniel vide original affidavit dtd 07/07/2021 before smt. A Manjula. Notary for all purpose

I, T. BABU S/o. Narasaiah R/a#33, 2nd Cross, Hanumanthappa Colony, Sheshadripuram, Bangalore-560020 Have Changed My Name to T. NARASIMHA RAO (DOB: 10.07.1979) Vide Affidavit Dated: 08.07.2021 Before Notary R.Basavaraj, Bengaluru-94.

I, DILIP KUMAR S/o Devram Biswakarma resident at No.20, 6th cross, Near Sultanpalya Bus stop, Sultanpalya, R.T. Nagar Post, Bengaluru- 560032 have changed my name to DILIP KUMAR B K Vide Affidavit Dated 08-07-2021 before SIVAKUMARA.M.N, Notary

I, SIDDAPPA MAYUR, S/o. Kajappa Mayur Residing at Moratagi,Jai Bheem Nagar, Bijapur-586123 have changed my name to SIDDARTH MAYUR videaffidavit 09-07-2021 sworn before notary: Kundan Babu M, Bangalore

I, JAIDEEP SINGH R/@ No.70, 6th Cross, Ashirwad Colony, Horamavu, Bengaluru 560043 have changed my name to JAIDEEP SINGH CHAMAN vide affidavit dated 22-06-2021 before notary Lakshminarayana Bengaluru

EDUCATION SPECIAL
We are coming out with special offer for Admission Notice, Education Success Congratulation Ads
For details contact:
Jerry : 9731810277
Vishal : 9845114560
Tanveer: 9886213331
E-mail: dhclassifieds@deccanherald.co.in

BOOK YOUR CLASSIFIEDS ONLINE
5 EASY STEP TO BOOK YOUR CLASSIFIEDS ADS ONLINE
5 Easy steps to book your ads
1 LOG INTO WWW.DHCLASSIFIEDS.COM
2 CHOOSE THE CATEGORY
3 CHOOSE THE AD DATES
4 COMPOSE THE MATTER
5 CONFIRM AND PAY
REAL ESTATE · JOB · NAME CHANGE · EDUCATION · HEALTH · MATRI · AUTO · ASTRO
condition apply*
WWW.DHCLASSIFIEDS.COM
FOR MORE INFORMATION
CONTACT 9880856233 | 9886213331
Email: santhoshkumar@deccanherald.co.in
DH DECCAN HERALD · ಪ್ರಜಾವಾಣಿ ಕ್ಲಾಸಿಫೈಡ್ಸ್

ಮುಗಿಯದ 110 ಹಳ್ಳಿ ಯೋಜನೆ ಕಾಮಗಾರಿ; ತಪ್ಪದ ನಿವಾಸಿಗಳ ಗೋಳು

ಮುಖ್ಯ ರಸ್ತೆ ಗರಿಗರಿ, ಅಡ್ಡರಸ್ತೆ ಕಿರಿಕಿರಿ

• ವಿಜಯಕುಮಾರ್ ಎಸ್.ಕೆ.



ಕಲ್ಕೆರೆ ಪಾಪಣ್ಣ ಬಡಾವಣೆ ರಸ್ತೆಯಲ್ಲಿ ಒಳಚರಂಡಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು (ಎಡ ಚಿತ್ರ), ಕಲ್ಕೆರೆ ಗೋಪಾಲಪ್ಪ ಲೇಔಟ್‌ನಲ್ಲಿ ಒಳಚರಂಡಿ ಕಾಮಗಾರಿ ಮುಗಿಸಿ ರಸ್ತೆ ಅಭಿವೃದ್ಧಿಪಡಿಸಿರುವುದು (ಬಲ ಚಿತ್ರ) ಪ್ರಜಾವಾಣಿ ಚಿತ್ರಗಳು/ಎಂ.ಎಸ್.ಮಂಜುನಾಥ್

ಬೆಂಗಳೂರು: ಮುಖ್ಯ ರಸ್ತೆಗಳು ಹೊಸದಾಗಿ ಡಾಂಬರು ಕಂಡು ಗರಿಗರಿಯಾಗಿದ್ದರೆ, ಅಡ್ಡರಸ್ತೆಗಳಲ್ಲಿ ಇದ್ದ ಡಾಂಬರು ಕೂಡ ಮಾಯವಾಗಿದೆ. ಗುಂಡಿ ಬಿದ್ದು ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ಪರದಾಟ...

ಇದು ಕೆ.ಆರ್.ಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 11 ಹಳ್ಳಿಗಳ ಸ್ಥಿತಿ. 110 ಹಳ್ಳಿ ಯೋಜನೆಯಡಿ ಒಳಚರಂಡಿ ಮತ್ತು ಕಾವೇರಿ ನೀರಿನ ಸಂಪರ್ಕ ಕಲ್ಪಿಸುವ ಕಾಮಗಾರಿ ಬಹುತೇಕ ಪೂರ್ಣಗೊಳ್ಳುವ ಹಂತಕ್ಕೆ ಬಂದಿದೆ. ಕಾವೇರಿ ನೀರಿನ ಸಂಪರ್ಕ ಕಲ್ಪಿಸುವ ಕೆಲಸ ಕೆಲವೆಡೆ ನಡೆಯುತ್ತಿದೆ. ರಸ್ತೆ ಮರು ನಿರ್ಮಾಣ ಕಾಮಗಾರಿ ಸದ್ಯ ಬಾಕಿ ಇದೆ.

ಕಲ್ಕೆರೆ, ಹೊರಮಾವು, ಅಗರ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ. 110 ಹಳ್ಳಿ ಯೋಜನೆ ಅನುದಾನ ಬಿಡುಗಡೆಗೂ ಮುನ್ನವೇ ಬೇರೆ-ಬೇರೆ ಅನುದಾನದಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ಆದರೆ, ಬಡಾವಣೆಗೆ ಸಂಪರ್ಕ ಕಲ್ಪಿಸುವ ಕಿರಿದಾದ ಮತ್ತು ಅಡ್ಡರಸ್ತೆಗಳ ಸ್ಥಿತಿ ಸಂಚಾರಕ್ಕೆ ಯೋಗ್ಯವಿಲ್ಲದೆ ಜನರ ಪರದಾಟ ಹೇಳ ತೀರದಾಗಿದೆ.

ಒಳಚರಂಡಿ ಕಾಮಗಾರಿ ಮುಗಿದಿರುವುದಕ್ಕೆ ಸಾಕ್ಷಿ ಎಂಬಂತೆ ಮ್ಯಾನ್‌ಹೋಲ್‌ಗಳು ರಸ್ತೆಗಳಲ್ಲಿ ಎದ್ದು ನಿಂತಿವೆ. ವರ್ಷಗಟ್ಟಲೆಯಿಂದ ಕಾಮಗಾರಿ ನಡೆಯುತ್ತಿರುವ ಕಾರಣ ಸಂಚಾರ ಮಾಡಲು ಸಾಧ್ಯವಾಗದೆ ಜನ ರೋಸಿ ಹೋಗಿದ್ದಾರೆ. 'ಕಾಮಗಾರಿ ಯಾವಾಗ ಮುಗಿಯುವುದೋ ಗೊತ್ತಿಲ್ಲ. ಇನ್ನೇನು ಕೆಲಸ ಮುಗಿಯಿತು ಎಂದುಕೊಂಡರೆ ಜಲ ಮಂಡಳಿಯವರು ಮತ್ತೆ ಮತ್ತೆ ಅಗೆದು ಹಾಳು ಮಾಡುತ್ತಿದ್ದಾರೆ' ಎಂದು ಕಲ್ಕೆರೆ ಪಾಪಣ್ಣ ಬಡಾವಣೆ ನಿವಾಸಿಗಳು ಬೇಸರ ವ್ಯಕ್ತಪಡಿಸಿದರು.

ಕಲ್ಕೆರೆ ಮತ್ತು ಕೆ. ಚನ್ನಸಂದ್ರದಲ್ಲೂ ಮುಖ್ಯ ರಸ್ತೆಗೆ ಹೊಸದಾಗಿ ಡಾಂಬರು ಹಾಕಲಾಗಿದೆ. ಆ ರಸ್ತೆ ಮುಂದುವರಿದು ಬಿಳಿಶಿವಾಲೆ, ಬೈರತಿ ಮಾರ್ಗದಲ್ಲಿ ಹೆಣ್ಣೂರು ಮುಖ್ಯ ರಸ್ತೆಯನ್ನು ಸಂಪರ್ಕಿಸುತ್ತದೆ. ಕೆ. ಚನ್ನಸಂದ್ರ ದಾಟಿದ ಕೂಡಲೇ ಮುಖ್ಯ ರಸ್ತೆ ಇದೆಯೋ ಇಲ್ಲವೋ ಎಂಬಂತೆ ಭಾಸವಾಗುತ್ತಿದೆ. ಕೆರೆಯ ಏರಿಯ ಎರಡೂ ಬದಿಯಲ್ಲಿ ಕಸದ ರಾಶಿ, ಸಂಚರಿಸಲು ಸಾಧ್ಯವೇ ಆಗದಷ್ಟು ಗುಂಡಿ ಬಿದ್ದ ರಸ್ತೆ ಇದೆ. ಕೆ.ಆರ್.ಪುರ ಕ್ಷೇತ್ರ ಕೆ.ಚನ್ನಸಂದ್ರಕ್ಕೆ ಮುಕ್ತಾಯವಾಗುವ ಕಾರಣ ಮುಂದಿನ ಊರುಗಳ ರಸ್ತೆ ಅಭಿವೃದ್ಧಿ ಕಂಡಿಲ್ಲ.

'ಕ್ಷೇತ್ರದ ಶಾಸಕ ಬೈರತಿ ಬಸವರಾಜ್ ಅವರು ಪ್ರಭಾವಿ ಸಚಿವರಾಗಿರುವ ಕಾರಣ ರಸ್ತೆ ಮರು ನಿರ್ಮಾಣಕ್ಕೆ ₹190 ಕೋಟಿ ಅನುದಾನ ತಂದಿದ್ದಾರೆ. ಕೆಲವು ತಿಂಗಳುಗಳಲ್ಲೇ ಬಹುತೇಕ ಎಲ್ಲ ಸಣ್ಣಪುಟ್ಟ ರಸ್ತೆಗಳೂ ಡಾಂಬರು ಕಾಣುವ ಸಾಧ್ಯತೆ ಇದೆ' ಎನ್ನುತ್ತಾರೆ ಸ್ಥಳೀಯರು.

110 ಹಳ್ಳಿ

ಸಿಗದ ಅನುದಾನ ಬಿಬಿಎಂಪಿಗೆ ಅವಮಾನ

ಮುಖ್ಯ ರಸ್ತೆಗಳಲ್ಲೂ ಒಳಚರಂಡಿ ಕಾಮಗಾರಿ ನಿರ್ವಹಿಸಲಾಗಿದೆ. ಅಗೆದಿದ್ದ ರಸ್ತೆಗಳನ್ನು ಈಗ ಮರು ನಿರ್ಮಾಣ ಮಾಡಲಾಗುತ್ತಿದೆ. ಇದ್ದ ಕಷ್ಟ ತಪ್ಪಿದೆ

ನಾಗರಾಜ್, ಕಲ್ಕೆರೆ ನಿವಾಸಿ

'3ಂಗಳಲ್ಲಿ ಕಾಮಗಾರಿ ಪೂರ್ಣ'

'ರಸ್ತೆಗಳ ಮರು ನಿರ್ಮಾಣಕ್ಕೆ ಸರ್ಕಾರದಿಂದ ₹190 ಕೋಟಿ ಅನುದಾನ ದೊರೆತಿದೆ. ಸದ್ಯ ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'11 ಹಳ್ಳಿಗಳ ವ್ಯಾಪ್ತಿಯ ಮುಖ್ಯ ರಸ್ತೆಗಳೆಲ್ಲವೂ ಅಭಿವೃದ್ಧಿಯಾಗಿವೆ. ಉಳಿದಿರುವ ಎಲ್ಲ ಅಡ್ಡರಸ್ತೆಗಳ ಮರು ಡಾಂಬರೀಕರಣಕ್ಕೆ ಯೋಜನೆ ರೂಪಿಸಲಾಗಿದೆ. ಕಾಮಗಾರಿ ಆರಂಭವಾದರೆ ಒಂದು ತಿಂಗಳಲ್ಲಿ ಎಲ್ಲ ರಸ್ತೆಗಳು ಸಂಚಾರ ಯೋಗ್ಯವಾಗಲಿವೆ' ಎಂದು ತಿಳಿಸಿದರು.

110 ಹಳ್ಳಿ ಯೋಜನೆ ಕಾಮಗಾರಿ ಕುರಿತು ಸಚಿವ ಬೈರತಿ ಬಸವರಾಜ್ ಅವರ ಪ್ರತಿಕ್ರಿಯೆ ಪಡೆಯಲು ಪ್ರಯತ್ನಿಸಲಾಯಿತು. ಆದರೆ, ಅವರು ಸಂಪರ್ಕಕ್ಕೆ ಸಿಗಲಿಲ್ಲ.

ಯಾವ್ಯಾವ ಹಳ್ಳಿಯಲ್ಲಿ ಕಾಮಗಾರಿ

- ನಾಗರೇಶ್ವರ ನಾಗೇನಹಳ್ಳಿ,
- ಕೊತ್ತನೂರು
- ಕೆ.ನಾರಾಯಣಪುರ
- ಗೆದ್ದಲಹಳ್ಳಿ
- ಕ್ಯಾಲಸನಹಳ್ಳಿ
- ಅಗರ
- ಬಾಬುಸಪಾಳ್ಯ
- ಹೊರಮಾವು
- ಹೊಯ್ಸಳನಗರ
- ಕಲ್ಕೆರೆ
- ಕೆ. ಚನ್ನಸಂದ್ರ

ಟ್ವಿಟರ್ ಎಂ.ಡಿ ಅರ್ಜಿ: ಆದೇಶ ಕಾಯ್ದಿರಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟ್ವಿಟರ್ ಇಂಡಿಯಾ ವ್ಯವಸ್ಥಾಪಕ ನಿರ್ದೇಶಕ ಮನಿಶ್ ಮಹೇಶ್ವರಿ ಸಲ್ಲಿಸಿದ್ದ ಅರ್ಜಿ ಸಂಬಂಧ ಆದೇಶವನ್ನು ಹೈಕೋರ್ಟ್ ಕಾಯ್ದಿರಿಸಿದೆ.

ವೃದ್ಧನ ಮೇಲಿನ ಹಲ್ಲೆಗೆ ಸಂಬಂಧಿಸಿದ ವಿಡಿಯೊ ವೈರಲ್ ಆದ ಪ್ರಕರಣದಲ್ಲಿ ಉತ್ತರ ಪ್ರದೇಶದ ಗಾಜಿಯಾಬಾದ್ ಜಿಲ್ಲೆಯ ಲೋನಿ ಬಾರ್ಡರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸಿಆರ್‌ಪಿಸಿ ಸೆಕ್ಷನ್ 41ಎ ಅಡಿಯಲ್ಲಿ ಪೊಲೀಸರು ನೀಡಿದ್ದ ನೋಟಿಸ್ ಪ್ರಶ್ನಿಸಿ ಮನಿಶ್ ಮಹೇಶ್ವರಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

ಯಾವುದೇ ಬಲವಂತದ ಕ್ರಮಗಳನ್ನು ಕೈಗೊಳ್ಳದಂತೆ ಜೂನ್ 24ರಂದು ಮಧ್ಯಂತರ ಆದೇಶ ನೀಡಿದ್ದ ನ್ಯಾಯಮೂರ್ತಿ ಜಿ.ನರೇಂದ್ರ ಅವರಿದ್ದ ಪೀಠ, ಅಗತ್ಯವಿದ್ದರೆ ವರ್ಚುವಲ್ ಮಾದರಿಯಲ್ಲಿ ವಿಚಾರಣೆ ನಡೆಸಬಹುದು ಎಂದು ಹೇಳಿತ್ತು.

'ಆದರೂ, ಉತ್ತರ ಪ್ರದೇಶ ಪೊಲೀಸರು ವಿಚಾರಣೆ ನಡೆಸಿಲ್ಲ' ಎಂದು ಮನಿಶ್ ಪರ ವಕೀಲ ಸಿ.ವಿ. ನಾಗೇಶ್ ತಿಳಿಸಿದರು. ವಾದ-ಪ್ರತಿವಾದ ಆಲಿಸಿದ ಪೀಠ ಆದೇಶ ಕಾಯ್ದಿರಿಸಿ, ಮಂಗಳವಾರ ಪ್ರಕಟಿಸುವುದಾಗಿ ತಿಳಿಸಿತು.

33 ಸಚಿವರ ವಿರುದ್ಧ ಕ್ರಿಮಿನಲ್ ಪ್ರಕರಣ: ಎಡಿಆರ್ ವರದಿ

ನವದೆಹಲಿ (ಪಿಟಿಐ): ಕೇಂದ್ರ ಸಂಪುಟದ 78 ಸಚಿವರ ಪೈಕಿ 33 ಜನ ಸಚಿವರು (ಶೇ 42) ತಮ್ಮ ವಿರುದ್ಧ ಕ್ರಿಮಿನಲ್ ಪ್ರಕರಣಗಳಿರುವುದಾಗಿ ಘೋಷಿಸಿದ್ದಾರೆ. ಇವರ ಪೈಕಿ ನಾಲ್ವರ ವಿರುದ್ಧ ಕೊಲೆ ಯತ್ನ ಆರೋಪಕ್ಕೆ ಸಂಬಂಧಿಸಿದ ಪ್ರಕರಣಗಳಿವೆ ಎಂದು ಮತದಾನ ಹಕ್ಕುಗಳ ಗುಂಪು ಎಡಿಆರ್‌ನ ವರದಿ ಹೇಳಿದೆ.

ಬುಧವಾರ ಪುನರ್‌ರಚನೆಗೊಂಡ ಸಂಪುಟದಲ್ಲಿ ನೂತನ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದವರು ಚುನಾವಣೆ ಸಂದರ್ಭದಲ್ಲಿ ಸಲ್ಲಿಸಿದ್ದ ಅಫಿಡವಿಟ್‌ಗಳಲ್ಲಿನ ವಿವರಗಳನ್ನು ಆಧರಿಸಿ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಈ ವರದಿಯನ್ನು ಸಿದ್ಧಪಡಿಸಿದೆ.

ಸಂಪುಟದಲ್ಲಿನ ಅತಿ ಕಿರಿಯ ಸಚಿವ ಎನಿಸಿಕೊಂಡಿರುವ ನಿಸಿತ್ ಪ್ರಾಮಾಣಿಕ್ ತಮ್ಮ ವಿರುದ್ಧ ಕೊಲೆ ಯತ್ನ ಆರೋಪಕ್ಕೆ ಸಂಬಂಧಿಸಿ ಪ್ರಕರಣ ದಾಖಲಾಗಿರುವುದಾಗಿ ಘೋಷಿಸಿದ್ದಾರೆ. ಅವರು ಪಶ್ಚಿಮ ಬಂಗಾಳದ ಕೂಚ್‌ಬಿಹಾರ್ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ.

ಸಚಿವರಾದ ಜಾನ್ ಬರ್ಲಾ, ಪಂಕಜ್ ಚೌಧರಿ ಹಾಗೂ ವಿ.ಮುರಳೀಧರನ್ ಅವರು ಸಹ ತಮ್ಮ ವಿರುದ್ಧ ಕೊಲೆ ಯತ್ನ ಆರೋಪಕ್ಕೆ ಸಂಬಂಧಿಸಿ ಪ್ರಕರಣ ದಾಖಲಾಗಿವೆ ಎಂದು ಘೋಷಿಸಿಕೊಂಡಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ. 70 ಸಚಿವರು (ಶೇ 90) ಕೋಟ್ಯಾಧೀಶರಾಗಿದ್ದಾರೆ. ಅವರ ಸರಾಸರಿ ಆಸ್ತಿ ಮೌಲ್ಯ ₹ 16.24 ಕೋಟಿ ಎಂದು ವಿವರಿಸಲಾಗಿದೆ.

ಬಸ್ ಪಾಸ್ ರಿಯಾಯಿತಿ ಹಣ ಸರ್ಕಾರವೇ ಭರಿಸಲಿ: ಎಐಡಿಎಸ್‌ಒ

ಬೆಂಗಳೂರು: 'ಕೋವಿಡ್‌ನಿಂದಾಗಿ ಜನರ ಬದುಕು ದುಸ್ತರವಾಗಿದೆ. ಅನೇಕರು ಕೆಲಸ ಕಳೆದುಕೊಂಡಿದ್ದು ಅವರ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ. ಹೀಗಾಗಿ ವಿದ್ಯಾರ್ಥಿಗಳಿಗೆ ನೀಡುವ ಬಸ್ ಪಾಸ್‌ನ ರಿಯಾಯಿತಿ ವೆಚ್ಚವನ್ನು ಸರ್ಕಾರವೇ ಭರಿಸಬೇಕು' ಎಂದು ಅಖಿಲ ಭಾರತ ಡೆಮಾಕ್ರಟಿಕ್ ವಿದ್ಯಾರ್ಥಿಗಳ ಸಂಸ್ಥೆಯ (ಎಐಡಿಎಸ್‌ಒ) ರಾಜ್ಯ ಸಮಿತಿ ಒತ್ತಾಯಿಸಿದೆ.

ರಾಜ್ಯದಲ್ಲಿ ಸೋಂಕಿಗೆ ಸಾವಿಗೀಡಾದವರ ಸಂಖ್ಯೆ 303ಕ್ಕೆ ಏರಿಕೆ; ರಾಜ್ಯದ 25 ಜಿಲ್ಲೆಗಳಲ್ಲಿ ಮರಣ ಪ್ರಕರಣಗಳು ವರದಿ

ಕಪ್ಪು ಶಿಲೀಂಧ್ರ: ಮಕ್ಕಳಲ್ಲಿ ಮೊದಲ ಮರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಪ್ಪು ಶಿಲೀಂಧ್ರ ಸೋಂಕಿಗೆ ಒಳಗಾದವರಲ್ಲಿ ಚಿತ್ರದುರ್ಗದ 11 ವರ್ಷದ ಬಾಲಕ ಮೃತಪಟ್ಟಿದ್ದಾನೆ. ಮಕ್ಕಳಲ್ಲಿ ವರದಿಯಾದ ರಾಜ್ಯದ ಮೊದಲ ಮರಣ ಪ್ರಕರಣ ಇದಾಗಿದೆ.

ಕಪ್ಪು ಶಿಲೀಂಧ್ರ ಸೋಂಕು ಕಾಣಿಸಿಕೊಂಡಿದ್ದ ಕಾರಣ ಬಾಲಕ ಕಳೆದ ಮೇ 30ರಂದು ಇಲ್ಲಿನ ಬೌರಿಂಗ್ ಆಸ್ಪತ್ರೆಗೆ ದಾಖಲಾಗಿದ್ದ. ಕೋವಿಡ್ ಪರೀಕ್ಷೆ ನಡೆಸಿದಾಗ ಕೊರೊನಾ ಸೋಂಕು ತಗಲಿರುವುದು ಕೂಡ ದೃಢಪಟ್ಟಿತ್ತು.

ಮಧುಮೇಹ ಮತ್ತು ಬಹು ಅಂಗಾಂಗ ಉರಿಯೂತ ಸಮಸ್ಯೆಯನ್ನೂ (ಮೆಸ್ಸಿ) ಬಾಲಕ ಎದುರಿಸುತ್ತಿದ್ದ. ಒಂದು ತಿಂಗಳಿಗೂ ಅಧಿಕ ಅವಧಿ ಆಸ್ಪತ್ರೆಯಲ್ಲಿದ್ದ ಬಾಲಕ, ಚಿಕಿತ್ಸೆಗೆ ಸ್ಪಂದಿಸದೆಯೇ ಜು. 6ರಂದು ಮೃತಪಟ್ಟಿದ್ದಾನೆ.

'ಶಿಲೀಂಧ್ರ ಸೋಂಕು ಬಾಲಕನ ಮಿದುಳಿಗೆ ಹರಡಬಾರದು ಎಂಬ ಕಾರಣಕ್ಕೆ ನಿಮ್ಹಾನ್ಸ್‌ಗೆ ಕಳುಹಿಸಿ, ಅಲ್ಲಿ ಕೂಡ ಚಿಕಿತ್ಸೆ ಕೊಡಿಸಲಾಗಿತ್ತು. ಅದಾಗಿಯೂ ಯಾವುದೇ ಪ್ರಯೋಜನ ಆಗಲಿಲ್ಲ. ಕೋವಿಡ್ ಹಾಗೂ ಕೋವಿಡೇತರ ಅನಾರೋಗ್ಯ ಸಮಸ್ಯೆಗಳು ಕೂಡ ಇರುವ ಕಾರಣ ಬಾಲಕನನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. 18 ವರ್ಷದೊಳಗಿನವರಲ್ಲಿ ವರದಿಯಾದ ಮೊದಲ ಮರಣ ಪ್ರಕರಣ ಇದಾಗಿದೆ' ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

303 ಮಂದಿ ಮರಣ: ರಾಜ್ಯದಲ್ಲಿ ಕಪ್ಪು ಶಿಲೀಂಧ್ರ ಸೋಂಕಿಗೆ ಮೃತಪಟ್ಟವರ ಸಂಖ್ಯೆ 303ಕ್ಕೆ ಏರಿಕೆ ಕಂಡಿದೆ. ರಾಜ್ಯದ 25 ಜಿಲ್ಲೆಗಳಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 104, ಕಲಬುರ್ಗಿಯಲ್ಲಿ 23, ಬಳ್ಳಾರಿಯಲ್ಲಿ 21, ದಕ್ಷಿಣ ಕನ್ನಡದಲ್ಲಿ 20, ದಾವಣಗೆರೆಯಲ್ಲಿ 19, ಮೈಸೂರಿನಲ್ಲಿ 17, ಧಾರವಾಡದಲ್ಲಿ 16, ಶಿವಮೊಗ್ಗದಲ್ಲಿ 14 ಹಾಗೂ ಬಾಗಲಕೋಟೆಯಲ್ಲಿ 11 ಮಂದಿ ಸಾವಿಗೀಡಾಗಿದ್ದಾರೆ. 16 ಜಿಲ್ಲೆಗಳಲ್ಲಿ ಈ ಸಂಖ್ಯೆ 10ಕ್ಕಿಂತ ಕಡಿಮೆಯಿದೆ.

3,491 ಮಂದಿಗೆ ಸೋಂಕು

ರಾಜ್ಯದಲ್ಲಿ ಕಪ್ಪು ಶಿಲೀಂಧ್ರ ಸೋಂಕಿಗೆ ಒಳಗಾದವರ ಸಂಖ್ಯೆ 3,491ಕ್ಕೆ ಏರಿಕೆಯಾಗಿದೆ. ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆ ಹಾಗೂ ಅನಿಯಂತ್ರಿತ ಸ್ಟೆರಾಯ್ಡ್ ಬಳಕೆಗೆ ಕಡಿವಾಣದಿಂದಾಗಿ ಶಿಲೀಂಧ್ರ ಸೊಂಕು ಹೊಸ ಪ್ರಕರಣಗಳ ಸಂಖ್ಯೆ ಕೂಡ ಕೆಲ ದಿನಗಳಿಂದ ಇಳಿಕೆ ಕಂಡಿದೆ. ಬೆಂಗಳೂರಿನಲ್ಲಿ ಈವರೆಗೆ 1,109 ಮಂದಿ ಸೋಂಕಿತರಾಗಿದ್ದಾರೆ.

ಧಾರವಾಡದಲ್ಲಿ 279, ವಿಜಯಪುರದಲ್ಲಿ 208, ಕಲಬುರ್ಗಿಯಲ್ಲಿ 196, ಬೆಳಗಾವಿಯಲ್ಲಿ 159, ಚಿತ್ರದುರ್ಗದಲ್ಲಿ 143, ಬಳ್ಳಾರಿಯಲ್ಲಿ 138, ಮೈಸೂರಿನಲ್ಲಿ 128, ಬಾಗಲಕೋಟೆಯಲ್ಲಿ 126, ರಾಯಚೂರಿನಲ್ಲಿ 125, ದಾವಣಗೆರೆಯಲ್ಲಿ 117, ಕೋಲಾರದಲ್ಲಿ 107 ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಈ ಪ್ರಕರಣಗಳ ಸಂಖ್ಯೆ ನೂರಕ್ಕಿಂತ ಕಡಿಮೆಯಿದೆ.

ಅನಾಥ ಮಕ್ಕಳ ಪೋಷಣೆಗೆ ವಿಶೇಷ ಯೋಜನೆ: ಜೊಲ್ಲೆ

ಶಶಿಕಲಾ ಜೊಲ್ಲೆ

ಬೆಂಗಳೂರು: ಕೋವಿಡ್‌ನಿಂದ ತಂದೆ, ತಾಯಿಯನ್ನು ಕಳೆದುಕೊಂಡು ಅನಾಥರಾಗಿರುವ ಮಕ್ಕಳ ಪೋಷಣೆಗೆ ವಿಶೇಷ ಯೋಜನೆಯೊಂದನ್ನು ರೂಪಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದರು.

ಕೊರೊನಾ ವೈರಾಣು ಸೋಂಕಿನ ಮೂರನೇ ಅಲೆ ತಡೆಯುವುದು ಮತ್ತು ಅನಾಥ ಮಕ್ಕಳ ಪೋಷಣೆ ಕುರಿತು ಶುಕ್ರವಾರ ಅಧಿಕಾರಿಗಳ ಸಭೆ ನಡೆಸಿದ ಅವರು, 'ಕೋವಿಡ್‌ನಿಂದ ಅನಾಥರಾದ ಮಕ್ಕಳ ಪೋಷಣೆಯ ಹೊಣೆಗಾರಿಕೆ ನಿರ್ವಹಿಸಲು ಅನೇಕ ಮಠಾಧೀಶರು ಆಸಕ್ತಿ ವ್ಯಕ್ತಪಡಿಸಿದ್ದಾರೆ. ಯಾರಿಂದಲೂ ನೆರವು ದೊರೆಯದಿದ್ದರೆ ಸರ್ಕಾರವೇ ಸಂಪೂರ್ಣ ಹೊಣೆ ಹೊತ್ತುಕೊಳ್ಳಲಿದೆ. ಅದಕ್ಕಾಗಿ ಯೋಜನೆ ಜಾರಿಗೊಳಿಸಲಾಗುವುದು' ಎಂದರು.

ಅನಾಥ ಮಕ್ಕಳ ಪೋಷಣೆಗೆ ಪ್ರತಿ ತಿಂಗಳು ₹ 3,500 ಸಹಾಯಧನ ನೀಡುವ ಯೋಜನೆ ಜಾರಿಯಲ್ಲಿದೆ. ಈ ಮಕ್ಕಳ ಶಿಕ್ಷಣಕ್ಕೂ ಸರ್ಕಾರವೇ ವ್ಯವಸ್ಥೆ ಮಾಡಲಿದೆ. ಅವರಿಗೆ ಅಗತ್ಯವಿರುವ ಸೌಲಭ್ಯಗಳನ್ನು ಕಲ್ಪಿಸಲಾಗುವುದು ಎಂದು ತಿಳಿಸಿದರು.

ಕೋವಿಡ್ ಮೂರನೇ ಅಲೆ ತಡೆಯುವುದಕ್ಕೆ ಸಿದ್ಧತೆಗಳನ್ನು ಆರಂಭಿಸಬೇಕು. ಪ್ರತಿ ಜಿಲ್ಲೆಯಲ್ಲೂ ವಿಶೇಷ ತಂಡಗಳನ್ನು ರಚಿಸಿ, ಕಾರ್ಯಪ್ರವೃತ್ತರಾಗಬೇಕು. ಮಕ್ಕಳನ್ನು ಕೋವಿಡ್ ಸೋಂಕಿನ ಅಪಾಯದಿಂದ ಪಾರುಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಿದರು.



ದಿಶಾ ಭಾರತ್ ಹಮ್ಮಿಕೊಂಡಿರುವ 'ನನ್ನ ಭಾರತ' ಅಭಿಯಾನದ ಲಾಂಛನವನ್ನು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಕೆ.ಆರ್. ವೇಣುಗೋಪಾಲ್, ನೃಪತುಂಗ ವಿಶ್ವವಿದ್ಯಾಲಯದ ಕುಲಪತಿ ಶ್ರೀನಿವಾಸ್ ಬಳ್ಳಿ, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಕುಲಪತಿ ಎಲ್. ಗೋಮತಿದೇವಿ, ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಕುಲಪತಿ ಜಯಕರ ಶೆಟ್ಟಿ, ಬೆಂಗಳೂರು ನಗರ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಪ್ರೊ. ನರಸಿಂಹ ಮೂರ್ತಿ, ದಿಶಾ ಭಾರತ್ ಅಧ್ಯಕ್ಷ ಎನ್.ವಿ. ರಘುರಾಮ್ ಹಾಗೂ ದಿಶಾ ಭಾರತ್ ಸಂಸ್ಥಾಪಕಿ ರೇಖಾ ರಾಮಚಂದ್ರನ್ ಅನಾವರಣ ಮಾಡಿದರು.

'ನನ್ನ ಭಾರತ' ಆನ್‌ಲೈನ್ ಅಭಿಯಾನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿಶಾ ಭಾರತ್ ಸಂಸ್ಥೆಯು 75ನೇ ಸ್ವಾತಂತ್ರ್ಯೋತ್ಸವ ಪ್ರಯುಕ್ತ ಹಮ್ಮಿಕೊಂಡಿಯುವ 15 ದಿನಗಳ ರಾಷ್ಟ್ರಮಟ್ಟದ 'ನನ್ನ ಭಾರತ' (ಮೈ ಭಾರತ್) ಎಂಬ ಆನ್‌ಲೈನ್ ಅಭಿಯಾನಕ್ಕೆ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಶುಕ್ರವಾರ ಚಾಲನೆ ನೀಡಿದರು.

ಈ ಅಭಿಯಾನವು ಆ.1ರಿಂದ ಆ.15ರವರೆಗೆ ನಡೆಯಲಿದೆ. ಪೂರ್ವಭಾವಿಯಾಗಿ ವಿವಿಧ ಕ್ಷೇತ್ರದ ಗಣ್ಯರು ಸಾಮಾಜಿಕ ಜಾಲತಾಣದಲ್ಲಿ ಈ ಅಭಿಯಾನಕ್ಕೆ ಬೆಂಬಲ ಸೂಚಿಸಿ ವಿಡಿಯೊ ಹಂಚಿಕೊಳ್ಳಲಿದ್ದಾರೆ. ಅಭಿಯಾನದ ಅವಧಿಯಲ್ಲಿ ಪ್ರತಿದಿನ ಬೆಳಿಗ್ಗೆ 11ರಿಂದ ರಾಜ್ಯದ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳಿಂದ ಸ್ವಾತಂತ್ರ್ಯ ಹೋರಾಟಗಾರರ ಕುರಿತು ಕಥಾಮಾಲಿಕೆ, ರಾಷ್ಟ್ರೀಯ ವಿಚಾರಗಳ ಕುರಿತು ಭಾಷಣ, ದೇಶಭಕ್ತಿ ಗೀತೆಗಳ ಗಾಯನ, ಸಾಮಾಜಿಕ ವಿಷಯಗಳ ಕುರಿತು ಏಕಪಾತ್ರಾಭಿನಯ ಸೇರಿದಂತೆ ವಿವಿಧ ಚಟುವಟಿಕೆಗಳು ಮೂಡಿಬರಲಿವೆ.

ಸಂಜೆ 6ಕ್ಕೆ ವಿಷಯ ತಜ್ಞರಿಂದ 'ಸ್ವಾತಂತ್ರ್ಯ ಸಂಗ್ರಾಮ', 'ಸ್ವಾತಂತ್ರ್ಯೋತ್ತರ ಭಾರತ', 'ಭವಿಷ್ಯದ ಭಾರತ' ಸೇರಿದಂತೆ ವಿವಿಧ ವಿಷಯಗಳ ಕುರಿತು ಸರಣಿ ಉಪನ್ಯಾಸ ಕಾರ್ಯಕ್ರಮಗಳು ನಡೆಯಲಿವೆ. ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ, ಭಗತ್ ಸಿಂಗ್ ಕುರಿತು ನಾಟಕ, ವಾಕಥಾನ್, ಆಯ್ದ 75 ಕಾಲೇಜುಗಳಲ್ಲಿ ವಿಶೇಷ ಉಪನ್ಯಾಸ ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ.

ಈ ಎಲ್ಲಾ ಕಾರ್ಯಕ್ರಮಗಳನ್ನು 'ದಿಶಾ ಭಾರತ್' ಫೇಸ್‌ಬುಕ್ ಪುಟ www.facebook.com/DishaBharat ಮೂಲಕ ವೀಕ್ಷಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ಮಾಹಿತಿ

'ಲಸಿಕೆ: 2ನೇ ಡೋಸ್‌ನಿಂದ ಉತ್ತಮ ಫಲಿತಾಂಶ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಲಸಿಕೆ ಎರಡನೇಡೋಸ್‌ಪಡೆಯದಿದ್ದರೆರೋಗ ನಿರೋಧಕ ಶಕ್ತಿ ಅಷ್ಟಾಗಿ ವೃದ್ಧಿಯಾಗುವುದಿಲ್ಲ. ಹಾಗಾಗಿ, ಯಾವುದೇ ಕಾರಣಕ್ಕೂ ಎರಡನೇ ಡೋಸ್ ಲಸಿಕೆ ಹಾಕಿಸಿಕೊಳ್ಳದೆ ಇರಬಾರದು' ಎಂದು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಡಾ. ಅರುಂಧತಿ ಚಂದ್ರಶೇಖರ್ ಮನವಿ ಮಾಡಿಕೊಂಡಿದ್ದಾರೆ.

ಕೆಲವರು ಎರಡನೇ ಡೋಸ್ ಲಸಿಕೆ ಹಾಕಿಸಿಕೊಳ್ಳಲು ಹಿಂದೇಟು ಹಾಕುತ್ತಿರುವ ಕಾರಣ ಅವರು ಈ ಬಗ್ಗೆ ಸ್ಪಷ್ಟನೆ ನೀಡಿದ್ದಾರೆ.

'ಕೋವ್ಯಾಕ್ಸಿನ್ ಲಸಿಕೆಯನ್ನು 4 ವಾರಗಳ ಬಳಿಕ ಹಾಗೂ ಕೋವಿಶೀಲ್ಡ್ ಲಸಿಕೆಯನ್ನು 12 ವಾರಗಳ ಬಳಿಕ ಎರಡನೇ ಡೋಸ್ ಹಾಕಿಸಿಕೊಳ್ಳಬೇಕು. ಮೊದಲ ಡೋಸ್ ಪಡೆದ ಬಳಿಕ ಕೊರೊನಾ ಸೋಂಕಿತರಾಗಿದ್ದಲ್ಲಿ ಚೇತರಿಸಿಕೊಂಡ ಮೂರು ತಿಂಗಳ ಬಳಿಕ ಎರಡನೇ ಡೋಸ್ ಪಡೆದುಕೊಳ್ಳಬೇಕು. ಕೋವಿಡ್ ಲಸಿಕೆ ಪಡೆದ ಬಳಿಕ ಸೋಂಕು ತಗಲುವುದೇ ಇಲ್ಲ ಎಂದು ಹೇಳಲಾಗದು. ಆದರೆ, ಸೋಂಕಿನ ತೀವ್ರತೆ ಕಡಿಮೆ ಇರುತ್ತದೆ. ಲಸಿಕೆ ಪಡೆದ ಬಳಿಕ ಕೂಡ ಮುಂಜಾಗರೂಕತಾ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ' ಎಂದು ಹೇಳಿದ್ದಾರೆ.

ವದಂತಿಗೆ ಕಿವಿಗೊಡದಿರಿ: 'ಲಸಿಕೆಯ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುವ ವದಂತಿಗಳನ್ನು ನಂಬಬಾರದು. ಲಸಿಕೆಯು ಸುರಕ್ಷಿತವಾಗಿದೆ. ಗರ್ಭಿಣಿಯರು ಹಾಗೂ ಹಾಲುಣಿಸುವ ತಾಯಂದಿರು ಲಸಿಕೆ ಪಡೆದುಕೊಳ್ಳುವಂತೆ ಕೇಂದ್ರ ಆರೋಗ್ಯ ಸಚಿವಾಲಯ ಮಾರ್ಗಸೂಚಿ ಹೊರಡಿಸಿದೆ. ಗರ್ಭಿಣಿಯರು ಲಸಿಕೆ ಪಡೆಯುವುದರಿಂದ ಮಗುವಿನ ಮೇಲೆ ಯಾವುದೇ ಅಡ್ಡ ಪರಿಣಾಮ ಕಾಣಿಸಿಕೊಳ್ಳುವುದಿಲ್ಲ ಎಂದು ತಜ್ಞರು ಹೇಳಿದ್ದಾರೆ. ಯಾವುದೇ ಆತಂಕ ಪಡಬೇಕಾಗಿಲ್ಲ' ಎಂದು ತಿಳಿಸಿದ್ದಾರೆ.

ಅರುಂಧತಿ ಚಂದ್ರಶೇಖರ್

'ಮಕ್ಕಳ ಮೇಲೆ ಅಧ್ಯಯನ ನಡೆಯುತ್ತಿರುವ ಕಾರಣ ಅವರಿಗೆ ಲಸಿಕೆ ನೀಡುತ್ತಿಲ್ಲ. ಅಧ್ಯಯನಗಳು ಪೂರ್ಣಗೊಂಡು, ಲಸಿಕೆ ಸುರಕ್ಷಿತ ಎನ್ನುವುದು ಖಚಿತಪಟ್ಟ ಬಳಿಕ ಲಸಿಕೆ ವಿತರಿಸಲಾಗುತ್ತದೆ. 18 ವರ್ಷ ಮೇಲ್ಪಟ್ಟವರಲ್ಲಿ ದುರ್ಬಲ ವರ್ಗವದರು, ಮುಂಚೂಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವವರು, ಅಂಗವಿಕಲರು ಸೇರಿದಂತೆ ವಿವಿಧ ವರ್ಗದವರನ್ನು ಗುರುತಿಸಿ, ಆದ್ಯತೆ ನೀಡಲಾಗಿದೆ. ಜನಸಂಪರ್ಕಕ್ಕೆ ಬರುವ ಕೆಲವೊಂದು ಗುಂಪುಗಳಿಗೆ ಲಸಿಕೆ ನೀಡುತ್ತಿದ್ದೇವೆ. ಎಲ್ಲರಿಗೂ ಲಸಿಕೆ ಒದಗಿಸಲು ವ್ಯವಸ್ಥೆ ಮಾಡಲಾಗುತ್ತಿದೆ' ಎಂದು ಮಾಹಿತಿ ನೀಡಿದ್ದಾರೆ.

ನಗರದಲ್ಲಿ ಸುಧಾರಾಣಿ ಅವರು ಕೋವಿಡ್ ಲಸಿಕೆ ಎರಡನೇ ಡೋಸ್ ಪಡೆದುಕೊಂಡರು.

'ಕೋವಿಡ್: ರಕ್ಷಣೆಗೆ ಲಸಿಕೆಯೇ ಅಸ್ತ್ರ'

ಬೆಂಗಳೂರು: 'ಕೋವಿಡ್ ಕಾಯಿಲೆಯಿಂದ ರಕ್ಷಣೆ ಪಡೆಯುವುದಕ್ಕೆ ನಮ್ಮ ಮುಂದಿರುವ ಅತೀ ದೊಡ್ಡ ಅಸ್ತ್ರವೇ ಲಸಿಕೆ. ಹಾಗಾಗಿ, 18 ವರ್ಷ ಮೇಲ್ಪಟ್ಟ ಎಲ್ಲರೂ ಲಸಿಕೆ ಪಡೆದುಕೊಳ್ಳಬೇಕು' ಎಂದು ನಟಿ ಸುಧಾರಾಣಿ ತಿಳಿಸಿದರು.

ರೈನ್ ಬೋ ಮಕ್ಕಳ ಆಸ್ಪತ್ರೆಯು ನಗರದಲ್ಲಿ ಶುಕ್ರವಾರ ಆಯೋಜಿಸಿದ ಲಸಿಕಾ ಅಭಿಯಾನ ಉದ್ಘಾಟಿಸಿ ಮಾತನಾಡಿದರು.

ಬನ್ನೇರುಘಟ್ಟ ರಸ್ತೆಯ ರೈನ್ ಬೋ ಮಕ್ಕಳ ಆಸ್ಪತ್ರೆಯ ಮುಖ್ಯಸ್ಥ ನಿತ್ಯಾನಂದ, 'ಎಲ್ಲರೂ ಲಸಿಕೆ ಪಡೆದುಕೊಳ್ಳಬೇಕು ಎನ್ನುವುದು ನಮ್ಮ ಉದ್ದೇಶ. ಹೀಗಾಗಿ, ನಿರಂತರ ನಗರದ ವಿವಿಧೆಡೆ ಲಸಿಕಾ ಅಭಿಯಾನಗಳನ್ನು ಆಯೋಜಿಸುತ್ತಿದ್ದೇವೆ' ಎಂದರು.



ದೆಹಲಿಗೆ ಬಂದ ಶಾಸಕ ಯತ್ನಾಳ್

ನವದೆಹಲಿ: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಅವರ ಪುತ್ರ ಬಿ.ವೈ. ವಿಜಯೇಂದ್ರ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಶುಕ್ರವಾರ ರಾತ್ರಿ ದೆಹಲಿಗೆ ಆಗಮಿಸಿದ್ದಾರೆ. 'ನಾನು ರಾಜಕೀಯ ಕಾರಣಗಳಿಂದ ಇಲ್ಲಿಗೆ ಬಂದಿಲ್ಲ. ಕೇಂದ್ರದ ನೂತನ ಸಚಿವರಾಗಿ ಅಧಿಕಾರ ಸ್ವೀಕರಿಸಿರುವ ರಾಜ್ಯದ ನಾಲ್ವರನ್ನು ಭೇಟಿ ಮಾಡಿ ಶುಭಾಶಯ ಕೋರಲು ಬಂದಿದ್ದೇನೆ' ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ. ಶನಿವಾರ ಅವರು ಪಕ್ಷದ ಕೆಲವು ವರಿಷ್ಠರನ್ನು ಭೇಟಿ ಮಾಡಿ ರಾಜ್ಯ ರಾಜಕೀಯ ಬೆಳವಣಿಗೆ ಕುರಿತು ಚರ್ಚಿಸುವ ಸಾಧ್ಯತೆ ಇದೆ.

ಮಾಸ್ಕ್ ಧರಿಸುವಂತೆ ಬುದ್ಧಿವಾದ: ಹೆಡ್ ಕಾನ್‌ಸ್ಟೆಬಲ್ ಮೇಲೆ ಹಲ್ಲೆ

ಬೆಂಗಳೂರು: ಮಾಸ್ಕ್ ಹಾಕಿಕೊಳ್ಳುವಂತೆ ಹೇಳಿದ್ದಕ್ಕೆ ಹೆಡ್ ಕಾನ್‌ಸ್ಟೆಬಲ್ ಗುರುಪ್ರಸಾದ್ ಎಂಬುವರ ಮೇಲೆ ಹಲ್ಲೆ ಮಾಡಿರುವ ಆರೋಪದಡಿ ಐವರನ್ನು ಸಿದ್ದಾಪುರ ಪೊಲೀಸರು ಬಂಧಿಸಿದ್ದಾರೆ.

'ಜೂನ್ 27ರಂದು ನಡೆದಿರುವ ಘಟನೆ ಬಗ್ಗೆ ಹೆಡ್ ಕಾನ್‌ಸ್ಟೆಬಲ್ ದೂರು ನೀಡಿದ್ದರು. ತಲೆಮರೆಸಿಕೊಂಡಿದ್ದ ಐವರು ಆರೋಪಿಗಳನ್ನು ಇದೀಗ ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹೆಡ್ ಕಾನ್‌ಸ್ಟೆಬಲ್ ಗುರುಪ್ರಸಾದ್ ಹಾಗೂ ಕಾನ್‌ಸ್ಟೆಬಲೊಬ್ಬರು ಗಸ್ತು ತಿರುಗುತ್ತಿದ್ದರು. ಠಾಣೆ ವ್ಯಾಪ್ತಿಯ ಗುಟ್ಟೆಪಾಳ್ಯದಲ್ಲಿ ಜನರು ಗುಂಪು ಸೇರಿದ್ದ ಮಾಹಿತಿ ಬಂದಿತ್ತು. ಸ್ಥಳಕ್ಕೆ ಹೋಗಿ ಗುಂಪು ಚದುರಿಸಿದ್ದರು. ಅದೇ ಸಂದರ್ಭದಲ್ಲಿ ಹಲವರು ಮಾಸ್ಕ್ ಧರಿಸಿರಲಿಲ್ಲ. ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚುತ್ತಿದ್ದು, ಮಾಸ್ಕ್ ಧರಿಸಬೇಕೆಂದು ಹೆಡ್ ಕಾನ್‌ಸ್ಟೆಬಲ್ ಬುದ್ದಿವಾದ ಹೇಳಿದ್ದರು.'

'ಸ್ಥಳೀಯ ನಿವಾಸಿಗಳಾದ ಸಲ್ಮಾನ್ ಖಾನ್, ಇಜಾಜ್, ಸಮೀನಾ ಹಾಗೂ ಇತರರು, ಹೆಡ್ ಕಾನ್‌ಸ್ಟೆಬಲ್ ವಿರುದ್ಧ ಹರಿಹಾಯ್ದಿದ್ದರು. ಗುಂಪು ಕಟ್ಟಿಕೊಂಡು ಹೆಡ್ ಕಾನ್‌ಸ್ಟೆಬಲ್ ಮೇಲೆ ಹಲ್ಲೆ ಮಾಡಿದ್ದರು. ಕಪಾಳಕ್ಕೆ ಹೊಡೆದು ಸಮವಸ್ತ್ರ ಹಿಡಿದು ಎಳೆದಾಡಿದ್ದರು. ಕಾನ್‌ಸ್ಟೆಬಲ್ ಮೇಲೂ ಹಲ್ಲೆಗೆ ಯತ್ನಿಸಿದ್ದರು. ಸ್ಥಳಕ್ಕೆ ಹೋಗಿದ್ದ ಹೆಚ್ಚುವರಿ ಸಿಬ್ಬಂದಿ, ಹೆಡ್ ಕಾನ್‌ಸ್ಟೆಬಲ್ ಅವರನ್ನು ರಕ್ಷಿಸಿದ್ದರು' ಎಂದೂ ಮೂಲಗಳು ತಿಳಿಸಿವೆ.

'ಆಸ್ಪತ್ರೆಯಲ್ಲಿ ಹೆಡ್ ಕಾನ್‌ಸ್ಟೆಬಲ್ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಸದ್ಯ ಐವರು ಸೆರೆಸಿಕ್ಕಿದ್ದಾರೆ. ಮತ್ತಷ್ಟು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದೂ ಮೂಲಗಳು ಹೇಳಿವೆ.

ಝಿಕಾ ವೈರಾಣು: ಕಟ್ಟೆಚ್ಚರಕ್ಕೆ ಆರೋಗ್ಯ ಇಲಾಖೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆರೆಯ ರಾಜ್ಯ ಕೇರಳದಲ್ಲಿ ಝಿಕಾ ವೈರಾಣು ಕಾಣಿಸಿಕೊಂಡಿರುವ ಕಾರಣ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಆರೋಗ್ಯ ಇಲಾಖೆ ಆಯುಕ್ತ ಡಾ.ಕೆ.ವಿ. ತ್ರಿಲೋಕ್ ಚಂದ್ರ ಅವರು ಎಲ್ಲ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಿದ್ದಾರೆ.

ಈ ಬಗ್ಗೆ ಅವರು ಮಾರ್ಗಸೂಚಿಯನ್ನು ಹೊರಡಿಸಿದ್ದಾರೆ.

'ಕೇರಳಕ್ಕೆ ಹೊಂದಿಕೊಂಡಿರುವ ದಕ್ಷಿಣ ಕನ್ನಡ, ಉಡುಪಿ ಹಾಗೂ ಚಾಮರಾಜನಗರ ಜಿಲ್ಲೆಯು ಜಾಗರೂಕವಾಗಿ ಇರಬೇಕು. ಈ ವೈರಾಣು ಈಡಿಸ್ ಸೊಳ್ಳೆಗಳ ಮೂಲಕ ಹರಡುತ್ತದೆ. ಮಳೆಗಾಲದಲ್ಲಿ ಇದು ಹೆಚ್ಚಾಗಿ ಕಾಣಿಸಿಕೊಳ್ಳುವುದರಿಂದ ಮುನ್ನೆಚ್ಚರಿಕೆ ವಹಿಸಬೇಕಿದೆ. ಈಡಿಸ್ ಸೊಳ್ಳೆಯ ಸಂತಾನೋತ್ಪತ್ತಿಯನ್ನು ತಡೆಗಟ್ಟಲು ಘನತ್ಯಾಜ್ಯವನ್ನು ಪರಿಣಾಮಕಾರಿಯಾಗಿ ವಿಲೇವಾರಿ ಮಾಡಬೇಕು. ಆಶಾ ಕಾರ್ಯಕರ್ತೆಯರು ಈ ಜ್ವರದ ಬಗ್ಗೆ ಜಾಗೃತಿ ಮೂಡಿಸಬೇಕು' ಎಂದು ತಿಳಿಸಿದ್ದಾರೆ.

'ಸೋಂಕಿಗೆ ಒಳಗಾದವರಿಗೆ ಜ್ವರ, ದದ್ದು, ಕೀಲು ನೋವು ಸೇರಿದಂತೆ ವಿವಿಧ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಸೋಂಕು ಶಂಕಿತ ವ್ಯಕ್ತಿಯ ಮಾದರಿಯನ್ನು ಸಂಗ್ರಹಿಸಿ, ಬೆಂಗಳೂರಿನ ಎನ್‌ಐವಿ ಪ್ರಯೋಗಾಲಯಕ್ಕೆ ಕಳುಹಿಸಬೇಕು. ಗರ್ಭಿಣಿಯರಲ್ಲಿ ಜ್ವರ ಕಂಡುಬಂದಲ್ಲಿ ಕೂಡಲೇ ಪರೀಕ್ಷೆ ಮಾಡಿಸಿಕೊಳ್ಳಬೇಕು' ಎಂದು ಹೇಳಿದ್ದಾರೆ.

ಸಂಘ–ಸಂಸ್ಥೆಗಳಿಂದ ವಿದ್ಯಾರ್ಥಿಗಳಿಗೆ ಮಾಸ್ಕ್, ಸ್ಯಾನಿಟೈಸರ್ ಕೊಡುಗೆ: ಸಚಿವ ಎಸ್‌. ಸುರೇಶ್‌ಕುಮಾರ್

‘ಎಸ್ಸೆಸ್ಸೆಲ್ಸಿ ಪರೀಕ್ಷೆ: ರಹಸ್ಯ ಕಾರ್ಯಸೂಚಿ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಪರೀಕ್ಷೆಗೆ ಕೇವಲ 10 ದಿನಗಳು ಬಾಕಿ ಇರುವಾಗ ಅನಗತ್ಯ ಗೊಂದಲ ಸೃಷ್ಟಿಸುವ ಕೆಲಸ ಬೇಡ. ವಿದ್ಯಾರ್ಥಿಗಳಲ್ಲಿ ವಿಶ್ವಾಸ ಮೂಡಿಸಲು ಎಲ್ಲರೂ ಒಗ್ಗೂಡಿ ಶ್ರಮಿಸುವ ಅಗತ್ಯ ಇದೆ’ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್‌. ಸುರೇಶ್‌ಕುಮಾರ್ ಹೇಳಿದರು.

‘ಹಠಕ್ಕೆ ಬಿದ್ದು ಅಥವಾ ಪ್ರತಿಷ್ಠೆಗೆ ಪರೀಕ್ಷೆ ನಡೆಸುತ್ತಿಲ್ಲ. 8.76 ಲಕ್ಷ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬಲು ಮತ್ತು ಅವರ ಉತ್ತಮ ಭವಿಷ್ಯಕ್ಕಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಇದರಲ್ಲಿ ಯಾವುದೇ ರಹಸ್ಯ ಕಾರ್ಯಸೂಚಿಯು ಇಲ್ಲ. ವಿದ್ಯಾರ್ಥಿಗಳಿಗೆ ಸಾಮಾಜಿಕ ನ್ಯಾಯ ಒದಗಿಸುವುದೇ ಉದ್ದೇಶ’ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ನಾವು ಎಲ್ಲರೂ ಸೇರಿ ನಮ್ಮ ಮಕ್ಕಳ ಭವಿಷ್ಯವನ್ನು ರೂಪಿಸುವ ಜವಾಬ್ದಾರಿಯನ್ನು ಹೊಂದಿದ್ದೇವೆ. ಪರೀಕ್ಷಾ ಸಚಿವ ಎನ್ನುವ ಹಣೆಪಟ್ಟಿ ಕೇವಲ ಶಬ್ದಗಳ ಆಡಂಬರವಷ್ಟೇ. ಇಂತಹ ಪ್ರತಿಕೂಲ ಸಂದರ್ಭದಲ್ಲಿ ಶಿಕ್ಷಣ ಇಲಾಖೆ ತನ್ನ ಎಲ್ಲ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿದೆ’ ಎಂದೂ ಅವರು ಹೇಳಿದರು.

‘ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ ಎಂಬ ಮಾತು ಪ್ರತಿ ಬಾರಿಯೂ ಕೇಳಿ ಬರುತ್ತದೆ. ಆದರೆ, ಫಲಿತಾಂಶ ಬಂದಾಗ ಈ ವಿದ್ಯಾರ್ಥಿಗಳೇ ಮೇಲುಗೈ ಸಾಧಿಸಿರುತ್ತಾರೆ. ಗ್ರಾಮೀಣ ಭಾಗದಲ್ಲಿ ಶಿಕ್ಷಕರೇ ಮನೆ ಮನೆಗೆ ತೆರಳಿ ವಿದ್ಯಾರ್ಥಿಗಳ ಕಲಿಕಾ ಪ್ರಗತಿ ಪರಿಶೀಲಿಸಿದ್ದಾರೆ. ಬಹುಆಯ್ಕೆಯ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಪರಿಹರಿಸಲು ಮಾರ್ಗದರ್ಶನವನ್ನೂ ನೀಡಿದ್ದಾರೆ’ ಎಂದರು.

‘ಪರೀಕ್ಷೆಗೆ ಸಕಲ ಸಿದ್ಧತೆಗಳು ಭರದಿಂದ ಸಾಗಿವೆ. ಕರ್ತವ್ಯಕ್ಕೆ ಹಾಜರಾಗುವ ಶೇ 98ರಷ್ಟು ಶಿಕ್ಷಕರು ಮೊದಲ ಡೋಸ್ ಲಸಿಕೆ ಪಡೆದಿದ್ದಾರೆ’ ಎಂದು ಮಾಹಿತಿ ನೀಡಿದರು.

‘ಸ್ಕೌಟ್ ಅಂಡ್ ಗೈಡ್ಸ್, ರೋಟರಿ ಕ್ಲಬ್, ಯೂತ್ ಫಾರ್ ಸೇವಾ ಸಂಸ್ಥೆಗಳ ಜತೆಗೆ ಹಲವು ಸಂಘ–ಸಂಸ್ಥೆಗಳು ವಿದ್ಯಾರ್ಥಿಗಳು ಮತ್ತು ಪರೀಕ್ಷಾ ಸಿಬ್ಬಂದಿಗಾಗಿ ಸ್ಯಾನಿಟೈಸರ್ ಮತ್ತು ಮಾಸ್ಕ್‌ಗಳನ್ನು ಉಚಿತವಾಗಿ ನೀಡಿವೆ’ ಎಂದೂ ಅವರು ತಿಳಿಸಿದರು.

> **ವಿದ್ಯಾರ್ಥಿಗಳು, ಸಿಬ್ಬಂದಿಗೆ ನಮ್ಮ ಸಂಸ್ಥೆಯಿಂದ ಉಚಿತ ಮಾಸ್ಕ್ ವಿತರಿಸಲಾಗುವುದು. 10 ಸಾವಿರ ಸ್ವಯಂ ಸೇವಕರು ಪರೀಕ್ಷಾ ಕಾರ್ಯಕ್ಕೆ ನೆರವು ನೀಡಲಿದ್ದಾರೆ**
> ಪಿ.ಜಿ.ಆರ್. ಸಿಂಧ್ಯ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಮುಖ್ಯ ಆಯುಕ್ತ

‘ಕಳೆದ ವರ್ಷ ಪರೀಕ್ಷೆ ನಡೆಸಿದಾಗ ರಾಜ್ಯದಲ್ಲಿ ಕೊರೊನಾ ದೃಢಪ್ರಮಾಣ ದರ ಶೇ 13.2ರಷ್ಟಿತ್ತು. ಈ ವರ್ಷ 1.7ರ ಆಸುಪಾಸಿನಲ್ಲಿದೆ. ಈ ಬಾರಿಯ ಪರೀಕ್ಷೆ ಕಳೆದ ಬಾರಿಗಿಂತ ಹೆಚ್ಚು ಸುರಕ್ಷಿತ ವಾತಾವರಣದಲ್ಲಿ ನಡೆಯಲಿದೆ. ಪರೀಕ್ಷಾ ಕೇಂದ್ರಗಳ ಸಂಖ್ಯೆ ದುಪ್ಪಟ್ಟಾಗಿದ್ದು, ಪರೀಕ್ಷಾ ಕೊಠಡಿಗಳ ಸಂಖ್ಯೆ ನಾಲ್ಕು ಪಟ್ಟು ಹೆಚ್ಚಿಸಲಾಗಿದೆ. ಒಂದು ಕೊಠಡಿಯಲ್ಲಿ ಕೇವಲ 12 ಮಕ್ಕಳು ಪರೀಕ್ಷೆ ಬರೆಯಲಿದ್ದಾರೆ. ಒಂದು ಡೆಸ್ಕ್‌ಗೆ ಒಬ್ಬನೇ / ಒಬ್ಬಳೇ ಪರೀಕ್ಷಾರ್ಥಿ ಇರಲಿದ್ದಾರೆ’ ಎಂದರು.

ವಿಶ್ವಾಸದಲ್ಲಿ ವಿದ್ಯಾರ್ಥಿಗಳು: ‘34 ಶೈಕ್ಷಣಿಕ ಜಿಲ್ಲೆಗಳ ಅಧಿಕಾರಿಗಳು ಮತ್ತು ವಿದ್ಯಾರ್ಥಿಗಳೊಂದಿಗೆ ಶುಕ್ರವಾರ ಬೆಳಿಗ್ಗೆ ಸಂವಾದ ನಡೆಸಿದ್ದೇನೆ. 1000ಕ್ಕೂ ಹೆಚ್ಚು ಮಕ್ಕಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು, ಪರೀಕ್ಷೆ ಬರೆಯಲು ಉತ್ಸುಕರಾಗಿದ್ದಾರೆ, ಸಿದ್ಧರಾಗಿದ್ದಾರೆ’ ಎಂದು ಸುರೇಶ್‌ಕುಮಾರ್ ತಿಳಿಸಿದರು.

ಭೌತಿಕ ತರಗತಿ ಆರಂಭಿಸಲು ಮನವಿ

ಕೊಪ್ಪಳ: ‘ತಜ್ಞರ ಸಮಿತಿ ಶಿಫಾರಸಿನಂತೆ ರಾಜ್ಯದ ಶಾಲೆಗಳಲ್ಲಿ ಕೂಡಲೇ ಭೌತಿಕ ತರಗತಿ ಆರಂಭಿಸಬೇಕು. ಮಕ್ಕಳಿಗೆ ಹಾಲು, ಮಧ್ಯಾಹ್ನದ ಬಿಸಿಯೂಟ ನೀಡಬೇಕು’ ಎಂದು ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಂಭುಲಿಂಗನಗೌಡ ಪಾಟೀಲ ಹಲಗೇರಿ ಮನವಿ ಮಾಡಿದ್ದಾರೆ.

‘1 ಮತ್ತು 2ನೇ ತರಗತಿಗೆ ಒಂದು ದಿನ, 3 ಮತ್ತು 4ನೇ ತರಗತಿಗಳಿಗೆ ಒಂದು ದಿನ, 5 ಮತ್ತು 6ನೇ ತರಗತಿಗೆ ಎರಡು ದಿನ, 7 ಮತ್ತು 8ನೇ ತರಗತಿಗಳಿಗೆ ಎರಡು ದಿನ ಭೌತಿಕ ತರಗತಿ ನಡೆಸಬೇಕು’ ಎಂದು ಅವರು ಸಲಹೆ ನೀಡಿದ್ದಾರೆ.

ಸುಮಾರು 15 ತಿಂಗಳುಗಳಿಂದ ಶಾಲೆ ನಡೆಯದ ಕಾರಣ ಪಾಲಕರು, ಮಕ್ಕಳು ಗೊಂದಲದಲ್ಲಿ ಮುಳುಗಿದ್ದಾರೆ. ಆನ್‌ಲೈನ್ ತರಗತಿಗಳ ಮೂಲಕ ಕೇವಲ ಶೇ 35 ರಷ್ಟು ಮಕ್ಕಳು ಅಭ್ಯಾಸ ಮಾಡುತ್ತಿದ್ದಾರೆ. ಆದರೆ, ಎಲ್ಲ ಮಕ್ಕಳಿಗೂ ಏಕರೂಪದ ಶಿಕ್ಷಣ ದೊರೆಯಬೇಕು ಎಂಬುದು ಸಂಘದ ಆಶಯ ಎಂದು ಹೇಳಿಕೆ ನೀಡಿದ್ದಾರೆ.

‘ಟಿ.ವಿ, ರೇಡಿಯೊ, ಆನ್‌ಲೈನ್, ವಾಟ್ಸ್‌ಆ್ಯಪ್, ಇನ್ನಿತರ ತಂತ್ರಜ್ಞಾನಗಳ ಮೂಲಕ ನೀಡುವ ಶಿಕ್ಷಣ ಪ್ರಾಥಮಿಕ ಹಂತದ ನಂತರದ ಮಕ್ಕಳಿಗೆ ಸೂಕ್ತ. ಆನ್‌ಲೈನ್ ಶಿಕ್ಷಣಕ್ಕೆ ಅದರದ್ದೇ ಆದ ಕೆಲ ಮಿತಿಗಳಿವೆ. ಆ ಕಾರಣಕ್ಕೆ ಭೌತಿಕ ತರಗತಿ ಆರಂಭಿಸಬೇಕು’ ಎಂದಿದ್ದಾರೆ.

‘ದೊಡ್ಡಣ್ಣ ಮುಖಕ್ಕೆ ಪತ್ರ ಎಸೆದಿದ್ದ ಎಚ್‌ಡಿಕೆ’

ಸುಮಲತಾ ಮತ್ತು ನನ್ನ ಬಗ್ಗೆ ಕೆಟ್ಟ ಸಂಬಂಧ ಕಲ್ಪಿಸಿದ್ದರು: ರಾಕ್‌ಲೈನ್

ಪ್ರಜಾವಾಣಿ ವಾರ್ತೆ

ಸುಮಲತಾ

ರಾಕ್‌ಲೈನ್ ವೆಂಕಟೇಶ್

ಬೆಂಗಳೂರು: ಮಂಡ್ಯ ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ ವಿಚಾರದಲ್ಲಿ ಸಂಸದೆ ಸುಮಲತಾ ಅಂಬರೀಷ್ ಮತ್ತು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಮಧ್ಯೆ ಜಟಾಪಟಿ ತಾರಕಕ್ಕೇರಿದೆ.

ತಮ್ಮ ವಿರುದ್ಧ ಕುಮಾರಸ್ವಾಮಿ ಅವರ ಆರೋಪಗಳಿಗೆ ಶುಕ್ರವಾರ ಸುಮಲತಾ ಖಾರವಾಗಿ ಪ್ರತಿಕ್ರಿಯಿಸಿದರು. ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, ನಟ ದೊಡ್ಡಣ್ಣ, ಅಂಬರೀಷ್ ಪುತ್ರ ಅಭಿಷೇಕ್ ಕೂಡಾ ಟೀಕಾ ಪ್ರಹಾರ ನಡೆಸಿದ್ದಾರೆ.

ನಟರಿಗೆ ಅಪಮಾನ: ಅಂಬರೀಷ್ ಸ್ಮಾರಕ ಸ್ಥಾಪನೆ ವಿಚಾರದಲ್ಲಿ ನಟರಾದ ದೊಡ್ಡಣ್ಣ ಮತ್ತು ಶಿವರಾಂ, ಆಗ ಸಿ.ಎಂ ಆಗಿದ್ದ ಎಚ್‌.ಡಿ.ಕೆ ಬಳಿ ಹೋದಾಗ 2 ಗಂಟೆ ಕಾಯಿಸಿ, ಅಂಬರೀಷ್ ಏನು ಸಾಧನೆ ಮಾಡಿದ್ದಾನಂತ ಸ್ಮಾರಕ ಮಾಡಬೇಕು ಎಂದು ಪ್ರಶ್ನಿಸಿ, ಅವರ ಮುಖಕ್ಕೆ ಪತ್ರ ಎಸೆದು ಅಪಮಾನ ಮಾಡಿದರು ಎಂದು ಸುಮಲತಾ ಆರೋಪಿಸಿದರು.

‘ಅಂಬರೀಷ್ ಬಗ್ಗೆ ಮಾತನಾಡಲು ಯೋಗ್ಯತೆ ಇಲ್ಲದವರು ಈಗ ಮಾತನಾಡುತ್ತಿದ್ದಾರೆ. ಅವರು ಅಕ್ರಮ ಮಾಡಿದ್ದರೆ, ಅಧಿಕಾರದಲ್ಲಿ ಇದ್ದಾಗ ಏಕೆ ಸುಮ್ಮನಿದ್ದಿರಿ’ ಎಂದು ಪ್ರಶ್ನಿಸಿದ ಅವರು, ‘ಅಂಬರೀಷ್ ಸ್ಮಾರಕಕ್ಕೆ ಅನುಮೋದನೆ ನೀಡಿದ್ದು ಮುಖ್ಯಮಂತ್ರಿ ಯಡಿಯೂರಪ್ಪ ಹೊರತು ಬೇರೆ ಯಾರೂ ಅಲ್ಲ’ ಎಂದರು.

‘ಕುಮಾರಸ್ವಾಮಿ ದೂರವಾಣಿ ಕದ್ದಾಲಿಕೆ ಮಾಡಿಸಿದ್ದು ನಿಜ. ಸಿಬಿಐ ಅಧಿಕಾರಿಗಳು ಎರಡು ಬಾರಿ ನನ್ನ ಬಳಿ ಬಂದು ಮಾಹಿತಿ ಪಡೆದು ಕೊಂಡು ಹೋಗಿದ್ದಾರೆ’ ಎಂದರು.

‘ಮಂಡ್ಯದಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆ ಬಗ್ಗೆ ಕುಮಾರಸ್ವಾಮಿ ಯಾಕೆ ಅಷ್ಟು ತಲೆ ಕೆಡಿಸಿಕೊಂಡಿದ್ದಾರೆ? ಸಂಬಂಧವಿಲ್ಲದ ವಿಚಾರವಾದರೆ ಯಾಕೆ ಆತಂಕಪಡಬೇಕು? ಸದ್ಯದಲ್ಲೇ ಮುಖ್ಯಮಂತ್ರಿ ಮತ್ತು ಗಣಿ ಸಚಿವರನ್ನು ಭೇಟಿ ಮಾಡಿ ಅಕ್ರಮ ಗಣಿಗಳ ಬಗ್ಗೆ ಮಾಹಿತಿ ನೀಡುತ್ತೇನೆ’ ಎಂದು ಸುಮಲತಾ ಹೇಳಿದರು.

> **ಜುಲೈ 2ರಂದು ಅಣೆಕಟ್ಟೆ ಪುನಶ್ಚೇತನ ತಂತ್ರಜ್ಞರು ಹಾಗೂ ರಾಜ್ಯದ ಗೇಟ್ ಸಲಹಾ ಸಮಿತಿ ಸದಸ್ಯರು ಪರಿಶೀಲಿಸಿದ್ದು ಕೆಆರ್‌ಎಸ್‌ನಲ್ಲಿ ಬಿರುಕುಕಂಡುಬಂದಿಲ್ಲ**
> **ಕೆ.ಜೈಪ್ರಕಾಶ್,** ವ್ಯವಸ್ಥಾಪಕ ನಿರ್ದೇಶಕ, ಕಾವೇರಿ ನೀರಾವರಿ ನಿಗಮ

ಕೆಟ್ಟ ಸಂಬಂಧ ಕಲ್ಪಿಸಿದ್ದ ಕುಮಾರಸ್ವಾಮಿ: ‘ಅಂಬರೀಷ್ ಕುಟುಂಬದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುತ್ತಿರುವ ಕುಮಾರಸ್ವಾಮಿ ಹಿಂದೆ ಚುನಾವಣೆ ಸಂದರ್ಭ ನನ್ನ ಮತ್ತು ಸುಮಲತಾ ಮಧ್ಯೆ ಅಪಾರ್ಥ ಕಲ್ಪಿಸಿ, ಪ್ರಚಾರ ಮಾಡಲು ಪ್ರಯತ್ನ ನಡೆಸಿದ್ದರು’ ಎಂದು ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಆರೋಪಿಸಿದ್ದಾರೆ.

‘ಚುನಾವಣೆ ಸಂದರ್ಭ ಹೋಟೆಲ್‌ನಲ್ಲಿ ಇಬ್ಬರು ನಡೆದುಕೊಂಡು ಹೋಗುವ ಸಿಸಿಟಿವಿ ಕ್ಯಾಮೆರಾದ ದೃಶ್ಯವನ್ನು ಪಡೆದು ಅದಕ್ಕೆ ಅಶ್ಲೀಲ ವಿಡಿಯೊ ಸೇರಿಸಿ ಅಪ ಪ್ರಚಾರಕ್ಕೆ ಪಿತೂರಿ ಮಾಡಿದ್ದರು. ಆದರೆ, ಅವರದೇ ಚಾನೆಲ್‌ನಲ್ಲಿದ್ದ ಅಂಬರೀಷ್ ಅಭಿಮಾನಿಯೊಬ್ಬ ಈ ವಿಷಯವನ್ನು ನಮ್ಮ ಗಮನಕ್ಕೆ ತಂದರು. ಇಂತಹ ಕೆಟ್ಟ ಬುದ್ಧಿ ನಿಮಗೇಕೆ’ ಎಂದು ಪ್ರಶ್ನಿಸಿದರು.

ಅಕ್ರಮ ಗಣಿಗಾರಿಕೆ ಇದ್ದರೆ ನಿಲ್ಲಿಸಿ

ಕೆಆರ್‌ಎಸ್ ಅಣೆಕಟ್ಟೆಯಿಂದ ಸುರಕ್ಷಿತ ಅಂತರದಲ್ಲಿ ಗಣಿಗಾರಿಕೆ ನಡೆಸಲಿ. ಸುತ್ತಮುತ್ತ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದರೆ ಕಡಿವಾಣ ಹಾಕಬೇಕು ಎಂದು ಕಾಂಗ್ರೆಸ್ ಶಾಸಕ ಎಂ.ಬಿ.ಪಾಟೀಲ ಹೇಳಿದ್ದಾರೆ.

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಭೇಟಿ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಕಲ್ಲು ಗಣಿಗಳಿಂದ ಅಣೆಕಟ್ಟೆಗೆ ತೊಂದರೆ ಆಗುತ್ತಿದ್ದರೆ ಅದನ್ನು ತಡೆಗಟ್ಟಬೇಕು ಎಂದರು.

‘ಅಂಬರೀಷ್ ನನ್ನ ಒಳ್ಳೆಯ ಗೆಳೆಯರಾಗಿದ್ದರು. ಸುಮಲತಾ ಅವರ ಬಗ್ಗೆ ಗೌರವವಿದೆ. ಮಂಡ್ಯ ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ ವಿಚಾರ ನನಗೆ ಮಾಹಿತಿ ಇಲ್ಲ’ ಎಂದು ಹೇಳಿದರು.

> **ಅಂಬರೀಷ್ ಸ್ಮಾರಕ ನಿರ್ಮಾಣದ ಬಗ್ಗೆ ಮನವಿ ಮಾಡಲು ಹೋದಾಗ 2 ಗಂಟೆ ಕಾಯಿಸಿದ್ದೂ ಅಲ್ಲದೇ, ಸ್ಮಾರಕ ಮಾಡಲು ಅವನೇನು ಮಾಡಿದ್ದಾನೆ ಎಂದು ಪತ್ರ ಮುಖಕ್ಕೆ ಎಸೆದಿದ್ದರು**
> **ದೊಡ್ಡಣ್ಣ,** ನಟ

> **ನಾವು ಒಪ್ಪಿಗೆ ಕೊಟ್ಟ ಕಾರಣಕ್ಕೆ ಮಂಡ್ಯಕ್ಕೆ ಅಂಬರೀಷ್ ಅವರ ಶವವನ್ನು ಒಯ್ದಿದ್ದು ಅಲ್ಲವೇ? ಸಾವಿನ ವಿಚಾರದಲ್ಲಿ ರಾಜಕೀಯ ಮಾಡಬೇಡಿ**
> **ಅಭಿಷೇಕ್ ಅಂಬರೀಷ್,** ನಟ

ಸರ್ಕಾರ ಸತ್ತಿದೆಯೇ? ವಿಶ್ವನಾಥ್ ಕಿಡಿ (ಮೈಸೂರು ವರದಿ): ‘ಕನ್ನಂಬಾಡಿ ಬಗ್ಗೆ ಬೀದಿರಂಪ ನಡೆಯುತ್ತಿದ್ದರೂ ಮುಖ್ಯಮಂತ್ರಿ ಬಾಯಿ ಮುಚ್ಚಿಕೊಂಡಿದ್ದಾರೆ. ಜನರ ಆತಂಕ ನಿವಾರಿಸಬೇಕಾದ ರಾಜ್ಯ ಸರ್ಕಾರ ಬದುಕಿದೆಯೋ ಸತ್ತಿದೆಯೋ ತಿಳಿಯದಾಗಿದೆ’ ಎಂದು ವಿಧಾನ ಪರಿಷತ್ ಸದಸ್ಯ ಎಚ್‌.ವಿಶ್ವನಾಥ್ ಶುಕ್ರವಾರ ಇಲ್ಲಿ ತಮ್ಮದೇ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

‘ಟೆಂಡರ್ ಕರೆಯುವಲ್ಲಿ, ಕಿಕ್‌ಬ್ಯಾಕ್ ಪಡೆಯುವಲ್ಲಿರುವ ಆಸಕ್ತಿ ಕನ್ನಂಬಾಡಿ ಬಿರುಕಿನ ಬೀದಿ ರಂಪ ಸರಿಪಡಿಸುವುದರಲ್ಲಿ ಯಾಕಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರ ಹೇಳಿಕೆಯೂ ಇಲ್ಲ. ಸಂಸದೆ ಸುಮಲತಾ–ಮಾಜಿ ಮುಖ್ಯಮಂತ್ರಿ ಎಚ್‌.ಡಿ.ಕುಮಾರಸ್ವಾಮಿ ನಡುವಿನ ಬೀದಿರಂಪದಿಂದ ಜನರಲ್ಲಿ ಆತಂಕ ಹೆಚ್ಚಿದೆ. ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯ ಕೂಡ ಪ್ರತಿಕ್ರಿಯಿಸಿಲ್ಲ’ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

‘ಯಡಿಯೂರಪ್ಪ ತಮ್ಮನ್ನು ತಾವು ಮಂಡ್ಯದ ಮಗ ಎಂದು ಹೇಳಿಕೊಳ್ಳುತ್ತಾರೆ. ಆದರೆ ಕನ್ನಂಬಾಡಿಯ ಬಿರುಕಿನ ವಿವಾದವನ್ನು ಗಂಭೀರವಾಗಿ ಪರಿಗಣಿಸಿಯೇ ಇಲ್ಲ. ತಜ್ಞರ ತಂಡವನ್ನೂ ಜಲಾಶಯಕ್ಕೆ ಕಳಿಸಿಲ್ಲ. ಈ ವಿಷಯದಲ್ಲಿ ಜಲಸಂಪನ್ಮೂಲ ಇಲಾಖೆಯ ಅಧಿಕಾರಿಗಳು ಬಾಯಿ ಬಿಡುತ್ತಿಲ್ಲ. ಕಮಿಷನ್ ತಿನ್ನುತ್ತಾ ಕುಳಿತಿದ್ದಾರೆ’ ಎಂದು ಅವರು ಆರೋಪಿಸಿದರು.

630 ಗ್ರಾ.ಪಂ.ಗಳಲ್ಲಿ ಆಧಾರ್ ನೋಂದಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 28 ಜಿಲ್ಲೆಗಳಲ್ಲಿ ಒಟ್ಟು 630 ಗ್ರಾಮ ಪಂಚಾಯಿತಿ ಕಚೇರಿಗಳಲ್ಲಿ ಆಧಾರ್ ನೋಂದಣಿ ಮತ್ತು ತಿದ್ದುಪಡಿ ಪ್ರಕ್ರಿಯೆ ಶೀಘ್ರದಲ್ಲೇ ಆರಂಭವಾಗಲಿದೆ.

ಕೋವಿಡ್ ಲಸಿಕೆ ಪಡೆಯಲು ಆಧಾರ್ ಕಡ್ಡಾಯವಾಗಿದ್ದು, ಆಧಾರ್ ನೋಂದಣಿ ಮತ್ತು ತಿದ್ದುಪಡಿಗೆ ಗ್ರಾಮೀಣ ಪ್ರದೇಶಗಳಲ್ಲಿ ಬೇಡಿಕೆ ಹೆಚ್ಚಿದೆ. ಹೀಗಾಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಮೊದಲ ಹಂತದಲ್ಲಿ 28 ಜಿಲ್ಲೆಗಳಲ್ಲಿ ತಲಾ 22 ಗ್ರಾಮ ಪಂಚಾಯಿತಿಗಳಲ್ಲಿ ಈ ಸೌಲಭ್ಯ ಕಲ್ಪಿಸಲು ಸಿದ್ಧತೆ ಆರಂಭಿಸಿದೆ.

‘ಇ- ಆಡಳಿತ ಇಲಾಖೆ ಗ್ರಾಮ ಪಂಚಾಯಿತಿಗಳಲ್ಲಿ ಆಧಾರ್ ನೋಂದಣಿ ಮಾಡಲು 2,000 ಟ್ಯಾಬ್ಲೆಟ್ ಮತ್ತು ‘ಸಿಂಗಲ್ ಫಿಂಗರ್ ಪ್ರಿಂಟ್’ ಸಾಧನಗಳನ್ನು ಒದಗಿಸಲಿದೆ. ಮೊದಲ ಹಂತದಲ್ಲಿ 630 ಸಾಧನಗಳನ್ನು ಇಲಾಖೆಗೆ ಹಸ್ತಾಂತರ ಮಾಡಲಾಗಿದೆ’ ಎಂದು ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಲ್‌.ಕೆ.ಅತೀಕ್ ಅವರು ಜಿ.ಪಂ ಸಿಇಒಗಳಿಗೆ ಪತ್ರ ಬರೆದಿದ್ದಾರೆ.

ಬಾಪೂಜಿ ಸೇವಾ ಕೇಂದ್ರಗಳಲ್ಲಿ, ಅಲ್ಲಿನ ಸಿಬ್ಬಂದಿಯನ್ನೇ ಬಳಸಿಕೊಂಡು ಆಧಾರ್ ಸೇವಾ ಕೇಂದ್ರಗಳನ್ನೂ ನಡೆಸಲಾಗುತ್ತದೆ. ಆಧಾರ್ ನೋಂದಣಿಗೆ ಸಾರ್ವಜನಿಕರಿಂದ ಯಾವುದೇ ಶುಲ್ಕ ಪಡೆಯುವಂತಿಲ್ಲ. ಆಧಾರ್‌ನಲ್ಲಿ ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್ ಐ.ಡಿ ಸೇರಿಸಲು ಪ್ರತಿ ವಹಿವಾಟಿಗೆ ₹ 50ರಂತೆ ಶುಲ್ಕ ವಿಧಿಸಬೇಕು ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಸೋಮು ನ್ಯಾಮಗೌಡಗೆ 14 ದಿನ ನ್ಯಾಯಾಂಗ ಬಂಧನ

ಧಾರವಾಡ: ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಯೋಗೀಶಗೌಡ ಗೌಡರ ಕೊಲೆ ಪ್ರಕರಣದಲ್ಲಿ ವಿಚಾರಣೆಗೆ ಬಳಿಕ ಬ್ಯಾಡಗಿ ಎಪಿಎಂಸಿ ಕಾರ್ಯದರ್ಶಿ ಸೋಮುಗೌಡ ನ್ಯಾಮಗೌಡ ಅವರನ್ನು 14 ದಿನ ನ್ಯಾಯಾಂಗ ಬಂಧನಕ್ಕೆ ಶುಕ್ರವಾರ ಒಪ್ಪಿಸಿದೆ.

ಸಿಬಿಐ ಅಧಿಕಾರಿಗಳು ಶುಕ್ರವಾರವೂ ಅವರನ್ನು ವಿಚಾರಣೆಗೆ ಒಳಪಡಿಸಿದರು. ಬಳಿಕ ಕೋರ್ಟ್‌ಗೆ ಹಾಜರುಪಡಿಸಿದರು. ಬೆಳಿಗ್ಗೆ ಪ್ರಕರಣದ ಮೊದಲ ಆರೋಪಿ ಬಸವರಾಜ ಮುತ್ತಗಿ, ವಿನಯ ಕುಲಕರ್ಣಿ ಆಪ್ತ ಕೆಂಪೇಗೌಡ ಪಾಟೀಲ, ಯೋಗೀಶಗೌಡ ಪತ್ನಿ ಮಲ್ಲಮ್ಮ ಮತ್ತು ಯೋಗೀಶಗೌಡ ಜಿಮ್ ತರಬೇತುದಾರ ವಿವೇಕ ದಳವಾಯಿ ಅವರನ್ನು ವಿಚಾರಣೆಗೆ ಒಳಪಡಿಸಲಾಗಿತ್ತು.

ಸುದ್ದಿಗಾರರೊಂದಿಗೆ ಮಾತನಾಡಿದ ಬಸವರಾಜ ಮುತ್ತಗಿ, ‘ನಾನು ಕೀಳು ಮಟ್ಟದ ರಾಜಕಾರಣ ಮಾಡುವವನಲ್ಲ. ರಾಜಕೀಯ ವಿಷಯವಾಗಿ ಯೋಗೀಶಗೌಡ ಕೊಲೆಯಾಗಿದೆ ಎಂಬ ಆಧಾರದ ಮೇಲೆ ಸಿಬಿಐ ಅಧಿಕಾರಿಗಳು ವಿಚಾರಣೆ ನಡೆಸುತ್ತಿದ್ದಾರೆ. ನನ್ನ ನಂಬಿದ ಹುಡುಗರಿಗಾಗಿ ಸಾಕಷ್ಟು ವಿಚಾರಗಳನ್ನು ಸಿಬಿಐ ಮುಂದೆ ಹೇಳಿದ್ದೇನೆ’ ಎಂದರು.

‘ವಿನಯ ಕುಲಕರ್ಣಿ ಪರ ವಕೀಲರು ನನ್ನ ಜಾಮೀನು ರದ್ದು ಮಾಡಿ ಎಂದಿರುವುದು ಸರಿಯಲ್ಲ. ಸತ್ಯದ ಪರವಾಗಿ ಇಂದಿನಿಂದ ನನ್ನ ಹೋರಾಟ ನಡೆಯತ್ತದೆ. ಹಲವು ವಿಚಾರ ಸಿಬಿಐಗೆ ಈಗಾಗಲೇ ತಿಳಿಸಿದ್ದೇನೆ. ಇದರಿಂದ ನನ್ನ ಜೀವಕ್ಕೂ ತೊಂದರೆಯಾಗುವ ಸಾಧ್ಯತೆಗಳಿವೆ’ ಎಂದರು.

ಕರಾವಳಿ, ಉತ್ತರ ಕರ್ನಾಟಕದ ವಿವಿಧೆಡೆ ಉತ್ತಮ ಮಳೆ

ಹುಬ್ಬಳ್ಳಿ/ಮಂಗಳೂರು/ಮಡಿಕೇರಿ: ರಾಜ್ಯದಲ್ಲಿ ಕರಾವಳಿ ಹಾಗೂ ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಶುಕ್ರವಾರ ಉತ್ತಮ ಮಳೆಯಾಗಿದೆ.

ಬಾಗಲಕೋಟೆ ನಗರ ಹಾಗೂ ಜಿಲ್ಲೆಯ ಹುನಗುಂದ, ಇಳಕಲ್, ಬೀಳಗಿ ಮತ್ತು ಬಾದಾಮಿ ತಾಲ್ಲೂಕುಗಳಲ್ಲಿ ಮಳೆಯಾಗಿದೆ. ಗದಗ ಜಿಲ್ಲೆಯ ನರಗುಂದ ತಾಲ್ಲೂಕು ಹಾಗೂ ಗಜೇಂದ್ರಗಡ ತಾಲ್ಲೂಕಿನ ನರೇಗಲ್ ಭಾಗದಲ್ಲಿ ಉತ್ತಮ ಮಳೆ ಆಗಿದೆ.

ಉತ್ತರ ಕನ್ನಡದ ಶಿರಸಿಯಲ್ಲಿ ಉತ್ತಮ, ಜೊಯಿಡಾ, ಸಿದ್ದಾಪುರ, ಭಟ್ಕಳ, ಹೊನ್ನಾವರದಲ್ಲಿ ಸಾಧಾರಣ ಮಳೆಯಾಗಿದ್ದರೆ, ವಿಜಯಪುರ ಜಿಲ್ಲೆಯ ಬಹುತೇಕ ಕಡೆ ಉತ್ತಮ ಮಳೆ, ಹೊಸಪೇಟೆಯಲ್ಲಿ ಬಿರುಸಿನ ಮಳೆಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಬೆಳ್ತಂಗಡಿ ತಾಲ್ಲೂಕುಗಳಲ್ಲಿ ಉತ್ತಮ ಮಳೆಯಾಗಿದೆ. ಮೂಲ್ಕಿಯಲ್ಲಿ ಗುಡ್ಡದ ಮಣ್ಣು ಕುಸಿದು ಮನೆಗೆ ಹಾನಿಯಾಗಿದೆ. ತೋಕೂರಿನಲ್ಲಿ ಮರ ಬಿದ್ದು ಆರು ವಿದ್ಯುತ್ ಕಂಬಗಳು ಉರುಳಿವೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಮೂಡಿಗೆರೆ, ಎನ್‌.ಆರ್‌.ಪುರ, ಕಳಸ, ಕೊಪ್ಪ, ಶೃಂಗೇರಿ ಭಾಗದಲ್ಲಿ ಮಳೆಯಾಗಿದೆ.

ಕೊಡಗು ಜಿಲ್ಲೆಯ ಮಡಿಕೇರಿ, ನಾಪೋಕ್ಲು, ಭಾಗಮಂಡಲ, ತಲಕಾವೇರಿ ಭಾಗದಲ್ಲಿ ಸಾಧಾರಣ ಮಳೆಯಾಗಿದೆ. ಜಿಲ್ಲೆಯಲ್ಲಿ ನಾಲ್ಕು ದಿನ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಜುಲೈ 9ರಂದು ‘ಆರೆಂಜ್ ಅಲರ್ಟ್’ ಹಾಗೂ 11ರಿಂದ 13ರ ತನಕ ‘ರೆಡ್ ಅಲರ್ಟ್’ ಘೋಷಿಸಲಾಗಿದೆ.

ಹಾಸನ ನಗರ ಸೇರಿ ಜಿಲ್ಲೆಯ ಅರಕಲಗೂಡು, ಹೆತ್ತೂರು, ಬೇಲೂರು ಭಾಗದಲ್ಲಿ ಉತ್ತಮ ಮಳೆಯಾಗಿದೆ.

ಧಾರಾಕಾರ ಮಳೆ (ಕಲಬುರ್ಗಿ ವರದಿ): ಕಲಬುರ್ಗಿ ನಗರವೂ ಸೇರಿ ಜಿಲ್ಲೆಯ ಹಲವೆಡೆ ಧಾರಾಕಾರ ಮಳೆ ಸುರಿಯಿತು.

ಕಲಬುರ್ಗಿ ನಗರದಲ್ಲಿ ಸಂಜೆಯಿಂದ ರಾತ್ರಿವರೆಗೂ ಮಳೆ ಸುರಿಯಿತು. ತಗ್ಗು ಪ್ರದೇಶಗಳಲ್ಲಿಯ ಮನೆಗಳಿಗೂ ನೀರು ನುಗ್ಗಿತು. ಚಿತ್ತಾಪುರ, ಅಫಜಲಪುರ, ಆಳಂದ ತಾಲ್ಲೂಕುಗಳಲ್ಲಿಯೂ ಉತ್ತಮ ಮಳೆ ಆಯಿತು. ಬೀದರ್ ಜಿಲ್ಲೆಯಲ್ಲಿ ವಡಗಾಂವ– ಕಂದುಗೂಳ ನಡುವಿನ ಸೇತುವೆ ಮುಳುಗಡೆಯಾಗಿ ಸಂಚಾರ ಸ್ಥಗಿತಗೊಂಡಿತ್ತು. ಬೀದರ್, ಭಾಲ್ಕಿ ತಾಲ್ಲೂಕುಗಳಲ್ಲಿಯೂ ಮಳೆಯಾಗಿದೆ.

ಬೀದರ್, ಕೊಪ್ಪಳ ಜಿಲ್ಲೆಯ ಕುಷ್ಟಗಿ, ರಾಯಚೂರು ಜಿಲ್ಲೆಯಲ್ಲಿ ಕವಿತಾಳ, ಮಾನ್ವಿ, ಲಿಂಗಸೂಗೂರುಗಳಲ್ಲಿ ಉತ್ತಮ ಮಳೆಯಾಗಿದೆ.

ಪಣಂಬೂರಿನಲ್ಲಿ 15 ಸೆಂ.ಮೀ ಮಳೆ

ಪಣಂಬೂರಿನಲ್ಲಿ ಶುಕ್ರವಾರ 15 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಮಂಗಳೂರು 8, ಕೋಲಾರ 6, ಭಟ್ಕಳ 5, ಆಳಂದ 4, ಶ್ರೀನಿವಾಸಪುರ 3, ಕುಂದಾಪುರ, ಬಾದಾಮಿ, ಬಂಗಾರಪೇಟೆ 2, ಮೂಡುಬಿದರೆ, ಕಾರವಾರ, ಬೀದರ್, ಗದಗ, ಕಮಲಾಪುರ, ಹುನಗುಂದ ಹಾಗೂ ಹೊನ್ನಾಳಿಯಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.

ಬೀಳಗಿ ತಾಲ್ಲೂಕಿನ ಜಾನಮಟ್ಟಿ 7.5 ಸೆಂ.ಮೀ, ಬಾಡಗಂಡಿ 6.5 ಸೆಂ.ಮೀ ಮಳೆ, ಸುರತ್ಕಲ್‌ನಲ್ಲಿ 13.6 ಸೆಂ.ಮೀ, ಉಡುಪಿ ಜಿಲ್ಲೆಯ ಬಡಾನಿಡಿಯೂರು 11.1 ಸೆಂ.ಮೀ, ಕಡೇಕಾರಿನಲ್ಲಿ 8.7 ಸೆಂ.ಮೀ. ಮಳೆ ದಾಖಲಾಗಿದೆ.

ದಾವಣಗೆರೆಯಲ್ಲಿ 33 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ, ಹಾಸನ, ಚಿಂತಾಮಣಿ, ಮಂಡ್ಯ, ಚಿತ್ರದುರ್ಗ, ರಾಯಚೂರು, ಶಿವಮೊಗ್ಗ, ಮೈಸೂರು ತಲಾ 31, ಮಡಿಕೇರಿಯಲ್ಲಿ 16 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	88.96	1,783	4,659
ಹಾರಂಗಿ	2,859	2,843.02	339	80
ಕಬಿನಿ	2,284	2,275.77	1,550	700
ಹೇಮಾವತಿ	2,922	2,896.17	702	200
ಲಿಂಗನಮಕ್ಕಿ	1,819	1,783.75	1,986	ಶೂನ್ಯ
ಸೂಪಾ (ಮೀ)	564	537.72	1,719	5,445
ಮಾಣಿ	594.36	573.56	497	ಶೂನ್ಯ
ತುಂಗಭದ್ರಾ (ಅಡಿ)	1,633	1,610.15	3,584	282
ಮಲಪ್ರಭಾ	2,079.50	2,063.15	715	194
ಘಟಪ್ರಭಾ	2,175	2,136.46	953	136
ಭದ್ರಾ	186	155.9	1,614	781
ಆಲಮಟ್ಟಿ (ಮೀ)	519.60	517.48	4,043	965
ನಾರಾಯಣಪುರ (ಮೀ)	492.25	490.73	2,500	00

* ನೆಲಮಟ್ಟದಿಂದ

ರೈತರ ಬಾಕಿ ₹770 ಕೋಟಿ ಬಿಡುಗಡೆ

ಬೆಂಗಳೂರು: ಕನಿಷ್ಠ ಬೆಂಬಲ ಬೆಲೆ ಯೋಜನೆ ಅಡಿ 4–5 ತಿಂಗಳ ಹಿಂದೆ ಖರೀದಿ ಮಾಡಿದ್ದ ರಾಗಿ, ಭತ್ತ ಮತ್ತು ಗೋಧಿಯ ಬಾಕಿ ₹770 ಕೋಟಿಯನ್ನು ಬಿಡುಗಡೆ ಮಾಡಿ ರಾಜ್ಯ ಸರ್ಕಾರ ಶುಕ್ರವಾರ ರಾತ್ರಿ ಆದೇಶ ಹೊರಡಿಸಿದೆ.

ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್ ಅಧ್ಯಕ್ಷತೆಯಲ್ಲಿ ಗುರುವಾರ ನಡೆದಿದ್ದ ಸಂಪುಟ ಉಪಸಮಿತಿ ಸಭೆಯಲ್ಲಿ ಹಣ ಬಿಡುಗಡೆಗೆ ನಿರ್ಧಾರ ತೆಗೆದುಕೊಳ್ಳಲಾಗಿತ್ತು.

ಪ್ರಾಧ್ಯಾಪಕಿಗೆ 5 ವರ್ಷ ಶಿಕ್ಷೆ

ಮಂಗಳೂರು: ಪಿಎಚ್‌.ಡಿ ವಿದ್ಯಾರ್ಥಿನಿಯಿಂದ ಲಂಚ ಪಡೆದಿದ್ದ ಮಂಗಳೂರು ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಅನಿತಾ ರವಿಶಂಕರ್ ಅವರಿಗೆ, ಇಲ್ಲಿನ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಹಾಗೂ ಲೋಕಾಯುಕ್ತ ವಿಶೇಷ ನ್ಯಾಯಾಲಯ 5 ವರ್ಷ ಜೈಲು ಶಿಕ್ಷೆ ವಿಧಿಸಿದೆ.

ಪಿಎಚ್‌.ಡಿ ಪ್ರಬಂಧ ಅಂಗೀಕರಿಸಲು ಮೈಸೂರಿನಿಂದ ಬರುವ ಬಾಹ್ಯ ಪರಿವೀಕ್ಷಕರ ಖರ್ಚಿಗೆ ಹಣ ಕೊಡಬೇಕು ಎಂದು ಡಾ.ಅನಿತಾ ಅವರು, ವಿದ್ಯಾರ್ಥಿನಿಗೆ ಬೇಡಿಕೆ ಇಟ್ಟಿದ್ದರು. ಮೊದಲು ₹10 ಸಾವಿರ, ನಂತರ ₹4 ಸಾವಿರ ಮತ್ತು ಆಮೇಲೆ ₹16,800ಕ್ಕೆ ಬೇಡಿಕೆ ಇಟ್ಟಿದ್ದರು. ಆ ಪೈಕಿ 2012ರ ಡಿಸೆಂಬರ್ 4ರಂದು ಮುಂಗಡ ₹5 ಸಾವಿರ ಪಡೆಯುತ್ತಿದ್ದಾಗ ಲೋಕಾಯುಕ್ತ ಇನ್‌ಸ್ಪೆಕ್ಟರ್ ಉಮೇಶ್ ಜಿ. ಶೇಟ್ ಹಾಗೂ ಸಿಬ್ಬಂದಿ, ಡಾ.ಅನಿತಾ ಅವರನ್ನು ಬಂಧಿಸಿದ್ದರು.

ಲೋಕಾಯುಕ್ತ ಪರವಾಗಿ ಒಟ್ಟು 9 ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಲಾಗಿತ್ತು. ವಿಚಾರಣೆ ನಡೆಸಿದ ನ್ಯಾಯಾಧೀಶ ಬಿ.ಬಿ.ಜಕಾತಿ ಅವರು, ಭ್ರಷ್ಟಾಚಾರ ನಿಗ್ರಹ ಕಾಯ್ದೆಯ ಕಲಂ 7ರ ಅಡಿ 2 ವರ್ಷ ಸಾದಾ ಶಿಕ್ಷೆ ಮತ್ತು ₹15 ಸಾವಿರ ದಂಡ, ಕಲಂ 13 (1)(ಡಿ) ಅಡಿ 3 ವರ್ಷ ಸಾದಾ ಶಿಕ್ಷೆ ಮತ್ತು ₹15 ಸಾವಿರ ದಂಡ ವಿಧಿಸಿದ್ದಾರೆ. ದಂಡ ತೆರಲು ವಿಫಲರಾದರೆ ತಲಾ ಒಂದು ತಿಂಗಳು ಸಾದಾ ಶಿಕ್ಷೆ ಅನುಭವಿಸುವಂತೆ ಆದೇಶಿಸಿದ್ದಾರೆ. ಲೋಕಾಯುಕ್ತದ ಪರ ವಿಶೇಷ ಸರ್ಕಾರಿ ಅಭಿಯೋಜಕ ಕೆ.ಎಸ್‌.ಎನ್‌. ರಾಜೇಶ್ ವಾದ ಮಂಡಿಸಿದ್ದರು.

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ

ಕ್ರಮಾಂಕ: ಶಿಮನಪಾಶಿ:ಕಾ.ವಿ–1/ಟೆಂಡರ್:18/21–22 ದಿನಾಂಕ:05.07.2021

ಟೆಂಡರ್ ಪ್ರಕಟಣೆ(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದ್ವಿ–ಲಕೋಟೆ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್‌ಸೈಟ್ www.eproc.karnataka.gov.inನಲ್ಲಿ ಪಡೆದುಕೊಳ್ಳಬಹುದು.

1. ಪ್ರಿ ಬಿಡ್ ಮೀಟಿಂಗ್ ದಿನಾಂಕ: 20.07.2021 (ಬೆಳಗ್ಗೆ: 11.00 ಗಂಟೆಯನಂತರ) **2.** ಇ–ಪ್ರೊಕ್ಯೂರ್‌ಮೆಂಟ್ ನಮೂನೆಗಳಿಗಾಗಿ ಆನ್‌ಲೈನ್‌ನಲ್ಲಿ ಇ–ಪೇಮೆಂಟ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 07.08.2021 (ಸಂಜೆ 4.00ರವರೆಗೆ) **3.** ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ: 09.08.2021 ಬೆಳಿಗ್ಗೆ 11:00 ಗಂಟೆಯನಂತರ **4.** ಪ್ರೊಕ್ಯೂರ್‌ಮೆಂಟ್ ಮುಖಾಂತರ ಆರ್ಥಿಕ ಟೆಂಡರ್ ತೆರೆಯುವ ದಿನಾಂಕ:16.08.2021 ರ ಬೆಳಿಗ್ಗೆ:11.00 ಗಂಟೆಯನಂತರ **5.** ಹೆಚ್ಚಿನ ವಿವರಗಳನ್ನು ಇ–ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. **6.** ಅನುದಾನ: 2019–20 ರಿಂದ 2023–24 ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ

ಕ್ರ ಸಂ. 1. ಇಂಡೆಂಟ್ ಸಂಖ್ಯೆ : 117754 **ಪ್ಯಾಕೇಜ್ ಸಂಖ್ಯೆ:** ಪ್ಯಾಕೇಜ್ 02 **ಕಾಮಗಾರಿಯ ವಿವರ** : 01. ಹುಚ್ಚರಾಯ ಕಾಲೋನಿ ಸೋಮಿನಕೊಪ್ಪ ರೈಲ್ವೆ ಕ್ರಾಸಿಂಗ್ ನಿಂದ ಪಶುವೈದ್ಯಕೀಯ ಕಾಲೇಜ್ ರಸ್ತೆ ಅಭಿವೃದ್ಧಿ ಕಾಮಗಾರಿ, 02. ಹೊನ್ನಾಳಿ ರಸ್ತೆಯಿಂದ ಶಾಂತಿನಗರ ಮುಖ್ಯ ರಸ್ತೆ ಅಭಿವೃದ್ಧಿ **ಮೊತ್ತ (ರೂ.ಲಕ್ಷಗಳಲ್ಲಿ)** : 600.00 **ಇ.ಎಂ.ಡಿ (ರೂ.ಗಳಲ್ಲಿ)** : 810000.00 **ಕೆಲಸದ ಅವಧಿ** : 11 ತಿಂಗಳು **ಗುತ್ತಿಗೆದಾರರ ದರ್ಜೆ** : Class 1

ಕ್ರ ಸಂ. 2. ಇಂಡೆಂಟ್ ಸಂಖ್ಯೆ : 117755 **ಪ್ಯಾಕೇಜ್ ಸಂಖ್ಯೆ:** ಪ್ಯಾಕೇಜ್ 03 **ಕಾಮಗಾರಿಯ ವಿವರ** : 01. ವಾರ್ಡ್ ನಂ.01ರ ಸೋಮಿನಕೊಪ್ಪ ಆಟೋ ಕಾಲೋನಿ, ಹಳೇ ಬೊಮ್ಮನಕಟ್ಟೆ ಸರ್ವಜ್ಞ ನಗರ ಮತ್ತು ಅರವಿಂದ ನಗರದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಹಾಗೂ ಹಳೇ ಬೊಮ್ಮನಕಟ್ಟೆಯಿಂದ ಸೂರ್ಯ ಲೇಔಟ್ ಸಂಪರ್ಕ ಸೇತುವೆ ನಿರ್ಮಾಣ ಕಾಮಗಾರಿ ವಾರ್ಡ್ ನಂ.02ರ ಎಲ್.ಬಿ.ಎಸ್ ನಗರ ಮತ್ತು ಅಶ್ವಥ್ ನಗರದ ವಿವಿಧ ತಿರುವುಗಳಿಗೆ ಬಾಕ್ಸ್ ಚರಂಡಿ ಹಾಗೂ ಡೆಕ್ ಸ್ಲ್ಯಾಬ್ ನಿರ್ಮಾಣ ಕಾಮಗಾರಿ, ವಾರ್ಡ್ ನಂ.03ರ ಎನ್.ಇ.ಎಸ್ ಲೇಔಟ್ ಮತ್ತು ಮಧ್ಯ ಕಾಲೋನಿಯಲ್ಲಿ ವಿವಿಧ ತಿರುವುಗಳಿಗೆ ಬಾಕ್ಸ್ ಚರಂಡಿ ಹಾಗೂ ಡೆಕ್ ಸ್ಲ್ಯಾಬ್ ನಿರ್ಮಾಣ ಕಾಮಗಾರಿ, ವಾರ್ಡ್ ನಂ.04ರ ವಿವಿಧ ಭಾಗಗಳಲ್ಲಿ ಅಲಂಕಾರಿಕ ವಿದ್ಯುತ್ ದೀಪ ಅಳವಡಿಸುವುದು, ವಾರ್ಡ್ ನಂ. 05 ರ ಗುರುಪುರದ ವಿವಿಧ ರಸ್ತೆಗಳ ಅಗಲೀಕರಣ ಮತ್ತು ಅಭಿವೃದ್ಧಿ ಕಾಮಗಾರಿ, ವಾರ್ಡ್ ನಂ.06ರ ಗಾಡಿಕೊಪ್ಪ ವ್ಯಾಪ್ತಿಯಲ್ಲಿ ಬರುವ ಸಾಗರ ರಸ್ತೆಯ ಎಡಭಾಗದಲ್ಲಿ ಬರುವ ತಿರುವುಗಳಲ್ಲಿ ರಸ್ತೆ ಅಭಿವೃದ್ಧಿ ಮತ್ತು ಬಾಕ್ಸ್ ಚರಂಡಿ ಮತ್ತು ಡೆಕ್ ಸ್ಲ್ಯಾಬ್ ನಿರ್ಮಾಣ ಕಾಮಗಾರಿ. ವಾರ್ಡ್ ನಂ.07ರಲ್ಲಿ ರಸ್ತೆ ಚರಂಡಿ ಮತ್ತು ಪಾರ್ಕ್ ಅಭಿವೃದ್ಧಿ ಕಾಮಗಾರಿ, ವಾರ್ಡ್ ನಂ.08 ರ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ **ಮೊತ್ತ (ರೂ.ಲಕ್ಷಗಳಲ್ಲಿ)** : 537.36 **ಇ.ಎಂ.ಡಿ (ರೂ.ಗಳಲ್ಲಿ)** : 720000.00 **ಕೆಲಸದ ಅವಧಿ** : 11 ತಿಂಗಳು **ಗುತ್ತಿಗೆದಾರರ ದರ್ಜೆ** : Class 1

ಕ್ರ ಸಂ. 3. ಇಂಡೆಂಟ್ ಸಂಖ್ಯೆ : 117756 **ಪ್ಯಾಕೇಜ್ ಸಂಖ್ಯೆ:** ಪ್ಯಾಕೇಜ್ 04 **ಕಾಮಗಾರಿಯ ವಿವರ** : ವಾರ್ಡ್ ನಂ.09ರ ರಾಜೇಂದ್ರ ನಗರದಲ್ಲಿ ಬಾಕ್ಸ್ ಚರಂಡಿ ಕವರಿಂಗ್ ಸ್ಲ್ಯಾಬ್ ಪೇವರ್ ಬ್ಲಾಕ್, ಕರ್ಬ್ ಸ್ಟೋನ್ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿ, ವಾರ್ಡ್ ನಂ.13ರ ವಿವಿಧ ರಸ್ತೆ ಹಾಗೂ ಅಡ್ಡ ರಸ್ತೆಗಳಲ್ಲಿ ಅಭಿವೃದ್ಧಿ ಕಾಮಗಾರಿ
ವಾರ್ಡ್ ನಂ.14ರ ಚಿಕ್ಕಲ್ ಹಾಗೂ ಸಿದ್ದೇಶ್ವರನಗರದ ರಸ್ತೆಗಳಿಗೆ ಡಾಂಬರೀಕರಣ ಮತ್ತು ಬಾಕ್ಸ್ ಚರಂಡಿ ನಿರ್ಮಾಣ ಕಾಮಗಾರಿ, ವಾರ್ಡ್ ನಂ.15ರ ಹರಿಗೆ ಚಿಲಕಾದ್ರಿಹಳ್ಳಿಯ ಕುಂಚಿಟಿಗರ ಬೀದಿಯಿಂದ ಮಾರಿಕಾಂಬ ದೇವಸ್ಥಾನದ ಸರ್ಕಲ್ ವರಗೆ (ಕಪ್ಪಣ್ಣ ಬೀದಿ ಮುಖಾಂತರ) ಹರಿಗೆ ಚಿಲಕಾದ್ರಿ ಹಳ್ಳಿಯ ಮಹಲಿಂಗಪ್ಪ ಮನೆಯಿಂದ ತಾಜ್ ಮನವರೆಗೆ, ಹರಿಗೆ ಲಕ್ಷ್ಮೀ ಪ್ರಾವಿಜನ್ ಸ್ಟೋರ್ (ದಿನಸಿ ಅಂಗಡಿ) ಯಿಂದ ಭಾರತ ಫೌಂಡ್ರಿ ಗಂಗಾಧರ ಮನಯವರೆಗೆ, ಹರಿಗೆ ಗಣಪತಿ ದೇವಸ್ಥಾನದ ರಸ್ತೆಯ ರಂಗನಾಥ ಮನೆಯಿಂದ ರೈಲ್ವೆ ಹಳಿಯವರಗೆ ಚಾನಲ್ ಏರಿಯ ಫಾರೆಸ್ಟ್ ರಾಜಣ್ಣ ಮನೆಯಿಂದ ನಾಗರಾಜ್ ಮನೆಯವರೆಗೆ ಹಾಗೂ ತಿರುಮಲ ಪ್ರಾವಿಜನ್ ಸ್ಟೋರ್ ನಿಂದ ಕೆ.ಇ.ಬಿ ರಿಟೈರ್ಡ್ ಬಸವರಾಜ್ ಮನೆ ಮುಖಾಂತರ ಕೆ.ಇ.ಬಿ ರಿಟೈರ್ಡ್ ರಾಜಣ್ಣ ಮನೆಯವವರಗೆ, ಹರಿಗೆ ತೊಪ್ಪಿನಘಟ್ಟ 2ನೇ ಮುಖ್ಯ ರಸ್ತೆಯ ಲಾರಿ ಆಫೀಸ್ ನಿಂದ ಸ್ವಾಮಿ ಅಂಗಡಿಯವರೆಗೆ ಸಿ.ಸಿ ರಸ್ತೆ ನಿರ್ಮಾಣ ಕಾಮಗಾರಿ. ವಾರ್ಡ್ ನಂ.16ರ ವ್ಯಾಪ್ತಿಯಲ್ಲಿ ಬರುವ ಜ್ಯೋತಿ ನಗರ ಮುಖ್ಯರಸ್ತೆಯಲ್ಲಿ, ರಾಮಪ್ಪ ಲೇಔಟ್ ನಲ್ಲಿ, ಮಲವಗೊಪ್ಪ ಬಡಾವಣೆಯಲ್ಲಿ ಬಾಕ್ಸ್ ಚರಂಡಿ, ಫುಟ್ಪಾಥ್ ಮತ್ತು ಡಾಂಬರೀಕರಣ ಕಾಮಗಾರಿ, ವಾರ್ಡ್ ನಂ.17ರ ದ್ರೌಪದಮ್ಮ ವೃತ್ತದ ಬಿ.ಎಸ್.ಎನ್, ಎಲ್ ಕಛೇರಿಯ ಹಿಂಭಾಗದ ರಸ್ತೆಯವರೆಗೆ ಮತ್ತು ರಾಜಕಾಲುವೆ ಪಕ್ಕದ ಗೋಪಾಳ ಬಿ ಬ್ಲಾಕ್ 2 ಮತ್ತು 3ನೇ ಮುಖ್ಯ ರಸ್ತೆ ಹಾಗೂ ಗೋಪಾಳ ಪೋಲೀಸ್ ಚೌಕಿ ವೃತ್ತ ದಿಂದ ರಾಜಕಾಲುವೆ ವರೆಗೆ ರಸ್ತೆ ಅಭಿವೃದ್ಧಿ ಹಾಗೂ ಸಿ.ಸಿ ಬಾಕ್ಸ್ ಚರಂಡಿ ನಿರ್ಮಾಣ ಕಾಮಗಾರಿ. ವಾರ್ಡ್ ನಂ.18ರ ವಿನೋಬನಗರ ಬಡಾವಣೆ ಮುಖ್ಯ ರಸ್ತೆ ಮತ್ತು ಕ್ರಾಸ್ ರಸ್ತೆಗಳ ಅಭಿವೃದ್ಧಿ ಹಾಗೂ ಸಿ.ಸಿ ಬಾಕ್ಸ್ ಚರಂಡಿ ನಿರ್ಮಾಣ ಕಾಮಗಾರಿ, ವಾರ್ಡ್ ನಂ.22ರ ವಿವಿಧ ರಸ್ತೆಗಳಿಗೆ ಬಾಕ್ಸ್ ಚರಂಡಿ, ಕವರ್ ಸ್ಲ್ಯಾಬ್, ಒಳಚರಂಡಿ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿ **ಮೊತ್ತ (ರೂ.ಲಕ್ಷಗಳಲ್ಲಿ)** : 537.36 **ಇ.ಎಂ.ಡಿ (ರೂ.ಗಳಲ್ಲಿ)** : 720000.00 **ಕೆಲಸದ ಅವಧಿ** : 11 ತಿಂಗಳು **ಗುತ್ತಿಗೆದಾರರ ದರ್ಜೆ** : Class 1

ಸೂಚನೆ: ಟೆಂಡರ್‌ಗೆ ಸಂಬಂಧಪಟ್ಟ ಯಾವುದೇ ರೀತಿಯ ಬದಲಾವಣೆ ಅಥವಾ ತಿದ್ದುಪಡಿಯನ್ನು ಇ–ಪೋರ್ಟಲ್ ಮುಖಾಂತರ ಸೂಚಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು(ವಿಭಾಗ–1),
ಶಿವಮೊಗ್ಗ ಮಹಾನಗರ ಪಾಲಿಕೆ ಶಿವಮೊಗ್ಗ.

ವಾ.ಸಾ.ಸಂ.ಇ/ಶಿ/ನಂ–48/07/ಎಂಸಿಎ/21–22

‘ಸಚಿವ ಸಂಪುಟದಿಂದ ಕೈಬಿಟ್ಟಿದ್ದಕ್ಕೆ ಬೇಸರವಿಲ್ಲ’

ಪ್ರಜಾವಾಣಿ ವಾರ್ತೆ

ಸದಾನಂದಗೌಡ

ನವದೆಹಲಿ: ‘ಪ್ರಧಾನಿ ನರೇಂದ್ರ ಮೋದಿ ಸಂಪುಟದಿಂದ ನನ್ನನ್ನು ಕೈಬಿಟ್ಟಿರುವುದಕ್ಕೆ ಯಾವುದೇ ರೀತಿಯ ಬೇಸರ ಇಲ್ಲ’ ಎಂದು ಬೆಂಗಳೂರು ಉತ್ತರ ಕ್ಷೇತ್ರದ ಸಂಸದ ಡಿ.ವಿ. ಸದಾನಂದಗೌಡ ತಿಳಿಸಿದರು.

ಶುಕ್ರವಾರ ‘ಪ್ರಜಾವಾಣಿ’ಯೊಂದಿಗೆ ಮಾತನಾಡಿದ ಅವರು, ‘ಪಕ್ಷವು ಏಳು ವರ್ಷಗಳ ಕಾಲ ಕೇಂದ್ರ ಸಚಿವ ಸ್ಥಾನದ ಅವಕಾಶ ನೀಡಿದೆ. ಯುವಕರಿಗೆ ಅವಕಾಶ ನೀಡಲೆಂದೇ ವರಿಷ್ಠರು ರಾಜೀನಾಮೆ ಪಡೆದಿರಬಹುದು’ ಎಂದರು.

‘ನನ್ನಿಂದ ಮಾತ್ರವಲ್ಲ, ಕೇಂದ್ರ ಸಚಿವ ಸಂಪುಟದಲ್ಲಿದ್ದ ಇತರ ಕೆಲವು ಹಿರಿಯರಿಂದಲೂ ಪ್ರಧಾನಿ ರಾಜೀನಾಮೆ ಪಡೆದಿದ್ದಾರೆ. ಪಕ್ಷದ ವರಿಷ್ಠರ ಈ ನಿರ್ಧಾರಕ್ಕೆ ಎಲ್ಲರೂ ಬದ್ಧರಾಗಿದ್ದೇವೆ’ ಎಂದು ಅವರು ಹೇಳಿದರು.

‘ಪಕ್ಷವು ನನಗೆ ರಾಜ್ಯ ಘಟಕದ ಅಧ್ಯಕ್ಷ, ಮುಖ್ಯಮಂತ್ರಿ, ವಿಪಕ್ಷ ನಾಯಕ, ಕೇಂದ್ರದ ಸಚಿವ ಸ್ಥಾನದ ಅವಕಾಶ ನೀಡಿದೆ. ಯಾವುದೇ ಒಬ್ಬ ವ್ಯಕ್ತಿ ಇದಕ್ಕಿಂತ ಹೆಚ್ಚಿನದನ್ನು ನಿರೀಕ್ಷಿಸುವುದೂ ತಪ್ಪು. ಸಚಿವ ಸ್ಥಾನ ಕೈತಪ್ಪಿದ್ದಕ್ಕೆ ವಿಷಾದವಂತೂ ಇಲ್ಲ’ ಎಂದು ಅವರು ಸ್ಪಷ್ಟಪಡಿಸಿದರು.

‘ವರಿಷ್ಠರ ನಿರೀಕ್ಷೆಯಂತೆಯೇ ಕಾರ್ಯ ನಿರ್ವಹಿಸಿದ ತೃಪ್ತಿ, ಹೆಮ್ಮೆ ಇದೆ. ಕೋವಿಡ್‌ನಂತಹ ಸಂದಿಗ್ಧ ಸ್ಥಿತಿಯಲ್ಲಿ ಸಂಕಷ್ಟದಲ್ಲಿದ್ದ ಜನತೆಗೆ ನನಗೆ ಸಂಬಂಧಿಸಿದ ಸಚಿವಾಲಯದ ಮೂಲಕ ಅಗತ್ಯ ಔಷಧಿ ವಿತರಣೆಗೆ ಸತತ ಶ್ರಮ ವಹಿಸಿದ್ದು ಸ್ಮರಣೀಯ ಅನುಭವವಾಗಿದೆ. ನನ್ನನ್ನು ಕೈಬಿಟ್ಟು ಯುವಕರಿಗೆ ಅವಕಾಶ ನೀಡಿರುವುದು ಸಂತಸ ನೀಡಿದೆ’ ಎಂದು ಅವರು ಹೇಳಿದರು.

‘ರಾಜ್ಯ ಬಿಜೆಪಿಯಲ್ಲಿ ಯಾವುದಾದರೂ ಪ್ರಮುಖ ಹುದ್ದೆಯ ನಿರೀಕ್ಷೆಯಲ್ಲಿದ್ದೀರಾ’ ಎಂಬ ಪ್ರಶ್ನೆಗೆ ನಗುತ್ತಲೇ ಉತ್ತರಿಸಿದ ಅವರು, ‘ಅಂಥ ನಿರೀಕ್ಷೆಗಳೇನೂ ಇಲ್ಲ. ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಪಕ್ಷ ಸಂಘಟನೆಗಾಗಿ ಯಾವುದೇ ಜವಾಬ್ದಾರಿ ವಹಿಸಿದರೂ ನಿರ್ವಹಿಸಬಲ್ಲೆ’ ಎಂದು ವಿವರಿಸಿದರು.

ಕೇಂದ್ರ ಸಂಪುಟ ಪುನರ್ ರಚನೆಗೆ ಕೆಲವೇ ದಿನಗಳ ಮೊದಲು ಮಾನಹಾನಿಕರ ಸುದ್ದಿ ಪ್ರಸಾರ ಮಾಡದಂತೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಸದಾನಂದಗೌಡ, ‘ನಮ್ಮ ಸುತ್ತಲೇ ಇರುವ ಕೆಲವರು ಪಿತೂರಿ ನಡೆಸುವ ಮೂಲಕ ಮಾನಹಾನಿಗೆ ಯತ್ನಿಸಿದ್ದಾರೆ ಎಂಬುದು ತಿಳಿದುಬಂದಿದ್ದರಿಂದ ನ್ಯಾಯಾಲಯದ ಮೊರೆ ಹೋಗಬೇಕಾಯಿತು’ ಎಂದಷ್ಟೇ ಹೇಳಿದರು.

ಎಪಿಎಂಸಿಗಳಿಗೆ ಪೂರಕ ಘಟಕ ಸ್ಥಾಪನೆ

ಸಹಕಾರಿ ಸಂಘಗಳಿಗೆ ನೆರವು: ಕರಂದ್ಲಾಜೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ)ಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಸಹಕಾರಿ ಸಂಘ– ಸಂಸ್ಥೆಗಳ ಸಹಭಾಗಿತ್ವಕ್ಕೆ ಅವಕಾಶ ನೀಡಲು ಕೇಂದ್ರದ ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕೇಂದ್ರದ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಎಪಿಎಂಸಿ ಆವರಣದಲ್ಲೇ ರೈತರಿಗೆ ಎಲ್ಲ ಅಗತ್ಯ ಸೌಲಭ್ಯ ಒದಗಿಸುವತ್ತ ಸರ್ಕಾರ ಆದ್ಯತೆ ನೀಡಿದೆ ಎಂದರು.

ಎಪಿಎಂಸಿ ಆವರಣದಲ್ಲಿ ಶೀಥಲೀಕರಣ, ಧಾನ್ಯ ವಿಂಗಡಣೆ ಮತ್ತು ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಇದುವರೆಗೆ ಕೇವಲ ಸರ್ಕಾರಿ ಸಂಸ್ಥೆಗಳಿಗೆ ಮಾತ್ರ ಅವಕಾಶವಿತ್ತು. ಸ್ವ–ಸಹಾಯ ಸಂಘ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಮತ್ತು ಕೃಷಿಕರನ್ನು ಒಳಗೊಂಡ ಇತರೆ ಸಹಕಾರಿ ಸಂಘಗಳಿಗೆ ಈ ಘಟಕಗಳ ಸ್ಥಾಪನೆಗೆ ₹ 2 ಕೋಟಿ ಸಾಲ ಸೌಲಭ್ಯ ನೀಡುವ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಅವರು ವಿವರಿಸಿದರು.

ಮಾರುಕಟ್ಟೆ ಆವರಣದಲ್ಲಿ ಮಾತ್ರವಲ್ಲದೆ, ಆಯಾ ಗ್ರಾಮಗಳಲ್ಲೂ ಮಾರುಕಟ್ಟೆಗೆ ಪೂರಕವಾದ ಘಟಕಗಳನ್ನು ಸ್ಥಾಪಿಸಲು ಸಹಕಾರಿ ಸಂಘಗಳಿಗೆ ಹಣಕಾಸಿನ ನೆರವು ನೀಡಲಾಗುವುದು. ನೂತನ ಕೃಷಿ ಕಾಯ್ದೆಯಿಂದ ಎಪಿಎಂಸಿಗಳು ಮಹತ್ವ ಕಳೆದುಕೊಳ್ಳಲಿವೆ ಎಂದು ಆರೋಪಿಸುತ್ತಿರುವ ವಿರೋಧ ಪಕ್ಷಗಳಿಗೆ ಈ ಮೂಲಕ ತಕ್ಕ ಉತ್ತರ ನೀಡಲಾಗಿದೆ ಎಂದು ಅವರು ತಿಳಿಸಿದರು.

ಕೊಬ್ಬರಿ ರಫ್ತಿಗೆ ಕ್ರಮ: ದರ ಕುಸಿತದಿಂದ ಕಂಗಾಲಾಗಿರುವ ತೆಂಗು ಬೆಳೆಗಾರರಿಗೆ ನೆರವು ನೀಡಲೆಂದೇ ವಿದೇಶಗಳಿಗೆ ಕೊಬ್ಬರಿಯನ್ನು ರಫ್ತು ಮಾಡಲು ಅನುಮತಿ ನೀಡಲು ಸರ್ಕಾರ ನಿರ್ಧರಿಸಿದೆ. ಇದರಿಂದ ರೈತರಿಗೆ ಉತ್ತಮ ದರ ದೊರೆಯಲಿದೆ ಎಂದು ಅವರು ಹೇಳಿದರು.

ತೆಂಗು ಅಭಿವೃದ್ಧಿ ಮಂಡಳಿಗಳಲ್ಲಿ ಇದುವರೆಗೆ ಐಎಎಸ್ ಅಧಿಕಾರಿಗಳು ಮಾತ್ರ ಅಧ್ಯಕ್ಷರಾಗಲು ಇದ್ದ ಅವಕಾಶವನ್ನು ಸಾಮಾನ್ಯ ರೈತರಿಗೂ ವಿಸ್ತರಿಸಲಾಗಿದೆ ಎಂದು ಹೇಳಿದ ಅವರು, ಅಧ್ಯಕ್ಷರನ್ನು ಕೇಂದ್ರ ಸರ್ಕಾರವೇ ನೇಮಕ ಮಾಡಲಿದೆ ಎಂದರು.

ಈ ಮಂಡಳಿಗಳಲ್ಲಿ ತಲಾ 6 ಸದಸ್ಯರ ನೇಮಕಕ್ಕೆ ಇದ್ದ ಹಳೆಯ ನಿಯಮ ಬದಲಿಸಿ, 8 ಜನ ಸದಸ್ಯರ ನೇಮಕಕ್ಕೂ ಅನುವು ಮಾಡಿಕೊಡಲಾಗುವುದು ಎಂದು ಅವರು ಹೇಳಿದರು.

ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಬಳಿ ಸಮಗ್ರ ಮಾಹಿತಿ –ರವಿಕುಮಾರ್

ಪಕ್ಷ ವಿರೋಧಿ ಕೃತ್ಯ: ಶೀಘ್ರ ಕ್ರಮ

ಪ್ರಜಾವಾಣಿ ವಾರ್ತೆ



ರವಿಕುಮಾರ್

ಬೆಂಗಳೂರು: ಪಕ್ಷ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿರುವವರ ವಿರುದ್ಧ ಇನ್ನು ಕೆಲವೇ ದಿನಗಳಲ್ಲಿ ವರಿಷ್ಠರು ಕ್ರಮ ಕೈಗೊಳ್ಳಲಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ಎಚ್ಚರಿಕೆ ನೀಡಿದ್ದಾರೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ರಾಜ್ಯಕ್ಕೆ ಭೇಟಿ ನೀಡಿದ್ದ ಅರುಣ್‌ಸಿಂಗ್ ಅವರು, ಯಾರು ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿದ್ದಾರೆ? ಯಾರು ಅಭಿವೃದ್ಧಿ ಕಾರ್ಯ ಮಾಡುತ್ತಿದ್ದಾರೆ? ಎಂಬುದರ ಸಮಗ್ರ ಮಾಹಿತಿ ಪಡೆದುಕೊಂಡು ಹೋಗಿದ್ದಾರೆ ಎಂದರು.

ಯಾರು ಏನು ಮಾಡಿದರೂ, ಏನು ಮಾತನಾಡಿದರೂ ನಡೆಯುತ್ತದೆ ಎಂಬ ಭಾವನೆ ಬೇಡ. ಕೋವಿಡ್ 2 ನೇ ಅಲೆಯ ವಿಪರೀತ ಕೆಲಸದಲ್ಲಿ ಇದ್ದ ಕಾರಣ, ಈ ವಿಷಯಗಳ ಬಗ್ಗೆ ಗಮನ ಹರಿಸಲು ಆಗಿಲ್ಲ. ಈಗ ಕೇಂದ್ರ ಸಚಿವ ಸಂಪುಟ ವಿಸ್ತರಣೆಯೂ ಆಗಿದೆ. ಮುಂದೆ ವರಿಷ್ಠರು ರಾಜ್ಯದ ಕಡೆ ಗಮನಹರಿಸಲಿದ್ದಾರೆ ಎಂದು ಹೇಳಿದರು.

ಕೇಂದ್ರ ಮಂತ್ರಿಮಂಡಲದ ವಿಸ್ತರಣೆ ಸಂದರ್ಭದಲ್ಲಿ ಸಾಮಾಜಿಕ ನ್ಯಾಯಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಪ್ರಧಾನಿಯವರು ದಲಿತರು, ಹಿಂದುಳಿದವರು ಮತ್ತು ಮಹಿಳೆಯರಿಗೆ ಆದ್ಯತೆ ನೀಡಿದ್ದಾರೆ ಎಂದು ರವಿಕುಮಾರ್ ಹೇಳಿದರು.

ದಲಿತರಿಗೆ ಇಷ್ಟೊಂದು ಸಚಿವ ಸ್ಥಾನಗಳನ್ನು ಕೊಟ್ಟಿರುವುದು ದಾರಿ ತಪ್ಪಿಸುವ ಕೆಲಸ ಎಂದು ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ ಟೀಕೆ ಮಾಡಿದ್ದಾರೆ. ಪ್ರಾಯಶಃ ಇಷ್ಟು ವರ್ಷ ಕಾಂಗ್ರೆಸ್‌ನವರು ದಲಿತರನ್ನು ದಾರಿ ತಪ್ಪಿಸಿದ್ದನ್ನು ನೆನಪಾಗಿ ಹೇಳಿರಬೇಕು ಎಂದು ಬಿಜೆಪಿ ಎಸ್‌ಸಿ ಮೋರ್ಚಾದ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ವ್ಯಂಗ್ಯವಾಡಿದರು.

'ದಲಿತರಿಗೆ ಹೆಚ್ಚು ಸ್ಥಾನ ನೀಡಿದ ಬಗ್ಗೆ ಅವರು ಪ್ರಧಾನಿ ಮೋದಿ ಅವರನ್ನು ಅಭಿನಂದಿಸಬೇಕಿತ್ತು. ಆದರೆ, ಈ ಬೆಳವಣಿಗೆಯಿಂದ ಕಾಂಗ್ರೆಸಿಗರು ವಿಚಲಿತರಾಗಿದ್ದಾರೆ' ಎಂದು ರವಿಕುಮಾರ್ ಅವರು ಟೀಕಿಸಿದರು.

ಹೆಚ್ಚುವರಿ ಲಸಿಕೆ: ಮನವಿ ಸಲ್ಲಿಸಲು ಸೂಚನೆ

ಬೆಂಗಳೂರು: ಜುಲೈ ಮತ್ತು ಆಗಸ್ಟ್ ತಿಂಗಳಿಗೆ ಅಗತ್ಯ ಇರುವ ಎರಡನೇ ಡೋಸ್ ಕೋವಿಡ್ ಲಸಿಕೆಯ ಪ್ರಮಾಣ ಎಷ್ಟು ಎಂಬುದರ ವಿವರ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಅಮಿಕಸ್ ಕ್ಯೂರಿ ವಿಕ್ರಮ್ ಹುಯಿಲಗೋಳ ಸಲ್ಲಿಸಿದ್ದ ವರದಿ ಪರಿಶೀಲಿಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕ ನೇತೃತ್ವದ ವಿಭಾಗೀಯ ಪೀಠ, ಈ ಆದೇಶ ನೀಡಿದೆ.

'ಮೊದಲ ಡೋಸ್ ಲಸಿಕೆಯನ್ನು ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಸಾಕಷ್ಟು ಜನ ಪಡೆದಿದ್ದಾರೆ. ರಾಜ್ಯ ಸರ್ಕಾರವೇ ಬಿಡುಗಡೆ ಮಾಡಿರುವ ಮಾಧ್ಯಮ ಪ್ರಕಟಣೆ ಪ್ರಕಾರ, 2.4 ಕೋಟಿ ಜನರು ಮೊದಲ ಡೋಸ್ ಮತ್ತು 44 ಲಕ್ಷ ಜನ ಎರಡನೇ ಡೋಸ್ ಪಡೆದಿದ್ದಾರೆ. ಲಸಿಕೆ ಹಂಚಿಕೆಯ ಪ್ರಮಾಣ ಗಮನಿಸಿದರೆ ಜುಲೈ ತಿಂಗಳಿಗೆ 44.77 ಲಕ್ಷ ಡೋಸ್ ಕೋವಿಶೀಲ್ಡ್ 10.29 ಲಕ್ಷ ಕೊವ್ಯಾಕ್ಸಿನ್ ದೊರೆಯಲಿದೆ' ಎಂದು ಅಮಿಕಸ್ ಕ್ಯೂರಿ ವರದಿಯಲ್ಲಿ ತಿಳಿಸಿದ್ದಾರೆ. 'ಹೆಚ್ಚುವರಿ ಡೋಸ್ ಕೋರಿ ಕೇಂದ್ರ ಸರ್ಕಾರಕ್ಕೆ ಕೂಡಲೇ ಮನವಿ ಸಲ್ಲಿಸಬೇಕು. ಕೋವಿಡ್ ಮುಂಚೂಣಿ ಯೋಧರ ಕುಟುಂಬದ 18ರಿಂದ 44 ವರ್ಷದೊಳಗಿನ ಸದಸ್ಯರಿಗೆ ಆದ್ಯತೆ ಮೇರೆಗೆ ಲಸಿಕೆ ನೀಡುವ ಬಗ್ಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಪೀಠ ತಿಳಿಸಿತು. ಕೋವಿಡ್ ಸಂಬಂಧಿಸಿದ ಅರ್ಜಿಗಳ ವಿಚಾರಣೆಯನ್ನು ಜುಲೈ 16ಕ್ಕೆ ಮುಂದೂಡಿತು.

ಆರ್‌ಟಿಇ: ದಾಖಲಾತಿ ಅವಧಿ ವಿಸ್ತರಣೆ

ಬೆಂಗಳೂರು: ಶಿಕ್ಷಣ ಹಕ್ಕು ಕಾಯ್ದೆಯಡಿ (ಆರ್‌ಟಿಇ) ಮೊದಲ ಸುತ್ತಿನ ಲಾಟರಿ ಪ್ರಕ್ರಿಯೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳ ಶಾಲಾ ದಾಖಲಾತಿ ಅವಧಿಯನ್ನು ಇದೇ 16ರವರೆಗೆ ವಿಸ್ತರಿಸಲಾಗಿದೆ. ಜುಲೈ 9 ಕೊನೆಯ ದಿನವಾಗಿತ್ತು.

ವಾಚಾಳಿಗಳಿಗೆ ಬುದ್ಧಿ ಕಲಿಸಲು ಗೊತ್ತಿದೆ: ಕೆ.ಎಸ್. ಈಶ್ವರಪ್ಪ

ಪ್ರಜಾವಾಣಿ ವಾರ್ತೆ

ಮೈಸೂರು: 'ಬಿಜೆಪಿಯಲ್ಲಿ ಹೆಚ್ಚಾಗಿ ಮಾತನಾಡುತ್ತಿರುವ ಬಸನಗೌಡ ಪಾಟೀಲ ಯತ್ನಾಳ್, ಸಿ.ಪಿ. ಯೋಗೇಶ್ವರ್, ರೇಣುಕಾಚಾರ್ಯ ಹಾಗೂ ಇತರರಿಗೆ ಯಾವಾಗ, ಹೇಗೆ ಬುದ್ಧಿ ಕಲಿಸಬೇಕು ಎಂಬುದು ಗೊತ್ತಿದೆ. ಖಂಡಿತ ಬುದ್ಧಿ ಕಲಿಸುತ್ತೇವೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ತಿಳಿಸಿದರು.

'ನಮ್ಮ ಪಕ್ಷದಲ್ಲಿ ಅಪ್ಪ ಅಮ್ಮ ಇದ್ದಾರೆ. ಅದಕ್ಕಾಗಿಯೇ ವರಿಷ್ಠರು ಎಲ್ಲರ ಅಭಿಪ್ರಾಯ ಆಲಿಸಿದ್ದಾರೆ. ಕಾಂಗ್ರೆಸ್‌ನಲ್ಲಿ ಮುಂದಿನ ಮುಖ್ಯಮಂತ್ರಿ ಕುರಿತು ಅನೇಕರು ಹೇಳಿಕೆ ನೀಡಿದಾಗ್ಯೂ ಆ ಪಕ್ಷದ ಹೈಕಮಾಂಡ್ ಬಂದು ಸಮಸ್ಯೆ ಆಲಿಸಿಲ್ಲ' ಎಂದು ಇಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹರಿಹಾಯ್ದರು.

'ತಾವು ಭಾವಿ ಸಿ.ಎಂ ಎಂದು ಹೇಳಿಕೊಂಡಿರುವ ಐದು ಜಾತಿಯ ಕಾಂಗ್ರೆಸ್‌ನ ಐವರು ಚುನಾವಣೆ ಬಳಿಕ ವಿರೋಧಪಕ್ಷದ ಸ್ಥಾನದಲ್ಲೂ ಕೂರುವುದಿಲ್ಲ. ಕಾಂಗ್ರೆಸ್ ಮುಳುಗುತ್ತಿರುವ ಹಡಗು' ಎಂದು ಟೀಕಿಸಿದರು.

'ಪರಸ್ಪರ ಸೋಲಿಸಲು ಯತ್ನಿಸಿಲ್ಲ ಎಂದು ಸಿದ್ದರಾಮಯ್ಯ ಹಾಗೂ ಡಾ. ಜಿ.ಪರಮೇಶ್ವರ ದಲಿತರೊಬ್ಬರ ಮೇಲೆ ಪ್ರಮಾಣ ಮಾಡಲಿ' ಎಂದು ಈಶ್ವರಪ್ಪ ಸವಾಲೆಸೆದರು.

ಜಯಂತ ಕಾಯ್ಕಿಣಿ, ಆರತಿಗೆ 'ಕಸಾಪ ದತ್ತಿ ಪ್ರಶಸ್ತಿ'



ಜಯಂತ ಕಾಯ್ಕಿಣಿ

ಎಚ್‌.ಎನ್‌. ಆರತಿ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಮನೋಹರ ಪಾರ್ಥಸಾರಥಿ ಮನುಶ್ರೀ ದತ್ತಿ ಪ್ರಶಸ್ತಿ'ಗೆ ಸಾಹಿತಿ ಜಯಂತ ಕಾಯ್ಕಿಣಿ ಹಾಗೂ 'ಎ. ಪಂಕಜ ಸಾಹಿತ್ಯ ಪ್ರಶಸ್ತಿ'ಗೆ ಲೇಖಕಿ ಎಚ್‌.ಎನ್. ಆರತಿ ಆಯ್ಕೆಯಾಗಿದ್ದಾರೆ.

ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ನೇತೃತ್ವದಲ್ಲಿ ಶುಕ್ರವಾರ ಈ ಆಯ್ಕೆಗಳು ನಡೆದಿವೆ. ಈ ಪ್ರಶಸ್ತಿಗಳು ತಲಾ ₹ 10 ಸಾವಿರ ನಗದು ಬಹುಮಾನ ಹಾಗೂ ಫಲಕವನ್ನು ಒಳಗೊಂಡಿವೆ ಎಂದು ಗೌರವ ಕಾರ್ಯದರ್ಶಿ ಕೆ. ರಾಜಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

26 ಜಿಲ್ಲೆ: 200ರ ಗಡಿಯೊಳಗೆ ಹೊಸ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ 2,290 ಮಂದಿ ಕೋವಿಡ್ ಪೀಡಿತರಾಗಿರುವುದು ಶುಕ್ರವಾರ ದೃಢಪಟ್ಟಿದೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 28.67 ಲಕ್ಷ ದಾಟಿದೆ.

ಒಂದು ದಿನದ ಅವಧಿಯಲ್ಲಿ 1.53 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದ್ದು, ಶೇ 1.48ರಷ್ಟು ಸೋಂಕು ದೃಢ ಪ್ರಮಾಣ ವರದಿಯಾಗಿದೆ. ಬೆಂಗಳೂರಿನಲ್ಲಿ 472, ಹಾಸನದಲ್ಲಿ 228, ಮೈಸೂರಿನಲ್ಲಿ 216 ಸೋಂಕು ಪೀಡಿತರಾಗಿದ್ದಾರೆ. 26 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 200ರ ಗಡಿಯಲ್ಲಿವೆ. 15 ಜಿಲ್ಲೆಗಳಲ್ಲಿ ಎರಡಂಕಿ ಹಾಗೂ 6 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ.

ಹೊಸದಾಗಿ 3,045 ಮಂದಿ ಗುಣಮುಖರಾಗಿದ್ದು, ಗುಣಮುಖರಾದವರ ಸಂಖ್ಯೆ 27.93 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆಯಾಗಿದ್ದು, 37,906 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಸೋಂಕಿತರಲ್ಲಿ 68 ಮಂದಿ ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 2.96 ರಷ್ಟು ವರದಿಯಾಗಿದೆ. ರಾಜ್ಯದ 21 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ಖಚಿತಪಟ್ಟಿವೆ. ಬೆಂಗಳೂರಿನಲ್ಲಿ 12, ದಕ್ಷಿಣ ಕನ್ನಡದಲ್ಲಿ 9, ಮೈಸೂರಿನಲ್ಲಿ 7, ಧಾರವಾಡ ಹಾಗೂ ದಾವಣಗೆರೆಯಲ್ಲಿ ತಲಾ 5 ಮಂದಿ ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ 5ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ. ಈವರೆಗೆ ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 35,731ಕ್ಕೆ ತಲುಪಿದೆ.

ಸರ್ವರ್ ಸಮಸ್ಯೆ ಪರಿಹರಿಸಲು ಕ್ರಮ

ಬೆಂಗಳೂರು: ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಸರ್ವರ್ ಮತ್ತು ತಾಂತ್ರಿಕ ಸಮಸ್ಯೆಗಳನ್ನು ಆದಷ್ಟು ಬೇಗನೇ ಸರಿಪಡಿಸಬೇಕು ಎಂದು ಕಂದಾಯ ಸಚಿವ ಆರ್.ಅಶೋಕ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಈ ತಾಂತ್ರಿಕ ಸಮಸ್ಯೆಯಿಂದಾಗಿ ಆಸ್ತಿ ನೋಂದಣಿ ಸೇರಿದಂತೆ ಎಲ್ಲ ಕೆಲಸ ಕಾರ್ಯಗಳಿಗೂ ತೊಂದರೆ ಆಗಿದೆ. ಸರ್ವರ್ ಮತ್ತು ಒಟಿಪಿ ಸಮಸ್ಯೆಯನ್ನು ತಕ್ಷಣವೇ ಬಗೆಹರಿಸಬೇಕು ಎಂದರು. ಪರಿಹಾರ ಕ್ರಮ ಕುರಿತು ಅಧಿಕಾರಿಗಳ ಜೊತೆಗೆ ಚರ್ಚಿಸಿದರು.

ಕರ್ನಾಟಕ ಉಚ್ಚ ನ್ಯಾಯಾಲಯ,
ಉಚ್ಚ ನ್ಯಾಯಾಲಯ ಕಟ್ಟಡಗಳು, ಬೆಂಗಳೂರು–560001
ಹೆಚ್‌ಸಿಸಿ ಸಂ. 44/2021 ದಿನಾಂಕ: 07.07.2021

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ

ಕರ್ನಾಟಕ ಉಚ್ಚ ನ್ಯಾಯಾಲಯವು, ಒಟ್ಟು 167 ಸಂಖ್ಯೆಗಳ All-in-one Desktops ಖರೀದಿಸಿ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಮತ್ತು ಧಾರವಾಡ, ಕಲಬುರಗಿ ಪೀಠಗಳಿಗೆ ಅಳವಡಿಸಲು ನಿರ್ಧರಿಸಿದ್ದು, ಅದಕ್ಕಾಗಿ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದೆ. ಟೆಂಡರ್‌ನ್ನು ದಿನಾಂಕ: **06.08.2021ರ ಸಂಜೆ 4.00 ಗಂಟೆಯೊಳಗೆ ಆಸಕ್ತರು** ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ವಿವರಗಳನ್ನು **https://eproc.karnataka.gov.in** ಜಾಲತಾಣದ ಮೂಲಕ ಪಡೆದುಕೊಳ್ಳಬಹುದು.

ಸಹಿ/- (ಎನ್.ಜಿ.ದಿನೇಶ)
ರಿಜಿಸ್ಟ್ರಾರ್ (ಗಣಕ) ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ

ವಾಸಾಸಂಇ/ಉ.ನಿ.ನ/07/ಎಂಸಿಎ/21-22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೊಪ್ಪಳ
ಸಂ.: ಕಂದಾಯ/ಎಸ್.ಡಿ.ಆರ್.ಎಫ್/2021–22 ದಿನಾಂಕ: 07.07.2021

ದರಪಟ್ಟಿ ಪ್ರಕಟಣೆ

ವಿಷಯ: ಕೊಪ್ಪಳ ಜಿಲ್ಲೆಯಲ್ಲಿ ಎಸ್.ಡಿ.ಆರ್.ಎಫ್. ಯೋಜನೆಯಡಿ ತುರ್ತಾಗಿ ಕೋವಿಡ್–19ರ ನಿರ್ವಹಣೆ ಮತ್ತು ಚಿಕಿತ್ಸೆಗಾಗಿ ವೈದ್ಯಕೀಯ ಉಪಕರಣಗಳನ್ನು ಖರೀದಿಸಲು ದರಪಟ್ಟಿಯನ್ನು ಸಲ್ಲಿಸುವ ಕುರಿತು.
ಉಲ್ಲೇಖ: ಸರ್ಕಾರದ ಅಧಿಸೂಚನೆ ಸಂಖ್ಯೆ: ಪಿಡಿಎಸ್51 ಹೆಚ್‌ಕೆಡಿ 2021, ದಿನಾಂಕ: 17.06.2021

ಕೊಪ್ಪಳ ಜಿಲ್ಲೆಯಲ್ಲಿ ಎಸ್.ಡಿ.ಆರ್.ಎಫ್. ಯೋಜನೆಯಡಿ ತುರ್ತಾಗಿ ಕೋವಿಡ್–19ರ ನಿರ್ವಹಣೆ ಮತ್ತು ಚಿಕಿತ್ಸೆಗಾಗಿ ವೈದ್ಯಕೀಯ ಉಪಕರಣಗಳನ್ನು ಖರೀದಿಸುವುದು ಅತೀ ಅವಶ್ಯಕವಿರುತ್ತದೆ. ಉಲ್ಲೇಖಿತ ಸರ್ಕಾರದ ಅಧಿಸೂಚನೆಯನ್ವಯ ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ (ಕೆ.ಎಸ್.ಎಂ.ಎಸ್.ಸಿ.ಎಲ್) ವತಿಯಿಂದ ಸಮಂಜಸವಾದ ಹಾಗೂ ಮಾರುಕಟ್ಟೆ ದರಪಟ್ಟಿಯನ್ವಯ ಉಪಕರಣಗಳನ್ನು ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಎ)ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಪಾರದರ್ಶಕತೆ ಕಾಯ್ದೆಯಿಂದ ವಿನಾಯ್ತಿ ನೀಡಿರುತ್ತಾರೆ. ಅದರಂತೆ ಅನುಬಂಧ–1 ಮತ್ತು 2 ರಲ್ಲಿಯ ವೈದ್ಯಕೀಯ ಉಪಕರಣಗಳಿಗೆ ಸಂಬಂಧಿಸಿದಂತೆ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಸದರಿ ಪ್ರಕಟಣೆಯನ್ನು **https://koppal.nic.in** ರಲ್ಲಿ ವೀಕ್ಷಿಸಬಹುದು.
ಇಚ್ಛೆಯುಳ್ಳ ಬಿಡ್ಡುದಾರರು / ಸಂಸ್ಥೆಯವರು ಈ ಕಾರ್ಯಾಲಯಕ್ಕೆ 7 ದಿನದೊಳಗಾಗಿ ಅಂದರೆ ದಿನಾಂಕ: **14.07.2021** ಒಳಗಾಗಿ ಇ–ಮೇಲ್ ಐಡಿ: **deo.koppal@gmail.com** ಅಥವಾ ಅಂಚೆ ಮುಖಾಂತರ ದರಪಟ್ಟಿಗಳನ್ನು (Password Protected Document ನೊಂದಿಗೆ) ಸಲ್ಲಿಸತಕ್ಕದ್ದು.
ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಪರ್ಕ: **08539–220844,** ಮೊಬೈಲ್ ನಂ.: **9538387488.**

ಸಹಿ/–, ಅಪರ ಜಿಲ್ಲಾಧಿಕಾರಿಗಳು
ಕೊಪ್ಪಳ

ವಾಸಾಸಂಇ/ಕೊಪ್ಪಳ/154/ಅಲಕ್‌ನಂದ/2021–22

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಂಖ್ಯೆ: ಗುವಿಸಕಂನಿ/ಅಅ(ವಿ)(ಖರೀದಿ)/ಕಾನಿಇಂ/ಸಕಾನಿಇಂ/2021–22/9429–33 ದಿನಾಂಕ: 08.07.2021.

ಅಲ್ಪಾವಧಿ ಟೆಂಡರ್ ಪ್ರಕಟಣೆ

1) ಕಾಮಗಾರಿ ವಿವರ : **ಪಿಸಿ–1133:** ಗು.ವಿ.ಸ.ಕಂ.ನಿಯ ತಾಂತ್ರಿಕ ವಿವರಣೆಯಂತೆ ಸ್ಟಾರ್ ರೇಟೆಡ್ ವಿದ್ಯುತ್ ಪರಿವರ್ತಕಗಳನ್ನು ಅಳವಡಿಸಲು ಜೋಡು ಕಂಬದ ಟಿ. ಸಿ ಸೆಟ್ ತಯಾರಿಸಿ ಸರಬರಾಜು ಮಾಡುವದು, 2) ಕಾಮಗಾರಿ ಅಂದಾಜು ಮೊತ್ತ : **ರೂ. 684.27 ಲಕ್ಷಗಳು,** 3) ಗುತ್ತಿಗೆದಾರರ ಅರ್ಹತೆ ವಿವರ: ಟೆಂಡರ್ ದಸ್ತಾವೇಜು (ಐ.ಎಫ್.ಬಿ) ಪ್ರಕಾರ, 4) ಇ–ಪ್ರೊಕ್ಯೂರಮೆಂಟ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ ಅಥವಾ ನಂತರ : **09.07.2021 10.30 ರ ನಂತರ,** 5) ಪ್ರೀ ಬಿಡ್ ಮಿಟಿಂಗ್ ದಿನಾಂಕ: **17.07.2021,** 6) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **26.07.2021 ಗಂಟೆ 17.30 ರ ವರೆಗೆ,** 7) ತಾಂತ್ರಿಕ ಬಿಡ್‌ತೆರೆಯುವ ದಿನಾಂಕ: **28.07.2021 ಗಂಟೆ. 11:00 ಗೆ,** 8) ತಾಂತ್ರಿಕ ಬಿಡ್‌ತೆರೆಯುವ ದಿನಾಂಕ : **29.07.2021 ಗಂಟೆ. 14:00 ಗೆ,** 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : ಕಾರ್ಯನಿರ್ವಾಹಕ ಅಭಿಯಂತರರು(ವಿ), ಖರೀದಿ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ–585 102. ಮೊ.ಸಂ: 9448359006, 10) ಅಂತರಜಾಲತಾಣದ ವಿಳಾಸ : www.e-proc.karnataka.gov.in

ಸಹಿ/– ಅಧೀಕ್ಷಕ ಅಭಿಯಂತರರು (ವಿ).,
ಖರೀದಿ, ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/411/ಎಂ.ಸಿ&ಎ/2021–22

ವಿದ್ಯುತ್ ಸಂಬಂಧಿತ ದೂರುಗಳಿಗೆ 1912 ಗೆ ಕರೆ ಮಾಡಿ **URJA MITRA APP** ಡೌನಲೋಡ್ ಮಾಡಿಕೊಳ್ಳಿ

INSTITUTE FOR SOCIAL AND ECONOMIC CHANGE
Dr. V.K.R.V. Rao Road, Nagarabhavi P.O. Bengaluru-560 072. India.
Advt. No. D/1/2021 Date: July 10, 2021

DIRECTOR

Applications are invited for one position of Director.

The Institute for Social and Economic Change, (ISEC), Bengaluru, was established in 1972, and well known for its inter-disciplinary research in the social sciences, is looking for a Director.

The prospective candidate must be a distinguished social scientist who should have had an impressive academic career consisting of experience as a Professor or equivalent, with a good experience in teaching, research and administration. The Director of the Institute shall be appointed for a term of five years or up to his / her reaching the age of 65 years, whichever is earlier. The retirement age of the Director is 65 years.

The salary and other benefits of the Director's position are commensurate with that of the Vice-Chancellor in Universities in Karnataka. Free furnished residential accommodation is available on campus and transport facilities are also provided for official use.

Interested candidates may send the CV through post and through E-mail to the address given below on or before 9th August 2021 Nominations are also invited.

Office of the Chairperson, Room No. 138,
Institute for Social and Economic Change,
Nagarabhavi PO, Bengaluru- 560 072.
Email: chairmanisec@gmail.com

Sd/-
Registrar I/c

ISEC-21202

ಕರ್ನಾಟಕ ಸರಕಾರ
ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್–585401
(ಕರ್ನಾಟಕ ಸರ್ಕಾರದ ಸ್ವಾಯತ್ ಸಂಸ್ಥೆ)
(ದೂರವಾಣಿ ಸಂಖ್ಯೆ: 08482–228366, ಫ್ಯಾಕ್ಸ್: 08482–240322)
Website :www.brims-bidar.in & E-mail-directorbrimsbidar2007@gmail.com
No:Brims/Tender/Housekeeping/39/2021-22/Call-2 Date:01.07.2021

ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನೂತನ ಆಸ್ಪತ್ರೆಗೆ ಹೌಸ್ ಕೀಪಿಂಗ್ ಸರ್ವಿಸ್‌ಗಾಗಿ ಇ–ಟೆಂಡರ್ ಅಹ್ವಾನಿಸಲಾಗಿದೆ

ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನೂತನ ಆಸ್ಪತ್ರೆಗೆ ಹೌಸ್ ಕೀಪಿಂಗ್ ಸರ್ವಿಸ್‌ಗಾಗಿ ಇ–ಟೆಂಡರ್ ಅಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡ್‌ದಾರರು ಇ–ಸಂಗ್ರಹಣೆಯ ಪೋರ್ಟಲ್ ಮೂಲಕ ಸದರಿ ಟೆಂಡರಿನ ವಿವರ ವೀಕ್ಷಿಸಬಹುದು/ಡೌನ್‌ಲೋಡ್ ಮಾಡಿಕೊಂಡು ಅರ್ಜಿ ಇ–ಪ್ರೂಕ್ಯೂರಮೆಂಟ್ ಮೂಲಕ ಸಲ್ಲಿಸಬಹುದು https: // eproc.karnataka.gov.in ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಿದೆ ಮತ್ತು **www.brims-bidar.in** ನಲ್ಲಿ ವೀಕ್ಷಿಸಬಹುದು.
1) ಟೆಂಡರ್ ಸಂಖ್ಯೆ : rims/Tender/Housekeeping/39/2021-22/Call-2, 2) ಪ್ರೀ–ಬಿಡ್ ಸಭೆ: **ದಿನಾಂಕ 12–07–2021 ಸಮಯ: 11.00 AM,** 3) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **30.07.2021 ಸಮಯ: 4.00 PM,** 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **01.08.2021 ಸಮಯ: 4.30 PM,** 5) ಇ.ಎಂ.ಡಿ.: Rs. 2,00,000/-, 6) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸುವ ವಿಳಾಸ: ನಿರ್ದೇಶಕರು, ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್ Website: www.brims-bidar.in
ಗಮನಿಸಿ: ಇನ್ನು ಮುಂದೆ ಟೆಂಡರ್ ಪ್ರಕ್ರೀಯೆಗಳಲ್ಲಿ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾವಣೆಗಳು ಕೇವಲ ವಿದ್ಯುನ್ಮಾನ ಸಂಗ್ರಗಣೆ (E-Procurment) ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು

ಸಹಿ/– ನಿರ್ದೇಶಕರು,
ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್

ವಾ.ಸಾ.ಸಂ.ಇ/ಬೀದರ/83/ಎಂಸಿ&ಎ/2021–22

ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್
(ಕಂಪನಿಗಳ ಕಾಯಿದೆ 2013ರಡಿಯಲ್ಲಿ ಸ್ಥಾಪಿತವಾಗಿರುವ ಸಂಸ್ಥೆ)
ಸಿಐಎನ್ ಸಂಖ್ಯೆ: ಯು74999ಕೆಎ2018ಪಿಎಲ್‌ಸಿ109175
Bengaluru SMART CITY
ಮುಖ್ಯ ಅಭಿಯಂತರರ ಕಚೇರಿ, ಬೃಬೆಂಮಪಾಲಿಕೆ ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಅಲಿಯನ್ಸ್ ಫ್ರಾನ್ಕಯಿಸ್ ಡೇ ಶಾಲೆ ಎದುರು, ವಸಂತನಗರ, ಬೆಂಗಳೂರು – 560 052. ದೂರವಾಣಿ: 080–22200080
ಸಂಖ್ಯೆ: ಬೆಂಸ್ಮಾಸಿಲಿ/ಟಿಎಸ್/ಕಾಪಾಅ–02/ಟೆಂಡರ್–03/2021–22 ದಿನಾಂಕ: 09.07.2021

ಟೆಂಡರ್ ಆಹ್ವಾನ ಪ್ರಕಟಣೆ (ಅಲ್ಪಾವಧಿ ಟೆಂಡರ್)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು ಬೆಂ.ಸ್ಮಾ.ಸಿಟಿ ಲಿಮಿಟೆಡ್‌ರವರ ಪರವಾಗಿ ಕಾರ್ಯಪಾಲಕ ಅಭಿಯಂತರರು–02 ರವರು ಈ ಕೆಳಕಂಡ ಕಾಮಗಾರಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರುದಾರರು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **(https://eproc.karnataka.gov.in)** ಪಟ್ಟಿಯಲ್ಲಿ ತಿಳಿಸಿರುವ ಕಾಮಗಾರಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಈ ಗುತ್ತಿಗೆಯ ಕಾರ್ಯಾದೇಶವನ್ನು ಪಡೆಯಲು ಗುತ್ತಿಗೆದಾರರು ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ ಪ್ರಕಾರ ತಿಳಿಸಿರುವ ಕನಿಷ್ಠ ಅರ್ಹತಾ ಮಾನದಂಡಗಳನ್ನು ಗಮನಿಸತಕ್ಕದ್ದು.

ಯೋಜನೆಯ ಹೆಸರು	ಟೆಂಡರಿಗಿಟ್ಟ ಮೊತ್ತ (₹.ಕೋಟಿಗಳಲ್ಲಿ)	ಇ.ಎಂ.ಡಿ	ಅವಧಿ
ಬೆಂಗಳೂರಿನಲ್ಲಿ ಸ್ಮಾರ್ಟ್ ಸಂಚಾರ ನಿರ್ವಹಣೆ ವ್ಯವಸ್ಥೆಯನ್ನು ಅನುಷ್ಠಾನ –ಗೊಳಿಸುವುದು.	7.50	ಇಎಂಡಿ ಘೋಷಣೆ ಪ್ರಮಾಣ ಪತ್ರ	90 ದಿನಗಳು

(1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ 12.07.2021 ರಂದು ಸಂಜೆ 4:00 ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ 22.07.2021ರ ಸಂಜೆ 4:00 ಗಂಟೆಯವರೆಗೆ ಅಥವಾ ಮುಂಚಿತವಾಗಿ. (3) ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ: 16.07.2021 ರ ಸಂಜೆ 4:00 ಗಂಟೆಗೆ ಅಥವಾ ಮುಂಚಿತವಾಗಿ. (4) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 17.07.2021ರ ಸಂಜೆ 4:00 ಗಂಟೆಗೆ ಕಾರ್ಯಪಾಲಕ ಅಭಿಯಂತರರು–02, ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಇಲ್ಲಿ ನಡೆಸಲಾಗುವುದು. (5) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 23.07.2021ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ಮೂಲಕ ಹಾಗೂ ಸಹಾಯಕೇಂದ್ರ ಸಂಖ್ಯೆ: 080–22441076 ರಲ್ಲಿ ಪಡೆಯಬಹುದು.

ಸಹಿ/–
ಕಾರ್ಯಪಾಲಕ ಅಭಿಯಂತರರು–02,
ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಎಫ್‌ಟಿ ಸಂಖ್ಯೆ ಲೋಇ/ಕಾನಿಇ/ಬಿವಿ/ಟಿಎಸ್–3/ಎಫ್–170/1391/2021–22 ದಿನಾಂಕ: 07–07–2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ದ್ವಿ–ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ **ದಿನಾಂಕ: 08–07–2021** ರ ನಂತರ ವೆಬ್‌ಸೈಟ್ ವಿಳಾಸ http://eproc.karnataka.gov.in ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಚೇರಿಯಲ್ಲಿ ಕಚೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
1.	KPWD/2021-22/RD/WORK_INDENT 137091	800.00
2.	KPWD/2021-22/RD/WORK_INDENT 137208	190.00
3.	KPWD/2021-22/RD/WORK_INDENT 137233	150.00
4.	KPWD/2021-22/RD/WORK_INDENT 137478	110.00
2.	KPWD/2021-22/RD/WORK_INDENT 138211	100.00

ಸೂಚನೆ: ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಬದಲಾವಣೆಗಳಾದಲ್ಲಿ ಗುತತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)	ಕ್ರ.ಸಂ. (1) ಇಂದ (3)ರ ವರೆಗಿನ ಕಾಮಗಾರಿಗಳಿಗೆ ನಿಗದಿಪಡಿಸಿದ ಪ್ರಿ–ಬಿಡ್ ಸಭೆ ದಿನಾಂಕ ಮತ್ತು ಸಮಯ	13–07–2021 ರಂದು 11:00 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರ್ ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಚೇರಿಯಲ್ಲಿ
ಆ)	ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ	17–07–2021 ರಂದು 12:00 ಗಂಟೆಯವರೆಗೆ
ಇ)	ಇ–ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	22–07–2021 ರಂದು 16:00 ಗಂಟೆಯವರೆಗೆ
ಈ)	ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	23–07–2021 ರಂದು 16:30 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರ್ ಲೋಕೋಪಯೋಗಿ ಇಲಾಖೆ ವಿಭಾಗ ಬಳ್ಳಾರಿ ಇವರ ಕಚೇರಿಯಲ್ಲಿ ತೆರೆಯಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರ್
ಲೋಕೋಪಯೋಗಿ ಇಲಾಖೆ, ವಿಭಾಗ ಬಳ್ಳಾರಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಬೊಮ್ಮನಹಳ್ಳಿ ಯೋಜನೆ ವಿಭಾಗ,
ಬೇಗೂರು ಮುಖ್ಯರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು– 560 068
ಸಂಖ್ಯೆ: ಬೃಬೆಂಮಪಾ/ಕಾಪಾಅ/ಬೊಯೋವಿ/ಟೆಂಡರ್/05/2021–22 ದಿನಾಂಕ: 05.07.2021

ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ)
(ಗುಣಮಟ್ಟ ಮತ್ತು ವೆಚ್ಚ ಆಧಾರಿತ ಆಯ್ಕೆ) (ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ಯೋಜನೆ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಹೆಸರಾಂತ ಅನುಮತಿ ಹೊಂದಿದ ಸಮಾಲೋಚಕರು, ಸಮಾಲೋಚಕ ಸೇವೆ ಒದಗಿಸುವವರಿಂದ ಈ ಕೆಳಕಂಡ ಕಾಮಗಾರಿಗಳ ಯೋಜನೆ ನಿರ್ವಹಣೆ ಸಲಹೆ ಸೇವೆಗಳನ್ನು ಒದಗಿಸಲು ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಯೋಜನೆಯ ಮೊತ್ತ (₹. ಲಕ್ಷಗಳಲ್ಲಿ)
ವಾರ್ಡ್ ಸಂಖ್ಯೆ–174 ಹೆಚ್‌ಎಸ್‌ಆರ್ ಬಡಾವಣೆಯಲ್ಲಿ ಹೆಚ್‌ಎಸ್‌ಆರ್ ಬಡಾವಣೆಯ ಆಟದ ಮೈದಾನವನ್ನು ಮತ್ತಷ್ಟು ಅಭಿವೃದ್ಧಿ ಮಾಡುವುದು.	500.00
ಇಎಂಡಿ (₹.ಗಳಲ್ಲಿ)	ಇಎಂಡಿ ಘೋಷಣೆ ಪ್ರಮಾಣ ಪತ್ರ

<u>ಟೆಂಡರ್ ವೇಳಾಪಟ್ಟಿ:</u> (1) ಆರ್‌ಎಫ್‌ಪಿ ದಾಖಲೆಗಳನ್ನು ಇ–ಪ್ರೊಕ್ ವೆಬ್‌ಸೈಟ್‌ನಲ್ಲಿ ದಿನಾಂಕ: 12.07.2021ರ ಬೆಳಿಗ್ಗೆ 10:00 ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 19.07.2021 ರ ಬೆಳಿಗ್ಗೆ 11:00 ಗಂಟೆಗೆ ನಡೆಸಲಾಗುವುದು. (3) ಟೆಂಡರ್ ದಾಖಲೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 31.07.2021ರ ಸಂಜೆ 4:00 ಗಂಟೆಯವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 02.08.2021ರ ಬೆಳಿಗ್ಗೆ 10:00 ಗಂಟೆಯ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು – ಬೊಮ್ಮನಹಳ್ಳಿ ಯೋಜನೆ ವಿಭಾಗ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ
ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.033/ಪಿಬಿ/ಗುತ್ತಿಗೆ/3054–ರಾಹೆ–ಜಿಮುರ–ನಿರ್ವಹಣೆ/2021–22/991 ದಿನಾಂಕ : 09–07–2021

ಇ–ಟೆಂಡರ್ ಪ್ರಕಟಣೆ

ದಿನಾಂಕ : 09–07–2021ರಂದು ಇ–ಪ್ರಕ್ಯೂರ್‌ಮೆಂಟ್ ಮೂಲಕ, ಕಾಮಗಾರಿಗಳ ಇಂಡೆಂಟ್ ಸಂಖ್ಯೆ 139344, 139342, 139273, 139347, 140157, 139097, 139098, 139204, 139312, 139417, 139351, 139336, 139353, 139387, 139786, 139340, 139983, 140163, 140170, 140174, 140167, 140173, 140156, 139100, 139101, 139102, 139107, 139108, 139110, 139111, 139112, 139113, 139431, 139426, 139429, 139430, 139346, 140172 & 139115ರ ಕಾಮಗಾರಿಗಳಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಇ–ಪ್ರಕ್ಯೂರ್‌ಮೆಂಟ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **23–07–2021** (ಸಾಯಂಕಾಲ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ http://www.eproc.karnataka.gov.in ನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/– (ಸತೀಶ.ಹೆಚ್.ಜಹಾಗೀರದಾರ)
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.

ವಾಸಾಸಂಇ/ಹಾವೇರಿ/ಎಂಸಿಎ/150/2021–22

ಕರ್ನಾಟಕ ಸರ್ಕಾರ
ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ–576103.
ಫೋ/ಫ್ಯಾಕ್ಸ್: 0820–2532961, Email: pfdudupi@gmail.com
ನಂ:ಕಾನಿಇಂ:ಬಂಮೀವಿ:ಉಡುಪಿ ಎಇ:ಟೆಂಡರು ಪ್ರಕಟಣೆ:09:2021–22 ದಿ: 07.07.2021.

ಅಲ್ಪಾವಧಿ ಟೆಂಡರು ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ) (ದ್ವಿ ದಾಖಲೆ ಪದ್ಧತಿ)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳನ್ನು ಕೈಗೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು www.eproc.karnataka.gov.in ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು. ಈ ಕುರಿತು ಪ್ರತ್ಯೇಕವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ.
ಕಾಮಗಾರಿಯ ಹೆಸರು ಮತ್ತು ಟೆಂಡರ್ ನಂಬರ (1) ಹೆಸರಘಟ್ಟ ಮೀನುಮರಿ ಉತ್ಪಾದನಾ ಕೇಂದ್ರ ಬೆಂಗಳೂರು ಅಭಿವೃದ್ಧಿ ಕಾಮಗಾರಿ (ಇಂಡೆಂಟ್ ಸಂ: IDD/2021-22/OW/WORK_INDENT1), **ಅಂದಾಜು ಮೊತ್ತ 57,39,311.79 (2)** ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರು ತಾಲೂಕಿನ ತಿಪ್ಪಗಾನಹಳ್ಳಿ ಮೀನುಮರಿ ಉತ್ಪಾದನಾ ಕೇಂದ್ರದ ಅಭಿವೃದ್ಧಿ ಕಾಮಗಾರಿ (ಇಂಡೆಂಟ್ ಸಂ: IDD/2021-22/OW/ WORK_INDENT3) **ಅಂದಾಜು ಮೊತ್ತ 83,03,745.86 ಇಎಂಡಿ:** (The Finance Department Govt. of Karnataka has issued Order for relaxation of EMD and reduction of Security Deposit vide Govt. Order No. FD/675/Ex/12-2020, Bangalore Dt:22-12-2020.) ಟೆಂಡರ್ ಬಗ್ಗೆ ಆಕ್ಷೇಪಣೆ ಮತ್ತು ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ ಹಾಗೂ ವೇಳೆ: **15.07.2021 ರಂದು 16.00** ಗಂಟೆಯವರೆಗೆ, ಟೆಂಡರ್ ಪಡೆಯುವ ದಿನಾಂಕ ಮತ್ತು ವೇಳೆ: **16.07.2021 ರಂದು 17.00** ಗಂಟೆಯವರೆಗೆ

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್
ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ

ವಾಸಾಇ/ಸನಿಉ/ಎಂಸಿಎ/185/21–22 ದಿ: 09.07.2021

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ
ದೂರವಾಣಿ ಸಂಖ್ಯೆ: 08182 – 271101/221010/222082
ಫ್ಯಾಕ್ಸ್ ಸಂಖ್ಯೆ: 277082, e-mail: deo.shimoga@gmail.com
No: SMGDC-DUDC/CSS2/135/2021-SMGDC_DUDC-SHIDC(72181/21-22) ದಿನಾಂಕ:08.07.2021

ಟೆಂಡರ್ ಪ್ರಕಟಣೆ

ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಇವರಿಂದ ಸಾಗರ ನಗರಸಭೆ ವ್ಯಾಪ್ತಿಯಲ್ಲಿ ಇಂದಿರಾ ಕ್ಯಾಂಟೀನ್ ಗಳಿಗೆ ಆಹಾರ ತಯಾರಿಸಿ ಸರಬರಾಜು ಮಾಡುವ ಬಗ್ಗೆ ಸಂಬಂಧಪಟ್ಟ ಆಹಾರ ತಯಾರಿಕ ಮತ್ತು ಸರಬರಾಜು ಸಂಸ್ಥೆಗಳಿಂದ / ಎನ್.ಜಿ.ಓ/ ಇತರೇ ಸಂಸ್ಥೆಗಳಿಂದ ಸೇವೆ ಒದಗಿಸಲು ಟೆಂಡರ್ 1) ಇಂಡೆಂಟ್ ನಂ.: DMA/2021-22/IND12298 (ಇ.ಎಂ.ಡಿ ಮೊತ್ತ ರೂ. 1,56,050/–) ಇ– ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕಟಿಸಲಾಗಿದೆ. ಟೆಂಡರ್ ನಲ್ಲಿ ಭಾಗವಹಿಸಲು ಕಡೆಯ ದಿನಾಂಕ:26.07.2021 ಸಂಜೆ 5–30. ಹೆಚ್ಚಿನ ವಿವರಗಳು ಹಾಗೂ ಮಾಹಿತಿಗಾಗಿ ಇ–ಪ್ರಕ್ಯೂರ್‌ಮೆಂಟ್ htpsfieproc.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/– (ಡಾ. ನಾಗೇಂದ್ರ ಎಫ್ ಹೊನ್ನಳ್ಳಿ, ಕೆ.ಎ.ಎಸ್),
ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ,
ಶಿವಮೊಗ್ಗ.

ವಾ.ಸಾ.ಸಂ.ಇ/ಶಿ/ನಂ–58/07/ಎಂಸಿಎ/21–22

VTPC KARNATAKA
ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ
(ರಾಜ್ಯ ಸರ್ಕಾರದ ರಫ್ತು ಉತ್ತೇಜನ ಸಂಸ್ಥೆ)
ವಿ.ಟಿ.ಪಿ.ಸಿ.ಕಟ್ಟಡ, ಕಸ್ತೂರಬಾ ರಸ್ತೆ, ಬೆಂಗಳೂರು – 560 001.
ದೂರವಾಣಿ : 080–22860644, 22534444
ಇ-ಮೇಲ್ : vtpckarnataka@gmail.com ವೆಬ್‌ಸೈಟ್: www.vtpc.karnataka.gov.in
ಸಂಖ್ಯೆ: ವಿಟಿಪಿಸಿ/ಡಿಡಿ/ರಫ್ತು ಪ್ರಶಸ್ತಿ/2021–22 ದಿನಾಂಕ: 09.07.2021

'ರಾಜ್ಯ ರಫ್ತು ಶ್ರೇಷ್ಠ ಪ್ರಶಸ್ತಿಗಳಿಗಾಗಿ' ಅರ್ಜಿ ಆಹ್ವಾನ

ವಿಷಯ: 2017-18, 2018-19 & 2019-20ನೇ ಸಾಲಿಗಾಗಿ ರಾಜ್ಯ ರಫ್ತು ಶ್ರೇಷ್ಠ ಪ್ರಶಸ್ತಿಗಳಿಗಾಗಿ ಕರ್ನಾಟಕದ ರಫ್ತುದಾರರಿಂದ ಅರ್ಜಿಗಳ ಆಹ್ವಾನ.
(1) ಅರ್ಹತೆ: ಕರ್ನಾಟಕದಲ್ಲಿರುವ ಅತಿ ಸಣ್ಣ, ಸಣ್ಣ, ಮಧ್ಯಮ, ಬೃಹತ್ ಮತ್ತು ಮೆಗಾ ಉದ್ಯಮಗಳು, ಎಕ್ಸ್‌ಪೋರ್ಟ್ ಹೌಸ್, ಸ್ಟಾರ್ ಎಕ್ಸ್‌ಪೋರ್ಟ್ ಹೌಸ್, ಟ್ರೇಡಿಂಗ್ ಹೌಸ್, ಸ್ಟಾರ್ ಟ್ರೇಡಿಂಗ್ ಹೌಸ್, ಪ್ರೀಮಿಯರ್ ಟ್ರೇಡಿಂಗ್ ಹೌಸ್, ಮರ್ಚಂಟ್ ಎಕ್ಸ್‌ಪೋರ್ಟರ್ ಹಾಗೂ ಕರ್ನಾಟಕದಲ್ಲಿರುವ ಕೇಂದ್ರ ಸರ್ಕಾರದ ಉದ್ಯಮಗಳು ಹಾಗೆಯೇ ರಾಜ್ಯ ಸರ್ಕಾರದ ಉದ್ಯಮಗಳು ಈ ರಾಜ್ಯ ರಫ್ತು ಶ್ರೇಷ್ಠ ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ಅರ್ಹತೆ ಪಡೆದಿವೆ. **(2)** ಆಸಕ್ತ ರಫ್ತುದಾರರು ನಿಗದಿತ ಅರ್ಜಿ ನಮೂನೆಯನ್ನು ಎಲ್ಲಾ ರೀತಿಯಲ್ಲೂ ಅಗತ್ಯವಾಗಿ ಭರ್ತಿ ಮಾಡಿ ವಿ.ಟಿ.ಪಿ.ಸಿ. ಕಛೇರಿಗೆ ಸಲ್ಲಿಸಬೇಕು. **(3)** ರಾಜ್ಯ ರಫ್ತು ಶ್ರೇಷ್ಠ ಪ್ರಶಸ್ತಿಗಳ ಮಾರ್ಗಸೂಚಿಗಳು ಹಾಗೂ ವಿವರಗಳು ವೆಬ್‌ಸೈಟ್ **www.vtpc.karnataka.gov.in** ನಲ್ಲಿ ಲಭ್ಯವಿದೆ. **(4)** ರಾಜ್ಯ ರಫ್ತು ಶ್ರೇಷ್ಠ ಪ್ರಶಸ್ತಿಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **13.08.2021.**

ಸಹಿ/- ನಿರ್ದೇಶಕರು (ರಫ್ತು) ಮತ್ತು ವ್ಯವಸ್ಥಾಪಕ ನಿರ್ದೇಶಕರು, ವಿಟಿಪಿಸಿ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿದ್ಯುತ್ ವಿಭಾಗ, ಬೆಂಗಳೂರು

ಟೆಂಡರ್ ಪ್ರಕಟಣೆ ಸಂಖ್ಯೆ:15/2021–22/1ನೇ ಕರೆ ದಿ:05.07.2021

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ Shifting of HT/LT line and DTC due to improvements of road from Mysore-Arakere-Mandya from main road Ch:20.00 Km to 23.00 Km & Providing Decorative Median LED Street Light from Selected reaches in Arakere village in S.R.Patna Taluk, Mandya district KPWD/2020-21/EL/WORK_INDENT128914 ಕಾಮಗಾರಿಯ **ರೂ.119.75 ಲಕ್ಷಗಳ** ಟೆಂಡರ್‌ನ ಮೊದಲನೇ ಕರೆಯನ್ನು **ಕೆಡಬ್ಲ್ಯೂ–4,** ಎಸ್.ಟಿ.ಡಿ ಷರತ್ತುಗೊಳಪಟ್ಟಂತೆ The tenderer as a Prime Contractor having valid Class-III and Above Electrical License issued by Electrical Inspectorate Govt. of Karnataka and should have suitable technical, financial & managerial capabilities ರವರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ವೆಬ್‌ಸೈಟ್ ಸಂ: **www.eproc.karnataka.gov.in** ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ದಿನಾಂಕ : **05.07.2021 ರಿಂದ 20.07.2021, 16.00 ಗಂಟೆಯುವರೆಗೆ** ನಿಗಧಿಪಡಿಸಲಾಗಿದೆ. ಟೆಂಡರ್ ಪೂರ್ವಭಾವಿ ಸಭೆಯನ್ನು ದಿನಾಂಕ : **13.07.2021, 15.00 ಗಂಟೆಗೆ** ಕಾರ್ಯಪಾಲಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ, ವಿದ್ಯುತ್ ವಿಭಾಗ, ಕೆ.ಆರ್.ವೃತ್ತ, ಬೆಂಗಳೂರುರವರ ಕಛೇರಿಯಲ್ಲಿ ಆಯೋಜಿಸಲಾಗಿದೆ. ಹಾಗೂ ಭರ್ತಿ ಮಾಡಿದ ಟೆಂಡರ್ ಅನ್ನು ಇ–ಪೋರ್ಟಲ್ ಮೂಲಕ ಸಲ್ಲಿಸಲು ದಿನಾಂಕ : **20.07.2021 ರಂದು 16.00 ಗಂಟೆಯವರೆಗೆ** ನಿಗಧಿಪಡಿಸಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು(ವಿ),
ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು

DIPR/AD-MDY/MCA/191/2021-22

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಸುಖ ಎಂಬ ನಾಣ್ಯದ ಇನ್ನೊಂದು ಮುಖವೇ ಭಯ. ಎರಡೂ ಪರಸ್ಪರ ಸಂಬಂಧಿಗಳು. ಒಂದನ್ನು ತಿಳಿಯದೆ ಇನ್ನೊಂದನ್ನು ತಿಳಿಯಲಾರಿರಿ. –ಜಿಡ್ಡು ಕೃಷ್ಣಮೂರ್ತಿ

ಸರ್ಕಾರಿ ನೌಕರರ ವರ್ಗಾವಣೆ ಸಚಿವರಿಗೆ ಅಧಿಕಾರ ಸೂಕ್ತವಲ್ಲ

ರಾಜ್ಯ ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆಗೆ ಆದೇಶ ಹೊರಡಿಸಿದ್ದಿದೆ. ವರ್ಗಾವಣೆ ಅಧಿಕಾರವನ್ನು ಸಂಬಂಧಪಟ್ಟ ಇಲಾಖೆಗಳ ಸಚಿವರಿಗೆ ನೀಡಲಾಗಿದೆ. ಇದೊಂದು ವಿವೇಚನಾರಹಿತ ಕ್ರಮ. 2013ರಲ್ಲಿ ಹೊರಡಿಸಲಾದ ಸಾರ್ವತ್ರಿಕ ವರ್ಗಾವಣೆ ಮಾರ್ಗಸೂಚಿಯ ಸ್ಪಷ್ಟ ಉಲ್ಲಂಘನೆಯೂ ಹೌದು. ಈ ಮಾರ್ಗಸೂಚಿ ಪ್ರಕಾರ, ನೇಮಕಾತಿ ಪ್ರಾಧಿಕಾರವೇ ವರ್ಗಾವಣೆಯನ್ನು ಮಾಡಬೇಕು. ಆದರೆ ಕಳೆದ ವರ್ಷವೂ ಕೋವಿಡ್ ನೆಪವೊಡ್ಡಿ ವರ್ಗಾವಣೆ ಅಧಿಕಾರವನ್ನು ಒಂದು ವರ್ಷದ ಅವಧಿಗೆ ಒಳಪಟ್ಟು ಸಚಿವರಿಗೆ ನೀಡಲಾಗಿತ್ತು. ತಾನೇ ರೂಪಿಸಿದ್ದ ಪದ್ಧತಿಯನ್ನು ಉಲ್ಲಂಘಿಸಿ ರಾಜ್ಯ ಸರ್ಕಾರ ಈಗ ಮತ್ತೊಂದು ವರ್ಷವೂ ಸರ್ಕಾರಿ ನೌಕರರ ವರ್ಗಾವಣೆಯ ಅಧಿಕಾರವನ್ನು ಸಚಿವರಿಗೆ ನೀಡಿದೆ. ಮಾರ್ಗಸೂಚಿ ಪ್ರಕಾರ ಮೇ ಮತ್ತು ಜೂನ್ ತಿಂಗಳಿನಲ್ಲಿ ಶೇಕಡ 4ರಿಂದ 5ರಷ್ಟು ಉದ್ಯೋಗಿಗಳನ್ನು ವರ್ಗಾವಣೆ ಮಾಡಲು ಅವಕಾಶವಿತ್ತು. ಕಳೆದ ವರ್ಷ ಅದನ್ನು ಶೇ 6ಕ್ಕೆ ಹೆಚ್ಚಿಸಲಾಗಿತ್ತು. ಈ ಬಾರಿಯೂ ಅದೇ ನೀತಿಯನ್ನು ಮುಂದುವರಿಸಲಾಗಿದೆ. ಕಳೆದ ವರ್ಷ ಆಗಸ್ಟ್ ತಿಂಗಳವರೆಗೂ ವರ್ಗಾವಣೆಗೆ ಅವಕಾಶ ಕಲ್ಪಿಸಲಾಗಿತ್ತು. ಈ ಬಾರಿ ಅದನ್ನು ಜುಲೈ 22ರೊಳಗೆ ಪೂರ್ಣಗೊಳಿಸಲು ಸೂಚಿಸಲಾಗಿದೆ. 2021–22ನೇ ಸಾಲಿಗೆ ಎಲ್ಲ ಇಲಾಖೆಗಳಲ್ಲಿ ಗ್ರೂಪ್ ಬಿ ಮತ್ತು ಸಿ ವರ್ಗದ ಅಧಿಕಾರಿ, ನೌಕರರನ್ನು ಮಾತ್ರ ವರ್ಗಾವಣೆ ಮಾಡಲು ಅವಕಾಶ ನೀಡಲಾಗಿದೆ.

ನೌಕರರ ವರ್ಗಾವಣೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಕೈಗೊಳ್ಳುವ ನಿರ್ಧಾರಗಳು ರಾಜ್ಯದ ಒಟ್ಟಾರೆ ಹಿತವನ್ನು ಕಾಯುವಂತಿರಬೇಕು

ವರ್ಗಾವಣೆಯು ಶೇ 6ರಷ್ಟು ಮೀರದಂತೆ ಎಂಬ ಷರತ್ತು ವಿಧಿಸಿದ್ದರೂ ವರ್ಗಾವಣೆ ಅಧಿಕಾರವನ್ನು ನೇಮಕಾತಿ ಪ್ರಾಧಿಕಾರದಿಂದ ತೆಗೆದು ಸಚಿವರಿಗೆ ನೀಡಿರುವುದರಿಂದ ವರ್ಗಾವಣೆ ಪ್ರಕ್ರಿಯೆ ಪಾರದರ್ಶಕವಾಗಿ ನಡೆಯುವ ಬಗ್ಗೆ ಅನುಮಾನವಿದೆ. ಸಚಿವರು, ಶಾಸಕರು ತಮಗೆ ಬೇಕಾದ ನೌಕರರನ್ನು ತಮಗೆ ಬೇಕಾದ ಸ್ಥಳಕ್ಕೆ ನಿಯುಕ್ತಿ ಮಾಡಿಕೊಳ್ಳಲು ಅವಕಾಶ ಕೊಟ್ಟಂತಾಗಿದೆ. ಇದು ಭ್ರಷ್ಟಾಚಾರಕ್ಕೂ ದಾರಿ ಮಾಡಿಕೊಡಬಹುದು. 2013ರ ಮಾರ್ಗಸೂಚಿ ಇದ್ದರೂ ಶಾಸಕರು ಮತ್ತು ಸಚಿವರು ಸರ್ಕಾರಿ ನೌಕರರ ವರ್ಗಾವಣೆಯಲ್ಲಿ ಹಸ್ತಕ್ಷೇಪ ಮಾಡುತ್ತಿದ್ದರು. ಈಗಂತೂ ವರ್ಗಾವಣೆ ಅಧಿಕಾರವನ್ನೇ ಸಚಿವರ ಕೈಗೆ ಕೊಟ್ಟಿರುವುದರಿಂದ ಅಧಿಕಾರವನ್ನು ಮನಸೋಇಚ್ಛೆ ಬಳಸಲು ಅವಕಾಶ ದೊರೆತಿದೆ. ಮಾರ್ಗಸೂಚಿ ಪ್ರಕಾರ ವರ್ಗಾವಣೆ ತನ್ನ ಹಕ್ಕು ಎಂದು ಯಾವುದೇ ನೌಕರ ಪ್ರತಿಪಾದಿಸುವಂತಿಲ್ಲ. ಅಲ್ಲದೆ ವರ್ಗಾವಣೆಗೆ ಸಂಬಂಧಿಸಿದಂತೆ ಯಾವುದೇ ರಾಜಕೀಯ ಶಿಫಾರಸು ತರಬಾರದು. ತನ್ನನ್ನು ನಿರ್ದಿಷ್ಟವಾದ ಹುದ್ದೆಗೆ ವರ್ಗಾವಣೆ ಮಾಡುವಂತೆ ಯಾವುದೇ ನೌಕರ ಅಥವಾ ಅಧಿಕಾರಿ ಶಿಫಾರಸು ತಂದರೆ ಆತನ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಹಾಗೂ ಆತ ಆಯ್ಕೆ ಮಾಡಿಕೊಂಡ ಸ್ಥಳಕ್ಕೆ ನಿಯೋಜನೆ ಮಾಡಬಾರದು ಎಂದು ಮಾರ್ಗಸೂಚಿ ಸ್ಪಷ್ಟವಾಗಿ ಹೇಳುತ್ತದೆ. ಆದರೆ ಈಗ ರಾಜ್ಯ ಸರ್ಕಾರವು ಕೋವಿಡ್ ನೆಪದಲ್ಲಿ ವರ್ಗಾವಣೆ ಅಧಿಕಾರವನ್ನು ಸಚಿವರಿಗೆ ನೀಡಿರುವುದರಿಂದ ಮಾರ್ಗಸೂಚಿ ಉಲ್ಲಂಘನೆಯಾಗುವ ಸಾಧ್ಯತೆಗಳಿವೆ. ಭ್ರಷ್ಟಾಚಾರಕ್ಕೂ ಅವಕಾಶಗಳು ಹೇರಳವಾಗಿ ತೆರೆದುಕೊಳ್ಳಲಿವೆ. ನೇಮಕಾತಿ ಪ್ರಾಧಿಕಾರಗಳೇ ವರ್ಗಾವಣೆ ಮಾಡುವಾಗಲೂ ಭ್ರಷ್ಟಾಚಾರ ನಡೆಯುತ್ತಿತ್ತು. ರಾಜಕೀಯ ಶಿಫಾರಸುಗಳೂ ಕೆಲಸ ಮಾಡುತ್ತಿದ್ದವು. ಆದರೆ ಅವೆಲ್ಲವೂ ತೆರೆಮರೆಯಲ್ಲಿ ನಡೆಯುತ್ತಿದ್ದವು. ನಿಯಂತ್ರಣಕ್ಕೆ ಕೊಂಚ ಅವಕಾಶ ಇತ್ತು. ಈಗ ಅವೆಲ್ಲವೂ ಲಂಗುಲಗಾಮಿಲ್ಲದೆ ನಡೆಯಬಹುದು. ರಾಜಕಾರಣಿಗಳಿಗೆ ಅವಕಾಶಗಳ ಹೆಬ್ಬಾಗಿಲು ತೆರೆದಂತೆ ಆಗಿದೆ.

ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆಯ ಅಧಿಕಾರವನ್ನು ತಮಗೇ ನೀಡಬೇಕು ಎಂದು ಮುಖ್ಯಮಂತ್ರಿ ಮೇಲೆ ಕೆಲವು ಸಚಿವರು ಒತ್ತಡ ಹೇರಿ ಆ ಅಧಿಕಾರವನ್ನು ಪಡೆಯುವಲ್ಲಿ ಕಳೆದ ವರ್ಷ ಯಶಸ್ವಿಯಾಗಿದ್ದರು. ಕೋವಿಡ್ ಕಾರಣದಿಂದ ಕಳೆದ ವರ್ಷ ಸಾರ್ವತ್ರಿಕ ವರ್ಗಾವಣೆ ಇಲ್ಲ ಎಂದಿದ್ದ ಮುಖ್ಯಮಂತ್ರಿ ಆ ಬಳಿಕ ವರ್ಗಾವಣೆಗೆ ಅವಕಾಶ ನೀಡಿದ್ದರು. ಈ ಬಾರಿ ಕೂಡ ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ನೌಕರರ ವರ್ಗಾವಣೆಗೆ ಅವಕಾಶ ನೀಡುವಂತೆ ಕೆಲವು ಸಚಿವರು ಒತ್ತಾಯಿಸಿದ್ದರು ಎಂದು ವರದಿಯಾಗಿತ್ತು. ಸಂಪುಟ ಸಭೆಯಲ್ಲಿ ಸಚಿವರ ಒತ್ತಡಕ್ಕೆ ಮಣಿಯದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ 'ಈ ಬಾರಿ ಸಾರ್ವತ್ರಿಕ ವರ್ಗಾವಣೆಗೆ ಅವಕಾಶ ಇಲ್ಲ. ತುರ್ತು ಪ್ರಕರಣ ಇದ್ದರೆ ನನ್ನ ಗಮನಕ್ಕೆ ತನ್ನಿ. ನಾನೇ ವರ್ಗಾವಣೆ ಮಾಡಿಸುತ್ತೇನೆ' ಎಂದು ಹೇಳಿದ್ದರು. ಆದರೆ ಸಚಿವರ ನಿರಂತರ ಒತ್ತಡಕ್ಕೆ ಮಣಿದು ಸಾರ್ವತ್ರಿಕ ವರ್ಗಾವಣೆಗೆ ಮುಖ್ಯಮಂತ್ರಿ ಈಗ ಒಪ್ಪಿಗೆ ನೀಡಿದ್ದಾರೆ. ಇದು ಅವರ ದೌರ್ಬಲ್ಯವನ್ನು ತೋರಿಸುತ್ತದೆ. ಆಡಳಿತ ಪಕ್ಷದಲ್ಲಿ ನಾಯಕತ್ವ ಬದಲಾವಣೆಯ ಚರ್ಚೆ ಕಾವು ಪಡೆಯುತ್ತಿರುವುದರಿಂದ ಮುಖ್ಯಮಂತ್ರಿ 'ಮೆತ್ತಗಾಗಿದ್ದಾರೆ' ಎನ್ನುವುದಕ್ಕೆ ಇದೊಂದು ನಿದರ್ಶನವಾಗಿದೆ. ನೌಕರರ ಸಾರ್ವತ್ರಿಕ ವರ್ಗಾವಣೆಗೆ ಸರ್ಕಾರಿ ನೌಕರರ ಸಂಘ ಕೂಡ ಒತ್ತಾಯಿಸುತ್ತಿತ್ತು ಎನ್ನುವುದು ನಿಜವಾದರೂ ಈ ವಿಚಾರದಲ್ಲಿ ಸ್ಪಷ್ಟ ಮತ್ತು ಗಟ್ಟಿಯಾದ ನಿರ್ಧಾರವನ್ನು ಕೈಗೊಳ್ಳುವಲ್ಲಿ ಮುಖ್ಯಮಂತ್ರಿ ವಿಫಲರಾಗಿದ್ದಾರೆ. ಆಡಳಿತಾತ್ಮಕ ದೃಷ್ಟಿಯಿಂದ ನೌಕರರ ವರ್ಗಾವಣೆ ಅನಿವಾರ್ಯ ಮತ್ತು ಅಗತ್ಯ. ಒಂದೇ ಹುದ್ದೆಯಲ್ಲಿ ತಳವೂರಿದ ಅಧಿಕಾರಿ ಅಥವಾ ನೌಕರರನ್ನು ಬದಲಾಯಿಸುವುದು ಸರಿಯಾದ ಕ್ರಮವೂ ಹೌದು. ಆದರೆ ಆ ಅಧಿಕಾರವನ್ನು ಸಚಿವರಿಗೆ ನೀಡುವುದು ಸರ್ವಥಾ ಸಲ್ಲದು. ತಮ್ಮದಲ್ಲದ ಕೆಲಸದಲ್ಲಿ ಮೂಗು ತೂರಿಸುವುದನ್ನು ಸಚಿವರು, ಶಾಸಕರು ಬಿಡಬೇಕು. ಕೊಟ್ಟ ಕುದುರೆಯನ್ನು ಏರಿ ಕೆಲಸ ಸಾಧಿಸಬೇಕೇ ವಿನಾ ತಾವು ಸಾಕಿದ ಕುದುರೆಯೇ ಎಲ್ಲ ಕಡೆಯೂ ಇರಬೇಕು ಎಂದು ಬಯಸುವುದು ತಪ್ಪು. ಇದರಿಂದ ಜನರಿಗಾಗಲೀ ರಾಜ್ಯಕ್ಕಾಗಲೀ ಯಾವುದೇ ಉಪಯೋಗವಿಲ್ಲ. ನೌಕರರ ವರ್ಗಾವಣೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಕೈಗೊಳ್ಳುವ ನಿರ್ಧಾರಗಳು ರಾಜ್ಯದ ಒಟ್ಟಾರೆ ಹಿತವನ್ನು ಕಾಯುವಂತಿರಬೇಕು. ರಾಜ್ಯದಲ್ಲಿ ಹಲವಾರು ವರ್ಷಗಳಿಂದ ವರ್ಗಾವಣೆ ಎನ್ನುವುದು ಒಂದು ದಂಧೆಯೇ ಆಗಿದೆ. ಇದಕ್ಕೆ ಕಡಿವಾಣ ಹಾಕಬೇಕು. ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

ದಿನದ ಟ್ವೀಟ್

ದಾರಿಗೆ ಬರುತ್ತಿವೆ

ದತ್ತಾಂಶ ಸಂರಕ್ಷಣಾ ಮಸೂದೆ ಹೊರಬರುವವರೆಗೂ ಖಾಸಗಿತನಕ್ಕೆ ಸಂಬಂಧಿಸಿದ ಹೊಸ ನೀತಿಯನ್ನು ಆಯ್ಕೆ ಮಾಡಿಕೊಳ್ಳುವಂತೆ ಬಳಕೆದಾರರ ಮೇಲೆ ಒತ್ತಡ ಹೇರುವುದಿಲ್ಲ ಎಂದು ದೆಹಲಿ ಹೈಕೋರ್ಟ್‌ಗೆ ವಾಟ್ಸ್‌ಆ್ಯಪ್ ತಿಳಿಸಿದೆ. ಕಂಪನಿಗಳು ನಿಧಾನವಾಗಿ ಭಾರತೀಯರ ಭಾವನೆಗಳು ಮತ್ತು ಕಾನೂನಿಗೆ ಬದ್ಧವಾಗುತ್ತಿವೆ ಎಂದು ನಾನು ಭಾವಿಸುತ್ತೇನೆ.

ಡಾ. ಪ್ರಶಾಂತ್ ಮಾಲಿ, ವಕೀಲ

ಕಿಡಿನುಡಿ

ಟೆಲಿಫೋನ್ ಟ್ಯಾಪಿಂಗ್ ಮಾಡಿಲ್ಲ ಎಂದು ಕುಮಾರಸ್ವಾಮಿ ಹೇಳಿದ್ದಾರೆ. ಕಳ್ಳ ತಾನು ಕಳ್ಳತನ ಮಾಡಿದ್ದೇನೆ ಎಂದು ಒಪ್ಪಿಕೊಳ್ಳುವುದಿಲ್ಲ. ಡಾ. ರಾಜ್‌ಕುಮಾರ್, ವಿಷ್ಣುವರ್ಧನ್ ಬಗ್ಗೆ ಮಾತನಾಡಲು ಸಂಸ್ಕಾರ ಇರಬೇಕು. ಡಾ. ರಾಜ್ ನಿಧನರಾದಾಗ ಯಾರು ಮುಖ್ಯಮಂತ್ರಿಯಾಗಿದ್ದರು? ಕೀಳುಮಟ್ಟದ ರಾಜಕೀಯಕ್ಕೆ ಅಂಬರೀಷ್ ಹೆಸರು ಬಳಸಿಕೊಳ್ಳಬಾರದು.

ಸುಮಲತಾ ಅಂಬರೀಷ್, ಸಂಸದೆ, ಮಂಡ್ಯ

25 ವರ್ಷಗಳ ಹಿಂದೆ

ಬುಧವಾರ, 10-7-1996

• ವಂಚನೆ: ನರಸಿಂಹ ರಾವ್‌ಗೆ ಕೋರ್ಟ್ ಸಮನ್ಸ್

ನವದೆಹಲಿ, ಜುಲೈ 9 (ಪಿಟಿಐ): ವಿವಾದಾತ್ಮಕ ಸಾಧು ಚಂದ್ರಸ್ವಾಮಿಯು ಅನಿವಾಸಿ ಭಾರತೀಯ ಉದ್ಯಮಿ ಲಕ್ಕೂ ಭಾಯಿ ಪಾಠಕ್‌ಗೆ ಒಂದು ಲಕ್ಷ ಡಾಲರ್ ವಂಚನೆ ನಡೆಸಿದ್ದಾನೆನ್ನಲಾದ ಪ್ರಕರಣದಲ್ಲಿ ಮಾಜಿ ಪ್ರಧಾನಿ ಪಿ.ವಿ. ನರಸಿಂಹ ರಾವ್ ಅವರು ನ್ಯಾಯಾಧೀಶರ ಮುಂದೆ ಹಾಜರಾಗಬೇಕೆಂದು ದೆಹಲಿಯ ನ್ಯಾಯಾಲಯ ಸಮನ್ಸ್ ಹೊರಡಿಸಿದೆ.

ಭಾರತದಲ್ಲಿ ನ್ಯೂಸ್‌ಪ್ರಿಂಟ್ ಪೂರೈಕೆ ಮಾಡುವ ಕಾಂಟ್ರಾಕ್ಟ್ ಒಂದನ್ನು ಕೊಡಿಸುವುದಾಗಿ ತಮ್ಮನ್ನು ನಂಬಿಸಿ ತಮ್ಮಿಂದ ಒಂದು ಲಕ್ಷ ಡಾಲರ್ ಹಣವನ್ನು ಚಂದ್ರಸ್ವಾಮಿ ಮತ್ತು ಆತನ ಗೆಳೆಯ ಕೈಲಾಶನಾಥ್ ಅಗರ್‌ವಾಲ್ ಪಡೆದಿದ್ದರು, ಆಗ ವಿದೇಶಾಂಗ ವ್ಯವಹಾರಗಳ ಸಚಿವರಾಗಿದ್ದ ನರಸಿಂಹ ರಾವ್ ಅವರು ತಮಗೆ ಕಾಂಟ್ರಾಕ್ಟ್ ದೊರಕಿಸುವ ಬಗ್ಗೆ ಭರವಸೆ ನೀಡಿದ್ದರು ಎಂದು ಪಾಠಕ್ ದೂರಿನಲ್ಲಿ ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಶನಿವಾರ, 10-7-1971

• ಕೀರ್ತಿರಾಯ ಕುಲದೀಪಕನಿಗೆ ಅಭಿಮಾನಿಗಳಿಂದ ಅಂತಿಮ ಪ್ರಣಾಮ

ಬೆಂಗಳೂರು, ಜುಲೈ 9– ಗೋವಿಂದ–ನಾರಾಯಣ–ಕೃಷ್ಣರ ನಾಮಸ್ಮರಣೆಯಲ್ಲಿ ಪೊಲೀಸ್ ಬ್ಯಾಂಡಿನ ಶೋಕಗೀತೆ ದುಃಖದಿಂದ ಬೆರೆಯುತ್ತಿತ್ತು. ನೆರೆದಿದ್ದವರ ಹೃದಯ ಮೀಟುತ್ತಿತ್ತು. ಕನ್ನಡ ನಾಡಿನ ಜನಮನವನ್ನಾಳಿದ ಮನೆಮನೆಯ, ಕಾದಂಬರಿ ಸಾರ್ವಭೌಮ ಅ.ನ.ಕೃ. ಅವರ ಪಾರ್ಥಿವ ಶರೀರವನ್ನು ವಿಲ್ಸನ್ ಗಾರ್ಡನ್‌ನಲ್ಲಿರುವ ವಿದ್ಯುತ್ ಸ್ಮಶಾನದಲ್ಲಿ ದಹಿಸಲಾಯಿತು.

ಅ.ನ.ಕೃ. ನಿಧನಕ್ಕೆ ರಾಷ್ಟ್ರಕವಿ ಕುವೆಂಪು, ಸಾಹಿತಿ ಡಾ. ಡಿ.ವಿ. ಗುಂಡಪ್ಪ, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಬಿ. ಶಿವಮೂರ್ತಿ ಶಾಸ್ತ್ರಿ, ವಿಮರ್ಶಕ ವಿ. ಸೀತಾರಾಮಯ್ಯ, ರಾಜ್ಯಪಾಲ ಶ್ರೀ ಧರ್ಮವೀರ, ಗಣ್ಯರಾದ ಪು.ತಿ.ನ, ಜಿ.ಪಿ. ರಾಜರತ್ನಂ, ತಿ.ತಾ. ಶರ್ಮ, ಬಿ. ಪುಟ್ಟಸ್ವಾಮಯ್ಯ, ಕೆ.ಎಸ್. ನರಸಿಂಹಸ್ವಾಮಿ, ಜಿ. ವೆಂಕಟಸುಬ್ಬಯ್ಯ, ಜಿ. ನಾರಾಯಣ, ಕಡಿದಾಳ್ ಮಂಜಪ್ಪ ಮತ್ತಿತರರು ಸಂತಾಪ ಸೂಚಿಸಿದ್ದಾರೆ.

ಮಕ್ಕಳಿಗೆ ಕಲಿಕೆಯಲ್ಲಿ ಉಂಟಾಗಿರುವ ನಷ್ಟ ತುಂಬಿಕೊಡಲು ಹೊಸ ಬಗೆಯ ಕಾರ್ಯತಂತ್ರ ರೂಪಿಸಬೇಕಿದೆ

ಪರೀಕ್ಷೆ ಹಾಗೂ ಸಾಮಾಜಿಕ ನ್ಯಾಯ

ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

ರಾಜ್ಯ ಸರ್ಕಾರವು ದ್ವಿತೀಯ ಪಿಯು ಪರೀಕ್ಷೆಗಳನ್ನು ರದ್ದುಗೊಳಿಸಿ ಹತ್ತನೇ ತರಗತಿ (ಎಸ್‌ಎಸ್‌ಎಲ್‌ಸಿ) ಪರೀಕ್ಷೆಗಳನ್ನು ನಡೆಸುತ್ತಿರುವುದರ ಔಚಿತ್ಯ, ತೀರ್ಮಾನದ ಹಿಂದಿರುವ ತರ್ಕ ಏನೆಂಬುದರ ಬಗ್ಗೆ ರಾಜ್ಯದಾದ್ಯಂತ ಚರ್ಚೆಗಳು ನಡೆಯುತ್ತಿವೆ. ಸರ್ಕಾರದ ಈ ತೀರ್ಮಾನವನ್ನು ಸಾಂವಿಧಾನಿಕ, ಶಿಕ್ಷಣಶಾಸ್ತ್ರ ಹಾಗೂ ಕಲಿಕಾ ನೆಲೆಯಲ್ಲಿ ವಿಶ್ಲೇಷಿಸುವ ಅಗತ್ಯವಿದೆ.

ಭಾರತದ ಸಂವಿಧಾನವು ಸಮಾನ ಅವಕಾಶ ಮತ್ತು ತಾರತಮ್ಯರಹಿತ ಕಾನೂನು, ನೀತಿ ಹಾಗೂ ಕಾರ್ಯಕ್ರಮಗಳ ಮೂಲಕ ಸಾಮಾಜಿಕ ನ್ಯಾಯ ಮತ್ತು ಸಮಾನತೆಯನ್ನು ಸಾಧಿಸುವ ಘನ ಉದ್ದೇಶವನ್ನು ಹೊಂದಿದೆ. ಅದರ ಭಾಗವಾಗಿ ಶಿಕ್ಷಣ ಹಕ್ಕು ಕಾಯ್ದೆಯು ಒಂದು ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ 220 ಕಲಿಕಾ ದಿನಗಳು ಹಾಗೂ 1,000 ಗಂಟೆಗಳ ಬೋಧನಾ ಅವಧಿಗಳು ಇರಬೇಕೆಂದು ನಿಗದಿಗೊಳಿಸಿದೆ. ನಮಗೆ ತಿಳಿದಿರುವಂತೆ 2020–21ನೇ ಶೈಕ್ಷಣಿಕ ವರ್ಷದಲ್ಲಿ ಇದು ಸಾಧ್ಯವಾಗಿಲ್ಲ.

ಒಂದೆಡೆ, ಸಮಾಜದ ಶೇಕಡ 10-15ರಷ್ಟು ಅನುಕೂಲಸ್ಥರ ಮಕ್ಕಳಿಗೆ ಆನ್‌ಲೈನ್ ಶಿಕ್ಷಣ ಮತ್ತು ತಮ್ಮ ವೈಯಕ್ತಿಕ ಸಾಮಾಜಿಕ ಮತ್ತು ಆರ್ಥಿಕ ಶಕ್ತಿಯ ಹಿನ್ನೆಲೆಯಲ್ಲಿ ಕಲಿಕಾ ಏರ್ಪಾಡುಗಳನ್ನು ಮಾಡಿಕೊಳ್ಳಲು ಸಾಧ್ಯವಾಗಿದೆ. ಮತ್ತೊಂದೆಡೆ, ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಹಿಂದುಳಿದ ವರ್ಗಗಳಿಗೆ ಸೇರಿದ ಶೇಕಡ 85ರಷ್ಟು ಮಕ್ಕಳು ಸೂಕ್ತ ಕಲಿಕಾ ಏರ್ಪಾಡುಗಳಿಲ್ಲದೆ ಕಲಿಕೆಯಿಂದ ವಂಚಿತರಾದರು ಎಂಬುದು ಕಟುಸತ್ಯ. ಪರಿಸ್ಥಿತಿ ಹೀಗಿರುವಾಗ, ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳನ್ನು ನಡೆಸಲು ಹಟ ತೊಟ್ಟಿರುವುದು ಅಸಾಂವಿಧಾನಿಕ ಮಾತ್ರವಲ್ಲದೆ ಸಾಮಾಜಿಕ ನ್ಯಾಯಕ್ಕೆ ದೊಡ್ಡ ಕೊಡಲಿ ಪೆಟ್ಟು.

ನೋಮ್ ಚಾಮ್ಸ್ಕಿ ಹೇಳುವಂತೆ, ಪರೀಕ್ಷೆಗಾಗಿ ಕಲಿಸುವುದು ಒಂದು ಕೆಟ್ಟ ಶೈಕ್ಷಣಿಕ ಸಂಪ್ರದಾಯ. ಅದನ್ನು ಕೊಂಚ ವಿಸ್ತರಿಸಿ ಹೇಳುವುದಾದರೆ, ಕಲಿಸದೇ ಪರೀಕ್ಷೆ ನಡೆಸುವುದು ಅವಿವೇಕತನ. ಸತ್ಯ ಹೀಗಿದ್ದಾಗ್ಯೂ, 'ಪರೀಕ್ಷೆ ನಡೆಸದಿದ್ದರೆ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು ಹೇಗೆ? ಪರೀಕ್ಷಾ ಪಾವಿತ್ರ್ಯವನ್ನು ಕಾಪಾಡಿಕೊಳ್ಳಬೇಕು ಹಾಗೂ ಪರೀಕ್ಷೆಯನ್ನು ನಡೆಸಬೇಕು' ಎಂಬ ವಾದವನ್ನು ಸರ್ಕಾರ ಹಾಗೂ ಕೆಲವು ಶಿಕ್ಷಣ ತಜ್ಞರು ಮುಂದಿಟ್ಟಿದ್ದಾರೆ. ಪರೀಕ್ಷಾ ಪಾವಿತ್ರ್ಯದ ಬಗ್ಗೆ ಬಲವಾಗಿ ಪ್ರತಿಪಾದಿಸುವ ಇವರು, ಕಲಿಕಾ ಪಾವಿತ್ರ್ಯ ಹಾಗೂ ಎಲ್ಲರಿಗೂ ಸಮಾನವಾಗಿ ಕಲಿಸಬೇಕೆಂಬ ಪಾವಿತ್ರ್ಯದ ಬಗ್ಗೆ ಮಾತನಾಡುವುದಿಲ್ಲ. ಎಲ್ಲಾ ಮಕ್ಕಳು ಕಲಿಯಲು ಸಮಾನವಾಗಿ ಶಕ್ತರಿದ್ದು, ನಾವು ಒದಗಿಸಿಕೊಡುವ ಅವಕಾಶಗಳು ಹಾಗೂ ಬೆಂಬಲಿತ ವ್ಯವಸ್ಥೆ ಅದರ ಮೇಲೆ ಪರಿಣಾಮ ಬೀರುತ್ತದೆ ಎಂಬ ವಾದವನ್ನು ಸಹ ಅವರು ಒಪ್ಪುವುದಿಲ್ಲ. ಅವರ ಈ ವಾದ ಹೊಸದೇನೂ ಅಲ್ಲ. ಎಷ್ಟೇ ಆದರೂ ನಮ್ಮ ಇಂದಿನ ಈ ಚಿಂತನೆಯ ಪಳೆಯುಳಿಕೆಯ ಮೂಲ ವರ್ಣಾಶ್ರಮವಲ್ಲವೇ!

ಅಸಮಾನತೆ ಹಾಗೂ ತಾರತಮ್ಯದ ತವರಾಗಿರುವ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ, ಪ್ರತಿಭೆಗಳನ್ನು ಪ್ರೋತ್ಸಾಹಿಸಲು ಹೊರಟಿರುವುದರ ಹಿಂದೆ ಒಂದು ಗೋಪ್ಯ ಕಾರ್ಯಸೂಚಿ ಅಡಗಿದೆ. ಹೀಗಾಗಿ, ಉದ್ದೇಶಿತ ಪರೀಕ್ಷೆಯು ಸಾಮಾಜಿಕ ನ್ಯಾಯ ಒದಗಿಸುವ ಬದಲು ಉಳ್ಳವರು ಹಾಗೂ ಇಲ್ಲದವರ, ಮೇಲ್ವರ್ಗ ಹಾಗೂ ಕಡುಬಡವರ ನಡುವಿನ ಕಂದರವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಜೊತೆಗೆ, ಈಗಾಗಲೇ ಆರ್ಥಿಕ, ತಂತ್ರಜ್ಞಾನ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಶೇಕಡ 10ರಷ್ಟು ಜನರು ಶೇಕಡ 90ರಷ್ಟು ಅವಕಾಶಗಳನ್ನು ತಮ್ಮದಾಗಿಸಿಕೊಂಡಿರುವ ಹಾಗೂ ಶೇಕಡ 90ರಷ್ಟು ಜನರು ಶೇಕಡ 10ರಷ್ಟು ಅವಕಾಶಗಳಿಗೆ ಪರಿತಪಿಸುತ್ತಿರುವ ಸಾಮಾಜಿಕ- ಆರ್ಥಿಕ ವ್ಯವಸ್ಥೆಯನ್ನು ಮುಂದುವರಿಸುವ ಮೂಲಕ ಕೆಲವೇ ಜನರ ಹಿತಾಸಕ್ತಿಯನ್ನು ಕಾಪಾಡುವ ಕಾರ್ಯತಂತ್ರ ಇದರ ಹಿಂದಿದೆ. ಎಲ್ಲರನ್ನೂ ಪಾಸ್ ಎಂದು ಹೇಳುತ್ತಲೇ, ಕೆಲವರು ಮಾತ್ರ ಹೆಚ್ಚು ಪ್ರತಿಭಾವಂತರು ಎನ್ನುವುದರ ಹಿಂದೆ ಒಂದು ಮನೋಧರ್ಮ ಅಡಗಿದೆ. ಹೀಗಾಗಿ, ಇದು ಯಾರ ಪರವಾದ ಪರೀಕ್ಷೆ, ಇದರ ಹಿಂದಿರುವ ಮನೋಧರ್ಮ ಏನೆಂಬುದನ್ನು ಬಿಡಿಸಿ ಹೇಳುವ ಅಗತ್ಯವಿಲ್ಲ.

ಈ ಸಂಕಷ್ಟದ ಕಾಲದಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಗೌರವಿಸಿ, ಪರೀಕ್ಷೆ ನಡೆಸದೆ ಮಕ್ಕಳನ್ನು ತೇರ್ಗಡೆಗೊಳಿಸಲು ಉತ್ತಮ ಅವಕಾಶವಿತ್ತು. ಅದೆಂದರೆ, 10ನೇ ತರಗತಿಯಲ್ಲಿರುವ ಮಕ್ಕಳ ಸಂಚಿತ (ಕ್ಯುಮ್ಯುಲೇಟಿವ್) ಸಾಧನೆಯನ್ನು ಪರಿಗಣಿಸಿ ಹೆಚ್ಚು ವಸ್ತುನಿಷ್ಠವಾಗಿ ಹಾಗೂ ವೈಜ್ಞಾನಿಕವಾಗಿ ತೇರ್ಗಡೆಗೊಳಿಸಲು ಹೆಚ್ಚಿನ ಸಾಧ್ಯತೆಗಳಿದ್ದವು. ಸಾಮಾನ್ಯವಾಗಿ 10ನೇ ತರಗತಿಯಲ್ಲಿ ಕಲಿಯುತ್ತಿರುವ ಮಕ್ಕಳು 1ರಿಂದ 10ನೇ ತರಗತಿಯವರೆಗೆ ಒಂದೇ ಶಾಲೆಯಲ್ಲಿ ಕಲಿತಿರುತ್ತಾರೆ ಅಥವಾ ಕನಿಷ್ಠ ಮೂರು ವರ್ಷಗಳಾದರೂ ಒಂದು ಶಾಲೆಯಲ್ಲಿ (8, 9 ಮತ್ತು 10ನೇ ತರಗತಿ) ಕಲಿತಿರುತ್ತಾರೆ.

ಮಕ್ಕಳ 10 ವರ್ಷದ ಅಥವಾ ಮೂರು ವರ್ಷದ ಸಂಚಿತ ಸಾಧನೆ ಹೆಚ್ಚು ವಸ್ತುನಿಷ್ಠವಾಗಿರುವುದಲ್ಲದೆ ಕಲಿಕೆಯ ಹಲವು ಆಯಾಮಗಳನ್ನು ಪರಿಗಣಿಸಿ ಮಕ್ಕಳನ್ನು ತೇರ್ಗಡೆಗೊಳಿಸುವ ವಿಪುಲ ಅವಕಾಶಗಳನ್ನು ಒದಗಿಸುತ್ತದೆ. ಆದರೆ, ಉದ್ದೇಶಿತ ಬಹುಆಯ್ಕೆ ಪರೀಕ್ಷಾ ವಿಧಾನವು ಶಿಕ್ಷಣದಲ್ಲಿ ಕೇವಲ ಸ್ಮರಿಸುವ ಹಾಗೂ ಗುರುತಿಸುವ ಸಾಮರ್ಥ್ಯಗಳನ್ನು ಅಳೆಯುತ್ತದೆ. ಉಳಿದ ಮಹತ್ವದ ಮಜಲುಗಳಾದ ಅರ್ಥೈಸಿಕೊಂಡು ವ್ಯಾಖ್ಯಾನಿಸುವ, ಉದಾಹರಿಸುವ, ವರ್ಗೀಕರಿಸುವ, ಸಂಕ್ಷಿಪ್ತಗೊಳಿಸುವ, ಹೋಲಿಸುವ, ವಿವರಿಸುವ

ಅಥವಾ ಅನ್ವಯಿಸಿ ಕಾರ್ಯಗತಗೊಳಿಸುವ ಮೂಲಕ ವಿಶ್ಲೇಷಿಸುವ, ತಾರ್ಕಿಕವಾಗಿ ಯೋಚಿಸುವ, ಪರಿಶೀಲಿಸುವ, ಕಾರಣ ನೀಡುವ, ವಿಮರ್ಶಿಸುವ, ತೀರ್ಮಾನಿಸುವ, ಹೊಸದನ್ನು ಸೃಷ್ಟಿಸುವ, ಪರಿವರ್ತಿಸುವಂತಹ ಯಾವ ಮಜಲುಗಳನ್ನೂ ಪರೀಕ್ಷಿಸುವುದಿಲ್ಲ. ಹಾಗಾದರೆ, ನಾವು ಶೋಧಿಸುತ್ತಿರುವ ಪ್ರತಿಭೆ ಯಾವುದು?

ಕಂಠಪಾಠ ಆಧರಿಸಿದ ಕಾಟಾಚಾರದ ಪರೀಕ್ಷೆಗಳು ಅಂಕ, ಗ್ರೇಡ್‌ಗಳ ಮೂಲಕ ಅನುಕೂಲಸ್ಥ ಕುಟುಂಬಗಳ ಕೆಲವೇ ವಿದ್ಯಾರ್ಥಿಗಳಿಗೆ ಶಿಕ್ಷಣದ ಮಾರುಕಟ್ಟೆ ಜಗತ್ತಿನ ಶಾಲಾ-ಕಾಲೇಜುಗಳಲ್ಲಿ ಸೀಟನ್ನು ದೊರಕಿಸುವುದೇ ಪ್ರತಿಭೆಯೆಂದು ಬಿಂಬಿಸುತ್ತಿವೆ. ನಿಜವಾದ ಪ್ರತಿಭೆಯೆಂದರೆ ವಿದ್ಯಾರ್ಥಿಗಳ ಕಲಿಕೆಯನ್ನು ಹಲವು ಆಯಾಮಗಳಿಂದ ವೈಜ್ಞಾನಿಕವಾಗಿ ಮೌಲ್ಯಾಂಕನ ಮಾಡಿ, ಕಲಿಕೆಯಲ್ಲಿರುವ ಅಂತರ ಮತ್ತು ತೊಡಕುಗಳನ್ನು ನಿವಾರಿಸಿ ಎಲ್ಲಾ ವರ್ಗದ ಮಕ್ಕಳ ಕಲಿಕೆಯನ್ನು ಗುಣಾತ್ಮಕವಾಗಿ ಸುಧಾರಿಸುವ ಹೊಸ ಪ್ರಕ್ರಿಯೆ- ಹೊಸ ಚಿಂತನೆ. ಇದಾವುದೂ ಈ ಉದ್ದೇಶಿತ ಪರೀಕ್ಷೆಯಲ್ಲಿಲ್ಲ. ಬದಲಾಗಿ, ಪರೀಕ್ಷೆ ನಂತರ 35ರಿಂದ 45ರ ಅಂಕವ್ಯಾಪ್ತಿಯ ಬಹುತೇಕ ಮಕ್ಕಳು ಸಾಮಾಜಿಕವಾಗಿ, ಆರ್ಥಿಕವಾಗಿ ಅತ್ಯಂತ ಬಡಮಕ್ಕಳಾಗಿದ್ದು ಅವರು ಶಿಕ್ಷಣವನ್ನು ಮಾರುಕಟ್ಟೆಯಲ್ಲಿ ಖರೀದಿಸಲು ಸಾಧ್ಯವಾಗದ ಕಾರಣ, ಶಿಕ್ಷಣ ಸಚಿವರು ಹೇಳಿದಂತೆ ಅವರು ಡ್ರೈವಿಂಗ್ ಲೈಸೆನ್ಸ್ ಪಡೆಯಲು ಮಾತ್ರ ಅರ್ಹರಾಗುತ್ತಾರೆ. ಬಹುತೇಕ ಈ ಮಕ್ಕಳು ಪರಿಶಿಷ್ಟ ಜಾತಿ-ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತ ಮುಸ್ಲಿಂ ವರ್ಗದವರಾಗಿರುತ್ತಾರೆ. ಪರೀಕ್ಷೆಗಳು ಪರೋಕ್ಷವಾಗಿ ಈ ಮಕ್ಕಳನ್ನು ವ್ಯವಸ್ಥೆಯಿಂದ ಹೊರನೂಕಲು ಬಳಸಲಾಗುತ್ತಿರುವ ಆಧುನಿಕ ಅಸ್ತ್ರಗಳು ಎಂಬುದನ್ನು ನಾವು ಮನಗಾಣಬೇಕಿದೆ.

ಪ್ರತೀ ವಿದ್ಯಾರ್ಥಿಯು ತರಗತಿಯಿಂದ ತರಗತಿಗೆ ದಾಟುವ ಮುನ್ನ, ಆಯಾ ತರಗತಿ ಮತ್ತು ಆಯಾ ವಯಸ್ಸಿನ ಬೌದ್ಧಿಕ ಹಾಗೂ ಮಾನಸಿಕ ಬೆಳವಣಿಗೆಯನ್ನು ಪರಿಪೂರ್ಣವಾಗಿ ಅರಳಿಸುವ ಮತ್ತು ಜ್ಞಾನವನ್ನು ಕಟ್ಟಿಕೊಡುವ ಹೊಸ ಸಾಧನಗಳ ಬಗ್ಗೆ ಸರ್ಕಾರ ಆಲೋಚಿಸಬೇಕು. ಈ 15 ತಿಂಗಳಲ್ಲಿ ಕಲಿಕೆಯಲ್ಲಿ ಉಂಟಾಗಿರುವ ನಷ್ಟವನ್ನು ತುಂಬಿಕೊಡಲು ಹೊಸ ಬಗೆಯ ಕಾರ್ಯತಂತ್ರಗಳನ್ನು ರೂಪಿಸಬೇಕು.

ನಮ್ಮ ಎಲ್ಲಾ ಶಕ್ತಿ, ಸಾಮರ್ಥ್ಯ ಹಾಗೂ ಸಂಪನ್ಮೂಲಗಳನ್ನು ಸಾಧುವಲ್ಲದ ಪರೀಕ್ಷೆಗಳಿಗೆ ವ್ಯಯಿಸುವ ಬದಲು, 10 ಅಥವಾ 12ನೇ ತರಗತಿಯ ಮಕ್ಕಳಾಗಲೀ ಅಥವಾ ಇತರ ಯಾವುದೇ ತರಗತಿಯ ಮಕ್ಕಳ ಕಲಿಕೆ 15 ತಿಂಗಳುಗಳಿಂದ ಸಮರ್ಪಕವಾಗಿ ನಡೆದಿಲ್ಲವೆಂಬ ಸತ್ಯವನ್ನು ಒಪ್ಪಿ, 2021- 22ನೇ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಮೊದಲು ಅವರಿಗೆ ಮೂರು ತಿಂಗಳ ವೇಗವರ್ಧಿತ ಕಲಿಕಾ ಸೇತುಬಂಧ ಕಾರ್ಯಕ್ರಮದ ಮೂಲಕ ಕಲಿಕೆಯಲ್ಲಿನ ನಷ್ಟವನ್ನು ತುಂಬಿಕೊಡುವುದು ಹಾಗೂ ಬುನಾದಿ ಜ್ಞಾನವನ್ನು ಕಟ್ಟಿಕೊಡುವ ಬಗ್ಗೆ ಯೋಚಿಸಬೇಕಾಗಿರುವುದು ಇಂದಿನ ತುರ್ತು ಅಗತ್ಯ ಮತ್ತು ಆದ್ಯತೆ. ಮಂಡಳಿ ಪರೀಕ್ಷೆಗಳ ರದ್ದತಿಯನ್ನು ನಕಾರಾತ್ಮಕವಾಗಿ ನೋಡುವ ಬದಲು, ವ್ಯವಸ್ಥೆಯಲ್ಲಿರುವ ಲೋಪಗಳನ್ನು ಸರಿಪಡಿಸುವ ಸದವಕಾಶವೆಂದು ಭಾವಿಸಿ ಮುಂದೆ ಹೋಗಬೇಕು. ಈ ದಿಸೆಯಲ್ಲಿ ಸರ್ಕಾರವು ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಸುವ ತನ್ನ ನಿರ್ಧಾರದ ಕುರಿತು ಪುನರ್‌ಯೋಚಿಸಲಿ.

ಲೇಖಕ: ಅಭಿವೃದ್ಧಿ ಶಿಕ್ಷಣ ತಜ್ಞ

ಚುರುಮುರಿ



ಧಣಿಗಾರಿಕೆ

• ಮಣ್ಣೆರಾಜು

'ಕೆಆರ್‌ಎಸ್ ಡ್ಯಾಂ ಬಿರುಕು ಬಿಟ್ಟಿದೆಯಾ? ಬಿರುಕು ಬಿಟ್ಟಿಲ್ಲದಿದ್ದರೆ ಯಾಕೆ ಬಿಟ್ಟಿಲ್ಲ ಎಂಬ ಬಗ್ಗೆ ಚರ್ಚೆ ಮಾಡಲು ರಾಜಕೀಯ ಧುರೀಣರಾದ ಬಸಪ್ಪ, ತಿಮ್ಮಪ್ಪ ನಮ್ಮೊಂದಿಗಿದ್ದಾರೆ. ಇವರು ಏನೇನು ಹೇಳ್ತಾರೆ ಕೇಳೋಣ...' ನ್ಯೂಸ್ ಚಾನೆಲ್ ಆ್ಯಂಕರ್ ಸ್ವಾಗತಿಸಿದಳು.

'ಡ್ಯಾಂ ಬಿರುಕು ಬಿಡಲು ಗಣಿಗಾರಿಕೆ ಕಾರಣನಾ?' ಆ್ಯಂಕರ್ ಕೇಳಿದಳು.

'ಗೊತ್ತಿಲ್ಲ, ಆದರೆ ಡ್ಯಾಂ ಹೆಸರಲ್ಲಿ ರಾಜಕೀಯ ಪಕ್ಷಗಳಲ್ಲಿ ಬಿರುಕು ಕಾಣಿಸಿಕೊಂಡಿದೆ' ಎಂದರು ಬಸಪ್ಪ.

'ನಿಮ್ಮ ಪಕ್ಷದಲ್ಲಿ ದೊಡ್ಡ ಬಿರುಕು ಇದೆಯಲ್ರೀ...' ಅಂದರು ತಿಮ್ಮಪ್ಪ.

'ನಿಮ್ಮ ಪಕ್ಷದ ಬಿರುಕಿಗೆ ಯಾವ ಗಣಿಗಾರಿಕೆ ಕಾರಣ?' ಆ್ಯಂಕರ್‌ಗೆ ಕುತೂಹಲ.

'ಗಣಿಗಾರಿಕೆ ಅಲ್ಲಾರೀ, ಧಣಿಗಾರಿಕೆ. ನಾನೇ ಸಿ.ಎಂ ಅಂತ ಕೂಸು ಹುಟ್ಟುವ ಮೊದಲೇ ಇವರ ಪಕ್ಷದವರು ಕುಲಾವಿ ಹೊಲಿಸುತ್ತಿದ್ದಾರೆ...' ತಿಮ್ಮಪ್ಪ ನಕ್ಕರು.

'ಆ ವಿಚಾರ ನಿಮಗ್ಯಾಕ್ರೀ, ಕುಲಾವಿ ಸೈಜಿಗೆ ಕೂಸು ಹೆರುವ ಕೆಪಾಸಿಟಿ ನಮ್ಮ ನಾಯಕರಿಗಿದೆ' ಬಸಪ್ಪ ತಿರುಗೇಟು ಕೊಟ್ಟರು.

'ದಿಲ್ಲಿ ಮೇಸ್ತ್ರಿ ಬಂದು ನಿಮ್ಮ ಪಕ್ಷದ ಬಿರುಕಿಗೆ ಕಾಂಕ್ರೀಟ್ ಹಾಕಿ ಹೋಗಿದ್ದಾರಲ್ರೀ...'

'ಹೌದು ಹಾಕಿದ್ದಾರೆ, ಚುನಾವಣೆವರೆಗೂ ಬಿರುಕು ಬರೋಲ್ಲ ಅಂತ ರೆಡ್ ಇಂಕ್‌ನಲ್ಲಿ ಅಂಡರ್‌ಲೈನ್ ಮಾಡಿದ್ದಾರೆ. ನಿಮ್ಮ ಪಕ್ಷದಲ್ಲೂ ಧಣಿಗಾರಿಕೆ ಬಿರುಕು ಇದೆ, ಮೊದಲು ಅದನ್ನು ಮುಚ್ಚಿಕೊಳ್ರೀ...'

'ಏನಿಲ್ಲ, ಸಿ.ಎಂ ದಣಿದಿದ್ದಾರೆ, ಚೇಂಜ್ ಮಾಡಿ ಹೊಸ ಧಣಿ ಕೂರಿಸಿ ಅಂತ ಸದಭಿಪ್ರಾಯ ವ್ಯಕ್ತಪಡಿಸಿದ್ದೀವಿ ಅಷ್ಟೇ...'

'ಮೈಕ್ ಸಿಕ್ಕರೆ ಸಾಕು ನೀವು ಮೈಮೇಲೆ ಚೇಳು ಬಿಟ್ಟುಕೊಂಡವರಂತೆ ಧಣಿಗಾರಿಕೆ ವಿರುದ್ಧ ಚೀರಾಡ್ತೀರಲ್ರೀ...' ಮಾತಿಗೆ ಮಾತು ಬೆಳೆದು ನಾಯಕರ ವಾದ-ವಿವಾದ ವಿಕೋಪಕ್ಕೋಯಿತು. ಕೂಗಾಡಿ ಕುರ್ಚಿ, ಮೈಕ್ ಎಸೆದಾಡಿದರು.

ವೀಕ್ಷಕರು ಗಾಬರಿಯಾದರು. ನಾಯಕರ ಆರ್ಭಟದಿಂದ ತಮ್ಮ ಟಿ.ವಿ. ಬಿರುಕು ಬಿಡಬಾರದು ಎಂದು ಚಾನೆಲ್ ಚೇಂಜ್ ಮಾಡಿ ಟಿ.ವಿ. ಕಾಪಾಡಿಕೊಂಡರು.

ಸಂಗತ

ಈ ಪರಿಮಿತ ವಿಶ್ವಕ್ಕೆ ಜನಬಾಧೆ

ಜನಸಂಖ್ಯಾ ನಿಯಂತ್ರಣವೆಂದರೆ ಜನಸಾಂದ್ರತೆ ನಿಭಾಯಿಸುವ ಕೌಶಲ

• ಯೋಗಾನಂದ

1800ರಲ್ಲಿ 100 ಕೋಟಿ ಇದ್ದ ವಿಶ್ವದ ಜನಸಂಖ್ಯೆ ಇದೀಗ 782 ಕೋಟಿ! ಇದರಲ್ಲಿ ಶೇಕಡ 17ರಷ್ಟು ಭಾರತದ್ದೇ ಪಾಲು. ನಿರೀಕ್ಷಿತ ಮಟ್ಟದಲ್ಲಿ ಸಾಕ್ಷರತೆ ಇಲ್ಲವಾದ್ದರಿಂದ ಕುಟುಂಬ ಯೋಜನೆಗೆ ಹಿನ್ನಡೆ. ವಿಶ್ವ ಪರಿಮಿತ. ಆದ್ದರಿಂದ ಅದು ಪರಿಮಿತ ಜನಸಂಖ್ಯೆಯನ್ನು ಮಾತ್ರ ಸಲಹಬಲ್ಲದು. ಇದು ಸರಳ ತರ್ಕ.

ಜಗತ್ತೇ ಒಂದು ಕುಟುಂಬದಂತೆ ಎನ್ನುವ ಆಶಯ ಅದೆಷ್ಟು ಸವಕಲಾಗಿದೆ ಗೊತ್ತೇ? ಭುವಿಯೆಂಬ ಈ ಸೂರಿನಡಿ ಶೇಕಡ 13ರಷ್ಟು ಜನರಿಗೆ, ಹೊಟ್ಟೆ ತುಂಬಿದರೆ ಹೇಗಿರುತ್ತದೆ ಎನ್ನುವ ಅನುಭವವೇ ಇಲ್ಲದಷ್ಟು ಹಸಿವು ಕಾಡಿದೆ. ಪ್ರತಿವರ್ಷ 20 ಲಕ್ಷ ಮಕ್ಕಳು ಅಪೌಷ್ಟಿಕತೆಯಿಂದ ಅಸುನೀಗುತ್ತಿವೆ. ವೈಪರೀತ್ಯ ನೋಡಿ... ಜಗತ್ತಿನ ಒಂದೆಡೆ, ವೈದ್ಯರ ಎಚ್ಚರಿಕೆ ನಡುವೆಯೂ ಬೊಜ್ಜು ನಿರ್ಲಕ್ಷಿಸುವವರು, ಇನ್ನೊಂದೆಡೆ, ಅರೆಹೊಟ್ಟೆಯವರು.

ಜನ ಅಧಿಕವಾದರೆ ಪ್ರಾಕೃತಿಕ ಸಂಪನ್ಮೂಲಗಳು ತ್ವರಿತವಾಗಿ ಬಳಕೆಯಾಗುತ್ತವೆ. ಅರಣ್ಯ ನಾಶ, ಬಡತನ, ನಿರುದ್ಯೋಗ, ವಿಶೇಷವಾಗಿ ಮಹಿಳೆಯರ ಆರೋಗ್ಯ, ವಾಯುಗುಣದ ಏರುಪೇರು, ಜಾಗತಿಕ ತಾಪಮಾನ... ಒಂದೇ ಎರಡೇ? ಜನ ಹೆಚ್ಚಿದಂತೆ ತ್ಯಾಜ್ಯದ ರಾಶಿ ಅಗಾಧ. ಗಾಳಿ, ನೀರು ಮಲಿನ. ಮನುಷ್ಯರಷ್ಟೇ ಬಾಧೆ ಅನುಭವಿಸರು, ಇತರ ಜೀವವೈವಿಧ್ಯಗಳೂ.

ವಿಶ್ವಸಂಸ್ಥೆ ವತಿಯಿಂದ 1987ರಿಂದಲೂ ಜುಲೈ 11ರಂದು 'ವಿಶ್ವ ಜನಸಂಖ್ಯಾ ದಿನ' ಆಚರಿಸಲಾಗುತ್ತಿದೆ. ಆ ವರ್ಷ ಜಗತ್ತಿನ ಜನಸಂಖ್ಯೆಯಾಗಲೇ 500 ಕೋಟಿ ಮುಟ್ಟಿತ್ತು. ಜನಸಂಖ್ಯೆ ಏರಿಕೆ, ಅದರಿಂದ ಉದ್ಭವಿಸುವ ನಾನಾ ಸಮಸ್ಯೆಗಳ ಕುರಿತು ಜಗದಾದ್ಯಂತ ಚರ್ಚೆ, ಸಂವಾದ, ಉಪನ್ಯಾಸಗಳು ಏರ್ಪಡುತ್ತವೆ. ಜನಜಾಗೃತಿಯೇ ಉದ್ದೇಶ. ಧರೆಯ ಆಶ್ರಯಕ್ಕೆ ಇತಿಮಿತಿಯಿಲ್ಲ ಎನ್ನುವುದು ಮೌಢ್ಯ. ಕೊರೊನಾ ಎರಡನೇ ಅಲೆ ಭಾರತದಲ್ಲಿ ತೀವ್ರವಾದುದಕ್ಕೆ ಜನಸಾಂದ್ರತೆ ಕೂಡ ಒಂದು ಕಾರಣ ಎನ್ನಬಹುದು. ಲಸಿಕೆ ಹಾಕುವುದಿರಲಿ, ದೈಹಿಕ ಅಂತರ ಪಾಲನೆ ತಾನೆ ಹೇಗೆ? ರೋಗಿಗಳಿಗೆ ಆಸ್ಪತ್ರೆ, ಚಿಕಿತ್ಸೆ, ಉಪಚಾರ, ಸಾರಿಗೆ ಸೌಕರ್ಯ ಎಂತು?

ಜನಸಂಖ್ಯಾ ನಿಯಂತ್ರಣವೆಂದರೆ ಯಾರದೇ ಅವನತಿಯಲ್ಲ, ಬದಲಿಗೆ ಜನಸಂಖ್ಯೆ ಏರಿಕೆಯ ಪರಿಣಾಮಗಳನ್ನು ಮನಗಂಡು ಮನಃಪೂರ್ವಕವಾಗಿ ಎಚ್ಚರವಹಿಸುವುದು. ಚಿಕ್ಕ ಕುಟುಂಬವೇ ಚೊಕ್ಕ ಕುಟುಂಬ. ಅಲ್ಲಿ ಇರುವುದನ್ನೇ ಹಂಚಿಕೊಂಡು ಅನುಭವಿಸಿಯಾರು, ನೆಮ್ಮದಿಯದೇ ಅಲ್ಲಿ ಕಾರುಬಾರು. ಗುಣಮಟ್ಟದ ಜೀವನವು ಜನಸಂಖ್ಯಾ ನಿಯಂತ್ರಣದಿಂದ ಮಾತ್ರ ಸಾಧ್ಯವೆಂಬ ಅರಿವು ಜಾಗತಿಕವಾಗಿ ಮೂಡಬೇಕು. ನಿಜವೆ, ಪರ್ಯಾಯ ಶಕ್ತಿ ಸಂಪನ್ಮೂಲಗಳನ್ನು ಯಶಸ್ವಿಯಾಗಿ ಕಂಡುಕೊಳ್ಳಲಾಗುತ್ತಿದೆ. ವಿಜ್ಞಾನ ಮತ್ತು ತಂತ್ರಜ್ಞಾನದ ದೆಸೆಯಿಂದ ಸೌರಶಕ್ತಿ, ಪವನಶಕ್ತಿಯ ಕೊಯಿಲುಗಳ ಸುಧಾರಿತ ವಿಧಾನಗಳು ದಕ್ಕಿವೆ. ಆದಾಗ್ಯೂ ಸುಸ್ಥಿರ ಜನಸಂಖ್ಯೆ ಕ್ರಾಂತಿಕಾರಕ ದಿಟ್ಟ ಹೆಜ್ಜೆಗಳಿಂದಲೇ ಸಾಧ್ಯ. 'ಹೆಣ್ಣು ಕುಟುಂಬದ ಕಣ್ಣು' ಎಂಬುದು ಕೇವಲ ಶಕ್ತಿವಾಕ್ಯವಾದರಾಯಿತೇ? ಆಕೆಯ ಅಭಿಪ್ರಾಯಗಳಿಗೆ ಮನ್ನಣೆ ಸಿಗಬೇಕು. ಹೆರುವುದು ಹೆಣ್ಣು, ಹಾಗಾಗಿ ಕುಟುಂಬ ಯೋಜನೆಯ ಬಗ್ಗೆ ಆಕೆಯ ನಿರ್ಧಾರವೇ ಅಖೈರಾಗಬೇಕು.

ಜನಸಂಖ್ಯೆ ಹೆಚ್ಚಳವು ಜನನ ಮತ್ತು ಮರಣದ ದರಗಳ ನಡುವಿನ ವ್ಯತ್ಯಾಸವನ್ನು ಅವಲಂಬಿಸಿದೆ. ಜನಸಂಖ್ಯಾ ನಿಯಂತ್ರಣವೆಂದರೆ ಜನಸಾಂದ್ರತೆ ನಿಭಾಯಿಸುವ ಕೌಶಲ. ಆಯಾ ದೇಶ ಮತ್ತು ಅದರ ಪರಿಸರದ ದಕ್ಷ ನಿರ್ವಹಣೆ. ಗಮನಿಸಲೇಬೇಕಾದ ಸೂಕ್ಷ್ಮವೊಂದಿದೆ. ಜನಸಾಂದ್ರತೆ ಕಡಿಮೆಯಾದ ಮಾತ್ರಕ್ಕೆ ಬಡತನ ತೊಲಗಿ, ಸಿರಿ ಸಮೃದ್ಧಿ ಇಟ್ಟಾಡೀತೆಂದಲ್ಲ. ಸರ್ವ ಸವಲತ್ತು, ಸಂಪನ್ಮೂಲಗಳು ಜಾಗತಿಕವಾಗಿ ಸಮ ಸಮ ವಿತರಣೆಯ ಹೊರತು ಉದ್ದೇಶ ಕನಸೇ.

ದೇಶ, ಜಾತಿ, ಧರ್ಮ, ವರ್ಗಗಳನ್ನೂ ಮೀರಿ ಜನಸಂಖ್ಯೆಯ ನಿಯಂತ್ರಣ ಅತಿ ಜರೂರು. ಉತ್ತಮ ಗುಣಮಟ್ಟದ ಬದುಕಿನಿಂದ ಯಾರೂ ವಂಚಿತರಾಗಬಾರದು. ಸಮಪಾಲು, ಸಮಬಾಳಿನ ಸಾಫಲ್ಯಕ್ಕಾಗಿ ಜನಸಂಖ್ಯಾ ಸ್ಫೋಟಕ್ಕೆ ಕಡಿವಾಣವಿರಬೇಕು. 'ಸುಧಾರಿತ ನಾಳೆಗೆ ಸಣ್ಣ ಕುಟುಂಬ'- ನಮ್ಮ ಧ್ಯೇಯವಾಗಬೇಕು. ಈ ದಿಸೆಯಲ್ಲಿ ವಿಯೆಟ್ನಾಂ ಒಳ್ಳೆಯ ಮಾದರಿಯಾಗಿದೆ. ಎರಡು ದಶಕಗಳ ಹಿಂದೆ ಅಲ್ಲಿ ಒಂದು ಕುಟುಂಬದಲ್ಲಿ ಹತ್ತು ಮಕ್ಕಳಿದ್ದರೂ ಅತಿಶಯವಾಗಿರಲಿಲ್ಲ. ಆದರೆ ಇಂದು ಕುಟುಂಬಕ್ಕೆ ಒಬ್ಬರು ಅಥವಾ ಇಬ್ಬರು ಮಕ್ಕಳು. ಸಮರ್ಥ ಶಿಕ್ಷಣ, ಉದ್ಯೋಗಾವಕಾಶಗಳಿಂದ ಬದುಕಿನ ಗುಣಮಟ್ಟ ಏರಿದ ಕಾರಣ ಇದು ಸಾಧ್ಯವಾಯಿತು.

ಲಂಡನ್ನಿನ 'ಅಂತರರಾಷ್ಟ್ರೀಯ ಪರಿಸರ ಮತ್ತು ಅಭಿವೃದ್ಧಿ' ಸಂಸ್ಥೆಯ ಹಿರಿಯ ತಜ್ಞ ಡಾ. ಡೇವಿಡ್ ಸಾಟರ್ತ್‌ವೈಟ್ ಅವರದು ತುಸು ವಿಭಿನ್ನವಾದ ಅಭಿಪ್ರಾಯ: 'ಹಸಿರುಗ್ರಹಕ್ಕೆ ಜನಸಂಖ್ಯೆಯೇ ಸಮಸ್ಯೆ ನಿಜ. ಆದರೆ ಬಳಕೆದಾರರ ಸಂಖ್ಯೆ ಮತ್ತು ಬಳಸುವ ಪ್ರಮಾಣ, ರೀತಿ ನೀತಿ ಅದಕ್ಕೂ ದೊಡ್ಡ ಸವಾಲು'. ಅವರ ಉದ್ಗಾರ 'ಅಗಿಯುವುದಕ್ಕಿಂತಲೂ ಹೆಚ್ಚಾಗಿ ಕಚ್ಚಬೇಡ' ಎಂಬ ಗಾದೆಗೆ ಸಂವಾದಿಯಾಗಿದೆ.

ನಾಸಾದ 'ಕೆಪ್ಲರ್ ಕಾರ್ಯಸರಣಿ' ಧರೆಯನ್ನು ಹೋಲುವ ಅನೇಕ ಗ್ರಹಗಳನ್ನು ಗುರುತಿಸಿದೆ. ಆದರೆ ಅವುಗಳ ಬಗ್ಗೆ ಇನ್ನೂ ತಿಳಿಯಬೇಕಿದೆ. ಮೇಲಾಗಿ ಅವು ನೆಚ್ಚಿಕೊಳ್ಳಲಾಗದಷ್ಟು ದೂರ. ಹಾಗಾಗಿ 'ಅನ್ಯ ವಾಸಯೋಗ್ಯ(?) ಆಕಾಶಕಾಯಗಳಿಗೆ ಜಿಗಿತ' ಸನ್ನಿಹಿತ ಪರಿಹಾರವಲ್ಲ. ಭೂಮಿ ನಮಗಿರುವ ಏಕಮಾತ್ರ ಮನೆ. ಅದರ ತಾಳಿಕೆಗೆ ಊನವಾಗದಂತೆ ನಾವು ಬದುಕುವ ಕ್ರಮವನ್ನು ಮತ್ತೆ ಮತ್ತೆ ಪರಿಷ್ಕೃತಗೊಳಿಸಿಕೊಳ್ಳುತ್ತಿರಬೇಕು.

ವಾಚಕರ ವಾಣಿ

'ಅನುಮತಿ' ಎಂಬ ಅಡ್ಡಗೋಡೆ!

ಕೆಲವು ವಂಚನೆ ಪ್ರಕರಣಗಳ ಬಗ್ಗೆ ಪತ್ರಿಕೆಯಲ್ಲಿ (ಪ್ರ.ವಾ., ಜುಲೈ 9) ವರದಿಯಾಗಿದೆ. 'ಚಲನ್ ತಿದ್ದಿ ವಂಚನೆ: ಸಬ್ ರಿಜಿಸ್ಟ್ರಾರ್ ಸೇರಿ ನಾಲ್ವರ ವಜಾ', 'ಕೆಪಿಎಸ್‌ಸಿ ಸದಸ್ಯನ ಸೋಗಿನಲ್ಲಿ ವಂಚನೆ: ಒಬ್ಬನ ಬಂಧನ', 'ಪವರ್ ಬ್ಯಾಂಕ್ ವಂಚಕನ ಬಂಧನ' ಎಂಬ ಸುದ್ದಿಗಳ ಜೊತೆಗೆ ಮತ್ತೊಂದು ಪ್ರಮುಖ ಸುದ್ದಿ ಎಂದರೆ, ಭ್ರಷ್ಟಾಚಾರ ಆರೋಪದಲ್ಲಿ ಮುಖ್ಯಮಂತ್ರಿ ಸೇರಿ ಒಂಬತ್ತು ಮಂದಿ ಮೇಲಿನ ದೂರು ವಜಾ ಆಗಿರುವುದು. ಈ ಪ್ರಕರಣದಲ್ಲಿ, ರಾಜ್ಯಪಾಲರಿಂದ ಪೂರ್ವಾನುಮತಿ ಪಡೆಯದೇ ಇದ್ದ ಕಾರಣಕ್ಕೆ ದೂರನ್ನು ವಜಾ ಮಾಡಲಾಗಿದೆ. ಕ್ರಿಮಿನಲ್ ಆರೋಪಗಳ ವಿಷಯದಲ್ಲಿ ಆಡಳಿತಾರೂಢರಿಗೆ ಮತ್ತು ಸಾಮಾನ್ಯರಿಗೆ ಭಿನ್ನ ಭಿನ್ನ ನ್ಯಾಯ ಸರಿಯೇ? 'ಅನುಮತಿ' ಎಂಬ ಅಡ್ಡಗೋಡೆ ಏಕೆ? ಈ ಒಂದು ಅಡ್ಡಗೋಡೆಯಿಂದ ದೊಡ್ಡಕುಳಗಳು ತಪ್ಪಿಸಿಕೊಳ್ಳುವುದಕ್ಕೆ ಅವಕಾಶ ಸಿಗಬಹುದು.

ಸಿ.ಕೃಷ್ಣ, ಲಕ್ಕವನಹಳ್ಳಿ, ಶಿರಾ

ಸಾಂಪ್ರದಾಯಿಕ ಜ್ಞಾನ: ಅಭಿನಂದನೀಯ ಕಾರ್ಯ

'ಸಾಂಪ್ರದಾಯಿಕ ಜ್ಞಾನ: ಮಹತ್ವದ ದೀವಿಗೆ' ಎಂಬ ಡಾ. ಎಚ್.ಆರ್.ಕೃಷ್ಣಮೂರ್ತಿ ಅವರ ವಿಶ್ಲೇಷಣಾ ಲೇಖನ (ಪ್ರ.ವಾ., ಜುಲೈ 5), ಸಂಶೋಧನಾ ಕ್ಷೇತ್ರದಲ್ಲಿರುವ ಪೇಟೆಂಟ್ ಆಸಕ್ತರಿಗೆ ಉಪಯುಕ್ತವಾಗಿದೆ. ದೇಶದಲ್ಲಿ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿಯ (ಸಿಎಸ್‌ಐಆರ್) ನೇತೃತ್ವದಲ್ಲಿ ಎರಡು ದಶಕಗಳ ಹಿಂದೆ 'ಸಾಂಪ್ರದಾಯಿಕ ಜ್ಞಾನದ ಡಿಜಿಟಲ್ ಲೈಬ್ರರಿ'ಯ (ಟಿಕೆಡಿಎಲ್) ಸ್ಥಾಪನೆಗೆ ಪ್ರೇರಣೆ ನೀಡಿದ ಅಂಶಗಳು ಕುತೂಹಲಕಾರಿಯಷ್ಟೇ ಅಲ್ಲದೆ ಎಚ್ಚರಿಕೆ ನೀಡುವ ವಿಷಯಗಳಾಗಿವೆ.

ದೇಶದ ಜೈವಿಕ ಸಂಪನ್ಮೂಲ ಆಧರಿಸಿ ನಮಗೇ ಗೊತ್ತಿಲ್ಲದಂತೆ ವಿದೇಶಿ ಕಂಪನಿಗಳು ಪಡೆದಿದ್ದ 239 ಪೇಟೆಂಟ್‌ಗಳನ್ನು ರದ್ದುಪಡಿಸಿದ ಹೆಮ್ಮೆಯ ಸಿಎಸ್‌ಐಆರ್ ಮತ್ತು ಟಿಕೆಡಿಎಲ್ ಸಂಸ್ಥೆಗಳ ಶ್ರಮವನ್ನು ಮೆಚ್ಚಲೇಬೇಕು (ಉದಾಹರಣೆಗೆ, ನಮ್ಮ ಸಾಂಪ್ರದಾಯಿಕ ಬೆಳೆಗಳಾದ ಅರಿಸಿನ, ಬೇವು, ಬಾಸ್ಮತಿ ಇತ್ಯಾದಿಗಳಿಗೆ ವಿದೇಶಗಳಲ್ಲಿ ದೊರೆತ ಪೇಟೆಂಟ್‌ಗಳು ರದ್ದಾದದ್ದು). ಈ ಎರಡೂ ಸಂಸ್ಥೆಗಳಿಗೆ ಅಭಿನಂದನೆ.

ಡಾ. ಆರ್.ಎ.ಪ್ರಭು, ಕುಮಟಾ

ಯುವಜನಾಂಗ ಓದಬೇಕಾದ ಪುಸ್ತಕ

ರಾಜಾರಾವ್ ಅವರ 'ಕಾಂತಾಪುರ' ಕಾದಂಬರಿ 1938ರಲ್ಲಿ ಮೊದಲು ಪ್ರಕಟಗೊಂಡು ಹಲವು ಮರುಮುದ್ರಣ, ಅನುವಾದ ಕಂಡಿದೆ. ಗಾಂಧೀಜಿಯು ಸತ್ಯಾಗ್ರಹ, ಅಹಿಂಸೆ, ಸ್ವದೇಶಿ ತತ್ವಗಳನ್ನು ಆಯುಧಗಳನ್ನಾಗಿ ಪ್ರಯೋಗಿಸಿ ಪ್ರಾರಂಭಿಸಿದ ಚಳವಳಿಯು ದೇಶದಾದ್ಯಂತ ಬಿರುಸಾಗಿದ್ದ ದಿನಗಳಲ್ಲಿ, ಮೈಸೂರು ಪ್ರಾಂತ್ಯದ ಮಲೆನಾಡಿನ 'ಕಾಂತಾಪುರ' ಎಂಬ ಗ್ರಾಮವನ್ನು ಆಧಾರವಾಗಿಟ್ಟು ಈ ಕಾದಂಬರಿ ರಚಿತವಾಗಿದೆ. ಮೂರ್ತಿ ಎಂಬ ಗಾಂಧಿ ತತ್ವಗಳ ಸಾಕಾರಮೂರ್ತಿಯ ಮುಖಾಂತರ, ಅಲ್ಲಿನ ವಿವಿಧ ಜಾತಿ, ಕಸುಬು, ಸ್ತರಗಳ ಸಮುದಾಯವನ್ನು ಹೊಕ್ಕು ಆವರಿಸಿ, ಇಡೀ ಸಮುದಾಯವು ಉತ್ಸಾಹ ಆವೇಶಗಳಿಂದ ಚಳವಳಿಯಲ್ಲಿ ಧುಮುಕಿ ಸರ್ಕಾರದ ಕ್ರೌರ್ಯ, ಅತ್ಯಾಚಾರಗಳಿಗೆ ಅಳುಕದೆ, ಹಿಂಸೆ ನೋವು ಅನುಭವಿಸಿ ದಿಟ್ಟತನದಿಂದ ತೊಡಗಿಕೊಳ್ಳುವ ಪರಿ ಕಾದಂಬರಿಯಲ್ಲಿ ಮನೋಜ್ಞವಾಗಿ ಚಿತ್ರಿತವಾಗಿದೆ.

ಇಂಗ್ಲಿಷ್ ಭಾಷೆಯಲ್ಲಿರುವ ಕಾದಂಬರಿಯಲ್ಲಿ ರಾಜಾರಾವ್ ಅವರ ಭಾಷೆ, ನಿರೂಪಣೆಯ ಶೈಲಿ, ಧಾಟಿ ಪ್ರಾದೇಶಿಕ ಸೊಗಡಿನಿಂದ ಕೂಡಿದ್ದು, ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. ಗ್ರಾಮೀಣ ಜೀವನದ ಚಿತ್ರಣವಂತೂ ಅತಿ ಆಪ್ತವಾಗಿದೆ. ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಈ ಕಾದಂಬರಿಯನ್ನು ಎಲ್ಲರೂ ಓದುವುದು ಔಚಿತ್ಯಪೂರ್ಣ ಎನಿಸುತ್ತದೆ. ಪದವಿ ತರಗತಿಗಳಲ್ಲಿ ಇಂಗ್ಲಿಷ್ ಅಧ್ಯಯನದ ಭಾಗವಾಗಿ ಒಂದು ಇಂಗ್ಲಿಷ್ ಕಾದಂಬರಿಯನ್ನು ಪಠ್ಯವಾಗಿ ಓದಬೇಕಾದ ಕ್ರಮ ಇತ್ತು. ಈಗಲೂ ಇದ್ದಲ್ಲಿ 'ಕಾಂತಾಪುರ' ಬಹಳ ಪ್ರಸ್ತುತ ಅನ್ನಿಸುತ್ತದೆ. ಈಗಿನ ಯುವಜನಾಂಗ ಈ ಕಾದಂಬರಿಯ ಓದಿನ ಮೂಲಕ ಸ್ವಾತಂತ್ರ್ಯ ಚಳವಳಿಯ ಒಂದು ಇಣುಕು ನೋಟವನ್ನು ಪಡೆಯಬಹುದು.

ಎಚ್.ಎಸ್.ಶಿವರಾಮ್, ಮೈಸೂರು

ಬರೆದಂತೆ ಬದುಕಿದರು ಈ ಕವಿ

ಅತಿಯಾದ ಉಪದೇಶಾಮೃತ ಕುರಿತ ಮಲ್ಲಿಕಾರ್ಜುನ ಹೆಗ್ಗಳಗಿ ಅವರ ಲೇಖನ (ಸಂಗತ, ಜುಲೈ 9) ಓದುತ್ತಿದ್ದಂತೆ, ಬರೆದಂತೆ ಬದುಕಿದ ಕವಿಯೊಬ್ಬರು ನನ್ನ ನೆನಪಿಗೆ ಬಂದರು. ಅವರೇ ಬನಹಟ್ಟಿಯ ಕವಿ ಬ.ಗಿ.ಯಲ್ಲಟ್ಟಿ. ಅವರು ಶ್ರೀಮಂತಿಕೆಯಿಂದ ಬಡತನಕ್ಕೆ ನೂಕಲ್ಪಟ್ಟ ದುರ್ದೈವಿ. ಬರೀ ಇಂಟರ್‌ಮೀಡಿಯಟ್ ಪಾಸಾಗಿದ್ದ ಅವರಿಗೆ ಎಸ್.ಎಂ.ಅಂಗಡಿ ಎಂಬ ಸಹೃದಯಿ ಮುಖ್ಯಾಧ್ಯಾಪಕರು ರಬಕವಿ ಹೈಸ್ಕೂಲಿನಲ್ಲಿ ನೌಕರಿ ಕೊಟ್ಟರು. ರಂ.ಶ್ರೀ.ಮುಗಳಿಯವರು ಪ್ರಾಂಶುಪಾಲರಾಗಿದ್ದ ಸಾಂಗಲಿಯ ವಿಲ್ಲಿಂಗ್ಟನ್ ಕಾಲೇಜಿನಲ್ಲಿ ಬಿ.ಎ., ಎಂ.ಎ ಪದವಿಗಳನ್ನು ಪಡೆದುಕೊಂಡರು. ಅಕ್ಕಲಕೋಟೆಯ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕನ ಹುದ್ದೆಗೆ ಅರ್ಜಿ ಹಾಕಿದ್ದರು. ಸಂದರ್ಶನಕ್ಕೆ ಕರೆ ಬಂದಿತು. ಆದರೆ ಯಲ್ಲಟ್ಟಿಯವರು ಅಕ್ಕಲಕೋಟೆಗೆ ತಡವಾಗಿ ಹೋದರು. ಅಷ್ಟರಲ್ಲಿ ಸಂದರ್ಶನ ಪ್ರಕ್ರಿಯೆ ಮುಗಿದು ಬೇರೊಬ್ಬರ ಆಯ್ಕೆಯಾಗಿತ್ತು. ಆದರೆ ಕೆಲಸದ ಆದೇಶ ಕೊಟ್ಟಿರಲಿಲ್ಲ. ಆಡಳಿತ ಮಂಡಳಿಯವರನ್ನು ಕಂಡು ಕಾರಣ ವಿವರಿಸಿದರು. 50 ವರ್ಷ ಮೀರಿದ್ದ ಯಲ್ಲಟ್ಟಿಯವರ ಬಗ್ಗೆ ಮರುಕಗೊಂಡ ಆಡಳಿತ ಮಂಡಳಿ, ಮೊದಲು ಆಯ್ಕೆಗೊಂಡವರ ಬದಲು ಅವರನ್ನೇ ನೇಮಕ ಮಾಡಿಕೊಳ್ಳುವುದಾಗಿ ಹೇಳಿತು.

'ಮತ್ತೊಬ್ಬರ ಹೊಟ್ಟೆಯ ಮೇಲೆ ಕಲ್ಲು ಹಾಕಿ ನಾನು ಬದುಕು ಕಂಡುಕೊಳ್ಳುವುದು ತಪ್ಪು, ನಾನು ಈಗಾಗಲೇ ಹೈಸ್ಕೂಲ್‌ನಲ್ಲಿ ಶಿಕ್ಷಕ ವೃತ್ತಿಯಲ್ಲಿದ್ದೇನೆ. ಈಗ ಆಯ್ಕೆಯಾಗಿರುವ ತರುಣನನ್ನೇ ತೆಗೆದುಕೊಳ್ಳಿ' ಎಂದು ಯಲ್ಲಟ್ಟಿ ಅವರು ಸಮಜಾಯಿಷಿ ನೀಡಿ ಬನಹಟ್ಟಿಗೆ ಬಂದರು. ಯಲ್ಲಟ್ಟಿಯವರ ಈ ಪ್ರಾಮಾಣಿಕತೆ ವ್ಯರ್ಥವಾಗಲಿಲ್ಲ. ಅಕ್ಕಲಕೋಟೆ ಕಾಲೇಜಿನ ಪ್ರಾಚಾರ್ಯರು ಕಲಬುರ್ಗಿಯ ಶರಣಬಸವೇಶ್ವರ ಕಾಲೇಜಿನ ಪ್ರಾಚಾರ್ಯರಿಗೆ ಯಲ್ಲಟ್ಟಿಯವರನ್ನು ಶಿಫಾರಸು ಮಾಡಿ ಪತ್ರ ಬರೆದರು. ಕೆಲವೇ ದಿನಗಳಲ್ಲಿ ಅಲ್ಲಿಯ ಪ್ರಾಧ್ಯಾಪಕ ಹುದ್ದೆ ಯಲ್ಲಟ್ಟಿಯವರಿಗೆ ಒಲಿದು ಬಂದಿತು. 'ದೇವನ ಮನೆಯಿದು ಈ ಜಗವೆಲ್ಲ, ಬಾಡಿಗೆದಾರರು ಜೀವಿಗಳೆಲ್ಲಾ' ಹಾಡನ್ನು ಬರೆದು ನಾಡಿನಲ್ಲಿ ಖ್ಯಾತಿಯಾದವರೇ ಕವಿ ಬ.ಗಿ.ಯಲ್ಲಟ್ಟಿ.

ಜಯವಂತ ಕಾಡದೇವರ, ಬನಹಟ್ಟಿ, ಬಾಗಲಕೋಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮುಸ್ಲಿಮರು ಪಾಕಿಸ್ತಾನಕ್ಕೆ ಹೋಗಲಿ ಎನ್ನುವವರು ಹಿಂದೂಗಳೇ ಅಲ್ಲ: ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ ಭಾಗವತ್ ಹೇಳಿಕೆ

ಭಾಗವತರ ಡಿಎನ್‌ಎ ಇತಿಹಾಸ ಮತ್ತು ಐತಿಹ್ಯ

● ಬಂಜಗೆರೆ ಜಯಪ್ರಕಾಶ

ಸಂಘ ಪರಿವಾರದ ಅಂಗಸಂಸ್ಥೆಯೇ ಆಗಿರುವ 'ಮುಸ್ಲಿಂ ರಾಷ್ಟ್ರೀಯ ಮಂಚ್'ನ ಕಾರ್ಯಕ್ರಮದಲ್ಲಿ ಮುಸ್ಲಿಮರಿಗೆ ಸಿಹಿ ಅನಿಸುವಂತಹ ಮಾತನ್ನಾಡುವಾಗಲೂ ಮೋಹನ ಭಾಗವತರು ಮುಸ್ಲಿಮರ 'ಹಿಂದೂಕರಣ'ದ ಅಜೆಂಡಾವನ್ನೇ ಗುಪ್ತವಾಗಿ ನುಡಿಯುತ್ತಿದ್ದಾರೆನಿಸುತ್ತದೆ

ಮೋಹನ ಭಾಗವತ್ ಅವರ ಮಾತಿಗೆ ವಿಶೇಷ ಮಹತ್ವ ಬಂದಿರುವುದು ವಿನಾಕಾರಣವೇನಲ್ಲ. ಎರಡು ದಶಕಗಳಿಂದ ಸಂಘ ಪರಿವಾರದ ಪಾತ್ರ ವಿಶೇಷವಾಗಿ ವ್ಯಾಪಿಸಿದೆ, ಬಲಗೊಂಡಿದೆ. ಹಾಗಾಗಿ ಅವರು ಏನನ್ನಾದರೂ ಹೇಳಿದರೆ ಆ ಬಗ್ಗೆ ಗಮನ ನೀಡುವುದು ಬಹಳ ಅಗತ್ಯ. ಈಚೆಗೆ ಅವರು ಡಿಎನ್‌ಎ ಬಗ್ಗೆ ಮಾತನಾಡಿರುವುದು ಸದ್ದು ಮಾಡುತ್ತಿದೆ. ಭಾಗವತರ ಮಾತು ಕೋಮುಸೌಹಾರ್ದತೆಯನ್ನು ಹೆಚ್ಚಿಸುವಂತಿದೆ ಎಂದು ಮೇಲ್ನೋಟಕ್ಕೆ ಕಾಣುತ್ತದೆ. ಧರ್ಮ ಯಾವುದೇ ಇರಲಿ, ಭಾರತೀಯರೆಲ್ಲರ ಡಿಎನ್‌ಎ ಒಂದೇ ಎಂದು ಅವರು ಹೇಳಿರುವುದು ಸರಳವಾಗಿ ಚೆನ್ನಾಗಿದೆ. ಆದರೆ ಅದಷ್ಟೇ ಅದರ ಇಂಗಿತ ಅಲ್ಲ.ಈಚೆಗೆ ಡಿಎನ್‌ಎ ಬಗ್ಗೆ ಬಹಳ ವೈಜ್ಞಾನಿಕ ಸಂಶೋಧನೆಗಳು ಪ್ರಕಟಗೊಂಡಿವೆ. ಅದರಲ್ಲಿ ರಾಖಿಘರ್‌ನಲ್ಲಿ ಸಿಕ್ಕಿರುವ ಅಸ್ಥಿಪಂಜರದ ಡಿಎನ್‌ಎ ವರದಿಯೂ ಒಂದು. ಅದರ ಮುಖ್ಯಾಂಶದ ಪ್ರಕಾರ 'ಪ್ರಾಚೀನ ಹರಪ್ಪನ್ ವಂಶವಾಹಿನಿಯು ಸ್ಟೆಪ್ಪಿ ಪಶುಪಾಲಕ ವಂಶಾವಳಿಯನ್ನು ಹೊಂದಿಲ್ಲ'. ಈ ಸ್ಟೆಪ್ಪಿ ಪಶುಪಾಲಕರನ್ನೇ ನಾವು ಸಾಂಸ್ಕೃತಿಕ ಪರಿಭಾಷೆಯಲ್ಲಿ ಆರ್ಯಭಾಷಿಕ ಸಮುದಾಯ ಅಥವಾ ವೈದಿಕ ಸಂಸ್ಕೃತಿಯ ಜನರು ಎನ್ನುತ್ತೇವೆ.

ಆ ಸಂಶೋಧನಾ ವರದಿ ಹೇಳುವ ಪ್ರಕಾರ 'ರಾಖಿಘರ್‌ನ ಪಳೆಯುಳಿಕೆಯಲ್ಲಿ ಈಗಿನ ದಕ್ಷಿಣ ಏಷ್ಯಾ ಜನರಲ್ಲಿ ಕಂಡುಬರುವ ಅಲ್ಪಪ್ರಮಾಣದ ಅನಟೋಲಿಯನ್ ರೈತರ ವಂಶಾವಳಿಯಾಗಲಿ ಅಥವಾ ಕ್ರಿ.ಪೂ. 2000ದಿಂದ 1500ರ ನಡುವೆ ವಲಸೆ ಬಂದು ಬೆರೆತು ಇಂದಿನ ದಕ್ಷಿಣ ಏಷ್ಯಾ ಜನರಲ್ಲಿ ಗಣನೀಯ ಮಟ್ಟದಲ್ಲಿರುವ ಸ್ಟೆಪ್ಪಿ ಜನರ (ಆರ್ಯರ) ವಂಶಾವಳಿಯಾಗಲಿ ಇಲ್ಲ'.

ಇದೇ ವಿಧಾನದಲ್ಲಿ ಮತ್ತೊಂದು ಸಂಶೋಧನೆ ನಡೆದಿದ್ದು ಅದರ ಪ್ರಕಾರ ಸಿಂಧೂನದಿ ನಾಗರಿಕತೆಯೊಂದಿಗೆ ಸಾಂಸ್ಕೃತಿಕ ಒಡನಾಟವಿದ್ದ ಸಿಂಧೂ ಪರಿಧಿಯ ಜನವರ್ಗಗಳ (Indus periphery cline) ಅಸ್ಥಿಪಂಜರಗಳ ವಿಶ್ಲೇಷಣೆಯಲ್ಲಿ 'ಅಂಡಮಾನಿ ಬೇಟೆಗಾರ ಸಂಗ್ರಹಕಾರರ ಅಂಶಗಳು ಪತ್ತೆಯಾಗಿದ್ದು ವರ್ಣತಂತುವಿನಲ್ಲಿ ಹ್ಯಾಪ್ಲೋ ಗ್ರೂಪ್ (ಅನುವಂಶಿಕ ಗುಂಪು) ಕಂಡುಬರುತ್ತದೆ. ಇದು ದಕ್ಷಿಣ ಭಾರತೀಯರೆಲ್ಲರ ವರ್ಣತಂತುವಿನಲ್ಲಿ ಪ್ರಮುಖವಾಗಿ ಕಂಡುಬರುವ ಅಂಶ. ಇವರಲ್ಲಿ ಅನಟೋಲಿಯ ರೈತರ ಸಂಬಂಧಿ ವಂಶವಾಹಿನಿಯು ಕಾಣಸಿಗುವುದಿಲ್ಲ'. (The information of human population in south and central Asia – ಅಂತರ್ಜಾಲ ಮಾಹಿತಿ ಕೃಪೆ)

ಈ ಸಂಶೋಧನೆಗಳನ್ನು ಭಾರತದ ಕೆಲವು ವಿಜ್ಞಾನಿಗಳು ತಿರುಚಿ ವಿಶ್ಲೇಷಣೆ ಮಾಡಿ ಲೇಖನಗಳನ್ನು ಬರೆದರಾದರೂ ಅವುಗಳು ಮಾನ್ಯಗೊಂಡಿಲ್ಲ. ಸಿಂಧೂ ನಾಗರಿಕತೆ ನಿರ್ಮಾಣ ಮಾಡಿದ್ದು ವೈದಿಕ ಸಂಸ್ಕೃತಿಯ ಜನ, ಆರ್ಯರು ಇಲ್ಲಿಯ ಮೂಲನಿವಾಸಿಗಳು, ಭಾರತದಿಂದಲೇ ವೈದಿಕ ಸಂಸ್ಕೃತಿಯು ಜಗತ್ತಿನ ಬೇರೆ ಕಡೆಗೆ ವಲಸೆ ಹೋಯಿತು ಎಂಬ ವಾದಗಳಿಗೆ ಈ ಸಂಶೋಧನೆಗಳು ಈಗ ನಿರ್ಣಾಯಕವಾದ ಪೆಟ್ಟುಕೊಟ್ಟಿವೆ.

ಭಾರತೀಯ ಮೂಲಸಂಸ್ಕೃತಿಯ ನಿರ್ಮಾಪಕರು ಆರ್ಯರು ಎಂದು ವಾದ ಮಾಡುತ್ತಾ ಬಂದಿರುವ ಸಂಘಪರಿವಾರ ಮತ್ತು ಅದರ ಬೆಂಬಲಿಗ ವಿದ್ವಾಂಸರಿಗೆ ರಾಖಿಘರ್ ಸಂಶೋಧನೆಯ ವಾಸ್ತವಾಂಶಗಳನ್ನು ಅರಗಿಸಿಕೊಳ್ಳಲಾಗುತ್ತಿಲ್ಲ. ಒಂದೇ ಜನಾಂಗ, ಒಂದೇ ದೇಶ, ಒಂದೇ ಸಂಸ್ಕೃತಿ ಎಂಬ ವಾದದಡಿಯಲ್ಲಿ ಹಿಂದೂ ರಾಷ್ಟ್ರವಾದವನ್ನು ಬೆಳೆಸಬೇಕೆಂದು ಪ್ರಯತ್ನಿಸುವ ಸಂಘ ಪರಿವಾರದ ವಾದಸರಣಿಗೆ ವೈಜ್ಞಾನಿಕವಾಗಿ ಹಿನ್ನಡೆಯಾಗಿದೆ. ಅದನ್ನು ನಿರಾಕರಿಸಲು ಸಂಘಪರಿವಾರ ಪ್ರಯತ್ನಿಸುತ್ತಿದೆ. ಈ ಪ್ರಯತ್ನಗಳ ಒಂದು ಅಂಶವೇ ಭಾರತೀಯ ಇತಿಹಾಸದ ಮರುಸಂಶೋಧನಾ ಮಂಡಳಿ ರಚನೆ. ಆ ಸಮಿತಿಯ ಸದಸ್ಯರಲ್ಲಿ ಶೇ 99ರಷ್ಟು ಜನ ಬ್ರಾಹ್ಮಣರಿರುವುದಕ್ಕೆ ಆಶ್ಚರ್ಯ ಪಡಬೇಕಾದುದೇನೂ ಇಲ್ಲ. ಇತಿಹಾಸದ ಮರುಸಂಶೋಧನೆ ಮಾಡಲು ಹೊರಟಿರುವುದೇ ಈಗಿರುವ ಇತಿಹಾಸದ ವಿವರಗಳನ್ನು ತಮ್ಮ ಮೂಗಿನ ನೇರಕ್ಕೆ 'ಸಂಶೋಧಿಸಿ' ಬರೆಯುವುದಕ್ಕೆ. ಇತಿಹಾಸವನ್ನು ಚಾರಿತ್ರಿಕ ವಾಸ್ತವಾಂಶಗಳ ಮೇಲೆ ಅರ್ಥೈಸುವ ಬದಲಿಗೆ, ವೇದ, ಪುರಾಣ, ಶಾಸ್ತ್ರಗ್ರಂಥಗಳ ಆಧಾರದಲ್ಲಿ ರಚಿಸಿ ಹೇಳುವುದು. ಈ ಪದ್ಧತಿ ಇತಿಹಾಸವನ್ನು ಐತಿಹ್ಯಗೊಳಿಸುವ ಕೆಲಸವನ್ನು ಮಾತ್ರ ಮಾಡಬಲ್ಲದು. ನಂಬಿಕೆಗಳು, ಕಲ್ಪನೆಗಳು ಕತೆಗಳಾಗಬಲ್ಲವೇ ಹೊರತು ಚರಿತ್ರೆಯಾಗಲಾರವು. ಈಗಿರುವ ಭಾರತೀಯ ಚರಿತ್ರೆಯ ಪ್ರತಿಪಾದನೆಗಳು ಚಾರಿತ್ರಿಕಾಂಶಗಳ ಮೇಲೆ ನಿರ್ಮಾಣಗೊಂಡಿದೆ. ಅದನ್ನು ಬದಲಿಸಿ ಬರೆಯುವ ಅವಶ್ಯಕತೆಯಿಲ್ಲ. ಸಂಶೋಧನೆಗಳಲ್ಲಿ ಸಿಕ್ಕುವ ಹೊಸ ಆಧಾರಾಂಶಗಳ ಮೇಲೆ ಅದನ್ನು ಪರಿಪೂರ್ಣಗೊಳಿಸುತ್ತಾ ಹೋಗಬೇಕೇ ಹೊರತು ಅದನ್ನು ಬದಲಿಸಿ ಬರೆಯುವುದಲ್ಲ.

ಈವರೆಗಿನ ಇತಿಹಾಸ ಬರೆದವರು ಎಡಪಂಥೀಯ ವಾದಗಳ, ಪಾಶ್ಚಾತ್ಯ ಪ್ರೇರಣೆಗಳಿಂದ ಬರೆದಿದ್ದಾರೆ. ಆದ್ದರಿಂದ ಇದು ರಾಷ್ಟ್ರೀಯವಾದಿಯಾಗಿಲ್ಲ ಎಂಬುದು ಅವರ ವಾದ. ಸಿಂಧೂ ನಾಗರಿಕತೆ ನಿರ್ಮಾಣ ಮಾಡಿದ್ದು ಸ್ಟೆಪ್ಪಿ ಹುಲ್ಲುಗಾವಲುಗಳಿಂದ ಬಂದ ಆರ್ಯ ಭಾಷಿಕ ಪಶುಪಾಲಕರಲ್ಲ. ಅವರು ಇಲ್ಲಿಗೆ ಬರುವ ಮೂರು ಸಾವಿರ ವರ್ಷಗಳ ಹಿಂದೆಯೇ ಬೇರೆ ಡಿಎನ್‌ಎ ಮೂಲದ ಜನ ಈ ಉತ್ತುಂಗ ಸಂಸ್ಕೃತಿಯನ್ನು ನಿರ್ಮಿಸಿದ್ದರು. ಕ್ರಿ. ಪೂ. 1500ರ ಹೊತ್ತಿಗೆ ಇಲ್ಲಿಗೆ ತಲುಪಿದ ಸ್ಟೆಪ್ಪಿ ಮೂಲದ ಪಶುಪಾಲಕರು ಇಲ್ಲಿ ಪಟ್ಟಣ ನಾಗರಿಕತೆ ನಿರ್ಮಿಸಿದ್ದ ಜನರೊಂದಿಗೆ ಸಂಘರ್ಷಿಸಿದರು. ಆ ನಾಗರಿಕತೆಯು ಹಲವು ಕಾರಣಗಳಿಂದ ಪತನಗೊಂಡ ಐನೂರು ವರ್ಷಗಳ ನಂತರ ಇವರು ಹಳೆಯ ಪಳೆಯುಳಿಕೆಗಳ ಆಧಾರದಲ್ಲಿ ಮೊದಲಿದ್ದ ಜನರನ್ನೂ ಕೂಡಿಕೊಂಡು ಹೊಸ ನಾಗರಿಕತೆ ಕಟ್ಟಿದರು. ಅದು ವೈದಿಕ ಸಂಸ್ಕೃತಿ ಎಂದಾಗಿದೆ ಎಂಬುದು ಈಗಿರುವ ಇತಿಹಾಸದ ಪ್ರತಿಪಾದನೆ. ಇದಕ್ಕೆ ಪುರಾತತ್ವ ಸಾಕ್ಷ್ಯಗಳ ಆಧಾರವಿದೆ.

ಆದರೆ ಈ ಬಗ್ಗೆ ಸಂಘ ಪರಿವಾರದ ಹಿಂದೂ ರಾಷ್ಟ್ರವಾದಿಗಳಿಗೆ ಸಹಮತವಿಲ್ಲ. ಅವರ ಪ್ರಕಾರ ವೈದಿಕ ಸಂಸ್ಕೃತಿಯ ಜನರೇ ಸಿಂಧೂ ಸಂಸ್ಕೃತಿ ಕಟ್ಟಿದರು. ಅವರೇ ಇಲ್ಲಿನ ಮೂಲ ನಿವಾಸಿಗರು. ಅವರ ಡಿಎನ್‌ಎ ಹಾಗೂ ಇಲ್ಲಿರುವ ಇತರ ಜನಗಳ ಡಿಎನ್‌ಎ ಒಂದೇ ಆಗಿದೆ. ಸಿಂಧೂ ಸಂಸ್ಕೃತಿ ಎನ್ನುವುದು ಸರಸ್ವತಿ ಸಂಸ್ಕೃತಿಯಾಗಿದೆ. ಇದನ್ನು ಪಾಶ್ಚಾತ್ಯ ಪ್ರಭಾವದ ಇತಿಹಾಸಕಾರರು ತಿರುಚಿ ಬರೆದಿದ್ದಾರೆ. ಇದನ್ನು ಸರಿಪಡಿಸಿ ಬರೆಯಬೇಕು. ಭಾರತೀಯ ಸಂಸ್ಕೃತಿಯ ಇತಿಹಾಸ ರಚನೆಯ ಈ ಸಂದಿಗ್ಧಾರ್ಥಗಳನ್ನು 'ಸರಿ'ಪಡಿಸುವ ದಿಕ್ಕಿನಲ್ಲೇ ಮೋಹನ ಭಾಗವತರ ಮಾತು ಬಂದಿದೆ. ಮುಸ್ಲಿಮರು ಬೇರೆ ಡಿಎನ್‌ಎ ಹೊಂದಿಲ್ಲ ಎಂದು ಹೇಳಿರುವುದು ಯಥಾರ್ಥವಾಗಿದೆ. ಆದರೆ ಮೋಹನ ಭಾಗವತರ ಈ ಸತ್ಯದ ಹೇಳಿಕೆ ಮುಸ್ಲಿಮರನ್ನು ಒಳಗೊಳಿಸಿಕೊಳ್ಳುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಅವರ ಹೇಳಿಕೆಯು ನಿಜವಾದ ಗುರಿ ಆರ್ಯರು ಬೇರೆ ಡಿಎನ್‌ಎಯವರಲ್ಲ, ಇತರ ಭಾರತೀಯ ಮೂಲನಿವಾಸಿಗಳ ಡಿಎನ್‌ಎಗೂ ಆರ್ಯಮೂಲದ ವೈದಿಕ ಸಂಸ್ಕೃತಿಯ ಜನರ ಡಿಎನ್‌ಎಗೂ ವ್ಯತ್ಯಾಸವಿಲ್ಲ ಎಂಬ 'ಪೌರಾಣಿಕ' ಸತ್ಯವನ್ನು ಸಾರುವುದು.

ಭಾಗವತರ ಮಾತುಗಳು ಸಂಘ ಪರಿವಾರದ ಧಾಟಿಗೆ ಅನುಗುಣವಾಗಿಯೆ ಇವೆ. ಅವರು ಸಂವಿಧಾನವನ್ನು ಗೌರವಿಸುವುದಾಗಿ ಹೇಳುತ್ತಾರೆ. ಆದರೆ ಮನುಸ್ಮೃತಿಯ ಆಳ್ವಿಕೆಯನ್ನು ಮರುಸ್ಥಾಪನೆ ಮಾಡಲು ಬಯಸುತ್ತಾರೆ. ಮುಸ್ಲಿಮರನ್ನು ಅವರ ಧರ್ಮದ ಕಾರಣಕ್ಕೆ 'ಅನ್ಯೀಕರಿಸುವ' ವಾದಗಳನ್ನು ಪೋಷಿಸಿದ್ದು ಇದೇ ಸಂಘ ಪರಿವಾರ. ಆದರೆ ಮುಸ್ಲಿಮರು ಈ ದೇಶದಲ್ಲಿರಬಾರದು ಎಂದು ಹೇಳುವವರು ನಿಜವಾದ ಹಿಂದೂಗಳಲ್ಲ ಎಂದಿದ್ದಾರೆ ಈಗ. ಹಾಗಾದರೆ ಈ ಬಗೆಯ ಪ್ರತಿಪಾದನೆ ಮಾಡುತ್ತಿರುವವರು, ಮುಸ್ಲಿಮ್ ಮೇಲೆ ಗುಂಪು ಹಲ್ಲೆ ನಡೆಸುತ್ತಿರುವವರು ಯಾವ ಹಿಂದೂಗಳು? ನಿಜಕ್ಕೂ ಅವರು ಜನಸಾಮಾನ್ಯ ಹಿಂದೂಗಳಲ್ಲ. ಹಿಂದೂ ರಾಷ್ಟ್ರವಾದದಿಂದ ಪ್ರೇರಿತರಾದ ಇದೇ ಸಂಘಪರಿವಾರಕ್ಕೆ ಸಂಬಂಧಿಸಿದ, ವಿವಿಧ ನಾಮಫಲಕಗಳಲ್ಲಿ ಅಲಂಕೃತಗೊಂಡ ಹಿಂದೂ ಗುಂಪುಗಳ ಜನ ಅವರು. ಈ ಹಿಂದೂ ಗುಂಪುಗಳಿಗೆ ಸಂಘ ಪರಿವಾರದ ವಾದವೇ ಸಿದ್ಧಾಂತ. ಹಾಗಾಗಿಯೇ ಕಳೆದ ಎರಡು ದಶಕಗಳಿಂದ ಮುಸ್ಲಿಮರ ಪ್ರತ್ಯೇಕೀಕರಣದ ವಾದಾಂಶಗಳು ಬೆಳೆದು ಬೃಹದಾಕಾರವಾಗಿವೆ. ಅವುಗಳ ವಕ್ರರೂಪ ಉತ್ತರ ಪ್ರದೇಶದಲ್ಲಿ ಕಂಡುಬರುತ್ತಿದೆ.

ಉತ್ತರ ಪ್ರದೇಶದ ವಿಧಾನಸಭಾ ಚುನಾವಣೆಗಳು ಸಮೀಪಿಸಿವೆ. ಯೋಗಿ ಆದಿತ್ಯನಾಥರ ಆಡಳಿತದ ಬಗ್ಗೆ ಜನರಿಗೆ ಭ್ರಮನಿರಸನವಾಗಿದೆ. ಈಗ ಚುನಾವಣೆಯಲ್ಲಿ ಗೆಲ್ಲಲು ಮುಸ್ಲಿಮರ ಮತಗಳು ಅಗತ್ಯವಾಗಬಹುದು. ಸಂಘ ಪರಿವಾರದ ಅಂಗಸಂಸ್ಥೆಯೇ ಆಗಿರುವ 'ಮುಸ್ಲಿಂ ರಾಷ್ಟ್ರೀಯ ಮಂಚ್'ನ ಕಾರ್ಯಕ್ರಮದಲ್ಲಿ ಮುಸ್ಲಿಮರಿಗೆ ಸಿಹಿ ಅನಿಸುವಂತಹ ಮಾತನ್ನಾಡುವಾಗಲೂ ಮೋಹನ ಭಾಗವತರು ಮುಸ್ಲಿಮರ 'ಹಿಂದೂಕರಣ'ದ ಅಜೆಂಡಾವನ್ನೇ ಗುಪ್ತವಾಗಿ ನುಡಿಯುತ್ತಿದ್ದಾರೆನಿಸುತ್ತದೆ. ರಾಷ್ಟ್ರೀಯ ಮಂಚದ ಮುಸ್ಲಿಮರಿಗೂ ಈ ದೇಶದಲ್ಲಿ ಹಿಂದೂ ಸಂಸ್ಕೃತಿಯೇ ಅಧಿಕೃತ ಸಂಸ್ಕೃತಿ ಎಂದು ಒಪ್ಪಿಕೊಂಡವರು. ತಮ್ಮನ್ನು ದ್ವಿತೀಯ ಸಂಸ್ಕೃತಿಯವರು ಎಂದು ಒಪ್ಪಿಕೊಳ್ಳುವ ಮುಸ್ಲಿಮರ ಬಗ್ಗೆ ಸಂಘ ಪರಿವಾರಕ್ಕೆ ಸಹಮತವಿದೆ. ಸದ್ಯಕ್ಕೆ ಅವರ ಕಣ್ಣಮುಂದೆ ಉತ್ತರ ಪ್ರದೇಶದ ಮುಸ್ಲಿಮರ ದೊಡ್ಡ ಮತ ಬ್ಯಾಂಕಿದೆ. ಹಾಗಾಗಿ ಮುಸ್ಲಿಮರನ್ನು ಜೋಡಣೆಗೊಳಿಸಿಕೊಳ್ಳುವ ರಾಗ ಈಗ ಹಾಡಲಾಗುತ್ತಿದೆ. ಈವರೆಗೆ ಉತ್ತರ ಪ್ರದೇಶದಲ್ಲಿ ನಡೆದ ಪ್ರತ್ಯೇಕೀಕರಣ ಹಾಗೂ ದಮನಕಾರಿ ಕರ್ಮಕಾಂಡವನ್ನು ಮರೆತು ಮುಸ್ಲಿಮರು ಯೋಗಿ ಆದಿತ್ಯನಾಥರಿಗೆ ಮತ್ತೆ ಮತ ಹಾಕಲು ಈ ಜೋಗುಳ ನೆರವಾಗುತ್ತದೆಂದು ಭಾಗವತರು ನಂಬುತ್ತಿದ್ದಾರೆನಿಸುತ್ತದೆ.

ಲೇಖಕ: ಸಂಸ್ಕೃತಿ ಸಂಶೋಧಕ, ಬರಹಗಾರ

ಪ್ರಜಾವಾಣಿ ಚರ್ಚೆ

ಸಂಘರ್ಷವು ಅರ್ಥಹೀನ; ಸಂಘಕ್ಕೆ ಸಾಮರಸ್ಯವೇ ಮಂತ್ರ

● ಡಾ. ಆರ್. ಬಾಲಶಂಕರ್



ಗುಂಪು ಹಲ್ಲೆ ಮಾಡುವುದು ಮತ್ತು ದೇಶಪ್ರೇಮಿಗಳಲ್ಲದ ಜನರು ಪಾಕಿಸ್ತಾನಕ್ಕೆ ಹೋಗಿ ಎಂದು ಹೇಳುವ ಅತಿರೇಕದ ಪ್ರತಿಕ್ರಿಯೆಗಳಿಗೆ ಸಂಬಂಧಿಸಿ ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ ಭಾಗವತ್ ಅವರು ನೀಡಿರುವ ಹೇಳಿಕೆಯಲ್ಲಿ ಗೊಂದಲಕಾರಿಯಾದುದು ಏನೂ ಇಲ್ಲ. ಇಂತಹ ಎಲ್ಲ ವಿಚಾರಗಳ ಬಗ್ಗೆಯೂ ಅವರು ಮೃದು, ಒಳಗೊಳ್ಳುವಿಕೆಯ, ರಾಜಿ ಮನೋಭಾವದ ಹಾಗೂ ಸಕಾರಾತ್ಮಕವಾದ ಧೋರಣೆಯನ್ನೇ ಹೊಂದಿದ್ದಾರೆ. ಆರ್‌ಎಸ್‌ಎಸ್ ಅಥವಾ ಬಿಜೆಪಿ ಅಥವಾ ಇನ್ನಾವುದೇ ಅಂಗ ಸಂಸ್ಥೆಯು ಇಂತಹ ಯಾವುದಾದರೂ ವಿಚಾರಗಳ ಬಗ್ಗೆ ಪ್ರಚೋದನಕಾರಿ ನಿಲುವಿಗೆ ಉತ್ತೇಜನ ನೀಡಿದೆ ಎಂದು ಹೇಳುವುದೇ ರಾಷ್ಟ್ರೀಯವಾದಿಯಾದ ಈ ಮುಖ್ಯವಾಹಿನಿಯ ಸಂಘಟನೆಗಳಿಗೆ ಮಸಿ ಬಳಿಯುವ ಉದ್ದೇಶಪೂರ್ವಕ ಪ್ರಯತ್ನವಾಗಿದೆ; ದೇಶದಲ್ಲಿ ಕೋಮು ವಿಭಜನೆ ಮೂಡಿಸುವ ಉದ್ದೇಶದ್ದಾಗಿದೆ.

ಬಿಜೆಪಿ ಆಳ್ವಿಕೆ ಇರುವ ಕೇಂದ್ರ ಅಥವಾ ರಾಜ್ಯ ಸರ್ಕಾರಗಳ ಯಾವುದೇ ಯೋಜನೆಯ ಜಾರಿಯಲ್ಲಿ ಧರ್ಮದ ಆಧಾರದಲ್ಲಿ ತಾರತಮ್ಯ ಮಾಡಿರುವ ಒಂದೇ ಒಂದು ಉದಾಹರಣೆ ಇಲ್ಲ. ಹಾಗಿದ್ದರೂ, ಸಂಘ ಪರಿವಾರವು ಮುಸ್ಲಿಂ ವಿರೋಧಿ ಮತ್ತು ಕೋಮುವಾದಿ ಎಂದು ಬಿಂಬಿಸುವ ವ್ಯವಸ್ಥಿತ ಹುನ್ನಾರವೊಂದು ನಡೆಯುತ್ತಿದೆ. ಮೋಹನ ಭಾಗವತ್ ಅವರ ಹೇಳಿಕೆಯ ಬಗೆಗಿನ ಈ ಚರ್ಚೆಯನ್ನು ಕೂಡ ಈ ಭಿತ್ತಿಯಲ್ಲಿ ಇರಿಸಿಯೇ ನೋಡಬೇಕಾಗುತ್ತದೆ.

ಬಿಜೆಪಿ ನೇತೃತ್ವದ ಸರ್ಕಾರವು 2014ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಬಳಿಕ ಉತ್ತರ ಪ್ರದೇಶದಿಂದ ವರದಿಯಾದ ಮೊದಲ ದನ ಕಳ್ಳಸಾಗಾಟ ಪ್ರಕರಣಕ್ಕೆ ಸಂಬಂಧಿಸಿದ ಹಿಂಸಾಚಾರವನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಮೋಹನ ಭಾಗವತ್ ಖಂಡಿಸಿದ್ದರು. ತಪ್ಪಿತಸ್ಥರನ್ನು ಶಿಕ್ಷೆಗೆ ಒಳಪಡಿಸಬೇಕು ಎಂದಿದ್ದರು. ಬಿಜೆಪಿ ಆಳ್ವಿಕೆಯ ರಾಜ್ಯಗಳು ಮತ್ತು ಸಂಘವು ಹೊಂದಿರುವ ಸಂದೇಹಕ್ಕೆ ಆಸ್ಪದ ಇಲ್ಲದ ರೀತಿಯ ನಿಲುವು ಈ ಅಪರಾಧದ ಹಿಂದಿನ ಷಡ್ಯಂತ್ರವನ್ನು ಬಯಲಿಗೆ ಎಳೆದಿದೆ. ಅಲ್ಲೊಂದು ಇಲ್ಲೊಂದು ಪ್ರಚೋದನಕಾರಿ ಹೇಳಿಕೆಗಳನ್ನು ಕೆಲವು ವ್ಯಕ್ತಿಗಳು ನೀಡಿದ್ದಿದೆ ಮತ್ತು ಅಂಥವರಿಗೆ ಕಠಿಣ ಎಚ್ಚರಿಕೆಯನ್ನೂ ನೀಡಲಾಗಿದೆ. ಇದೊಂದು ಕಾರ್ಯತಂತ್ರ ಏನಲ್ಲ. ಮೋದಿ ನೇತೃತ್ವದ ಹೊಸ ಸರ್ಕಾರದ ವರ್ಚಸ್ಸಿಗೆ ಮಸಿ ಬಳಿಯುವ ಉದ್ದೇಶದಿಂದಲೇ ರಾಜಕೀಯ ಪ್ರತಿಸ್ಪರ್ಧಿಗಳು ನಡೆಸಿದ ಹುನ್ನಾರದ ಭಾಗವಾಗಿ ಈ ಹಿಂಸಾಚಾರ ನಡೆದಿದೆ ಎಂಬುದು ಮೊದಲ ಘಟನೆಯಲ್ಲಿಯೇ ಸ್ಪಷ್ಟವಾಗಿತ್ತು.

ಹಾಗೆ ನೋಡಿದರೆ, ಭಾಗವತ್ ಅವರ ಹೇಳಿಕೆಯ ಸಮಯವೇ ಚರ್ಚೆಯ ಕಿಡಿ ಹಚ್ಚಿದೆ. ಇತ್ತೀಚೆಗಂತೂ ದೇಶದಲ್ಲಿ ಗುಂಪು ಹಲ್ಲೆಯ ಪ್ರಕರಣವೇ ನಡೆದಿಲ್ಲ. ಅದೇ ರೀತಿಯಲ್ಲಿ, ಮುಸ್ಲಿಮರ ವಿರುದ್ಧ ಪ್ರಚೋದನಕಾರಿಯಾದ ಹೇಳಿಕೆಯನ್ನು ಇತ್ತೀಚೆಗಂತೂ ಯಾರೂ ನೀಡಿಲ್ಲ. ಮುಸ್ಲಿಮರಲ್ಲಿ ಬಹುಸಂಖ್ಯಾತರು ಮೋದಿ ನೇತೃತ್ವದ ಸರ್ಕಾರದ ಬಗ್ಗೆ ಖುಷಿಯಾಗಿದ್ದಾರೆ ಎಂದು ಇತ್ತೀಚಿನ ಪ್ಯೂ ಸಂಶೋಧನಾ ವರದಿಯೂ ಹೇಳಿದೆ. ಮೋದಿ ನೇತೃತ್ವದ ಸರ್ಕಾರವು 2019ರಲ್ಲಿ ಪುನರಾಯ್ಕೆ ಆಗುವುದರೊಂದಿಗೆ ಜಾನುವಾರು ಕಳ್ಳಸಾಗಾಟದ ಕಾರಣಕ್ಕೆ ಹಲ್ಲೆ, ಚರ್ಚ್‌ಗಳ ಮೇಲೆ ದಾಳಿಗಳೆಲ್ಲ ನಿಂತು ಹೋದವು. ಇದು ವಾಸ್ತವ ಅಲ್ಲ, ವಿರೋಧ ಪಕ್ಷಗಳ ಅಪಪ್ರಚಾರ ಎನ್ನುವುದು ಜನರಿಗೆ ಅರಿವಾಗಿದೆ.

ಭಾರತದಂತಹ ದೊಡ್ಡ ದೇಶದ ಮೂರು ಅಥವಾ ನಾಲ್ಕು ರಾಜ್ಯಗಳಲ್ಲಿ ನಡೆದ ಕೆಲವೇ ಕೆಲವು ಗುಂಪು ಹಲ್ಲೆ ಘಟನೆಗಳಿಗೆ ಕೇಂದ್ರ ಸರ್ಕಾರವನ್ನು ದೂಷಿಸಲು ಆಗದು. ಆದರೆ, ಗೋ ಹತ್ಯೆಯು ಹಿಂದೂಗಳಿಗೆ ಯಾವಾಗಲೂ ಭಾವನಾತ್ಮಕವಾದ ವಿಚಾರವೇ ಆಗಿದೆ. ಗಾಂಧಿ–ಜಿನ್ನಾ ನಡುವೆ 1916ರಲ್ಲಿ ನಡೆದ ಲಖನೌ ಒಪ್ಪಂದದಲ್ಲಿ ಇದ್ದ 16 ಅಂಶಗಳಲ್ಲಿ ಮಾಂಸಕ್ಕಾಗಿ ಮುಸ್ಲಿಮರು ಗೋಹತ್ಯೆ ಮಾಡುವುದನ್ನು ನಿಷೇಧಿಸುವುದೂ ಸೇರಿತ್ತು.

ದೇಶ ವಿಭಜನೆ ನಂತರ ಮುಸ್ಲಿಮರಿಗೆ ಆಯ್ಕೆ ಇತ್ತು. ಎರಡು ದೇಶ ಸಿದ್ಧಾಂತದಲ್ಲಿ ನಂಬಿಕೆ ಇದ್ದವರೆಲ್ಲ ಪಾಕಿಸ್ತಾನಕ್ಕೆ ಹೋಗಿದ್ದಾರೆ ಎಂದು ಭಾವಿಸಲಾಗಿದೆ. ಇಲ್ಲಿ ಉಳಿದವರು ಒಂದು ಭಾರತ–ಒಂದು ಜನ ಎಂಬ ಸಮಗ್ರ ಸಂಸ್ಕೃತಿಯಲ್ಲಿ ನಂಬಿಕೆ ಇದ್ದವರು. ಇದುವೇ ಸಂಘದ ನಂಬಿಕೆಯ ತಿರುಳು. ಹಾಗಾಗಿಯೇ, ಎಂದೋ ತೀರ್ಮಾನ ಆಗಿರುವ ವಿಚಾರವನ್ನು ಮತ್ತೆ

ಪಾಕಿಸ್ತಾನಕ್ಕೆ ಹೋಗಿ ಎಂದು ಹೇಳುವುದು ಈಗ ಒಂದು ಕ್ಲೀಷೆ ಆಗಿಬಿಟ್ಟಿದೆ. ಕೆಲವು ಬಾಯಿಬಡುಕ ವ್ಯಕ್ತಿಗಳು ಪ್ರಚಾರದ ಹುಚ್ಚಿನಿಂದ ಈ ರೀತಿಯ ಹೇಳಿಕೆ ಕೊಡುತ್ತಿರುತ್ತಾರೆ... ಸತ್ಯ ಏನೆಂದರೆ, ಸಾಮರಸ್ಯ, ಸಂವಾದ ಮತ್ತು ಸಮಸ್ಯೆಗಳ ಶಾಂತಿಯುತ ಪರಿಹಾರದ ಪರವಾಗಿಯೇ ಸಂಘವು ಸದಾ ಇದೆ

ಮೋಹನ ಭಾಗವತ್

ಕೆದಕುವುದು ಬೇಡ ಎಂದು ಭಾಗವತ್ ಹೇಳಿದ್ದಾರೆ. ಭಾರತದ ಪ್ರತಿಯೊಬ್ಬ ಮುಸ್ಲಿಂ ವ್ಯಕ್ತಿ ಕೂಡ, ಇಲ್ಲಿನ ಹಿಂದೂವಿನಷ್ಟೇ ಭಾರತೀಯ ಎಂದೇ ಪರಿಗಣಿಸಲಾಗುತ್ತಿದೆ. ಅದುವೇ ಭಾಗವತ್ ಅವರ ಕರೆಯಲ್ಲಿಯೂ ಇದ್ದ ಅಂಶ.

ಪಾಕಿಸ್ತಾನಕ್ಕೆ ಹೋಗಿ ಎಂದು ಹೇಳುವುದು ಈಗ ಒಂದು ಕ್ಲೀಷೆ ಆಗಿಬಿಟ್ಟಿದೆ. ಕೆಲವು ಬಾಯಿಬಡುಕ ವ್ಯಕ್ತಿಗಳು ಪ್ರಚಾರದ ಹುಚ್ಚಿನಿಂದ ಈ ರೀತಿಯ ಹೇಳಿಕೆ ಕೊಡುತ್ತಿರುತ್ತಾರೆ. ಅಂತಹ ವ್ಯಕ್ತಿಗಳು ಎಲ್ಲ ಪಕ್ಷಗಳಲ್ಲಿಯೂ ಇದ್ದಾರೆ. ಭಾರತ ರಾಷ್ಟ್ರೀಯತೆ ಮತ್ತು ಪೌರತ್ವದ ವಿಚಾರದಲ್ಲಿ ಭಾರತದ ಸಂವಿಧಾನಕ್ಕೆ ಅನುಗುಣವಾಗಿ ಅತ್ಯಂತ ಸ್ಪಷ್ಟವಾಗಿ ವ್ಯಾಖ್ಯಾನಿಸಲಾದ, ದಾಖಲಿಸಲಾದ ನಿಲುವನ್ನು ಸಂಘವು ಹೊಂದಿದೆ. ಭಾರತವನ್ನು ತಾಯ್ನಾಡು ಎಂದು ಪರಿಗಣಿಸುವವರು ಮತ್ತು ಇಲ್ಲಿನ ಭೂ- ಸಂಸ್ಕೃತಿಗೆ ನಿಷ್ಠರಾಗಿರುವ ಎಲ್ಲರೂ ಈ ದೇಶದ ಪೌರರೇ. ಸಂಘದ ನಿಲುವು ಭೂ–ಸಾಂಸ್ಕೃತಿಕ ಮತ್ತು ಭೂ–ರಾಜಕೀಯ ಎರಡೂ ಆಗಿದೆ. ಇದು ರಾಜಕೀಯವಾಗಿ ಅನುಕೂಲಸಿಂಧುವಾದ ಅಥವಾ ರಾಜಕೀಯವಾಗಿ ಸರಿ ಎನಿಸಬಹುದಾದ ಚಿಂತನೆಯ ಮೇಲೆ ಆಧಾರಿತವಾಗಿರುವ ನಿಲುವು ಅಲ್ಲ. ಮೋಹನ ಭಾಗವತ್ ಅವರು ಬಿಜೆಪಿ ಅಧಿಕಾರದಲ್ಲಿರುವ ಕಾರಣಕ್ಕೆ ಅಲ್ಪಸಂಖ್ಯಾತರತ್ತ ಸ್ನೇಹಹಸ್ತ ಚಾಚಿ ದೊಡ್ಡ ಸುದ್ದಿಯಾಗುವ ಪ್ರಯತ್ನ ಮಾಡಿದ್ದಾರೆ ಎಂದು ಹೇಳಲು ಆಗದು. ಸತ್ಯ ಏನೆಂದರೆ, ಸಾಮರಸ್ಯ, ಸಂವಾದ ಮತ್ತು ಸಮಸ್ಯೆಗಳ ಶಾಂತಿಯುತ ಪರಿಹಾರದ ಪರವಾಗಿಯೇ ಸಂಘವು ಸದಾ ಇದೆ.

ಭಾರತದಂತಹ ನಿಜವಾದ ಪ್ರಜಾಸತ್ತಾತ್ಮಕ ದೇಶದಲ್ಲಿ ಯಾವುದೇ ವಿಚಾರವನ್ನು ಶಾಂತಿಯುತವಾಗಿಯೇ ಪರಿಹರಿಸಿಕೊಳ್ಳಬಹುದು. ತಮಗೆ ಇರುವ ಬೆಂಬಲ ಅತ್ಯಂತ ಸೀಮಿತ ಮತ್ತು ಪ್ರಜಾಸತ್ತಾತ್ಮಕ ಸಾಂಸ್ಥಿಕ ಚೌಕಟ್ಟು ತಮ್ಮ ಉದಾರವಾದಿಯಲ್ಲದ ನಿಲುವುಗಳನ್ನು ಒಪ್ಪುವುದಿಲ್ಲ ಎಂಬ ಕಾರಣಕ್ಕಾಗಿ ಮಾವೋವಾದಿ ಸಂಘಟನೆಗಳು (ನಕ್ಸಲರು) ಮತ್ತು ಮುಸ್ಲಿಂ ಭಯೋತ್ಪಾದಕ ಸಂಘಟನೆಗಳು ಹಿಂಸೆಗೆ ಇಳಿಯುತ್ತವೆ. ಆದರೆ, ಸಂಘವು ಹಾಗೆ ಅಲ್ಲ. ಸಂಘದ್ದು ಮುಖ್ಯವಾಹಿನಿಯ ರಾಷ್ಟ್ರೀಯತಾ ಅಭಿಪ್ರಾಯವಾಗಿದೆ. ಹಾಗಾಗಿಯೇ ಭಾಗವತ್ ಅವರು ತಮ್ಮ ನಿಲುವನ್ನು ಆತ್ಮವಿಶ್ವಾಸದಿಂದಲೇ ವ್ಯಕ್ತಪಡಿಸಿದ್ದಾರೆ. ಸಂಘದ ಮೂಲ ನಿಲುವನ್ನು ಈ ಹೇಳಿಕೆ ಮೂಲಕ ಸಡಿಲಗೊಳಿಸಲಾಗಿದೆ ಎಂದು ಅರ್ಥೈಸಿಕೊಳ್ಳುವುದು ತಪ್ಪು ಗ್ರಹಿಕೆಯೇ ಆಗುತ್ತದೆ.

ಲೇಖಕ; ಪತ್ರಕರ್ತ ಮತ್ತು 'ಆರ್ಗನೈಸರ್' ಪತ್ರಿಕೆಯ ಮಾಜಿ ಸಂಪಾದಕ

ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ



ಮನೋನಿಗ್ರಹಿ ವಿಶ್ವ ಗೆಲ್ಲಬಲ್ಲ

ಮನಸ್ಸು ನಮ್ಮ ಬುದ್ಧಿಶಕ್ತಿಯ ಕೇಂದ್ರಬಿಂದು. ನಮ್ಮ ದೇಹದೊಳಗೆ ಮನಸ್ಸು ಎಲ್ಲಿದೆ ಅಂತ ಹುಡುಕುವುದಕ್ಕೆ ಸಾಧ್ಯವಿಲ್ಲ. ಇದು ಭಗವಂ ತನಂತೆ ಸರ್ವಾಂತರ್ಯಾಮಿ. ಯಾರ ಕಣ್ಣಿಗೂ ಕಾಣುವುದಿಲ್ಲ. ಯಾರ ಊಹೆಗೂ ನಿಲುಕುವುದಿಲ್ಲ. ಹೀಗಾಗಿ ಸದ್ಯಕ್ಕೆ ನಮ್ಮ ಮನಸ್ಸು ಮೆದುಳಿನಲ್ಲಿದೆ ಅಂತ ಭಾವಿಸಿದ್ದೇವೆ. ಮೆದುಳಿನ ಮಸ್ತಿಷ್ಕದಲ್ಲಿರುವ ನೆನಪುಗಳ ಶಕ್ತಿಯೇ ಬುದ್ಧಿಯ ತಾಣ ಅಂತ ಗುರುತಿಸಿದ್ದೇವೆ. ಬುದ್ಧಿಶಕ್ತಿಯ ಚಾಲನೆಯಿಂದ ಮನಸ್ಸಿನ ಪರದೆ ಮೂಡಿ, ಅದರ ಮೇಲೆ ಚಿತ್ರಣಗಳು ಬರುತ್ತೆ ಅಂತ ಊಹಿಸಿದ್ದೇವೆ. ನನ್ನ ದೃಷ್ಟಿಯಲ್ಲಿ ವಿದ್ಯುತ್ ಶಕ್ತಿ ಮತ್ತು ಬುದ್ಧಿಶಕ್ತಿ ಭಿನ್ನವಲ್ಲ. ಯಂತ್ರ ಚಾಲನೆಗೆ ವಿದ್ಯುತ್ ಶಕ್ತಿ ಬೇಕಾದಂತೆಯೇ, ನಮ್ಮ ದೇಹದ ಚಲನೆಗೂ ಬುದ್ಧಿ ಶಕ್ತಿ ಬೇಕು. ಬುದ್ಧಿಶಕ್ತಿ ಮತ್ತು ವಿದ್ಯುತ್‌ಶಕ್ತಿ ಎರಡೂ ಅಸದೃಶ ಶಕ್ತಿಗಳು. ಇವನ್ನು ಸರಿಯಾದ ರೀತಿಯಲ್ಲಿ ಬಳಸಿದರೆ ಉಪಯೋಗವಾಗುತ್ತದೆ. ತಪ್ಪಾಗಿ ಬಳಸಿದರೆ ಮಾರಕವಾಗುತ್ತೆ.

ಮಾನವನನ್ನು ಭಗವಂತ ಸೃಷ್ಟಿಸಿದರೆ, ಯಂತ್ರಗಳನ್ನು ಮಾನವ ಸೃಷ್ಟಿಸಿ ದ್ದಾನೆ. ಮಾನವನ ನಿಯಂತ್ರಿಸುವ ಶಕ್ತಿ ಭಗವಂತನಿಗಿದ್ದರೆ, ಯಂತ್ರ ಗಳನ್ನು ನಿಯಂತ್ರಿಸುವ ಯುಕ್ತಿ ಮಾನವನಿಗಿದೆ. ಸದ್ಯಕ್ಕೆ ಭಗವಂತ ಮಾನವನ ನಿಯಂತ್ರಿಸುವ ಯೋಚನೆ ಕೈ ಬಿಟ್ಟಿದ್ದಾನೆ. ಬುದ್ಧಿಶಕ್ತಿಯನ್ನು ನಿಯಂತ್ರಿ ಸುವ ಮನಸ್ಸೆಂಬ ರಿಮೋಟ್‌ನ್ನು ಮಾನವರ ಕೈಗೆ ಕೊಟ್ಟು ಪರೀಕ್ಷಿಸುತ್ತಿದ್ದಾನೆ. ಮಾನವರು ಈ ರಿಮೋಟನ್ನು ಪ್ರಯೋಗಿಸುವಾಗ ಸಂಪೂರ್ಣ ಯೋಚಿಸ ಬೇಕು. ತಪ್ಪಾಗಿ ಪ್ರಯೋಗಿಸಿದರೆ ಅಪಾಯ ತಪ್ಪಿದ್ದಲ್ಲ. ಯಂತ್ರವನ್ನು ಸದುಪ ಯೋಗಕ್ಕೆ ಮಾತ್ರ ಚಾಲನೆ ಮಾಡಬೇಕು. ದುರುಪಯೋಗಕ್ಕೆ ಮಾಡಿದರೆ, ಅದರ ದುಷ್ಪರಿಣಾಮವನ್ನ ನಾವೇ ಎದುರಿಸಬೇಕಾಗುತ್ತದೆ. ಸುಮ್ಮನೆ ಯಂತ್ರಚಾಲನೆ ಮಾಡಿದರೆ ಹೇಗೆ ವಿದ್ಯುತ್‌ಶಕ್ತಿ ವ್ಯಯವಾಗುತ್ತದೋ, ಹಾಗೆ ವ್ಯರ್ಥವಾದ ಆಲೋಚನೆಯಿಂದ ಬುದ್ಧಿಶಕ್ತಿ ನಷ್ಟವಾಗುತ್ತದೆ. ಇದಕ್ಕಾಗಿ ನಮ್ಮ ಬುದ್ಧಶಕ್ತಿಯನ್ನು ಸದ್ವಿಚಾರಗಳತ್ತ ಹರಿಸಬೇಕು. ದುರ್ವಿಚಾರಗಳತ್ತ ಹರಿಸಿದರೆ, ಅದರ ಪಾಪದ ಫಲವನ್ನು ನಾವೇ ಅನುಭವಿಸಬೇಕಾಗುತ್ತದೆ.

ಭಗವಂತ ಸೃಷ್ಟಿಸಿರುವ ಈ ಭೂಲೋಕ ಸಾಮಾನ್ಯವಾದುದಲ್ಲ. ನೂರಾರು ಕಲ್ಪಗಳ ನಂತರ ಭಗವಂತ ಯೋಚಿಸಿ-ಯೋಜಿಸಿ ಸೃಷ್ಟಿಸಿರುವ ಭೂಮಂಡಲ. ಇದರ ಮುಂದಾಳುತನವನ್ನ ಮಾತ್ರ ಮನುಷ್ಯರಿಗೆ ಕೊಟ್ಟಿದ್ದಾನೆ, ಒಡೆತನವನ್ನಲ್ಲ. ಮೂಲ ಭೂಮಾಲಿಕ ಭಗವಂತನೇ ಹೊರತು, ಮನುಷ್ಯನಲ್ಲ. ಭೂಲೋಕವನ್ನು ಉತ್ತಮವಾಗಿ ಮುನ್ನಡೆಸಲೆಂದು ಮನುಷ್ಯನ ಬುದ್ಧಿಗೆ ಮನಸ್ಸೆಂಬ ಸ್ವಯಂನಿಯಂತ್ರಣ ಶಕ್ತಿಯನ್ನ ಕೊಟ್ಟಿದ್ದಾನೆ. ಮನುಷ್ಯನ ನಿದ್ರೆಯಲ್ಲೇ ರೀಚಾರ್ಜ್ ಆಗುವ ಮನಸ್ಸು, ಬುದ್ಧಿಗಲ್ಲದೆ ದೇಹಕ್ಕೂ ಶಕ್ತಿ ತುಂಬುತ್ತಿದೆ. ಇಂಥ ಅಗಾಧವಾದ ಮಾನಸಿಕ ಶಕ್ತಿಯನ್ನು ನಿಯಂತ್ರಿಸುವುದು ಸುಲಭವಲ್ಲ. ಇದೊಂದು ರೀತಿ ಲಂಗುಲಗಾಮಿಲ್ಲದ ಹುಚ್ಚು ಕುದುರೆ. ಸದಾ ಆಸೆಯ ಬೆನ್ನತ್ತುವುದೇ ಅದರ ಹುಟ್ಟುಗುಣ. ಸದಾಕಾಲ ಚಡಪಡಿಸುವ ಈ ಮನಸ್ಸನ್ನು ನಿಯಂತ್ರಿಸಲು ನಮ್ಮೊಳಗೆ ಒಂದು ನಿಯಂತ್ರಣ ಶಕ್ತಿಯನ್ನು ಸ್ಥಾಪಿಸಿಕೊಳ್ಳಬೇಕು. ಅದೇ ಯೋಗ ಮತ್ತು ಧ್ಯಾನ. ಇಲ್ಲದಿದ್ದರೆ, ಮನಸಿನ ಹುಚ್ಚು ಓಟಕ್ಕೆ ನಮ್ಮ ಜೀವ ಮತ್ತು ಜೀವನ ಎರಡೂ ಬಲಿಯಾಗಬೇಕಾಗುತ್ತದೆ.

ಮನುಷ್ಯನನ್ನು ಉದ್ಧರಿಸುವ ಮತ್ತು ಮುಗ್ಗರಿಸುವ ಎರಡೂ ಗುಣ ಮನಸ್ಸಿಗಿದೆ. ಇದಕ್ಕೆ ಸದ್ವಿಚಾರಗಳನ್ನು ತುಂಬಿದರೆ, ಒಳ್ಳೆಯ ಕೆಲಸದತ್ತ ಗಮನ ಹರಿಸುತ್ತದೆ. ದುರ್ವಿಚಾರಗಳನ್ನು ಮಾಡಿದರೆ ಅದು ರೋಗಗ್ರಸ್ತವಾಗಿ ಕೆಟ್ಟದರತ್ತ ಯೋಚಿಸುತ್ತದೆ. ಆದ್ದರಿಂದ ಯೋಗದಿಂದ ದೇಹ ದಂಡಿಸಿದಂತೆ, ಧ್ಯಾನದಿಂದ ಮನಸ್ಸನ್ನು ನಿಯಂತ್ರಿಸಬೇಕು. ಸದಾ ಸದ್ಗುರುಗಳ ಉಪದೇಶಾಮೃತ ಕೇಳುತ್ತಾ, ಸತ್ಸಂಗದವರೊಂದಿಗೆ ಒಡನಾಡುತ್ತಿರಬೇಕು. ಆಗ ನಮ್ಮ ಮನಸ್ಸು ಕೆಟ್ಟದರತ್ತ ಚಂಚಲಿತವಾಗದೆ ಒಳ್ಳೆಯ ಮಾರ್ಗದತ್ತ ನಡೆಯುತ್ತದೆ. ಹೀಗೆ ಮನಸ್ಸನ್ನು ನಿಗ್ರಹಿಸಿದವರು ವಿಶ್ವವನ್ನೇ ಗೆಲ್ಲಬಲ್ಲರು, ಜನರ ವಿಶ್ವಾಸವನ್ನೂ ಗೆಲ್ಲಬಲ್ಲರು. ಇಂಥ ಮನೋನಿಗ್ರಹಿಗಳೇ 'ಸಚ್ಚಿದಾನಂದ' ಸತ್ಸಂಗದಲ್ಲಿ ಸುಖವಾಗಿರಬಲ್ಲರು.

ಗುಂಡಣ್ಣ



ದಿನ ಭವಿಷ್ಯ

ಶನಿವಾರ ಜುಲೈ 10, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ಆಷಾಢ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಪುನರ್ವಸು ಪ್ರತಿಪದೆ ಗಂ. 60-00 (ದಿನಪೂರ್ತಿ) ಶನಿವಾರ ನಿತ್ಯ ನಕ್ಷತ್ರ ಪುನರ್ವಸು ಗಂ. 46-1 (ರಾ 12-32) ವ್ಯಾಘಾ ನಾಮ ಯೋಗ ಗಂ. 27-36 ಕಿಮಸ್ತುಘ್ನ ಕರಣ ಗಂ. 29-32 ವಿಷ ಗಂ. 13-36 ಅಮೃತ ಗಂ. 39-6 ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00
ಸೂರ್ಯೋದಯ: 6-03 ಸೂರ್ಯಾಸ್ತ: 6-46 ಅದೃಷ್ಟ ಸಂಖ್ಯೆ 1, 8

ಮೇಷ: ಉದ್ಯೋಗ ವ್ಯವಹಾರಗಳಲ್ಲಿ ಧನಲಾಭ. ನ್ಯಾಯಾಧೀಶರು, ಬ್ಯಾಂಕ್ ಅಧಿಕಾರಿವರ್ಗದವರಿಗೆ ಉದ್ಯೋಗದಲ್ಲಿ ಭಡ್ತಿ ಸಾಧ್ಯತೆ. ವಿವಾಹಾಕಾಂಕ್ಷಿಗಳಿಗೆ ವಿವಾಹಗಳು ನಿಶ್ಚಯವಾಗುವ ಸಂಭವ. ಮನೆಯಲ್ಲಿ ಸಂತಸ.

ವೃಷಭ: ವ್ಯವಹಾರಗಳು ಎಂದಿನಂತೆ ಸಾಗಲಿವೆ. ಸೇನೆ ಅಥವಾ ರಕ್ಷಣಾ ವಿಭಾಗದಲ್ಲಿ ಕಾರ್ಯ ನಿರ್ವಹಿಸುವವರಿಗೆ ಗೌರವಾದರಗಳು ದೊರಕುವ ಸಾಧ್ಯತೆ. ಮಹಿಳೆಯರಿಗೆ ಆಶೋತ್ತರಗಳು ಈಡೇರಲಿವೆ.

ಮಿಥುನ: ಷೇರು ಹಾಗೂ ಹಣಕಾಸಿನ ವ್ಯವಹಾರಗಳಲ್ಲಿ ಅಭಿವೃದ್ಧಿ. ರಕ್ತ ಸಂಬಂಧಿಗಳ ವಿರೋಧವನ್ನು ಎದುರಿಸಬೇಕಾದೀತು. ಹಿರಿಯರ ನೆರವಿನಿಂದಾಗಿ ಎದುರಾಗಬಹುದಾದ ವಿಪತ್ತುಗಳು ದೂರವಾಗಲಿವೆ.

ಕರ್ಕಾಟಕ: ಬುದ್ಧಿವಂತಿಕೆಯ ಕಾರ್ಯಕುಶಲತೆ ಮೆರೆಯಲಿದ್ದೀರಿ. ಲೇವಾದೇವಿ ವ್ಯವಹಾರದಲ್ಲಿ ಹೆಚ್ಚಿನ ಲಾಭ. ಗೃಹ ನಿರ್ಮಾಣ ಕಾರ್ಯಗಳನ್ನು ಕೈಗೆತ್ತಿಕೊಳ್ಳುವ ಸಾಧ್ಯತೆ. ವಾಹನ ನಡೆಸುವಾಗ ಅತ್ಯಂತ ಜಾಗರೂಕರಾಗಿರುವುದು ಒಳ್ಳೆಯದು.

ಸಿಂಹ: ಹಣಕಾಸು ವ್ಯವಹಾರದಲ್ಲಿ ನಷ್ಟ ತಪ್ಪಿಸುವ ಸಲುವಾಗಿ ಅತ್ಯಂತ ಜಾಗರೂಕತೆಯಿಂದ ಇರುವುದು ಒಳಿತು. ಉದ್ಯೋಗಿಗಳಿಗೆ ಹಿತ ಶತ್ರುಗಳಿಂದ ತೊಂದರೆಗಳು ಎದುರಾದೀತು. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ.

ಕನ್ಯಾ: ಶೃಂಗಾರ ಸಾಮಗ್ರಿಗಳ ವಹಿವಾಟುದಾರರಿಗೆ ಅತ್ಯಂತ ಲಾಭದಾಯಕ ದಿನ. ಸರಕು ಸಾಗಣಿಕೆಯಲ್ಲಿ ಬಿಡುವಿಲ್ಲದ ಕೆಲಸದಿಂದಾಗಿ ಹೆಚ್ಚಿನ ಆದಾಯ. ಉದ್ಯೋಗಿಗಳಿಗೆ ಸಹೋದ್ಯೋಗಿಗಳಿಂದ ಸಹಾಯ.

ತುಲಾ: ತಾಂತ್ರಿಕ ಪರಿಣತರಿಗೆ ಹೆಚ್ಚಿನ ಮಾನ್ಯತೆ ದೊರಕಲಿದೆ. ಸಂಗೀತಗಾರರು, ಕಲಾವಿದರುಗಳಿಗೆ ಗೌರವಾದರಗಳು ಪ್ರಾಪ್ತವಾಗುವವು. ಉದ್ಯೋಗದಲ್ಲಿ ಸ್ವಲ್ಪ ಮಟ್ಟಿನ ತೊಡಕು. ಹಿರಿಯರ ಆರೋಗ್ಯದಲ್ಲಿ ಸುಧಾರಣೆ.

ವೃಶ್ಚಿಕ: ಮನೆಗೆ ಹೊಸ ಅತಿಥಿಯೊಬ್ಬರ ಸೇರ್ಪಡೆಯಾಗುವುದರಿಂದ ಸಂತಸ. ಕೈಗಾರಿಕೋದ್ಯಮಿಗಳು, ತಾಂತ್ರಿಕ ಉತ್ಪನ್ನಗಳ ವ್ಯವಹಾರಸ್ಥರು ಹೆಚ್ಚಿನ ಲಾಭ. ಸಂಗಾತಿಯೊಂದಿಗೆ ಪ್ರವಾಸ ಹೋಗುವ ಸಾಧ್ಯತೆ.

ಧನು: ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಯಂತ್ರ ಅಥವಾ ವಾಹನಗಳ ಖರೀದಿ ಸಾಧ್ಯತೆ. ಮನೆಯಲ್ಲಿ ಮಂಗಳಕಾರ್ಯಗಳ ವಿಚಾರ ಪ್ರಸ್ತಾ- ಪವಾಗಲಿದೆ. ರಂಗ ಕಲಾವಿದರುಗಳಿಗೆ ಸಾರ್ವಜನಿಕ ಮಾನ್ಯತೆ ದೊರಕಲಿದೆ.

ಮಕರ: ಹೊಸ ಉದ್ಯಮದ ವಿಚಾರದಲ್ಲಿ ದುಡುಕುವುದು ಬೇಡ. ಇಷ್ಟ ಮಿತ್ರರೊಂದಿಗೆ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುವುದು ಉತ್ತಮ. ವಿವಾಹಾ- ಕಾಂಕ್ಷಿಗಳಿಗೆ ವಿವಾಹ ಬಂಧನ ಕೂಡಿಬರುವ ಸಾಧ್ಯತೆ.

ಕುಂಭ: ಪಾಠ ಪ್ರವಚನ ಮಾಡುವವರು, ಉಪಾಧ್ಯಾಯರುಗಳಿಗೆ ಹೆಚ್ಚಿನ ಅನುಕೂಲವಾಗಲಿದೆ. ಮನಸ್ತಾಪ ತಪ್ಪಿಸಲು ಸಹೋದರರೊಂದಿಗೆ ಅತ್ಯಂತ ಜಾಣ್ಮೆಯಿಂದ ವ್ಯವಹರಿಸಿ. ವಿದ್ಯಾರ್ಥಿಗಳಿಗೆ ಯಶಸ್ಸಿನ ದಿನ.

ಮೀನ: ಮನೆಯಲ್ಲಿ ಮಂಗಳಕಾರ್ಯಗಳು ನಡೆಯುವ ಸಾಧ್ಯತೆ. ಯಂತ್ರೋ- ಪಕರಣಗಳ ಖರೀದಿ ಸಾಧ್ಯತೆ. ಕೃಷಿ ಕ್ಷೇತ್ರದಲ್ಲಿ ಸ್ವಲ್ಪ ಮಟ್ಟಿನ ಹಿಂಜರಿಕೆ ಸಾಧ್ಯತೆ. ದಿನಸಿ ವ್ಯಾಪಾರಿಗಳಿಗೆ ಹೆಚ್ಚಿನ ಅನುಕೂಲ ಉಂಟಾಗುವುದು.

ನಿಮ್ಮ ಜನ್ಮದಿನ 10-ಜುಲೈ ಇಂದು ಅತ್ಯಂತ ಶುಭದಾಯಕ. ವ್ಯವಹಾರ, ಉದ್ಯಮಗಳು ಸುಲಲಿತವಾಗಿ ಸಾಗುವವು. ಆರ್ಥಿಕ ಸ್ಥಿತಿಯು ಎಂದಿನಂತೆ ಮುಂದುವರಿಯುವ ಜೊತೆಗೆ ಹೊಸ ಉದ್ಯಮವನ್ನು ಪ್ರಾರಂಭಿಸುವ ಸಾಧ್ಯತೆಯೂ ಕಂಡುಬರುತ್ತಿದೆ. ವರ್ಷವಿಡೀ ಸಂತಸದ ಕ್ಷಣಗಳನ್ನು ಕಾಣುವಿರಿ. ಆಕಾಂಕ್ಷಿಗಳಿಗೆ ಸಂತಾನ ಭಾಗ್ಯವೂ ಕೂಡಿಬರಲಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಸಿಆರ್‌ಪಿಎಫ್, ಐಟಿಬಿಪಿ, ಎನ್‌ಎಸ್‌ಜಿ ಸೇರಿದಂತೆ ಹಲವು ಕೇಂದ್ರೀಯ ಸಶಸ್ತ್ರ ಪಡೆಗಳ ಕೇಂದ್ರ ಕಚೇರಿಗಳನ್ನು ಬದಲಾವಣೆ ಮಾಡಲು ಕೇಂದ್ರ ಗೃಹಸಚಿವಾಲಯ ಯೋಜನೆ ರೂಪಿಸಿದೆ ಎಂಬ ಸಂದೇಶ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.


Agree with shifting of force HQRS as under by MHA.
1) BSF fm Delhi to Chandigarh.
(2) CRPF fm Delhi to Naya Raipur
(3) ITBP fm Delhi to Dehradoon
(4) NSG fm Delhi to Bhopal.
(5) SSB fm Delhi to Kolkatta.
(6) CISF fm Delhi to Hyderabad.
Shifting to be completed by 3 Dec 2021.

ಈ ಸಂದೇಶದ ನಕಲಿ ಎಂದು ಕೇಂದ್ರ ಸರ್ಕಾರದ ಪಿಐಬಿ ಫ್ಯಾಕ್ಟ್ ಚೆಕ್ ತಿಳಿಸಿದೆ. ಕೇಂದ್ರದ ಮುಂದೆ ಇಂತಹ ಯಾವುದೇ ಪ್ರಸ್ತಾವ ಇಲ್ಲ ಎಂದು ಸ್ಪಷ್ಟಪಡಿಸಿದೆ.

ಪದಬಂಧ 4653 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಚತುರರು ಆಡುವ ಒಳಾಂಗಣದ ಆಟ (4)
3.ಭಾರತೀಯ ವೈದ್ಯ ಪದ್ಧತಿ (4)
5.ಯಾತ್ರೆ ಮಾಡುವವನು ಇಲ್ಲಿದ್ದಾನಲ್ಲಾ? (3)
6.ಸೂರ್ಯನ ಇನ್ನೊಂದು ಹೆಸರು (4)
8.ಮರ್ಯಾದೆಯುಳ್ಳ ವಸ್ತು ಸ್ಥಿತಿ (4)
10.ಆತುರಾತುರವಾಗಿ ಹೀಗೆ ನುಂಗು! (4)
12.ಅಂತರದಲ್ಲೇ ಈ ಗಡಿಬಿಡಿ! (4)
14.ಈತ ದಪ್ಪನೆಯ ಮನುಷ್ಯ (3)
15.ಇಳೆಯಲ್ಲಿ ಮೊಳೆತ ಸ್ನೇಹ! (4)
16.ತರಹೇವಾರಿ ಕಾಯಿಪಲ್ಲೆ (4)

ಮೇಲಿಂದ ಕೆಳಕ್ಕೆ
1.ನಾಲ್ಕು ಕಾಲುಗಳನ್ನುಳ್ಳದ್ದು (4)
2.ಕಾಲ ಸೂಚಕಯಂತ್ರ (4)
3.ಸಮಯ ಸ್ಫೂರ್ತಿಯಿಂದ ಇದ್ದಲ್ಲಿಯೇ ಕಾವ್ಯ ರಚಿಸುವವ (4)
4.ಹತ್ತು ವರ್ಷಗಳ ಅವಧಿ (4)
7.ಮುಸ್ಲಿಂ ದೊರೆಯಿವನು (3)
9.ಆನೆ ನಡೆಸುವಾತ (3)
10.ವೀಳ್ಯದೆಲೆ ಕಟ್ಟು (4)
11.ವಿಷ್ಣುವಿನ ಚಕ್ರ (4)
12.ಲೋಹಚುಂಬಕ ಇಲ್ಲಿದೆ (4)
13.ದಾರಿಯಲ್ಲಿ ಪಡೆದಿರುವ ಅಪ್ಪಣೆ ಚೀಟಿ (4)



4652ನೇ ಪದಬಂಧದ ಉತ್ತರ
ಎಡದಿಂದ ಬಲಕ್ಕೆ: 2.ಪಕಳೆ 4.ಸಾಕ್ಷರ 5.ಅಣೆಕಟ್ಟು 6.ವಾಚಸ್ಪತಿ 7.ಇಂಗಿತ 9.ಕವಿತೆ 12.ಸತ್ವಹೀನ 14.ಅಹವಾಲು 15.ಯಾಚಕ 16.ದುರ್ದಾನ
ಮೇಲಿಂದ ಕೆಳಕ್ಕೆ: 1.ಮಸಾಲೆ 2.ಪರವಾನಗಿ 3.ಆಕಳು 5.ಅತಿರೇಕ 8.ತಡಸಲು 10.ವಿಮಾನಯಾನ 11.ಪ್ರಹರಿ 13.ಬಕರ

ಸುಡೊಕು 5039

8				1				
		9		5		7		3
	1	5			3		2	
	4					8		
3			8		1			2
1	9			2				7
	8						7	
2		4	9		7	1		6
	5			3				9

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5038 ಸುಡೊಕು

8	7	2	3	4	6	1	9	5
5	1	4	8	2	9	7	6	3
9	3	6	5	1	7	2	8	4
3	8	9	1	6	5	4	2	7
4	2	1	9	7	3	8	5	6
6	5	7	2	8	4	3	1	9
7	4	8	6	9	2	5	3	1
1	9	5	7	3	8	6	4	2
2	6	3	4	5	1	9	7	8

ಡಾನ್ಸ್ ಮಾಡಿದ ಸಂಸದೆ ಪ್ರಜ್ಞಾ ಸಿಂಗ್: ವಿಡಿಯೊ ವೈರಲ್

ಭೋಪಾಲ: ಅನಾರೋಗ್ಯದ ಕಾರಣಗಳನ್ನು ಒಡ್ಡಿ ಸದಾ ಗಾಲಿಕುರ್ಚಿಯಲ್ಲಿ ತೆರಳುತ್ತಿದ್ದ ಬಿಜೆಪಿ ಸಂಸದೆ ಸಾಧ್ವಿ ಪ್ರಜ್ಞಾ ಸಿಂಗ್ ಠಾಕೂರ್ ಇತ್ತೀಚೆಗಷ್ಟೇ ಬಾಸ್ಕೆಟ್ ಬಾಲ್ ಆಡಿ ಅಚ್ಚರಿ ಮೂಡಿಸಿದ್ದರು. ಇದೀಗ ನೃತ್ಯ ಮಾಡುವ ಮೂಲಕ ಅವರು ಗಮನ ಸೆಳೆದಿದ್ದಾರೆ.

ಇದನ್ನು ಕಾಂಗ್ರೆಸ್ ವಕ್ತಾರ ನರೇಂದ್ರ ಸಲೂಜಾ ಹಂಚಿಕೊಂಡಿದ್ದು, ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ವಿ. ಅಜಯ್ ಕುಮಾರ್
ಸದಸ್ಯರು, ಜನತಾ ಶಿಕ್ಷಣ ಸಂಸ್ಥೆ
03.07.1956 - 30.06.2021
ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುವ
ಆಡಳಿತ ಮಂಡಳಿ, ಜನತಾ ಶಿಕ್ಷಣ ಸಂಸ್ಥೆ
ಪ್ರಾಂಶುಪಾಲರು,ಮುಖ್ಯೋಪಾಧ್ಯಾರು
ಮತ್ತು ಸಿಬ್ಬಂದಿ ವರ್ಗ
ವಿವೇಕಾನಂದ ಶಾಲಾ ಕಾಲೇಜುಗಳು
ಬೆಂಗಳೂರು-560055

22ನೇ ಪುಣ್ಯಸ್ಮರಣೆ

ಆರ್. ಎಮ್. ರಾಜಣ್ಣ
ನಿಮ್ಮ ಆದರ್ಶವೇ ನಮಗೆ ದಾರಿದೀಪ
ಭಾರತಿ ರಾಜಣ್ಣ ಮತ್ತು ಕುಟುಂಬದವರು
ಆರ್.ಎಮ್. ನಾಗರಾಜ ಮತ್ತು ಕುಟುಂಬದವರು
ರಾಮಚಂದ್ರಾಪುರ

LOOKING TO BUILD, BUY OR SELL A PROPERTY
Please refer Classifieds on Sunday

LOOKING TO BUILD, BUY OR SELL A PROPERTY
Please refer Classifieds on Sunday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಅಗ್ನಿ ಅವಘಡ: 52 ಸಾವು

ಬಾಂಗ್ಲಾದೇಶ: ಆಹಾರ ತಯಾರಿಕಾ ಘಟಕದಲ್ಲಿ ದುರಂತ

ರೂಪಗಂಜ್ (ಎಎಫ್‌ಪಿ): 'ಬಾಂಗ್ಲಾದೇಶದ ಆಹಾರ ತಯಾರಿಕಾ ಘಟಕವೊಂದರಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ ಸಾವಿಗೀಡಾದವರ ಸಂಖ್ಯೆ 52ಕ್ಕೆ ಏರಿಕೆಯಾಗಿದೆ. 50ಕ್ಕೂ ಹೆಚ್ಚು ಮಂದಿಗೆ ಗಾಯಗಳಾಗಿವೆ' ಎಂದು ಪೊಲೀಸರು ಶುಕ್ರವಾರ ಹೇಳಿದರು.

'ನಾರಾಯಣಗಂಜ್‌ನ ರೂಪಗಂಜ್‌ನಲ್ಲಿರುವ ಹಾಶಿಮ್ ಫುಡ್ ಲಿಮಿಟೆಡ್‌ನ ಶೆಜಾನ್ ಜ್ಯೂಸ್ ಫ್ಯಾಕ್ಟರಿಯಲ್ಲಿ ಗುರುವಾರ ಸಂಜೆ 5ಗಂಟೆಗೆ ಬೆಂಕಿ ಕಾಣಿಸಿಕೊಂಡಿತ್ತು. 24 ಗಂಟೆ ಕಳೆದರೂ ಬೆಂಕಿ ಉರಿಯುತ್ತಲೇ ಇತ್ತು ಎಂದು ಅಗ್ನಿಶಾಮಕ ಸಿಬ್ಬಂದಿ ತಿಳಿಸಿದರು.

'ಬೆಂಕಿ ಆರನೇ ಅಂತಸ್ತಿಗೆ ತಲುಪಿದ್ದರಿಂದ ಭಯಭೀತಗೊಂಡು ಕಟ್ಟಡದಿಂದ ಹಾರಿದ್ದ 30ಕ್ಕೂ ಹೆಚ್ಚು ಕಾರ್ಮಿಕರಿಗೆ ಗಾಯಗಳಾಗಿವೆ. ಅಗ್ನಿಶಾಮಕ ಸಿಬ್ಬಂದಿ ಈವರೆಗೆ 25 ಮಂದಿಯನ್ನು ರಕ್ಷಿಸಿದ್ದಾರೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

'ಬೆಂಕಿ ನಿಯಂತ್ರಣಕ್ಕೆ ಬಂದ ಕೂಡಲೇ ನಾವು ಕಟ್ಟಡದೊಳಗೆ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ಆರಂಭಿಸುತ್ತೇವೆ. ಈ ಬಳಿಕವೇ ನಿಖರ ಮಾಹಿತಿಯನ್ನು ನೀಡಲು ಸಾಧ್ಯ' ಎಂದು ಅಗ್ನಿ ಶಾಮಕ ದಳದ ವಕ್ತಾರ ದೇಬಾಶಿಶ್ ಬರ್ಧನ್ ತಿಳಿಸಿದರು.

'ಕಟ್ಟಡದ ನೆಲಮಹಡಿಯಲ್ಲಿ ಮೊದಲಿಗೆ ಬೆಂಕಿ ಕಾಣಿಸಿಕೊಂಡಿರುವ ಸಾಧ್ಯತೆಗಳಿವೆ. ಈ ಬಳಿಕ ಘಟಕದಲ್ಲಿದ್ದ ರಾಸಾಯನಿಕಗಳಿಂದಾಗಿ ಬೆಂಕಿ ಬೇರೆಡೆಗೆ ಹರಡಿರಬಹುದು' ಎಂದು ಅಧಿಕಾರಿಗಳು ಶಂಕಿಸಿದ್ದಾರೆ.

18 ಅಗ್ನಿಶಾಮಕ ಘಟಕಗಳ ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಈ ಅವಘಡದಲ್ಲಿ ನಾಪತ್ತೆಯಾಗಿರುವವರಲ್ಲಿ 44 ಮಂದಿಯನ್ನು ಗುರುತಿಸಲಾಗಿದೆ.

'ಬೆಂಕಿಯನ್ನು ಸಂಪೂರ್ಣವಾಗಿ ನಿಯಂತ್ರಣಕ್ಕೆ ತರಲು ಸ್ವಲ್ಪ ಸಮಯ ಬೇಕಾಗಬಹುದು. ಈ ಬಗ್ಗೆ ತನಿಖೆ ನಡೆಸಲು ಐದು ಸದಸ್ಯರ ಸಮಿತಿಯನ್ನು ರಚಿಸಲಾಗುವುದು' ಎಂದು ನಾರಾಯಣಗಂಜ್ ಜಿಲ್ಲಾ ಅಗ್ನಿಶಾಮಕ ಸೇವೆಯ ಉಪನಿರ್ದೇಶಕ ಅಬ್ದುಲ್ಲಾ ಅಲ್ ಅರೆಫಿನ್ ಅವರು ತಿಳಿಸಿದರು.


ಅಗ್ನಿ ಅವಘಡ ಸಂಭವಿಸಿದ ಬಾಂಗ್ಲಾದೇಶದ ರೂಪಗಂಜ್‌ನಲ್ಲಿರುವ ಆಹಾರ ಉತ್ಪಾದನೆ ಕಾರ್ಖಾನೆ –ರಾಯಿಟರ್ಸ್ ಚಿತ್ರ

'ಜಮ್ಮು–ಕಾಶ್ಮೀರ: 2011ರ ಜನಗಣತಿ ಆಧರಿಸಿಯೇ ಕ್ಷೇತ್ರ ಮರು ವಿಂಗಡಣೆ'

ಪ್ರಜಾವಾಣಿ ವಾರ್ತೆ

ಸುಶೀಲ್‌ಚಂದ್ರ

ಶ್ರೀನಗರ: ಜಮ್ಮು–ಕಾಶ್ಮೀರದಲ್ಲಿ ವಿಧಾಸಭಾ ಕ್ಷೇತ್ರಗಳ ಮರು ವಿಂಗಡಣೆ ಪಾರದರ್ಶಕವಾಗಿರುವುದು. 2011ರಲ್ಲಿ ನಡೆದ ಜನಗಣತಿಯ ಅಂಕಿ–ಅಂಶಗಳನ್ನು ಆಧರಿಸಿಯೇ ಅಂತಿಮ ವರದಿಯನ್ನು ಸಿದ್ಧಪಡಿಸಲಾಗುವುದು ಎಂದು ಕ್ಷೇತ್ರಗಳ ಮರುವಿಂಗಡಣಾ ಆಯೋಗ ಶುಕ್ರವಾರ ಹೇಳಿದೆ.

'ಜಮ್ಮು–ಕಾಶ್ಮೀರದ ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆ ಬಹು ಸಂಕೀರ್ಣವಾದ ಕಾರ್ಯ. ಅದು ಸರಳವಾದ ಗಣಿತಸೂತ್ರಗಳನ್ನು ಆಧರಿಸಿ ಮಾಡುವ ಲೆಕ್ಕಾಚಾರವಲ್ಲ' ಎಂದು ಮುಖ್ಯ ಚುನಾವಣಾ ಆಯುಕ್ತ ಸುಶೀಲ್‌ಚಂದ್ರ ಹೇಳಿದರು.

ಆಯೋಗದ ಮೂವರು ಸದಸ್ಯರ ಸಮಿತಿಯು ಕೇಂದ್ರಾಡಳಿತ ಪ್ರದೇಶದಲ್ಲಿ ಕೈಗೊಂಡಿದ್ದ ನಾಲ್ಕು ದಿನಗಳ ಪ್ರವಾಸ ಪೂರ್ಣಗೊಂಡ ನಂತರ ಅವರು ಈ ಮಾಹಿತಿ ನೀಡಿದರು.

'ಮರು ವಿಂಗಡಣೆ ಕಾರ್ಯವನ್ನು ಪಾರದರ್ಶಕವಾಗಿಯೇ ನೆರವೇರಿಸಲಾಗುವುದು. ಕರಡನ್ನು ಸಾರ್ವಜನಿಕರ ಮುಂದಿಟ್ಟು, ಆಕ್ಷೇಪಣೆಗಳನ್ನು ಆಹ್ವಾನಿಸಲಾಗುವುದು' ಎಂದರು.

'ಕ್ಷೇತ್ರಗಳ ಮರು ವಿಂಗಡಣೆಗೆ ಜನಸಂಖ್ಯೆಯೇ ಆಧಾರವಾಗಿರುತ್ತದೆ. ಆದರೆ, ಈ ಕೇಂದ್ರಾಡಳಿತ ಪ್ರದೇಶದಲ್ಲಿ ಕ್ಷೇತ್ರಗಳ ಭೌಗೋಳಿಕ ಅಂಶಗಳು, ಸ್ಥಳೀಯ ವೈವಿಧ್ಯಗಳು, ಸಂಪರ್ಕ–ಸಂವಹನದ ಲಭ್ಯತೆಯಂತಹ ಮಾಹಿತಿಯನ್ನು ಪರಿಗಣಿಸಲಾಗುತ್ತದೆ' ಎಂದು ಹೇಳಿದರು.

'ಮಗುವಿನ ಔಷಧಿ ಮೇಲಿನ ಆಮದು ಸುಂಕ ಮನ್ನಾ ಮಾಡಿ'

ತಿರುವನಂತಪುರ (ಪಿಟಿಐ): ಅಪರೂಪದ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವ 18 ತಿಂಗಳ ಮಗುವಿನ ಚಿಕಿತ್ಸೆಗೆ ಬೇಕಾಗಿರುವ ಔಷಧಿಯ ಮೇಲಿನ ಆಮದು ಸುಂಕ ಮತ್ತು ಜಿಎಸ್‌ಟಿಯನ್ನು ಮನ್ನಾಗೊಳಿಸುವಂತೆ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

'ಕಣ್ಣೂರು ಜಿಲ್ಲೆಯ ಪಿ.ಕೆ ರಫೀಕ್ ಮತ್ತು ಮರಿಯಮ್ಮ ದಂಪತಿಯ 18 ತಿಂಗಳ ಮಗು ಮೊಹಮ್ಮದ್, ಬೆನ್ನುಮೂಳೆಯ ಸ್ನಾಯು ಕ್ಷೀಣತೆಯಿಂದ (ಎಸ್‌ಎಂಎ) ಬಳಲುತ್ತಿದೆ. ಚಿಕಿತ್ಸೆಗೆ ಬೇಕಾಗಿರುವ ಔಷಧಿಯ ಬೆಲೆ ದುಬಾರಿಯಾಗಿದೆ. ಈ ವೆಚ್ಚವನ್ನು ಭರಿಸಲು ಕುಟುಂಬಕ್ಕೆ ಸಾಧ್ಯವಾಗುತ್ತಿಲ್ಲ. ಇದಕ್ಕೆ ಬೇಕಾಗಿರುವ ಔಷಧಿಯ ಬೆಲೆ ₹18 ಕೋಟಿಯಾಗಿದ್ದು, ಅದನ್ನು ಅಮೆರಿಕದಿಂದ ಆಮದು ಮಾಡಿಕೊಳ್ಳಲಾಗುತ್ತಿದೆ' ಎಂದು ಪಿಣರಾಯಿ ಅವರು ಪ್ರಧಾನಿ ನರೇಂದ್ರ ಮೋದಿಗೆ ಪತ್ರ ಬರೆದಿದ್ದಾರೆ.

ಸುದ್ದಿ 2 ನಿಮಿಷ

ಜೈಲಾ ಅವಂತ್–ಗಾರ್ಡ್‌ಗೆ ನ್ಯಾಷನಲ್ ಸ್ಪೆಲ್ಲಿಂಗ್ ಬೀ ಚಾಂಪಿಯನ್ ಕಿರೀಟ!

ವಾಷಿಂಗ್ಟನ್ (ಪಿಟಿಐ): ಹದಿನಾಲ್ಕರ ಹರೆಯದ ಆಫ್ರಿಕಾ ಮೂಲದ ವಿದ್ಯಾರ್ಥಿನಿ ಜೈಲಾ ಅವಂತ್–ಗಾರ್ಡ್ 2021ನೇ ಸಾಲಿನ 'ಸ್ಕ್ರಿಪ್ಸ್ ನ್ಯಾಷನಲ್ ಸ್ಪೆಲ್ಲಿಂಗ್ ಬೀ ಸ್ಪರ್ಧೆಯಲ್ಲಿ ಗೆಲುವು ಸಾಧಿಸಿದ್ದಾರೆ.

ಈ ಮೂಲಕ ಪ್ರತಿಷ್ಠಿತ ಸ್ಪರ್ಧೆಯ 93 ವರ್ಷಗಳ ಇತಿಹಾಸದಲ್ಲೇ ಆಫ್ರಿಕಾ ಮೂಲದ ಸ್ಪರ್ಧಿಯೊಬ್ಬರು ಮೊದಲ ಬಾರಿಗೆ ಈ ಪ್ರಶಸ್ತಿ ಪಡೆದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅಷ್ಟೇ ಅಲ್ಲ, ಲೂಸಿಯಾನದ ಮೊದಲ ನಿವಾಸಿಯಾಗಿದ್ದಾರೆ.

ಹಲವು ವರ್ಷಗಳಿಂದ ನ್ಯಾಷನಲ್ ಸ್ಪೆಲ್ಲಿಂಗ್ ಬೀ ಸ್ಪರ್ಧೆಯಲ್ಲಿ ಪ್ರಾಬಲ್ಯ ಮೆರೆಯುತ್ತಿದ್ದ ಭಾರತೀಯ– ಅಮೆರಿಕನ್ನರು ಈ ಬಾರಿ ಎರಡು ಮತ್ತು ಮೂರನೇ ಸ್ಥಾನಕ್ಕೆ ತೃಪ್ತಿಪಡಬೇಕಾಗಿದೆ.

ಸ್ಪರ್ಧೆಯಲ್ಲಿ ತೀವ್ರ ಪೈಪೋಟಿ ನೀಡಿದ್ದ ಭಾರತೀಯ ಅಮೆರಿಕನ್ ಸ್ಪರ್ಧಿಗಳಾದ ಸ್ಯಾನ್‌ಫ್ರಾನ್ಸಿಸ್ಕೊದ 12 ವರ್ಷದ ಚೈತ್ರಾ ತುಮ್ಮಲಾ ಎರಡನೇ ಮತ್ತು ನ್ಯೂಯಾರ್ಕ್‌ನ 13 ವರ್ಷದ ಭಾವನಾ ಮದಿನಿ ಮೂರನೇ ಸ್ಥಾನ ಪಡೆದಿದ್ದಾರೆ. ಅಮೆರಿಕದ ಪ್ರಥಮ ಮಹಿಳೆ ಜಿಲ್ ಬೈಡನ್ ಅವರು ಈ ಸ್ಪರ್ಧೆಯಲ್ಲಿ ಅತಿಥಿಯಾಗಿ ಭಾಗವಹಿಸಿದ್ದರು.

8ನೇ ತರಗತಿಯ ವಿದ್ಯಾರ್ಥಿನಿ ಜೈಲಾ ಹಾಗೂ ಒಂಬತ್ತು ಮಂದಿ ಭಾರತೀಯ– ಅಮೆರಿಕನ್ ಸ್ಪರ್ಧಿಗಳು ಸೇರಿದಂತೆ ಒಟ್ಟು 11 ಮಂದಿ ಅಂತಿಮ ಸುತ್ತಿಗೆ ಆಯ್ಕೆಯಾಗಿದ್ದರು. ಅವಂತ್ ಗಾರ್ಡ್ 'ನ್ಯಾಷನಲ್ ಸ್ಪೆಲ್ಲಿಂಗ್ ಬೀ 2021' ಪ್ರಶಸ್ತಿ ತನ್ನದಾಗಿಸಿಕೊಂಡರು. ಈ ಸ್ಪರ್ಧೆಯ ಮೊದಲ ಬಹುಮಾನ ₹37 ಲಕ್ಷ (50 ಸಾವಿರ ಡಾಲರ್).

ಫ್ಲಾರಿಡಾದ ಒರ್ಲ್ಯಾಂಡೊದಲ್ಲಿರುವ ಇಎಸ್‌ಪಿಎನ್ ವೈಡ್ ವರ್ಲ್ಡ್ ಆಫ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ 'ನ್ಯಾಷನಲ್ ಸ್ಪೆಲ್ಲಿಂಗ್ ಬೀ 2021' ಚಾಂಪಿಯನ್‌ಷಿಪ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಹೈಟಿ ಅಧ್ಯಕ್ಷರ ಹತ್ಯೆ: ಶಂಕಿತರು ವಶಕ್ಕೆ

ಪೋರ್ಟ್ ಒ ಪ್ರಿನ್ಸ್: ಹೈಟಿ ದೇಶದ ಅಧ್ಯಕ್ಷ ಜೊವೆನೆಲ್ ಮೊಯಿಸ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೆ 17 ಮಂದಿ ಶಂಕಿತರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ.

ಇವರಲ್ಲಿ ಇಬ್ಬರು ಅಮೆರಿಕದ ನಾಗರಿಕರಾಗಿದ್ದು, ಉಭಯ ದೇಶಗಳ ಪೌರತ್ವ ಹೊಂದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಶಪಡಿಸಿಕೊಂಡವರಲ್ಲಿ 15 ಮಂದಿ ಕೊಲಂಬಿಯಾದವರು ಎಂದು ಹೈಟಿಯ ರಾಷ್ಟ್ರೀಯ ಪೊಲೀಸ್ ಪಡೆ ಮುಖ್ಯಸ್ಥ ಲಿಯಾನ್ ಚಾರ್ಲ್ಸ್ ತಿಳಿಸಿದ್ದಾರೆ.

ಕನಿಷ್ಠ ಆರು ಮಂದಿ ತನ್ನ ಸೇನೆಯಲ್ಲಿದ್ದರು ಎನ್ನುವುದು ತಿಳಿದು ಬಂದಿದ್ದು, ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದು ಕೊಲಂಬಿಯಾ ಸರ್ಕಾರ ತಿಳಿಸಿದೆ.

ಮೊಯಿಸ್ ಅವರನ್ನು ಬುಧವಾರ ಹತ್ಯೆ ಮಾಡಲಾಗಿತ್ತು.

ಪ್ರಜಾವಾಣಿ ಸೆಲೆಬ್ರಿಟಿ LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ

ಶನಿವಾರದ ವಿಶೇಷ
ಸಾಮಾಜಿಕ ಕಾರ್ಯಕರ್ತ, ಸಮಾಜ ಪರಿವರ್ತನಾ ಸಮುದಾಯದ ಸಂಸ್ಥಾಪಕ
ಎಸ್.ಆರ್.ಹಿರೇಮಠ ಅವರ ಜೊತೆಗೆ
ಮುಖಾಮುಖಿ
ಇಂದು ಮಧ್ಯಾಹ್ನ 12 ರಿಂದ 1

ಪ್ರಜಾವಾಣಿ
ಜಸ್ಟ್ ಮ್ಯೂಸಿಕ್– ಹಿತಾನುಭವ
ಸೈನಿಕರ ಮುಂದೆ ಸಿತಾರ್ ಸುಮ!

ಲಡಾಕ್‌ನ ಲೇಹ್‌ನಲ್ಲಿ ಸೈನಿಕರ ಮುಂದೆ ಸಿತಾರ್ ನುಡಿಸುವಾಗ ವಿದುಷಿ ಸುಮಾರಾಣಿ ಅವರ ಹೃದಯ ತುಂಬಿ ಬಂದಿತ್ತು.
https://bit.ly/36nCOEn

ಕೈಕುಳಿಯಿಂದ ಮೆಗ್ಗರ್ ಸ್ಫೋಟದವರೆಗೆ ಬೇಬಿಬೆಟ್ಟ!

ಒಂದನೇ ಪುಟದಿಂದ...

2018ರಲ್ಲಿ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (ಕೆಎಸ್‌ಎನ್‌ಡಿಎಂಸಿ) ನಡೆಸಿದ ಅಧ್ಯಯನದಲ್ಲಿ ಬೇಬಿಬೆಟ್ಟದಲ್ಲಿ ನಡೆಯುತ್ತಿರುವ ಗಣಿ ಸ್ಫೋಟದಿಂದ ಕೆಆರ್‌ಎಸ್ ಜಲಾಶಯಕ್ಕೆ ಧಕ್ಕೆಯಾಗುವ ಸಾಧ್ಯತೆ ಇದೆ ಎಂದು ಹೇಳಿತ್ತು. ಕೆಆರ್‌ಎಸ್ ಬಳಿಯ 'ಉಪಗ್ರಹ ಆಧಾರಿತ ಭೂಕಂಪ ಭೂಮಾಪನ ಜಾಲ ಕೇಂದ್ರ'ದಲ್ಲಿ ದಾಖಲಾದ ಮಾಹಿತಿ ಅನ್ವಯ ಈ ನಿರ್ಧಾರಕ್ಕೆ ಬರಲಾಗಿತ್ತು. ಅಲ್ಲಿಂದ ಗಣಿಗಾರಿಕೆ ನಿಷೇಧದ ಕೂಗು ಆರಂಭವಾಯಿತು.

'2 ವರ್ಷಗಳಿಂದೀಚೆಗೆ 20ಕ್ಕೂ ಹೆಚ್ಚು ಬಾರಿ ಬೇಬಿಬೆಟ್ಟದಲ್ಲಿ ಗಣಿಗಾರಿಕೆ ನಿಷೇಧಿಸಲಾಗಿದೆ. ಆದರೆ ಎಲ್ಲವೂ ತಾತ್ಕಾಲಿಕ. ಶಾಶ್ವತ ನಿಷೇಧ ಹೇರಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ನಿಷೇಧಾಜ್ಞೆ ಕೇವಲ ಕಾಗದಕ್ಕಷ್ಟೇ ಸೀಮಿತವಾಗಿದೆ. ಬಹುತೇಕ ಗಣಿ ಕಂಪನಿಗಳು ಸ್ಥಳೀಯ ಜನಪ್ರತಿನಿಧಿಗಳಿಗೆ ಸೇರಿದ್ದು, ನಿಷೇಧ ಸಾಧ್ಯವಾಗುತ್ತಿಲ್ಲ' ಎಂದು ಹೋರಾಟಗಾರರು ಆರೋಪಿಸುತ್ತಾರೆ.

ಗಣಿ ಮತ್ತು ಭೂವಿಜ್ಞಾನ ಇಲಾಖೆ ಮಾಹಿತಿ ಅನ್ವಯ ಬೇಬಿಬೆಟ್ಟದಲ್ಲಿ 32 ಕ್ರಷರ್‌ಗಳಿಗೆ 68 ಕಡೆ ಗಣಿ ಗುತ್ತಿಗೆ ನೀಡಲಾಗಿತ್ತು. ಈಗ 30 ಗಣಿಗಳ ಅನುಮತಿ ರದ್ದು ಮಾಡಲಾಗಿದೆ. 2ಕ್ಕೆ ಮಾತ್ರ ಚಟುವಟಿಕೆ ನಡೆಸಲು ಅನುಮತಿ ಇದೆ.

500 ಕ್ರಷರ್ ಅಕ್ರಮ

'ಬೇಬಿಬೆಟ್ಟವೊಂದರಲ್ಲೇ 500 ಕ್ರಷರ್‌ಗಳು ಅಕ್ರಮವಾಗಿ ಚಟುವಟಿಕೆ ನಡೆಸುತ್ತಿವೆ. ಸ್ಥಳೀಯ ಪ್ರಭಾವಿಗಳು 2–3 ಎಕರೆಯಲ್ಲಿ ಅನುಮತಿ ಪಡೆದು ನೂರಾರು ಎಕರೆಯಲ್ಲಿ ಕಲ್ಲು ಸ್ಫೋಟ ನಡೆಸುತ್ತಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ನಿಷೇಧದ ನಡುವೆಯೂ ಗಣಿಗಾರಿಕೆ ವ್ಯಾಪಕವಾಗಿದ್ದು, ಕೆಆರ್‌ಎಸ್ ಜಲಾಶಯ ಬಿರುಕು ಬಿಟ್ಟಿದೆ ಎಂದು ಮಂಡ್ಯ ಸಂಸದೆ ಸುಮಲತಾ ಹೇಳಿಕೆ ನೀಡಿದ ನಂತರ ಈಗ ಗಣಿಗಾರಿಕೆ ನಿಲ್ಲಿಸಲಾಗಿದೆ' ಎಂದು ಬೇಬಿಬೆಟ್ಟ ಉಳಿಸಿ ಹೋರಾಟ ಸಮಿತಿ ಸದಸ್ಯರು ತಿಳಿಸಿದರು.

ಸುಳ್ಳುಸುದ್ದಿ ಸೃಷ್ಟಿಸಿದ ಗೊಂದಲ

'ಕೆಆರ್‌ಎಸ್‌ನಲ್ಲಿ ಕ್ರಸ್ಟ್‌ಗೇಟ್ ಬದಲಾವಣೆ ಕಾಮಗಾರಿ ಪ್ರಗತಿಯಲ್ಲಿದ್ದು, ಈ ವೇಳೆ ಗೇಟ್‌ನ ಕಲ್ಲುಗಳನ್ನು ತೆಗೆಯಲಾಗಿತ್ತು. ಕಿಡಿಗೇಡಿಗಳು ಅದರ ವಿಡಿಯೊ ಅನ್ನು ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸಿ, ಕೆಆರ್‌ಎಸ್ ಬಿರುಕು ಬಿಟ್ಟಿದೆ ಎಂದು ಸುದ್ದಿ ಹರಡಿಸಿದ್ದರು. ಸುಳ್ಳುಸುದ್ದಿಯಿಂದಾಗಿಯೇ ಗೊಂದಲ ಸೃಷ್ಟಿಯಾಗಿದೆ' ಎಂದು ಕಾವೇರಿ ನೀರಾವರಿ ನಿಗಮ ತಿಳಿಸಿದೆ.

'ಕೆಆರ್‌ಎಸ್ : ಅಕ್ರಮ ಗಣಿಗಾರಿಕೆ ದಾಖಲೆ ಬಹಿರಂಗ'

ಒಂದನೇ ಪುಟದಿಂದ...

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, 'ಒಂದು ಗಣಿ ಪ್ರದೇಶಕ್ಕೆ ಪರವಾನಗಿ ಪಡೆದು 8 ರಿಂದ 10 ಬೇನಾಮಿ ಗಣಿಗಳನ್ನು ನಡೆಸುತ್ತಿದ್ದಾರೆ. ಇದರಲ್ಲಿ ರಾಜಕಾರಣಿಗಳೂ ಇದ್ದಾರೆ. ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ದಾಖಲೆಗಳನ್ನು ಮುಖ್ಯಮಂತ್ರಿ ಮತ್ತು ಗಣಿ ಸಚಿವರಿಗೆ ಸಲ್ಲಿಸುತ್ತೇನೆ' ಎಂದರು.

ಗಣಿಗಾರಿಕೆಯ ಧೂಳಿನಿಂದ ಜಾನುವಾರುಗಳು ಸಾವನ್ನಪ್ಪುತ್ತಿವೆ. ಜನರ ಆರೋಗ್ಯ ಹದಗೆಡುತ್ತಿದೆ. ಗಣಿಗಾರಿಕೆಯ ಮೇಲೆ ಯಾವುದೇ ನಿಯಂತ್ರಣವಿಲ್ಲವಾಗಿದೆ. ಕಾನೂನು ಬದ್ಧವಾಗಿ ಮತ್ತು ಪರಿಸರಕ್ಕೆ ಹಾನಿ ಆಗದಂತೆ ಗಣಿಗಾರಿಕೆ ನಡೆಸುವುದರಲ್ಲಿ ತಪ್ಪಿಲ್ಲ. ಯಾವುದೇ ಕಾರಣಕ್ಕೂ ಅಕ್ರಮ ಗಣಿಗಾರಿಕೆಗೆ ಅವಕಾಶ ನೀಡಬಾರದು ಎಂದರು.

ಅಕ್ರಮ ಗಣಿಗಾರಿಕೆಯನ್ನು ಕಣ್ಣು ಮುಚ್ಚಿಕೊಂಡು ಅಥವಾ ಯಾವುದೋ ಪ್ರಭಾವಕ್ಕೆ ಮಣಿದು ಸುಮ್ಮನಾದರೆ ಭವಿಷ್ಯದಲ್ಲಿ ಅಣೆಕಟ್ಟು ಮಾತ್ರವಲ್ಲ ಜನ ಜೀವನಕ್ಕೆ ಅಪಾಯ ತಪ್ಪಿದ್ದಲ್ಲ. ಮೈಸೂರು ಮಹಾರಾಜರು ಕಟ್ಟಿಸಿದ ಕೆಆರ್‌ಎಸ್ ಅಣೆಕಟ್ಟು ಉಳಿಸಿಕೊಳ್ಳುವುದು ಎಲ್ಲರ ಕರ್ತವ್ಯ ಎಂದು ಅಶ್ವತ್ಥನಾರಾಯಣ ಹೇಳಿದರು.

ಉ.ಪ್ರದೇಶದಲ್ಲಿ ಮಹಿಳಾ ಅಭ್ಯರ್ಥಿಯ ಸೀರೆ ಎಳೆದಾಡಿದ ರಾಜಕೀಯ ವೈರಿಗಳು

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶದ ಬ್ಲಾಕ್ ಪಂಚಾಯಿತಿ ಚುನಾವಣೆಗಾಗಿ ನಾಮಪತ್ರ ಸಲ್ಲಿಸಲು ಬಂದಿದ್ದ ಸಮಾಜವಾದಿ ಪಕ್ಷದ (ಎಸ್‌ಪಿ) ಮಹಿಳಾ ಅಭ್ಯರ್ಥಿಯ ಸೀರೆಯನ್ನು ರಾಜಕೀಯ ವೈರಿಗಳು ಎಳೆದಾಡಿದ್ದಾರೆ.

ಈ ವಿಡಿಯೊವನ್ನು ಮಾಜಿ ಮುಖ್ಯಮಂತ್ರಿ ಹಾಗೂ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಹಂಚಿಕೊಂಡಿದ್ದು, 'ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ಗೂಂಡಾಗಳು ಮಹಿಳೆಗೆ ಅವಮಾನ ಮಾಡಿದ್ದಾರೆ' ಎಂದು ಆರೋಪಿಸಿದ್ದಾರೆ.

ಲಖನೌದಿಂದ 130 ಕಿ.ಮೀ ದೂರದಲ್ಲಿರುವ ಲಖಿಂಪುರ ಖೇರಿಯಲ್ಲಿ ಈ ಘಟನೆ ನಡೆದಿದೆ ಎಂದು ವರದಿಯಾಗಿದೆ.

ಉತ್ತರ ಪ್ರದೇಶದಲ್ಲಿ ಬ್ಲಾಕ್ ಪಂಚಾಯತಿ ಚುನಾವಣೆ ಶನಿವಾರದಂದು ನಡೆಯಲಿದೆ. ಈ ನಡುವೆ ಅನೇಕ ಪ್ರದೇಶಗಳಲ್ಲಿ ಘರ್ಷಣೆ ನಡೆದಿದೆ ಎಂದು ಎನ್‌ಡಿಟಿವಿ ವರದಿ ಮಾಡಿವೆ.

ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಹಿಂಸಾಚಾರದ ವಿಡಿಯೊವೊಂದನ್ನು ಹಂಚಿದ್ದು, ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ವಿರುದ್ಧ ಟೀಕೆ ಮಾಡಿದ್ದಾರೆ.

ನಾಮಪತ್ರ ಸಲ್ಲಿಸಲು ಭದ್ರತಾ ವ್ಯವಸ್ಥೆ ಮಾಡಲಾಗಿದೆ. ಆದರೆ 14 ಪ್ರದೇಶಗಳಿಂದ ಹಿಂಸಾಚಾರ ವರದಿಯಾಗಿದೆ ಎಂದು ಉತ್ತರ ಪ್ರದೇಶ ಪೊಲೀಸ್ ಅಧಿಕಾರಿ ಪ್ರಶಾಂತ್ ಕುಮಾರ್ ತಿಳಿಸಿದ್ದಾರೆ.

'ಆಕ್ಸ್‌ಫ್ಯಾಮ್' ಸಂಸ್ಥೆ ವರದಿ: ಸಂಕಷ್ಟದಲ್ಲಿ 15.5 ಕೋಟಿ ಮಂದಿ

ಹಸಿವು: ಜಗತ್ತಿನಾದ್ಯಂತ ಪ್ರತಿ ನಿಮಿಷ 11 ಮಂದಿ ಸಾವು

ಕೈರೊ (ಎಪಿ): ಜಗತ್ತಿನಾದ್ಯಂತ ಪ್ರತಿ ನಿಮಿಷಕ್ಕೆ 11 ಮಂದಿ ಹಸಿವಿನಿಂದ ಸಾವಿಗೀಡಾಗುತ್ತಿದ್ದಾರೆ ಎನ್ನುವ ಆತಂಕಕಾರಿ ವರದಿಯನ್ನು 'ಆಕ್ಸ್‌ಫ್ಯಾಮ್' ಎನ್ನುವ ಸಂಸ್ಥೆ ತಿಳಿಸಿದೆ.

'ದ್ವಿಗುಣಗೊಳ್ಳುವ ಹಸಿವಿನ ವೈರಸ್' ಎನ್ನುವ ಶೀರ್ಷಿಕೆ ಅಡಿಯಲ್ಲಿ ಆಕ್ಸ್‌ಫ್ಯಾಮ್ ವರದಿಯನ್ನು ಸಿದ್ಧಪಡಿಸಿದೆ.

ಕೋವಿಡ್‌ಗಿಂತಲೂ ಹಸಿವಿನಿಂದ ಸಾವಿಗೀಡಾದವರ ಸಂಖ್ಯೆ ಹೆಚ್ಚಾಗಿದೆ. ಕೋವಿಡ್–19ನಿಂದ ಪ್ರತಿ ನಿಮಿಷಕ್ಕೆ ಏಳು ಜನ ಸಾವಿಗೀಡಾಗಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಜಗತ್ತಿನಾದ್ಯಂತ ಆಹಾರದ ಕೊರತೆಯನ್ನು ಎದುರಿಸುತ್ತಿರುವ 15.5 ಕೋಟಿ ಮಂದಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಳೆದ ವರ್ಷಕ್ಕಿಂತ ಈ ಪ್ರಮಾಣವು 2 ಕೋಟಿಗೂ ಹೆಚ್ಚು ಎಂದು ವರದಿ ತಿಳಿಸಿದೆ.

ಕಳೆದ ವರ್ಷದಿಂದ ಕ್ಷಾಮ ರೀತಿಯ ಪರಿಸ್ಥಿತಿ ಎದುರಿಸುತ್ತಿರುವ ಪ್ರದೇಶಗಳ ಸಂಖ್ಯೆಯು ಸಹ ಆರು ಪಟ್ಟು ಹೆಚ್ಚಿದೆ ಎಂದು ತಿಳಿಸಿದೆ.

'ಕೋವಿಡ್‌ನಿಂದ ಎದುರಾದ ಆರ್ಥಿಕ ಸಂಕಷ್ಟ ಮತ್ತು ಹವಾಮಾನ ಬಿಕ್ಕಟ್ಟಿನಿಂದ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದ್ದು, ಆಹಾರ ಬೆಲೆಗಳು ಶೇಕಡ 40ರಷ್ಟು ಹೆಚ್ಚಾಗಿವೆ. ಹೀಗಾಗಿ, ಬಡಜನರು ಹಸಿವಿನಿಂದ ಬಳಲು ಇದು ಸಹ ಪ್ರಮುಖ ಕಾರಣವಾಗಿದೆ' ಎಂದು ಆಕ್ಸ್‌ಫ್ಯಾಮ್ ಅಮೆರಿಕ ಅಧ್ಯಕ್ಷ ಮತ್ತು ಸಿಇಒ ಅಬ್ಬಿ ಮ್ಯಾಕ್ಸ್‌ಮ್ಯಾನ್ ತಿಳಿಸಿದ್ದಾರೆ.

'ಸಾಂಕ್ರಾಮಿಕ ಕಾಯಿಲೆಯ ಮಧ್ಯೆಯೂ ಜಾಗತಿಕವಾಗಿ ಮಿಲಿಟರಿ ಸಾಮರ್ಥ್ಯ ವೃದ್ಧಿಸಲು ಮಾಡುತ್ತಿದ್ದ ವೆಚ್ಚವು 5100 ಕೋಟಿ ಡಾಲರ್‌ನಷ್ಟು (₹3,80498.25 ಕೋಟಿ) ಏರಿಕೆಯಾಗಿದೆ. ವಿಶ್ವಸಂಸ್ಥೆಯು ಹಸಿವು ನೀಗಿಸಲು ಕೈಗೊಂಡ ಕ್ರಮಗಳಿಗೆ ವೆಚ್ಚ ಮಾಡುತ್ತಿದ್ದ ಮೊತ್ತಕ್ಕಿಂತ ಆರು ಪಟ್ಟು ಹೆಚ್ಚಾಗಿದೆ' ಎಂದು ತಿಳಿಸಿದ್ದಾರೆ.

ಸಂಘರ್ಷ ಎದುರಿಸುತ್ತಿರುವ ರಾಷ್ಟ್ರಗಳಾದ ಅಫ್ಘಾನಿಸ್ತಾನ, ಇಥಿಯೊಪಿಯಾ, ದಕ್ಷಿಣ ಸುಡಾನ್, ಸಿರಿಯಾ, ಯೆಮೆನ್‌ನಲ್ಲಿ ಹಸಿವಿನಿಂದ ಬಳಲುತ್ತಿರುವ ಸಂಖ್ಯೆ ಅಪಾರವಾಗಿದೆ.

'ಹಸಿವು ಎನ್ನುವುದು ಸಹ ಯುದ್ಧದ ಅಸ್ತ್ರವಾಗಿದೆ. ನಾಗರಿಕರಿಗೆ ಆಹಾರ ಮತ್ತು ನೀರು ಹಾಗೂ ಪರಿಹಾರ ಒದಗಿಸದೆ ವಂಚಿಸಲಾಗುತ್ತಿದೆ. ಮಾರುಕಟ್ಟೆ ಪ್ರದೇಶಗಳ ಮೇಲೆ ಬಾಂಬ್ ಹಾಕುವುದು ಮತ್ತು ಬೆಳೆಗಳನ್ನು ನಾಶಪಡಿಸುವ ಪರಿಸ್ಥಿತಿ ಇರುವಾಗ ಜನರು ಸುರಕ್ಷಿತವಾಗಿ ಬದುಕುವುದು ಹೇಗೆ ಸಾಧ್ಯ' ಎಂದು ಮ್ಯಾಕ್ಸ್‌ಮ್ಯಾನ್ ಪ್ರಶ್ನಿಸಿದ್ದಾರೆ.

'ಸರ್ಕಾರಗಳು ಸಂಘರ್ಷವನ್ನು ನಿಲ್ಲಿಸುವ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಕೋರಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್
Mysore
GOVIANU LUXURIA, High-end Luxury Flat at Mysore, Zoo Road, near Mysore Mall, Rera-003588, www.govianu.com. 8088330330

ಉದ್ಯೋಗಾವಕಾಶ
Domestic Helpers / Housekeeping
ಬೆಂಗಳೂರಿನಲ್ಲಿ ಮನೆ ಕೆಲಸದವರು, ಮಗು ನೋಡಿಕೊಳ್ಳುವವರು, ವಯಸ್ಸಾದವರನ್ನು ನೋಡಿಕೊಳ್ಳುವವರು ಬೇಕಾಗಿದ್ದಾರೆ. ಊಟ ವಸತಿ ಉಚಿತ. ಸಂಪರ್ಕಿಸಿ: 9686283582, 9108200185

General
WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 9980295449, 9902839010

ಬೆಂಗಳೂರಿನಲ್ಲಿರುವ ಆರ್ಯವೇದಿಕ್ ಕಂಪನಿಗೆ ಪ್ರತಿ ಜಿಲ್ಲೆಯಿಂದ ಆರ್ಯವೇದಿಕ್ ವೈದ್ಯರು, ನೇರ ಮಾರಾಟ ಪ್ರತಿನಿದಿಗಳು ಬೇಕಾಗಿದ್ದಾರೆ. ಆಕರ್ಷಕ ಸಂಬಳ. 8892501007/ 9606701007

ಬೇಕಾಗಿದ್ದಾರೆ: ಮನೆಕೆಲಸಕ್ಕೆ ಮಹಿಳೆ, ಅಡುಗೆ ಮತ್ತು ಇತರ ಕೆಲಸದಲ್ಲಿ ಅನುಭವಸ್ಥರು. ಬೆಂಗಳೂರಿನಲ್ಲಿ ಉಳಿದುಕೊಳ್ಳಲು ಸಿದ್ಧರಿರುವವರು ಸಂಪರ್ಕಿಸಿ: 9987418006/ 9535111270

Part-Time Jobs
ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted
ಒಂದ ದಿನವೇ ಕೆಲಸ (ಮಾರ್ಕೆಟಿಂಗ್‌ಅಲ್ಲ) MNC ಕಂಪನಿಗಳಿಗೆ Primary,SSLC, PUC, ITI, any Degree Pass/Fail. ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI/ PFನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ. 15,000- 86,000. 7259865221, 7204144925

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ ಸಂಪರ್ಕಿಸಿ: 7019132200, 08025300714

ಭವಿಷ್ಯ
Astrology
ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★||ಸಿಗಂದೂರು ಚೌಡೇಶ್ವರಿ||★ ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ,ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

★ಅಂಭಭವಾನಿ ಜ್ಯೋತಿಷ್ಯಾಲಯ★ ಕೊಳ್ಳೆಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್ ದೇವಿಪ್ರಸಾದ್ (ಉಚಿತ ಭವಿಷ್ಯ ಖಚಿತ ಪರಿಹಾರ)ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನದಲ್ಲಿ ಪರಿಹಾರ. 9886755306

★ಮಂತ್ರದುರ್ಗಿ ಮಾಂತ್ರಿಕರು★ ಕೇರಳ, ಕೊಳ್ಳೆಗಾಲದ ಮಂತ್ರಸಿದ್ಧ ವಾಕ್ಸಿದ್ಧಿಯಿಂದ ಸ್ತ್ರೀಪುರುಷ ವಶೀಕರಣ ಕೆಲವೇ ಗಂಟೆಗಳಲ್ಲಿ.ಫೋನಿನ ಮೂಖಾಂತರ ಶಾಶ್ವತ ಪರಿಹಾರ. (ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್) ಪಂ.ರಾಮಚಂದ್ರಭಟ್. 9008711329

ಶ್ರೀರಾಘವೇಂದ್ರ ಸ್ವಾಮಿ ಜ್ಯೋತಿಷ್ಯಾಲಯ: ಪಂಡಿತ್ ರಾಘವೇಂದ್ರ ಗುರೂಜಿ ನಿಮ್ಮ ಯಾವುದೇ ಸಮಸ್ಯೆಯಿರಲಿ 3ದಿನದಲ್ಲಿ ಫೋನಿನ ಮೂಲಕ ಪರಿಹಾರ ಶತಸಿದ್ಧ. ಮಂತ್ರಾಲಯ 7760909072

ಸಮಾಜಸೇವೆ
Old Age Home
ವೃದ್ಧಾಶ್ರಮ: ಮಹಿಳಾ ವೃದ್ಧರು ಕಡಿಮೆ ವೆಚ್ಚದಲ್ಲಿ ಶಾಂತಿಯಿಂದ ಜೀವಿಸಲು ಅನುಕೂಲಕರವಾದ ಆಶ್ರಮ. ಸೇರಲು ಬಯಸುವವರು ಸಂಪರ್ಕಿಸಿ: 8147217487

ಪ್ರವಾಸ
Travel
★ಶ್ರೇಯಸ್ಟೂರ್ಸ್★ 16.07.2021 5ದಿನಗಳು 8000 ಅಹೋಬಲಂ ನವನರಸಿಂಹ, ಮಹಾನಂದಿ,ಶ್ರೀಶೈಲಂ, ಮಂತ್ರಾಲಯ,ಯಾಗಂಟಿ, ಬೇಲಂಗುಹೆ.21.07.2021 7ದಿನಗಳು 15000/ ವಿಜಯವಾಡ,ಪಂಚರಾಮ, ಮಂಗಳಗಿರಿ,ಭದ್ರಾಚಲಂ, ಪೀಠಾಪುರಂ,ಅನ್ನಾವರಂ, ವಾಸವಿಪೆನುಗೊಂಡ, ವಿಶಾಖಪಟ್ಟಣ,ಅರಕು, ರಾಮಲಯಂ.21.07.2021 5ದಿನಗಳು 8000 ಹೊರನಾಡು, ಶೃಂಗೇರಿ,ಕಮಲಶಿಲೆ,ಧರ್ಮಸ್ಥಳ, ಕುಕ್ಕೆ,ಕೊಲ್ಲೂರು,ಸಿರ್ಸಿ,ಬನವಾಸಿ, ಕಾಂತೇಶ,ಶಾಂತೇಶ,ಬ್ರಾಂತೇಶ. 9743351212/ 9902050065/ 9206979202

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಹೆಸರು ಬದಲಾವಣೆ
BOOK YOUR NAME CHANGE AD IN PRAJAVANI ALL KARNATAKA ALL DAY
CHANGE OF NAME @ 40/-* Per Words
condition apply*
ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ:
9880856233 | 9731810277
9901641752 | 9845114560 | 9886213331
080- 45557163 | 45557164

ಸಂಕ್ಷಿಪ್ತ ಸುದ್ದಿ

‘12–18 ವಯಸ್ಸಿನವರಿಗೆ ಸೆಪ್ಟೆಂಬರ್‌ನಿಂದ ಝೈಡಸ್ ಲಸಿಕೆ’

ನವದೆಹಲಿ: ಝೈಡಸ್ ಕ್ಯಾಡಿಲಾ ಕೋವಿಡ್ ಲಸಿಕೆಯು ಸೆಪ್ಟೆಂಬರ್ ವೇಳೆಗೆ 12ರಿಂದ 18 ವಯಸ್ಸಿನವರಿಗೆ ಲಭ್ಯವಾಗಲಿದೆ ಎಂದು ಲಸಿಕೆ ನಿರ್ವಹಣೆಗೆ ಸಂಬಂಧಿಸಿದ ರಾಷ್ಟ್ರೀಯ ತಜ್ಞರ ಸಮಿತಿ ಮುಖ್ಯಸ್ಥ ಡಾ. ಎನ್.ಕೆ. ಆರೋರಾ ತಿಳಿಸಿದ್ದಾರೆ.

ಝೈಡಸ್ ಕ್ಯಾಡಿಲಾ ಲಸಿಕೆಯ ತುರ್ತು ಬಳಕೆಗೆ ಕೆಲವೇ ವಾರಗಳಲ್ಲಿ ಅನುಮೋದನೆ ದೊರೆಯಲಿದೆ ಎಂದು ಅವರು ‘ಎನ್‌ಡಿಟಿವಿ’ಗೆ ತಿಳಿಸಿದ್ದಾರೆ.

ಸೆಪ್ಟೆಂಬರ್ ಅಂತ್ಯದ ವೇಳೆಗೆ 12ರಿಂದ 18 ವಯಸ್ಸಿನವರಿಗೆ ಕೋವ್ಯಾಕ್ಸಿನ್ ಲಸಿಕೆ ಲಭ್ಯವಾಗುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ.

ವಾಯುಮಾಲಿನ್ಯ: ಅರ್ಜಿ ಹಿಂಪಡೆದ ದೆಹಲಿ ಸರ್ಕಾರ

ನವದೆಹಲಿ (ಪಿಟಿಐ): ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಹಾನಿಕಾರಕ ಹೊಗೆ ಹೊರಸೂಸುವಿಕೆ ತಗ್ಗಿಸುವ ತಂತ್ರಜ್ಞಾನ ಅಳವಡಿಸುವವರೆಗೆ ಸ್ಥಾವರಗಳ ಕಾರ್ಯಾಚರಣೆ ನಿಲ್ಲಿಸುವಂತೆ ಕೋರಿ ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಸರ್ಕಾರ ಶುಕ್ರವಾರ ಹಿಂಪಡೆದಿದೆ.

ಉತ್ತರಪ್ರದೇಶ, ಪಂಜಾಬ್ ಮತ್ತು ಹರಿಯಾಣ ರಾಜ್ಯಗಳಲ್ಲಿರುವ ಕಲ್ಲಿದ್ದಲಿನ 10 ಉಷ್ಣ ವಿದ್ಯುತ್ ಸ್ಥಾವರಗಳಿಂದ ದೇಶದ ರಾಜಧಾನಿ ದೆಹಲಿಯಲ್ಲಿ ಪರಿಸರ ಮಾಲಿನ್ಯ ಹೆಚ್ಚುತ್ತಿದೆ. ಈ ಸ್ಥಾವರಗಳು ‘ಫ್ಲೂ ಗ್ಯಾಸ್ ಡೆಸಲ್ಫರೈಸೇಷನ್’ ತಂತ್ರಜ್ಞಾನ ಅಳವಡಿಸಿಕೊಳ್ಳುವವರೆಗೆ ಸ್ಥಾವರಗಳ ಕಾರ್ಯಾಚರಣೆ ಸ್ಥಗಿತಗೊಳಿಸಲು ನಿರ್ದೇಶನ ನೀಡುವಂತೆ ಕೋರಿ ದೆಹಲಿ ಸರ್ಕಾರ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿತ್ತು.

ಎನ್‌ಬಿಎ ವಿರುದ್ಧ ಕ್ರಮ ಬೇಡ: ಹೈಕೋರ್ಟ್

ಕೊಚ್ಚಿ (ಪಿಟಿಐ): ಹೊಸ ಮಾಹಿತಿ ತಂತ್ರಜ್ಞಾನ ಕಾನೂನುಗಳನ್ನು ಅಳವಡಿಸಿಕೊಳ್ಳದ ಸುದ್ದಿ ಪ್ರಸಾರಕ ಸಂಘಟನೆಗಳ (ಎನ್‌ಬಿಎ) ಸದಸ್ಯರ ವಿರುದ್ಧ ಯಾವುದೇ ರೀತಿಯ ಕಠಿಣ ಕ್ರಮ ಕೈಗೊಳ್ಳದಂತೆ ಕೇರಳ ಹೈಕೋರ್ಟ್ ಶುಕ್ರವಾರ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದೆ.ನ್ಯಾಯಮೂರ್ತಿ ಪಿ.ಬಿ. ಸುರೇಶ್ ಕುಮಾರ್ ಅವರು ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿದ್ದಾರೆ.

ಬ್ರಿಟನ್ ಸಂಶೋಧಕರ ಅಧ್ಯಯನ: ವರದಿಯನ್ನು ಡಬ್ಲ್ಯೂಎಚ್‌ಒಗೆ ಸಲ್ಲಿಸಲು ನಿರ್ಧಾರ

ಕೋವಿಡ್: ಮಕ್ಕಳಿಗೆ ಅಪಾಯ ಕಡಿಮೆ

ಲಂಡನ್ (ಪಿಟಿಐ): ಕೋವಿಡ್‌–19ನಿಂದ ತೀವ್ರ ಅನಾರೋಗ್ಯಕ್ಕೆ ಒಳಗಾಗುವುದು ಮತ್ತು ಸಾವು ಸಂಭವಿಸುವ ಸಾಧ್ಯತೆ ಮಕ್ಕಳಲ್ಲಿ ಹಾಗೂ ಹದಿಹರೆಯದವರಲ್ಲಿ ಅತಿ ಕಡಿಮೆ ಎಂದು ಬ್ರಿಟನ್‌ನಲ್ಲಿ ಕೈಗೊಂಡ ಅಧ್ಯಯನ ವರದಿ ತಿಳಿಸಿದೆ.

ಯುನಿವರ್ಸಿಟಿ ಕಾಲೇಜ್ ಲಂಡನ್ (ಯುಸಿಎಲ್), ಯುನಿವರ್ಸಿಟಿ ಆಫ್ ಬ್ರಿಸ್ಟಾಲ್, ಯುನಿವರ್ಸಿಟಿ ಆಫ್ ಯಾರ್ಕ್ ಮತ್ತು ಯುನಿವರ್ಸಿಟಿ ಆಫ್ ಲಿವರ್‌ಪೂಲ್‌ನ ಸಂಶೋಧಕರು ಈ ಬಗ್ಗೆ ಅಧ್ಯಯನ ನಡೆಸಿದ್ದಾರೆ.

ವಿವಿಧ ಕಾಯಿಲೆಗಳಿಂದ ಬಳಲುತ್ತಿರುವ ಮತ್ತು ತೀವ್ರ ಅಂಗವಿಕಲತೆಗೆ ಒಳಗಾಗಿರುವ ಯುವಕರು, ಕೋವಿಡ್‌–19ನಿಂದ ಅನಾರೋಗ್ಯಕ್ಕೆ ಒಳಗಾಗುವ ಸಾಧ್ಯತೆ ಇದೆ ಎಂದು ಸಂಶೋಧಕರು ತಿಳಿಸಿದ್ದಾರೆ.

‘ಮಧುಮೇಹ, ಅಸ್ತಮಾ ಮತ್ತು ಹೃದ್ರೋಗದ ತೊಂದರೆ ಎದುರಿಸುತ್ತಿರುವ ಯುವಕರು ಹೆಚ್ಚು ಅಪಾಯಕ್ಕೆ ಒಳಗಾಗುವ ಸಾಧ್ಯತೆ ಇದೆ’ ಎಂದು ಯುಸಿಎಲ್‌ನ ಜೋಸೆಫ್ ವಾರ್ಡ್ ತಿಳಿಸಿದ್ದಾರೆ.

ಸಂಶೋಧನೆಯ ಪ್ರಾಥಮಿಕ ವರದಿಗಳನ್ನು ಬ್ರಿಟನ್‌ನ ಲಸಿಕೆ ಕುರಿತಾದ ಜಂಟಿ ಸಮಿತಿ ಮತ್ತು ವಿಶ್ವ ಆರೋಗ್ಯ ಸಂಸ್ಥೆಗೆ (ಡಬ್ಲ್ಯೂಎಚ್‌ಒ) ಸಲ್ಲಿಸಲು ನಿರ್ಧರಿಸಲಾಗಿದೆ.

‘ಕಪ್ಪಾ’ ತಳಿ: ಉ.ಪ್ರದೇಶದಲ್ಲಿ 2 ಪ್ರಕರಣ

ಲಖನೌ (ಪಿಟಿಐ) : ಕೋವಿಡ್ ಸೋಂಕಿನ ‘ಕಪ್ಪಾ’ ರೂಪಾಂತರಿತ ತಳಿಯ ಎರಡು ಪ್ರಕರಣಗಳು ಉತ್ತರಪ್ರದೇಶದಲ್ಲಿ ಪತ್ತೆಯಾಗಿವೆ ಎಂದು ಅಧಿಕೃತ ಹೇಳಿಕೆ ತಿಳಿಸಿದೆ.

ಇಲ್ಲಿನ ಕಿಂಗ್ ಜಾರ್ಜ್ ಮೆಡಿಕಲ್ ಕಾಲೇಜಿನಲ್ಲಿ ಕಳೆದ ಕೆಲವು ದಿನಗಳಿಂದ 109 ಮಾದರಿಗಳ ಪರೀಕ್ಷೆ ನಡೆದಿತ್ತು. ಈ ಪೈಕಿ 107ರಲ್ಲಿ ಡೆಲ್ಟಾ ಪ್ಲಸ್ ಸೋಂಕು, 2ರಲ್ಲಿ ಕಪ್ಪಾ ಸೋಂಕು ಪತ್ತೆಯಾಗಿದೆ ಎಂದು ತಿಳಿಸಿದೆ.

ಈ ಪ್ರಕರಣಗಳು ರಾಜ್ಯಕ್ಕೆ ಹೊಸದಲ್ಲ. ಹೊಸ ಸೋಂಕು ಪ್ರಕರಣಗಳ ಹಿನ್ನೆಲೆಯಲ್ಲಿ ತಪಾಸಣೆ ಕಾರ್ಯವನ್ನು ಇನ್ನಷ್ಟು ಚುರುಕುಗೊಳಿಸಲಾಗಿದೆ. ಸದ್ಯ, ನಿತ್ಯದ ಪ್ರಕರಣ ದೃಢಪಡುವ ಸರಾಸರಿ ಪ್ರಮಾಣ ಶೇ 0.04ರಷ್ಟಿದೆ ಎಂದು ತಿಳಿಸಿದೆ.

ಕಪ್ಪಾ ರೂಪಾಂತರಿತ ತಳಿ ಕುರಿತ ಪ್ರಶ್ನೆಗೆ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಆರೋಗ್ಯ) ಅಮಿತ್ ಮೋಹನ್ ಪ್ರಸಾದ್ ಅವರು, ಈ ಬಗ್ಗೆ ಆತಂಕಕ್ಕೆ ಅಗತ್ಯವಿಲ್ಲ. ಇದಕ್ಕೆ ಚಿಕಿತ್ಸೆ ಲಭ್ಯವಿದೆ ಎಂದು ಪ್ರತಿಕ್ರಿಯಿಸಿದರು.

ದೇಶದಲ್ಲಿ 43,393 ಹೊಸ ಪ್ರಕರಣ ಪತ್ತೆ

ನವದೆಹಲಿ (ಪಿಟಿಐ): ‘ದೇಶದಲ್ಲಿ 43,393 ಹೊಸ ಕೋವಿಡ್ ಪ್ರಕರಣಗಳು ವರದಿಯಾಗಿದ್ದು, ಇದರೊಂದಿಗೆ ಒಟ್ಟು ಪ್ರಕರಣಗಳ ಸಂಖ್ಯೆ 3,07,52,950ಕ್ಕೆ ಏರಿಕೆಯಾಗಿದೆ. ಆದರೆ, ಸಕ್ರಿಯ ಪ್ರಕರಣಗಳ ಸಂಖ್ಯೆ 4,58,727ಕ್ಕೆ ಇಳಿಕೆಯಾಗಿದೆ’ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ತಿಳಿಸಿದೆ.

ಶುಕ್ರವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಗಳಲ್ಲಿ 911 ಮಂದಿ ಮೃತಪಟ್ಟಿದ್ದಾರೆ. ಈ ಮೂಲಕ ಒಟ್ಟು ಮೃತರ ಸಂಖ್ಯೆ 4,05,939ಕ್ಕೆ ಏರಿದೆ.

‘ಗುರುವಾರ 17,90,708 ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದ್ದು, ದೇಶದಲ್ಲಿ ಈವರೆಗೆ ಒಟ್ಟು 42,70,16,605 ಪರೀಕ್ಷೆಗಳನ್ನು ಕೈಗೊಳ್ಳಲಾಗಿದೆ. ದೈನಂದಿನ ಸೋಂಕು ದೃಢ ಪ್ರಮಾಣವು ಶೇಕಡ 2.42ರಷ್ಟಿದೆ. ಸತತ 18ನೇ ದಿನ ಸೋಂಕು ದೃಢ ಪ್ರಮಾಣವು ಶೇಕಡ 3ಕ್ಕಿಂತ ಕಡಿಮೆಯಿದೆ’ ಎಂದು ಸಚಿವಾಲಯವು ತಿಳಿಸಿದೆ.

‘ಲ್ಯಾಂಬ್ಡಾ: ದೇಶದಲ್ಲಿ ಯಾವುದೇ ಪ್ರಕರಣವಿಲ್ಲ’

ನವದೆಹಲಿ (ಪಿಟಿಐ): ಭಾರತದಲ್ಲಿ ಈವರೆಗೆ ಕೊರೊನಾ ವೈರಸ್‌ನ ಹೊಸ ರೂಪಾಂತರಿತ ತಳಿ ಸಾರ್ಸ್‌–ಕೋವಿಡ್‌–2 ಲ್ಯಾಂಬ್ಡಾ ಸೋಂಕು ಪ್ರಕರಣಗಳು ಕಂಡುಬಂದಿಲ್ಲ ಎಂದು ಕೇಂದ್ರ ಸರ್ಕಾರ ಶುಕ್ರವಾರ ತಿಳಿಸಿದೆ.

‘ಈಗಾಗಲೇ 25 ದೇಶಗಳಲ್ಲಿ ಲ್ಯಾಂಬ್ಡಾ ವೈರಸ್ ಕಾಣಿಸಿಕೊಂಡಿದೆ’ ಎಂದು ಆರೋಗ್ಯ ಸಚಿವಾಲಯದ ಜಂಟಿ ಕಾರ್ಯದರ್ಶಿ ಲವ ಅಗರ್‌ವಾಲ್ ಹೇಳಿದರು.

‘ಈ ಕುರಿತು ಭಾರತದ ಸಾರ್ಸ್ ಕೋವ್‌–2 ಜೆನೆಟಿಕ್ಸ್ ಕಾನ್ಸೊರ್ಟಿಯಮ್ (ಐಎನ್‌ಎಸ್‌ಎಸಿಒಜಿ) ಮೇಲ್ವಿಚಾರಣೆ ನಡೆಸುತ್ತಿದ್ದು, ಈ ಸೋಂಕಿನಿಂದ ಉಂಟಾಗುವ ಪರಿಣಾಮಗಳ ಕುರಿತು ಸೂಕ್ಷ್ಮವಾಗಿ ಗಮನಹರಿಸುತ್ತಿದೆ’ ಎಂದರು.

ಜಯದೇವ ಹೃದ್ರೋಗ ಸಂಸ್ಥೆಯಿಂದ ಶೀಘ್ರದಲ್ಲೇ ಪ್ರಾರಂಭ

ಲಸಿಕೆ: ಪ್ರತಿಕಾಯದ ಬಗ್ಗೆ ಅಧ್ಯಯನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಸಿಕೆ ಮೊದಲ ಡೋಸ್ ಪಡೆದ 60 ದಿನಗಳ ಬಳಿಕ ವ್ಯಕ್ತಿಯ ದೇಹದಲ್ಲಿ ಎಷ್ಟು ಪ್ರಮಾಣದಲ್ಲಿ ಪ್ರತಿಕಾಯ (ಆ್ಯಂಟಿಬಾಡಿ) ವೃದ್ಧಿಯಾಗಿರುತ್ತದೆ ಎನ್ನುವುದರ ಬಗ್ಗೆ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಅಧ್ಯಯನ ನಡೆಸಲು ಮುಂದಾಗಿದೆ.

ಕೋವಿಡ್ ಲಸಿಕೆಯು ಎಷ್ಟು ದಿನಗಳವರೆಗೆ ವ್ಯಕ್ತಿಯನ್ನು ರಕ್ಷಿಸುವ ಸಾಮರ್ಥ್ಯ ಹೊಂದಿದೆ ಎನ್ನುವುದರ ಬಗ್ಗೆ ಖಚಿತತೆ ಇಲ್ಲ. ಅದೇ ರೀತಿ, ದೇಹದಲ್ಲಿ ಎಷ್ಟು ಪ್ರಮಾಣದಲ್ಲಿ ಪ್ರತಿಕಾಯಗಳು ವೃದ್ಧಿಯಾಗಿರುತ್ತವೆ ಎನ್ನುವುದರ ಬಗ್ಗೆ ಲಸಿಕೆ ತಯಾರಿಕಾ ಕಂಪನಿಗಳು ನಿಖರವಾಗಿ ಹೇಳಿಲ್ಲ. ಹಾಗಾಗಿ, ಜಯದೇವ ಹೃದ್ರೋಗ ಸಂಸ್ಥೆಯು ಈ ಬಗ್ಗೆ ಅಧ್ಯಯನ ನಡೆಸಲು ಯೋಜನೆ ರೂಪಿಸಿದೆ.

ಸಂಸ್ಥೆಯು ಕಳೆದ ಮೇ ತಿಂಗಳಲ್ಲಿ ಎರಡೂ ಡೋಸ್ ಲಸಿಕೆ ಪಡೆದ ವೈದ್ಯಕೀಯ ಸಿಬ್ಬಂದಿಯನ್ನು ಅಧ್ಯಯನಕ್ಕೆ ಒಳಪಡಿಸಿತ್ತು. ಆಗ ಶೇ 77ರಷ್ಟು ಸಿಬ್ಬಂದಿಯಲ್ಲಿ ಉತ್ತಮವಾಗಿ ಪ್ರತಿಕಾಯ ವೃದ್ಧಿಯಾಗಿರುವುದು ತಿಳಿದು ಬಂದಿತ್ತು. ಈ ಅಧ್ಯಯನಕ್ಕೆ ಒಳಪಟ್ಟ 140 ಸಿಬ್ಬಂದಿ ನಾಲ್ಕುವಾರಗಳ ಅಂತರದಲ್ಲಿ ಎರಡು ಡೋಸ್ ‘ಕೋವಿಶೀಲ್ಡ್’ ಲಸಿಕೆ ಪಡೆದುಕೊಂಡಿದ್ದರು. ಇವರಲ್ಲಿ 71 ಮಂದಿ ಪುರುಷರು ಮತ್ತು 69 ಮಂದಿ ಮಹಿಳೆಯರಾಗಿದ್ದರು. ವೈದ್ಯರು ಕೂಡ ಈ ಅಧ್ಯಯನಕ್ಕೆ ಒಳಪಟ್ಟಿದ್ದರು.

ಈಗ ‘ಕೋವಿಶೀಲ್ಡ್’ ಲಸಿಕೆಯ ಎರಡು ಡೋಸ್ ನಡುವಿನ ಅಂತರವನ್ನು 12ರಿಂದ 16 ವಾರಗಳಿಗೆ ನಿಗದಿಪಡಿಸಲಾಗಿದೆ. ಈ ಅಂತರದಲ್ಲಿ ಉತ್ತಮವಾಗಿ ಪ್ರತಿಕಾಯ ವೃದ್ಧಿಯಾಗುತ್ತದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ. ಹೀಗಾಗಿ, ಜಯದೇವ ಹೃದ್ರೋಗ ಸಂಸ್ಥೆಯು ವಿವಿಧ ವಯೋಮಾನದವರನ್ನು ಮೊದಲ ಡೋಸ್ ಪಡೆದ 60 ದಿನಗಳ ಬಳಿಕ ಅಧ್ಯಯನಕ್ಕೆ ಒಳಪಡಿಸುತ್ತಿದೆ.

‘ಮೊದಲ ಡೋಸ್ ಲಸಿಕೆ ಪಡೆದವರಲ್ಲಿ ಪ್ರತಿಕಾಯ ಯಾವ ಪ್ರಮಾಣದಲ್ಲಿ ಅಭಿವೃದ್ಧಿಯಾಗಲಿದೆ ಎನ್ನುವುದರ ಬಗ್ಗೆ ಅಧ್ಯಯನ ನಡೆಸಲಾಗುವುದು. ಈಗಾಗಲೇ ಲಸಿಕೆ ಪಡೆದ 18ರಿಂದ 44 ವರ್ಷದ ವಯೋಮಾನದವರು ಮೊದಲ ಡೋಸ್ ಪಡೆದು 60 ದಿನಗಳು ಆಗದ ಕಾರಣ ಅಧ್ಯಯನ ಪ್ರಾರಂಭಿಸಿಲ್ಲ. ಈ ವಯೋಮಾನದವರನ್ನು ಕೂಡ ಅಧ್ಯಯನಕ್ಕೆ ಒಳಪಡಿಸಬೇಕಾದ್ದರಿಂದ ಇನ್ನಷ್ಟು ದಿನ ಕಾದು, 60 ದಿನಗಳಾದ ಬಳಿಕ ಅಧ್ಯಯನ ನಡೆಸಲಾಗುತ್ತದೆ’ ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ದೀರ್ಘಾವಧಿ ಪರಿಣಾಮ: ಅಧ್ಯಯನ

ಡಾ. ಸಿ.ಎನ್ ಮಂಜುನಾಥ್

‘ಕೋವಿಡ್ ಲಸಿಕೆಯ ದೀರ್ಘಾವಧಿ ಪರಿಣಾಮದ ಬಗ್ಗೆ ಕೂಡ ಮುಂದಿನ ದಿನಗಳಲ್ಲಿ ಅಧ್ಯಯನ ನಡೆಸಲಾಗುತ್ತದೆ. ಎರಡೂ ಡೋಸ್ ಲಸಿಕೆ ಪಡೆದ ಬಳಿಕ ವ್ಯಕ್ತಿಯಲ್ಲಿ ಯಾವ ಪ್ರಮಾಣದಲ್ಲಿ ರೋಗನಿರೋಧಕ ಶಕ್ತಿ ವೃದ್ಧಿಯಾಗಿರುತ್ತದೆ ಎಂದು ತಿಳಿಯುವುದು ಈ ಅಧ್ಯಯನದ ಉದ್ದೇಶವಾಗಿದೆ. ಎರಡೂ ಡೋಸ್ ಲಸಿಕೆ ಪಡೆದ ಬಳಿಕ ಮೂರನೇ ಡೋಸ್ ಲಸಿಕೆ ಪಡೆಯಬೇಕಾಗುತ್ತದೆಯೇ ಅಥವಾ ಎರಡನೇ ಡೋಸ್ ಲಸಿಕೆಯು ದೀರ್ಘಾವಧಿ ಕೆಲಸ ಮಾಡಲಿದೆಯೇ ಎನ್ನುವುದನ್ನು ತಿಳಿಯಬೇಕಿದೆ. ಹೀಗಾಗಿ, ಎರಡೂ ಡೋಸ್ ಪಡೆದವರನ್ನು ಒಂಬತ್ತು ತಿಂಗಳ ಬಳಿಕ ಅಧ್ಯಯನಕ್ಕೆ ಒಳಪಡಿಸುತ್ತೇವೆ’ ಎಂದು ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

ಕೇರಳ: 14ಕ್ಕೆ ಏರಿದ ಝಿಕಾ ವೈರಸ್ ಸೋಂಕಿತರ ಸಂಖ್ಯೆ

ತಿರುವನಂತಪುರ (ಪಿಟಿಐ): ಕೇರಳದಲ್ಲಿ 14 ಮಂದಿಗೆ ಝಿಕಾ ವೈರಸ್ ಸೋಂಕು ತಗುಲಿರುವುದು ದೃಢಪಟ್ಟಿದೆ.

ಇತ್ತೀಚೆಗೆ ಗರ್ಭಿಣಿಯೊಬ್ಬರಲ್ಲಿ ಸೋಂಕು ದೃಢಪಟ್ಟಿತ್ತು. ಇದೀಗ, ಇನ್ನೂ 13 ಮಂದಿಗೆ ಸೋಂಕು ತಗುಲಿರುವುದನ್ನು ಪುಣೆಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ (ಎನ್‌ಐವಿ) ಖಚಿತಪಡಿಸಿದೆ.

ಈ ಹಿನ್ನೆಲೆಯಲ್ಲಿ ಕೇರಳ ರಾಜ್ಯದಲ್ಲಿ ಹೈ ಅಲರ್ಟ್ ಘೋಷಿಸಲಾಗಿದೆ. ಗುರುವಾರ, 24 ವರ್ಷದ ಗರ್ಭಿಣಿಗೆ ಸೋಂಕು ತಗುಲಿರುವುದು ದೃಢಪಡುವ ಮೂಲಕ ಕೇರಳದಲ್ಲಿ ಮೊದಲ ಪ್ರಕರಣ ದಾಖಲಾಗಿತ್ತು. ಆ ಬಳಿಕ 2 ವೈದ್ಯರು ಸೇರಿ 13 ಮಂದಿಯ ಪ್ರಯೋಗಾಲಯದ ಮಾದರಿಯನ್ನು ಪುಣೆಯ ಎನ್‌ಐವಿಗೆ ಕಳುಹಿಸಲಾಗಿತ್ತು ಎಂದು ಕೇರಳ ಸರ್ಕಾರ ತಿಳಿಸಿದೆ.

ಅಂತಿಮ ನಮನ...

ಜಮ್ಮು–ಕಾಶ್ಮೀರದ ರಜೌರಿ ಜಿಲ್ಲೆಯಲ್ಲಿ ಉಗ್ರರೊಂದಿಗೆ ಗುರುವಾರ ನಡೆದ ಗುಂಡಿನ ಕಾಳಗದಲ್ಲಿ ಹುತಾತ್ಮರಾದ ಯೋಧ ಮರುಪ್ರೋಲು ಜಸ್ವಂತ್ ಕುಮಾರ್ ರೆಡ್ಡಿ ಅವರ ಪಾರ್ಥಿವ ಶರೀರಕ್ಕೆ ಹೈದರಾಬಾದ್‌ನ ಹಕೀಂಪೇಟ್‌ನಲ್ಲಿರುವ ವಾಯುನೆಲೆಯಲ್ಲಿ ಗೌರವ ಸಲ್ಲಿಸಲಾಯಿತು –ಪಿಟಿಐ ಚಿತ್ರ

ಕೋವಿಡ್ ನಿರ್ವಹಣೆ: ಚರ್ಚೆ ಸಾಧ್ಯತೆ

ಚಿತ್ರಕೂಟ: ಆರ್‌ಎಸ್‌ಎಸ್ ಪ್ರಚಾರಕರ ಸಮಾವೇಶ ಆರಂಭ

ಪ್ರಜಾವಾಣಿ ವಾರ್ತೆ

ಚಿತ್ರಕೂಟ (ಮಧ್ಯಪ್ರದೇಶ): ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ‘ಪ್ರಚಾರಕ’ರ ನಾಲ್ಕು ದಿನಗಳ ಸಮಾವೇಶ ಶುಕ್ರವಾರ ಇಲ್ಲಿ ಆರಂಭವಾಗಿದೆ.

ಮುಂದಿನ ವರ್ಷ ಆರು ರಾಜ್ಯಗಳ ವಿಧಾನಸಭೆಗಳಿಗೆ ನಡೆಯಲಿರುವ ಚುನಾವಣೆಗೆ ಬಿಜೆಪಿ ಸಿದ್ಧತೆ ನಡೆಸುತ್ತಿದೆ. ಇನ್ನೊಂದೆಡೆ, ದೇಶದಲ್ಲಿ ಕಾಣಿಸಿಕೊಂಡಿದ್ದ ಕೋವಿಡ್–19 ಪಿಡುಗಿನ 2ನೇ ಅಲೆಯ ನಿರ್ವಹಣೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ವಿರುದ್ಧ ಜನರಿಂದ ಅಸಮಾಧಾನವೂ ವ್ಯಕ್ತವಾಗಿದೆ. ಈ ವಿದ್ಯಮಾನಗಳ ನೆರಳಲ್ಲಿ ನಡೆಯುತ್ತಿರುವ ಆರ್‌ಎಸ್‌ಎಸ್‌ನ ಈ ಸಮಾವೇಶಕ್ಕೆ ಮಹತ್ವ ಬಂದಿದೆ.

ಜುಲೈ 13ರ ವರೆಗೆ ಸಮಾವೇಶ ನಡೆಯಲಿದೆ. ಇದು ಆನ್‌ಲೈನ್ ಹಾಗೂ ಭೌತಿಕವಾಗಿಯೂ ನಡೆಯಲಿದೆ ಎಂದು ಆರ್‌ಎಸ್‌ಎಸ್ ತಿಳಿಸಿದೆ.

ಇತ್ತೀಚೆಗೆ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ್ದ ಸಂಘಟನೆಯ ಮುಖ್ಯಸ್ಥ ಮೋಹನ್ ಭಾಗವತ್ ಅವರು, ಮುಸ್ಲಿಮರಿಗೆ ಪಾಕಿಸ್ತಾನಕ್ಕೆ ಹೋಗುವಂತೆ ಹೇಳುವ ವ್ಯಕ್ತಿ ಹಿಂದೂ ಅಲ್ಲ ಎಂದಿದ್ದರು. ಗೋ ರಕ್ಷಣೆ ಹೆಸರಿನಲ್ಲಿ ವ್ಯಕ್ತಿಯ ಹತ್ಯೆ ಮಾಡುವವರು ಹಿಂದುತ್ವದ ವಿರೋಧಿಗಳು ಎಂದು ಹೇಳಿದ್ದು ಸಹ ಸಾಕಷ್ಟು ಚರ್ಚೆಗೆ ಕಾರಣವಾಗಿತ್ತು.

ಈ ಸಮಾವೇಶದಲ್ಲಿ ಭಾಗವತ್ ಅವರ ಈ ಹೇಳಿಕೆಗಳ ಕುರಿತು ವಿಸ್ತೃತ ಚರ್ಚೆ ನಡೆಯುವ ಸಾಧ್ಯತೆಗಳಿವೆ ಎನ್ನಲಾಗುತ್ತಿದೆ.

‘ಕೋವಿಡ್ ಪಿಡುಗಿನ ಕಾರಣ ಚಿತ್ರಕೂಟದಲ್ಲಿ ಕಳೆದ ವರ್ಷ ಸಮಾವೇಶ ನಡೆಯಲಿಲ್ಲ. ಈ ವರ್ಷ ಇದೇ ಊರಿನಲ್ಲಿ ನಡೆಸಲಾಗುತ್ತಿದೆ’ ಎಂದು ಆರ್‌ಎಸ್‌ಎಸ್‌ನ ಪ್ರಚಾರ ವಿಭಾಗದ ರಾಷ್ಟ್ರೀಯ ಮುಖ್ಯಸ್ಥ ಸುನೀಲ್ ಅಂಬೇಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಟ್ವಿಟರ್ ಜತೆ ಜಟಾಪಟಿ: ‘ಕೂ’ಗೆ ಮಣೆ

ನೂತನ ಐಟಿ ನಿಯಮಗಳಿಗೆ ಸಂಬಂಧಿಸಿ ಸಾಮಾಜಿಕ ಮಾಧ್ಯಮ ಟ್ವಿಟರ್ ಹಾಗೂ ಕೇಂದ್ರ ಸರ್ಕಾರ ನಡುವೆ ಕೆಲ ದಿನಗಳಿಂದ ಜಟಾಪಟಿ ನಡೆಯುತ್ತಿದೆ. ಈ ಬೆಳವಣಿಗೆಯ ನಡುವೆಯೇ ದೇಶೀಯ ಸಾಮಾಜಿಕ ಮಾಧ್ಯಮವಾದ ‘ಕೂ’ಗೆ ಆರ್‌ಎಸ್‌ಎಸ್ ಶುಕ್ರವಾರ ಮಣೆ ಹಾಕಿದೆ.

‘ಆರ್‌ಎಸ್‌ಎಸ್ ಹಾಗೂ ಬಿಜೆಪಿಯ ಅನೇಕ ಮುಖಂಡರು ‘ಕೂ’ ನಲ್ಲಿ ಖಾತೆ ತೆರೆದಿದ್ದು, ತನ್ನ ಆ್ಯಪ್ ಮೂಲಕ ಜನರೊಂದಿಗೆ ಸಂವಹನ ಆರಂಭಿಸಿದ್ದಾರೆ’ ಎಂದು ಕಂಪನಿ ಹೇಳಿಕೆಯಲ್ಲಿ ತಿಳಿಸಿದೆ.

ಪ್ರಜಾವಾಣಿ DH (DECCAN HERALD) ಕೋವಿಡ್ ಪರಿಹಾರ ನಿಧಿ

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ಆರ್.ರಮೇಶ್,** ನಂ. 32, 2ನೇ ಅಡ್ಡರಸ್ತೆ, 10ನೇ ಮುಖ್ಯರಸ್ತೆ, ಇಂದಿರಾನಗರ, 2ನೇ ಹಂತ,ಬೆಂಗಳೂರು	20,000
2	**ವೆಂಕಟೇಶ ನಾಯಕ್,** ನಂ.206, 6ನೇ ಎ ಮುಖ್ಯರಸ್ತೆ, 2ನೇ ಬ್ಲಾಕ್, ಕಲ್ಯಾಣನಗರ, ಎಚ್‌ಆರ್‌ಬಿಆರ್ ಲೇಔಟ್, 2ನೇ ಹಂತ, ಬೆಂಗಳೂರು	20,000
3	**ಜಿ.ವಿ.ಕೃಷ್ಣಪ್ರಸಾದ್,** 9ನೇ ಮುಖ್ಯರಸ್ತೆ, ಪೊಲೀಸ್ ಸ್ಟೇಷನ್ ಸಮೀಪ, ಬನಶಂಕರಿ 2ನೇ ಹಂತ, ಬೆಂಗಳೂರು	10,001
4	**ಕೆಂಪಹೊನ್ನಯ್ಯ,** ನಂ.28, 3ನೇ ಮುಖ್ಯರಸ್ತೆ, ಮಾನಸ ಲೇಔಟ್, ಕೆಂಗೇರಿ ಉಪನಗರ, ಕೆಂಗೇರಿ, ಬೆಂಗಳೂರು	10,000
5	**ಅಲೆಕ್ಸಾಂಡರ್ ಜಾರ್ಜ್,** ಬಿ10, ಆಫೀಸರ್ಸ್ ಕಾಲೊನಿ, ಟೆಕ್ನೊಮಿನ್ ಕನ್‌ಸ್ಟ್ರಕ್ಷನ್ ಲಿಮಿಟೆಡ್, ಹಟ್ಟಿ ಪೋಸ್ಟ್, ರಾಯಚೂರು	10,000
6	**ಗಿರಿಜಾಂಬಾ ಎಚ್.,** ನಂ. 222, 14ನೇ ಮುಖ್ಯರಸ್ತೆ, ಬನಶಂಕರಿ 1ನೇ ಹಂತ, 2ನೇ ಬ್ಲಾಕ್, ಬೆಂಗಳೂರು	10,000
7	**ಗೌರಿ ಶೇಷಾದ್ರಿ,** ಉತ್ತನಹಳ್ಳಿ, ಚಿಕ್ಕಜಾಲ ಪೋಸ್ಟ್, ಬೆಂಗಳೂರು	10,000
8	**ಎಂ.ವಿ.ಮುರಳೀಧರ್,** ನಂ.413, ಅಹಲ್ಯಾ, 9ನೇ ಅಡ್ಡರಸ್ತೆ, ಆರ್‌ಎಚ್‌ಸಿಎಸ್ ಲೇಔಟ್, ಅನ್ನಪೂರ್ಣೇಶ್ವರಿ ನಗರ, ಬೆಂಗಳೂರು	10,000
9	**ಸೌಮ್ಯಾ ಎಂ.,** ನಂ.26, ಪ್ರಕೃತಿ, 4ನೇ ಅಡ್ಡರಸ್ತೆ, ವಾಜಪೇಯಿ ನಗರ, ಚಿಕ್ಕಲಸಂದ್ರ, ಬೆಂಗಳೂರು	10,000
10	**ಎ.ಆರ್.ಎಸ್.ಭಟ್ಟ,** ನಿವೃತ್ತ ಮ್ಯಾನೇಜರ್, ಕೆನರಾ ಬ್ಯಾಂಕ್, ನಂ.814, ಗಂಗೆ ರಸ್ತೆ, ಇ&ಎಫ್ ಬ್ಲಾಕ್, ಕುವೆಂಪುನಗರ, ಮೈಸೂರು	10,000
11	**ಕನಕ ನಾರಾಯಣಮೂರ್ತಿ,** ಅಪಾರ್ಟ್‌ಮೆಂಟ್ 201, ರಿನೇಸನ್ಸ್ ಔರಾ, 55, 2ನೇ ಮುಖ್ಯರಸ್ತೆ, ವೈಯಾಲಿಕಾವಲ್, ಬೆಂಗಳೂರು	10,000
12	**ಎನ್.ವಿ.ಪ್ರಸನ್ನ,** ನಂ.23, 2ನೇ ಅಡ್ಡರಸ್ತೆ, ವಿನಾಯಕ ನಗರ, ಹೆಬ್ಬಾಳ, ಬೆಂಗಳೂರು	7,000
13	**ವಾಸುದೇವ ಸೋಲನಕರ್,** ನಮನ, ನಂ.10846/1ಸಿ, 1ನೇ ಅಡ್ಡರಸ್ತೆ, 1ನೇ ಮುಖ್ಯರಸ್ತೆ, ಜಯನಗರ, ಧಾರವಾಡ	6,500
14	**ಕಿರಣ್ ಶ್ರೀನಾಥ್ ಎಸ್.,** ನಂ.396, 2ನೇ ಅಡ್ಡರಸ್ತೆ, 5ನೇ ಬ್ಲಾಕ್, ಬನಶಂಕರಿ 3ನೇ ಹಂತ,ಬೆಂಗಳೂರು	5,116
15	**ಕೃಷ್ಣಮೂರ್ತಿ ಹನೂರು,** ನಂ.2, 1ನೇ ಮುಖ್ಯರಸ್ತೆ, ಎಚ್ ಬ್ಲಾಕ್,ರಾಮಕೃಷ್ಣನಗರ, ಮೈಸೂರು	5,001
16	**ನಾಗೇಶ್ ಎನ್.,** ನಂ.ಟಿಎಫ್-6ಬಿ, ಸಾಯಿನಂದನ್ ಅಪಾರ್ಟ್‌ಮೆಂಟ್, 80 ಅಡಿ ರಸ್ತೆ, ರಾಜರಾಜೇಶ್ವರಿ ನಗರ, ಬೆಂಗಳೂರು	5,000
17	**ಅರುಣಾ ವಿ.ಹೆಗ್ಡೆ &** ಕೆ.ಕೃತಾರ್ಥ ಹೆಗ್ಡೆ, 1-17-1254/5, ಶ್ರೀರಮಣ, ಉಮಾ ಭಾಗ್, ಎಂ.ಡಿ.ಡಿ.ಲೇನ್, ಚಿಲಿಂಬಿ, ಮಂಗಳೂರು	5,000
18	**ಎಂ.ಶಶಿಕಲಾ,** ನಂ.203, 2ನೇ ಹಂತ, 1ನೇ ಅಡ್ಡರಸ್ತೆ, ಬೃಂದಾವನ ಬಡಾವಣೆ, ಮೈಸೂರು	5,000
19	**ಶೋಭಾ ಶರ್ಮಾ,** ಬಿ-1008, ಕಾರಿನಾಟಾ, ಬ್ರಿಗೇಡ್ ಗಾರ್ಡೆನಿಯಾ, 9ನೇ ಅಡ್ಡರಸ್ತೆ, ಜೆ.ಪಿ.ನಗರ, 7ನೇ ಹಂತ, ಬೆಂಗಳೂರು	5,000
20	**ನಥಾನಿಯಲ್ ವರ್ಗೀಸ್,** ವೈಟ್ ಫೀಲ್ಡ್, ಬೆಂಗಳೂರು	5,000
21	**ನುಗ್ಗೇಹಳ್ಳಿ ಕೇಶವಮೂರ್ತಿ ಇಂದಿರಾ,** ನಂ.59, ಎನ್‌ಎಎಲ್ ಲೇಔಟ್, ಈಸ್ಟ್ ಎಂಡ್ ರೋಡ್, 4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು	5,000
22	**ಎಂ.ಆರ್.ನಾಗಲಲಿತಾ,** 586/1,ದೀವಾನ್ಸ್ ರಸ್ತೆ, ಲಕ್ಷ್ಮಿಪುರಂ, ಮೈಸೂರು	5,000
23	**ಶ್ರೀನಿಧಿ ರಘುರಾಂ,** ಬಿಟಿಎಂ ಲೇಔಟ್, ಬೆಂಗಳೂರು	5,000
24	**ಬಿ.ವಿ.ಬಸವರಾಜ,** ನಂ.26/ಎ, ಮಹಾಜನ ಹೈಸ್ಕೂಲ್ ರಸ್ತೆ, ಜಯಲಕ್ಷ್ಮಿಪುರಂ, ಮೈಸೂರು	3,500
25	**ವೆಂಕಟೇಶನ್ ಭಾಷ್ಯಂ,** 369, 2ನೇ ಇ ಮುಖ್ಯರಸ್ತೆ, 11ನೇ ಬ್ಲಾಕ್, ನಾಗರಭಾವಿ 2ನೇ ಹಂತ, ಬೆಂಗಳೂರು	3,500
26	**ಸಂತೋಷ್ ಚಿಕ್ಕೇಗೌಡ,** ಬೆಂಗಳೂರು	3,346.5
27	**ಉಷಾ ಮಹದೇವನ್,** ಮಲ್ಲೇಶ್ವರಂ, ಬೆಂಗಳೂರು	3,000
28	**ರವಿಶಂಕರ್ ಕೆ.ಜಿ.,** ನಂ.94, 1ನೇ ಹಂತ, 1ನೇ ಘಟ್ಟ, 2ನೇ ಅಡ್ಡರಸ್ತೆ, ಮತ್ತೀಕೆರೆ, ಬೆಂಗಳೂರು	3,000
29	**ಕಿರಣ್ ಶ್ರೀನಾಥ್ ಎಸ್.,** ನಂ.396, 2ನೇ ಅಡ್ಡರಸ್ತೆ, 5ನೇ ಬ್ಲಾಕ್, ಬನಶಂಕರಿ 3ನೇ ಹಂತ, ಬೆಂಗಳೂರು	3,000
30	**ಆರತಿ ಜನಾರ್ದನ್,** ನಂ.194, ಡಿಫೆನ್ಸ್ ಲೇಔಟ್, ವಿದ್ಯಾರಣ್ಯಪುರ, ಬೆಂಗಳೂರು	3,000
31	**ಎಚ್.ಎನ್.ಆನಂದ,** 49, ಎಐಸಿಎಸ್ ಲೇಔಟ್, 2ನೇ ಹಂತ, 3ನೇ ಮುಖ್ಯರಸ್ತೆ, ಸಂಜಯನಗರ, ಬೆಂಗಳೂರು	3,000
32	**ವಿ.ಎಸ್.ಚಂದ್ರಶೇಖರ್,** 3841, 13ನೇ ಮುಖ್ಯರಸ್ತೆ, ಕುಮಾರಸ್ವಾಮಿ ಲೇಔಟ್, 2ನೇ ಹಂತ, ಬೆಂಗಳೂರು	2,501
33	**ವೆಂಕಟೇಶ್ ಎಚ್.ಎಚ್.,** ಹುಸ್ಕೂರು, ದಾಸನಪುರ ಹೋಬಳಿ, ಬೆಂಗಳೂರು	2,500
34	**ಕೆ.ಎಸ್.ಸೂರ್ಯಪ್ರಕಾಶ್,** 466, 5ನೇ ಮುಖ್ಯರಸ್ತೆ, ಎಚ್.ಎಂ.ಟಿ ಲೇಔಟ್, ಆನಂದನಗರ, ಬೆಂಗಳೂರು	2,225
35	**ಅರುಣ್ ಸಂಪತ್,** ನಂ.1,777, ಎಸ್.ಎಲ್.ಎನ್.ನಿಲಯ, 22ನೇ ಅಡ್ಡರಸ್ತೆ, ಗೋವಿಂದರಾಜನಗರ, ವಿಜಯನಗರ ಪೋಸ್ಟ್, ಬೆಂಗಳೂರು	2,021
36	**ಎಸ್.ಇಂದ್ರಾವತಮ್ಮ,** ನಂ.552, ಅನುಗ್ರಹ, 3ನೇ ಮುಖ್ಯರಸ್ತೆ, 2ನೇ ಹಂತ, 6ನೇ ಬ್ಲಾಕ್, ಬನಶಂಕರಿ 3ನೇ ಹಂತ, ಬೆಂಗಳೂರು	2,000
37	**ಜನಾರ್ದನ್ ಎಸ್.,** ನಂ.194, ಡಿಫೆನ್ಸ್ ಲೇಔಟ್, ವಿದ್ಯಾರಣ್ಯಪುರ, ಬೆಂಗಳೂರು	2,000
38	**ರಾಧಾ ಸಂಪತ್ ಕುಮಾರ್,** ನಂ.1,777, ಎಸ್.ಎಲ್.ಎನ್.ನಿಲಯ, 22ನೇ ಅಡ್ಡರಸ್ತೆ, ಗೋವಿಂದರಾಜನಗರ, ವಿಜಯನಗರ ಪೋಸ್ಟ್, ಬೆಂಗಳೂರು	1,117
39	**ಹಾಲಹರವಿ ಅನಿಲ್ ಕುಮಾರ್,** ಟಿ4, ಶ್ರೀವಾಸ್ತವ ಪ್ರಸಿದ್ಧಿ, ಬಿಕಾಸಿಪುರ ಮುಖ್ಯರಸ್ತೆ, ಯೆಲಚೇನಹಳ್ಳಿ, ಬೆಂಗಳೂರು	1,002
40	**ಬಿ.ಎಸ್.ಶಿವಕುಮಾರ್,** ನಂ.39, 6ನೇ ಅಡ್ಡರಸ್ತೆ, ದೇವಮ್ಮ ರಸ್ತೆ, ಶಿವು ಲೇಔಟ್, ಹೊರವರ್ತುಲ ರಸ್ತೆ, ಮರಿಯಪ್ಪನಪಾಳ್ಯ, ಬೆಂಗಳೂರು	1,000
41	**ಗಣೇಶ್ ಸುಂದರೇಶನ್,** ನಂ.202, ಎರಡನೇ ಅಡ್ಡರಸ್ತೆ, 38ನೇ ಮುಖ್ಯರಸ್ತೆ, ಬಿಟಿಎಂ 2ನೇ ಹಂತ, ಬೆಂಗಳೂರು	1,000
	ಇದುವರೆಗೆ ಸಂಗ್ರಹವಾದ ಒಟ್ಟು ಮೊತ್ತ:	1,25,80,000

‘1.70 ಕೋಟಿ ಡೋಸ್ ಲಸಿಕೆ ಲಭ್ಯ’

ನವದೆಹಲಿ (ಪಿಟಿಐ): ದೇಶದ ಎಲ್ಲ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಲ್ಲಿ 1.70 ಕೋಟಿಗೂ ಅಧಿಕ ಡೋಸ್ ಲಸಿಕೆ ಲಭ್ಯವಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಶುಕ್ರವಾರ ತಿಳಿಸಿದೆ.

ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಈವರೆಗೆ 38.18 ಕೋಟಿ ಡೋಸ್‌ಗಳಷ್ಟು ಲಸಿಕೆಗಳನ್ನು ಪೂರೈಸಲಾಗಿದೆ. ಇನ್ನೂ 23,80,080 ಡೋಸ್‌ಗಳಷ್ಟು ಲಸಿಕೆಗಳು ರವಾನೆಯಾಗುವ ಹಂತದಲ್ಲಿವೆ ಎಂದು ಹೇಳಿದೆ.

ಮೇಕೆದಾಟು: ತಮಿಳುನಾಡಿನಲ್ಲಿ 12ಕ್ಕೆ ಸರ್ವಪಕ್ಷಗಳ ಸಭೆ

ಚೆನ್ನೈ (ಪಿಟಿಐ): ಮೇಕೆದಾಟು ಅಣೆಕಟ್ಟು ವಿಚಾರ ಕುರಿತು ಚರ್ಚಿಸಲು ಇದೇ 12 ರಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಸರ್ವಪಕ್ಷಗಳ ಸಮಾಲೋಚನಾ ಸಭೆ ಕರೆದಿದ್ದಾರೆ.

ರೈತರ ಹಿತಾಸಕ್ತಿ ರಕ್ಷಣೆಯ ಹಿನ್ನೆಲೆಯಲ್ಲಿ ತಮಿಳುನಾಡಿನ ಎಲ್ಲ ಪಕ್ಷಗಳ ಅಭಿಪ್ರಾಯಗಳನ್ನು ಪಡೆಯುವ ಉದ್ದೇಶದಿಂದ ಈ ಸಭೆ ಕರೆಯಲಾಗಿದೆ ಎಂದು ಶುಕ್ರವಾರ ರಾಜ್ಯ ಸರ್ಕಾರ ತಿಳಿಸಿದೆ.

ಮೇಕೆದಾಟು ಅಣೆಕಟ್ಟು ವಿಚಾರಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸ್ಟಾಲಿನ್ ಅವರು ಕರ್ನಾಟಕದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ. ಪತ್ರದಲ್ಲಿ ‘ಮೇಕೆದಾಟು ಅಣೆಕಟ್ಟು ನಿರ್ಮಾಣ ಸುಪ್ರೀಂ ಕೋರ್ಟ್ ತೀರ್ಪಿನ ವಿರುದ್ಧವಾಗಿದೆ. ಇದರಿಂದ ತಮಿಳುನಾಡಿನ ಕೃಷಿಕರಿಗೆ ತುಂಬಾ ತೊಂದರೆಯಾಗುತ್ತದೆ. ಆದ್ದರಿಂದ ಮೇಕೆದಾಟುವಿನಲ್ಲಿ ಅಣೆಕಟ್ಟು ನಿರ್ಮಿಸಲು ತಮಿಳುನಾಡು ಸರ್ಕಾರ ಕರ್ನಾಟಕಕ್ಕೆ ಅವಕಾಶ ನೀಡುವುದಿಲ್ಲ ಎಂದು ತಿಳಿಸಿದ್ದಾರೆ ಎಂದು ಸರ್ಕಾರದ ಅಧಿಕೃತ ಪ್ರಕಟಣೆ ತಿಳಿಸಿದೆ.

ಹೈಕೋರ್ಟ್ ನಡೆಸುತ್ತಿರುವ ವಿಚಾರಣೆ ತಡೆಗೆ ‘ಸುಪ್ರೀಂ’ ನಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಡಿಜಿಟಲ್ ಸುದ್ದಿ ಮಾಧ್ಯಮಗಳ ನಿಯಂತ್ರಣಕ್ಕಾಗಿ ಜಾರಿಗೆ ತಂದಿರುವ ಹೊಸ ಮಾಹಿತಿ ತಂತ್ರಜ್ಞಾನ ನಿಯಮಗಳ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ಕುರಿತು ವಿವಿಧ ಹೈಕೋರ್ಟ್‌ಗಳಲ್ಲಿ ನಡೆಯುತ್ತಿರುವ ವಿಚಾರಣೆಗೆ ತಡೆ ನೀಡಲು ಸುಪ್ರೀಂಕೋರ್ಟ್ ಗುರುವಾರ ನಿರಾಕರಿಸಿತು.

ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ನೇತೃತ್ವದ ನ್ಯಾಯಪೀಠ, ‘ಇದೇ ವಿಷಯ ಕುರಿತ ಬಾಕಿ ಇರುವ ಪ್ರಕರಣಗಳೊಂದಿಗೆ ಈ ಅರ್ಜಿಯನ್ನೂ ಸೇರಿಸಲಾಗುವುದು. ಜುಲೈ 16ರಂದು ವಿಚಾರಣೆ ನಡೆಸಲು, ಸಂಬಂಧಿಸಿದ ನ್ಯಾಯಪೀಠದ ಮುಂದೆ ಈ ಅರ್ಜಿಯನ್ನು ಮಂಡಿಸುವಂತೆ ನಿರ್ದೇಶನ ನೀಡಲಾಗುವುದು’ ಎಂದು ಹೇಳಿತು.

ದೆಹಲಿ, ಕೇರಳ ಹಾಗೂ ಇತರ ಹೈಕೋರ್ಟ್‌ಗಳಲ್ಲಿ ಇದೇ ವಿಷಯಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆ ನಡೆಯುತ್ತಿದೆ. ಈ ಎಲ್ಲ ಅರ್ಜಿಗಳನ್ನು ಸುಪ್ರೀಂಕೋರ್ಟ್‌ಗೆ ವರ್ಗಾಯಿಸಬೇಕು ಎಂದು ಕೋರಿ ಕೇಂದ್ರ ಸರ್ಕಾರ ಅರ್ಜಿ ಸಲ್ಲಿಸಿತ್ತು. ಆದರೆ, ನ್ಯಾಯಪೀಠ ಈ ಕುರಿತು ಯಾವುದೇ ಆದೇಶ ಹೊರಡಿಸಲಿಲ್ಲ.

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಹೊಸ ಐಟಿ ಕಾಯ್ದೆ, ‘ಮಾಹಿತಿ ತಂತ್ರಜ್ಞಾನ (ಮಧ್ಯವರ್ತಿ ಮಾರ್ಗಸೂಚಿಗಳು ಮತ್ತು ಡಿಜಿಟಲ್ ಮೀಡಿಯಾ ಎಥಿಕ್ಸ್ ಕೋಡ್) ನಿಯಮಗಳು 2021ರ ಸಿಂಧುತ್ವ ಪ್ರಶ್ನಿಸಿ ಹಲವಾರು ಡಿಜಿಟಲ್ ಸುದ್ದಿ ಮಾಧ್ಯಮ ಸಂಸ್ಥೆಗಳು ಅರ್ಜಿ ಸಲ್ಲಿಸಿವೆ.

ಪ್ರಜಾವಾಣಿ ವಾರೆವ್ಹಾ ವಾರಾಂತ್ಯ
ಸೂಪರ್ ಬ್ರ್ಯಾಂಡ್‌ಗಳ ಬಂಪರ್ ಕೊಡುಗೆಗಳು ಇದೀಗ ನಿಮಗಾಗಿ!
ಇನ್ನಷ್ಟು ಆಕರ್ಷಕ ಕೊಡುಗೆಗಳಿಗೆ ಇಲ್ಲಿ ಸ್ಕ್ಯಾನ್ ಮಾಡಿ
ಕೂಪನ್ ಪಾರ್ಟನರ್: COUPON DUNIA
200ಕ್ಕೂ ಹೆಚ್ಚು ಕೊಡುಗೆಗಳು
MENSXP: ಪುರುಷರ ಫ್ಯಾಷನ್ ಮತ್ತು ಜೀವನಶೈಲಿ ಉತ್ಪನ್ನಗಳಲ್ಲಿ ₹499 ಖರೀದಿಗಳ ಮೇಲೆ ಫ್ಲಾಟ್ 30% ರಿಯಾಯಿತಿ.
Faasos: ₹199 ಮೇಲಿನ ಖರೀದಿಗಳಲ್ಲಿ 110ವರೆಗೆ 40% ರಿಯಾಯಿತಿ.
HEALTHKART: HKನಲ್ಲಿ 30%ವರೆಗೂ ರಿಯಾಯಿತಿ + ಹೆಲ್ತ್ ಅಂಡ್ ಫಿಟ್ನೆಸ್ ಉತ್ಪನ್ನಗಳಿಗೆ 10% ರಿಯಾಯಿತಿ
BEARDO: ಪುರುಷರ ಸೌಂದರ್ಯ ಉತ್ಪನ್ನಗಳಲ್ಲಿ ಫ್ಲಾಟ್ 22% ರಿಯಾಯಿತಿ.
edureka!: ಪ್ರಮಾಣೀಕೃತ ಕೋರ್ಸ್‌ಗಳಿಗೆ 30% ರಿಯಾಯಿತಿ.
toppr: ಟಾಪರ್ ಮಾಡ್ಯೂಲ್‌ಗಳು ಮತ್ತು ಪ್ಯಾಕೇಜ್‌ಗಳಲ್ಲಿ ಫ್ಲಾಟ್ 12% ರಿಯಾಯಿತಿ
Udemy: ಮೊದಲ ಉಡೆಮಿ ಭೇಟಿಗೆ ಉನ್ನತ ಕೋರ್ಸ್‌ಗಳು ₹525ರಿಂದ ಲಭ್ಯ
boAt: 60% ರಿಯಾಯಿತಿ + ಹೆಚ್ಚುವರಿ 10% ರಿಯಾಯಿತಿ
Flipkart: ದಿನಸಿ ಮೇಲೆ 80%ವರೆಗೆ ರಿಯಾಯಿತಿ
makemytrip: ದೇಶೀಯ ವಿಮಾನಗಳಲ್ಲಿ ಪ್ರತಿ ಪ್ರಯಾಣಿಕರಿಗೆ ಫ್ಲಾಟ್ ₹600 ರಿಯಾಯಿತಿ
THE MAN COMPANY: ಫ್ಲಾಟ್ 15% ರಿಯಾಯಿತಿ – ಪುರುಷರ ಸೌಂದರ್ಯ ಉತ್ಪನ್ನಗಳ ಖರೀದಿಗೆ
goibibo: ದೇಶೀಯ ಹೋಟೆಲ್‌ಗಳಲ್ಲಿ 50%ವರೆಗೂ ರಿಯಾಯಿತಿ
ಷರತ್ತುಗಳು ಅನ್ವಯ

ವಿಂಬಲ್ಡನ್ ಟೆನಿಸ್ ಟೂರ್ನಿ: ಹುಬರ್ತ್ ಹುರ್ಕಾಜ್, ಡೆನಿಸ್ ಶಪೊವಲೊವ್‌ಗೆ ನಿರಾಸೆ

ಪ್ರಶಸ್ತಿ ಸುತ್ತಿಗೆ ನೊವಾಕ್, ಬೆರೆಟಿನಿ

ವಿಂಬಲ್ಡನ್ (ಎಪಿ/ಎಎಫ್‌ಪಿ)): ಜಿದ್ದಾಜಿದ್ದಿನ ಪೈಪೋಟಿಯಲ್ಲಿ ಗೆದ್ದ ನೊವಾಕ್ ಜೊಕೊವಿಚ್ ಹಾಗೂ ಮೆಟಿಯೊ ಬೆರೆಟಿನಿ ಅವರು ವಿಂಬಲ್ಡನ್ ಟೆನಿಸ್ ಟೂರ್ನಿಯ ಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

ಶುಕ್ರವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ನಾಲ್ಕರ ಘಟ್ಟದ ಹಣಾಹಣಿಯಲ್ಲಿ ವಿಶ್ವದ ಅಗ್ರ ರ‍್ಯಾಂಕಿನ ಆಟಗಾರ, ಸರ್ಬಿಯದ ಜೊಕೊವಿಚ್ 7-6 (7/3), 7-5, 7-5ರಿಂದ ಕೆನಡಾದ ಡೆನಿಸ್ ಶಪೊವಲೊವ್ ಅವರನ್ನು ಮಣಿಸಿದರು. ಈ ಮೂಲಕ 30ನೇ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ಪ್ರಶಸ್ತಿ ಸುತ್ತು ತಲುಪಿದರು. ಪಂದ್ಯದಲ್ಲಿ 11ರ ಪೈಕಿ ಹತ್ತು ಬ್ರೇಕ್ ಪಾಯಿಂಟ್ಸ್ ಉಳಿಸಿಕೊಂಡರು.

ಭಾನುವಾರ ನಡೆಯುವ ಫೈನಲ್ ಹಣಾಹಣಿಯಲ್ಲಿ ಜೊಕೊವಿಚ್, ಇಟಲಿಯ ಬೆರೆಟಿನಿ ಅವರನ್ನು ಎದುರಿಸಲಿದ್ದು, ಆರನೇ ವಿಂಬಲ್ಡನ್ ಪ್ರಶಸ್ತಿಗಾಗಿ ಸೆಣಸಲಿದ್ದಾರೆ.

ನೊವಾಕ್ ಜೊಕೊವಿಚ್ ಜಯದ ಸಂಭ್ರಮ– ರಾಯಿಟರ್ಸ್ ಚಿತ್ರ

ನಾಲ್ಕರ ಘಟ್ಟದ ಇನ್ನೊಂದು ಪಂದ್ಯದಲ್ಲಿ ಬೆರೆಟಿನಿ 6-3, 6-0, 6-7 (3/7), 6-4ರಲ್ಲಿ ಪೋಲೆಂಡ್‌ನ ಹುಬರ್ತ್ ಹುರ್ಕಾಜ್ ಎದುರು ಗೆಲುವು ಸಾಧಿಸಿದರು.

ಈ ಮೂಲಕ ವಿಂಬಲ್ಡನ್ ಟೂರ್ನಿಯ ಸಿಂಗಲ್ಸ್‌ನಲ್ಲಿ ಫೈನಲ್ ಪ್ರವೇಶಿಸಿದ ಇಟಲಿಯ ಮೊದಲ ಆಟಗಾರ ಎನಿಸಿಕೊಂಡರು. 45 ವರ್ಷಗಳ ಬಳಿಕ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ಪ್ರಶಸ್ತಿ ಸುತ್ತು ತಲುಪಿದ ಇಟಲಿಯ ಮೊದಲ ಆಟಗಾರ ಎಂಬ ಶ್ರೇಯವೂ ಅವರದಾಯಿತು. 1976ರಲ್ಲಿ ಆ ದೇಶದ ಆಡ್ರಿಯಾನೊ ಪನಾಟ್ಟಾ ಫ್ರೆಂಚ್ ಓಪನ್ ಪ್ರಶಸ್ತಿ ಜಯಿಸಿದ್ದರು.

ಬಲಿಷ್ಠ ಮುಂಗೈ ಹೊಡೆತಗಳಿಂದ ರಂಜಿಸಿದ ಬೆರೆಟಿನಿ, 22 ಏಸ್‌ಗಳನ್ನು ಸಿಡಿಸಿದರು.

ಪ್ರಶಸ್ತಿ ಮೇಲೆ ಪ್ಲಿಸ್ಕೋವ ಕಣ್ಣು: ಚೊಚ್ಚಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ಕನಸಿನಲ್ಲಿರುವ ಜೆಕ್ ಗಣರಾಜ್ಯದ ಕರೋಲಿನಾ ಪ್ಲಿಸ್ಕೋವ ಟೂರ್ನಿಯ ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ ಶನಿವಾರ ಅಗ್ರಶ್ರೇಯಾಂಕದ ಆ್ಯಶ್ಲಿ ಬಾರ್ಟಿ ಸವಾಲು ಎದುರಿಸಲಿದ್ದಾರೆ.

ಮಟಿಯೊ ಬೆರೆಟಿನಿ– ಎಎಫ್‌ಪಿ ಚಿತ್ರ

ಆಸ್ಟ್ರೇಲಿಯಾದ ಆ್ಯಶ್ಲಿ ಬಾರ್ಟಿ, ತಾನಾಡಿದ ಕಳೆದ ಏಳು ಗ್ರ್ಯಾನ್‌ಸ್ಲಾಮ್ ಟೂರ್ನಿಗಳ ಪೈಕಿ ಒಂದರಲ್ಲಿ ಪ್ರಶಸ್ತಿಗೆ ಮುತ್ತಿಕ್ಕಿದ್ದು, ಇಲ್ಲಿ ಎರಡನೇ ಟ್ರೋಫಿಗೆ ಪ್ರಯತ್ನಿಸಲಿದ್ದಾರೆ. 2019ರ ಫ್ರೆಂಚ್ ಓಪನ್ ಟೂರ್ನಿಯಲ್ಲಿ ಅವರು ಚಾಂಪಿಯನ್ ಆಗಿದ್ದರು.

ಸೆಮಿಫೈನಲ್ ಹಣಾಹಣಿಯಲ್ಲಿ ಎಂಟನೇ ಶ್ರೇಯಾಂಕದ ಪ್ಲಿಸ್ಕೋವ ಎರಡನೇ ಶ್ರೇಯಾಂಕದ ಅರಿನಾ ಸಬಲೆಂಕಾ ಅವರನ್ನು ಪರಾಭವಗೊಳಿಸಿದ್ದರು.

ಇಲ್ಲಿ ಪ್ರಶಸ್ತಿ ಗೆದ್ದರೆ ಅಪರೂಪದ ಸಾಧನೆಯೊಂದಕ್ಕೆ ಜೆಕ್ ಗಣರಾಜ್ಯದ ಆಟಗಾರ್ತಿ ಭಾಜನರಾಗಲಿದ್ದಾರೆ. ಟೆನಿಸ್‌ನ 'ಓಪನ್ ಯುಗ' ಆರಂಭವಾದ ಬಳಿಕ, ಮೊದಲೆರಡು ಶ್ರೇಯಾಂಕದಲ್ಲಿರುವ ಆಟಗಾರ್ತಿಯರನ್ನು ಮಣಿಸಿ ವಿಂಬಲ್ಡನ್ ಟ್ರೋಫಿ ಜಯಿಸಿದ ನಾಲ್ಕನೇ ಮಹಿಳೆ ಎನಿಸಿಕೊಳ್ಳಲಿದ್ದಾರೆ.

ಅಮೆರಿಕದ ವೀನಸ್ ವಿಲಿಯಮ್ಸ್ ಎರಡು ಬಾರಿ ಈ ಸಾಧನೆ ಮಾಡಿದ್ದಾರೆ. 2000ರ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಮೊದಲ ಶ್ರೇಯಾಂಕದ ಮಾರ್ಟಿನಾ ಹಿಂಗಿಸ್ ಅವರನ್ನು ಮಣಿಸಿದ್ದ ಅವರು ಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಲಿಂಡ್ಸೆ ಡೆವನ್‌ಪೋರ್ಟ್ ಅವರಿಗೆ ಸೋಲುಣಿಸಿದ್ದರು. 2005ರ ಸೆಮಿಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಮರಿಯಾ ಶರಪೋವಾ ಎದುರು ಮತ್ತು ಫೈನಲ್‌ನಲ್ಲಿ ಮೊದಲ ಶ್ರೇಯಾಂಕದ ಡೆವನ್‌ಪೋರ್ಟ್ ವಿರುದ್ಧ ವೀನಸ್ ಗೆದ್ದಿದ್ದರು.

1969ರಲ್ಲಿ ಇಂಗ್ಲೆಂಡ್‌ನ ಆ್ಯನ್ ಜೋನ್ಸ್ ಮತ್ತು 1971ರ ವಿಂಬಲ್ಡನ್ ಟೂರ್ನಿಯಲ್ಲಿ ಆಸ್ಟ್ರೇಲಿಯಾದ ಇವಾನ್ ಗೂಲಗಾಂಗ್ ಕಾವ್ಲಿ ಈ ಸಾಧನೆ ಮಾಡಿದ್ದರು.

ಟೋಕಿಯೊ ಒಲಿಂಪಿಕ್ಸ್ 2020 ಭಾರತದ ಕನಸಿನ ಪಯಣ

ಬಾಕ್ಸಿಂಗ್ ಅಂಕಣದಲ್ಲಿ ಮೇರಿ 'ಅಮಿತೋತ್ಸಾಹ'

ಇನ್ನು 13 ದಿನ

ಮೇರಿ ಕೋಮ್

ಬಾಕ್ಸಿಂಗ್ ಲೋಕದ ದಂತಕಥೆ ಮೇರಿ ಕೋಮ್ ಮೇಲೆ ಈಗ ಕ್ರೀಡಾಪ್ರೇಮಿಗಳ ಚಿತ್ತ ನೆಟ್ಟಿದೆ. ಇದೇ ತಿಂಗಳು ನಡೆಯಲಿರುವ ಟೋಕಿಯೊ ಒಲಿಂಪಿಕ್ಸ್‌ನ ಉದ್ಘಾಟನೆಯಲ್ಲಿ ತ್ರಿವರ್ಣ ಧ್ವಜಧಾರಿಯಾಗಿ ಭಾರತ ಮಹಿಳಾ ತಂಡವನ್ನು ಅವರು ಮುನ್ನಡೆಸಲಿದ್ದಾರೆ. ಇದೇ ಬಾವುಟ ಬಾಕ್ಸಿಂಗ್ ಅಂಕಣದಲ್ಲಿ ವಿಜಯಪತಾಕೆಯಾಗಿ ಅವರ ಕೈಯಲ್ಲಿ ರಾರಾಜಿಸಬೇಕೆಂಬ ನಿರೀಕ್ಷೆಯೂ ಈಗ ಗರಿಗೆದರಿದೆ.

ಆರು ಬಾರಿ ವಿಶ್ವ ಚಾಂಪಿಯನ್ ಆಗಿರುವ ಮತ್ತು 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿರುವ ಬಾಕ್ಸರ್ ಮೇರಿಯ ಮ್ಯಾಜಿಕ್ ಜಪಾನಿನ ನೆಲದಲ್ಲಿ ನಡೆದರೆ ಅದೊಂದು ಅಭೂತಪೂರ್ವ ದಾಖಲೆಯಾಗಿ ಇತಿಹಾಸದ ಪುಟ ಸೇರುವುದು ಖಚಿತ.

ಮೂರು ಮಕ್ಕಳ ತಾಯಿಯೂ ಆಗಿರುವ ಮೇರಿ, 51 ಕೆ.ಜಿ. ವಿಭಾಗದಲ್ಲಿ ಕಣಕ್ಕಿಳಿಯಲಿದ್ದಾರೆ. ಈಚೆಗಷ್ಟೇ ದುಬೈನಲ್ಲಿ ನಡೆದಿದ್ದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಮೇರಿ ಬೆಳ್ಳಿ ಪದಕ ಜಯಿಸಿದ್ದರು. ಮಣಿಪುರದ ಬಡಕುಟುಂಬವೊಂದರಲ್ಲಿ ಜನಿಸಿ, ಅಪ್ಪನ ವಿರೋಧವಿದ್ದರೂ ಬಾಕ್ಸಿಂಗ್ ಕ್ರೀಡೆಯಲ್ಲಿ ತೊಡಗಿಸಿಕೊಂಡು ಉನ್ನತ ಸಾಧನೆ ಮಾಡಿರುವ 38 ವರ್ಷದ ಮೇರಿಗೆ ಇದು ಬಹುತೇಕ ಕೊನೆಯ ಒಲಿಂಪಿಕ್ಸ್. ತಮ್ಮ ಯಶೋಗಾಥೆಯ ಪಯಣಕ್ಕೆ ಪದಕದ ಮೆರುಗು ತುಂಬಿ ಕೈಗವಸುಗಳನ್ನು ಕಳಚುವ ಛಲದಲ್ಲಿದ್ದಾರೆ.

ಅವರ ಸಾಧನೆಯ ಪ್ರೇರಣೆಯಿಂದಾಗಿ ಹಲವು ಹೆಣ್ಣುಮಕ್ಕಳು ಬಾಕ್ಸಿಂಗ್ ಕ್ರೀಡೆಯತ್ತ ಆಕರ್ಷಿತರಾಗಿದ್ದು ಸುಳ್ಳಲ್ಲ. ಹರಿಯಾಣದ ಪೂಜಾರಾಣಿ ಕೂಡ ಅವರಲ್ಲಿ ಒಬ್ಬರು. ಈಚೆಗೆ ಏಷ್ಯನ್ ಚಾಂಪಿಯನ್‌ಷಿಪ್‌ನ ಮಿಡಲ್‌ವೇಟ್‌ನಲ್ಲಿ ಚಿನ್ನದ ಸಾಧನೆ ಮಾಡಿರುವ ಪೂಜಾ ಟೋಕಿಯೊದಲ್ಲಿಯೂ ಮಿಂಚುವ ಛಲದಲ್ಲಿದ್ದಾರೆ.

ವಿಜೇಂದರ್ ಸಿಂಗ್

ಪೂಜಾ ರಾಣಿ

ಅಮಿತ್ ಪಂಘಾಲ್

ವಿಕಾಸ್ ಕ್ರಿಷನ್

ಈ ಸಲದ ತಂಡದಲ್ಲಿ ನಾಲ್ವರು ಮಹಿಳೆಯರು ಮತ್ತು ಐವರು ಪುರುಷ ಬಾಕ್ಸರ್‌ಗಳು ಸ್ಥಾನ ಪಡೆದಿದ್ದಾರೆ.

ಬಾಕ್ಸಿಂಗ್ ಕ್ರೀಡೆಯಲ್ಲಿ ಭಾರತವೂ ಪದಕ ಜಯಿಸಬಹುದು ಎಂಬುದನ್ನು ತೋರಿಸಿಕೊಟ್ಟವರು ವಿಜೇಂದರ್ ಸಿಂಗ್. 2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಅವರು ಕಂಚು ಜಯಿಸಿದರು. ಮಿಡ್ಲ್‌ವೇಟ್ ವಿಭಾಗದಲ್ಲಿ ಅವರು ಸಾಧನೆ ಮಾಡಿದ್ದರು. ಈ ಬಾರಿ ಅಮಿತ್ ಪಂಘಾಲ್ ಅವರ ಮೇಲೆ ಭರವಸೆ ಇದೆ. ಅವರು 2018ರ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಜಯಿಸಿದ್ದರು. ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಸಾಧನೆ ಮಾಡಿದ್ದರು. ಅಲ್ಲದೇ ಈಚೆಗೆ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿಯೂ ಪದಕ ಸಾಧನೆ ಮಾಡಿದ್ದರು. ಅದರಿಂದಾಗಿ ಅವರಿಂದ ಹೆಚ್ಚು ನಿರೀಕ್ಷೆ ಇದೆ.

ಈ ಹಿಂದಿನ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದ ವಿಕಾಸ್ ಕ್ರಿಷನ್ ಕೂಡ ಈ ಬಾರಿ ಕೊರಳಿಗೆ ಪದಕದ ಅಲಂಕಾರ ಮಾಡಿಕೊಳ್ಳುವ ಛಲದಲ್ಲಿದ್ದಾರೆ. ಶೂಟಿಂಗ್, ಕುಸ್ತಿಯ ನಂತರ ಬಾಕ್ಸಿಂಗ್ ಕಣದಿಂದಲೂ ಪದಕ ಜಯಿಸುವ ಭರವಸೆ ಭಾರತೀಯರ ಕಂಗಳಲ್ಲಿದೆ.

ಬಾಕ್ಸರ್	ವಿಭಾಗ	ವರ್ಷ	ತಾಣ	ಪದಕ
ವಿಜೇಂದರ್ ಸಿಂಗ್	ಮಿಡಲ್‌ವೇಟ್	2008	ಬೀಜಿಂಗ್	ಕಂಚು
ಮೇರಿ ಕೋಮ್	ಫ್ಲೈವೇಟ್	2012	ಲಂಡನ್	ಕಂಚು

ಭಾರತ ತಂಡ ಇಂತಿದೆ

ಮಹಿಳೆಯರು: ಮೇರಿ ಕೋಮ್ (51ಕೆ.ಜಿ), ಪೂಜಾ ರಾಣಿ (75 ಕೆ.ಜಿ), ಸಿಮ್ರನ್‌ಜಿತ್ ಕೌರ್ (60 ಕೆ.ಜಿ), ಲವ್ಲಿನಾ ಬೊರ್ಗೊಯಿನ್ (69 ಕೆ.ಜಿ),

ಪುರುಷರು: ಆಶಿಶ್ ಕುಮಾರ್ (75 ಕೆ.ಜಿ), ಸತೀಶ ಕುಮಾರ್ (+91 ಕೆ.ಜಿ), ಅಮಿತ್ ಪಂಘಾಲ್ (52 ಕೆ.ಜಿ), ವಿಕಾಸ್ ಕ್ರಿಷನ್ (69 ಕೆ.ಜಿ), ಮನೀಷ್ ಕೌಶಿಕ್ (63 ಕೆ.ಜಿ).

ಜುಲೈ 13ರ ಬದಲು 17ರಂದು ಸರಣಿ ಆರಂಭ

ಇಂಗ್ಲೆಂಡ್ ಪ್ರವಾಸದಿಂದ ಮರಳಿದ 48 ಗಂಟೆ ಅವಧಿಯಲ್ಲಿ ಶ್ರೀಲಂಕಾ ತಂಡದ ಸದಸ್ಯರಲ್ಲಿ ಕೋವಿಡ್ ಪತ್ತೆಯಾಗಿದೆ.

ಭಾರತ–ಲಂಕಾ ಕ್ರಿಕೆಟ್ ಸರಣಿ ಮುಂದೂಡಿಕೆ

ನವದೆಹಲಿ (ಪಿಟಿಐ): ಭಾರತ ಮತ್ತು ಶ್ರೀಲಂಕಾ ತಂಡಗಳ ನಡುವಿನ ಏಕದಿನ ಮತ್ತು ಟಿ20 ಕ್ರಿಕೆಟ್ ಸರಣಿಯ ವೇಳಾಪಟ್ಟಿಯನ್ನು ಬದಲಿಸಲಾಗಿದ್ದು ಜುಲೈ 13ರ ಬದಲಿಗೆ 17ರಂದು ಆರಂಭಗೊಳ್ಳಲಿದೆ.

ತವರಿನ ತಂಡದ ಬ್ಯಾಟಿಂಗ್ ಕೋಚ್ ಗ್ರ್ಯಾಂಡ್ ಫ್ಲಾವರ್ ಮತ್ತು ಡೇಟಾ ಅನಾಲಿಸ್ಟ್ ಜಿ.ಟಿ. ನಿರೋಷನ್ ಕೋವಿಡ್ ಸೋಂಕಿಗೆ ಒಳಗಾದ ಕಾರಣ ಈ ನಿರ್ಧಾರ ಕೈಗೊಳ್ಳಲಾಗಿದೆ. ಇವರಿಬ್ಬರು ಇಂಗ್ಲೆಂಡ್ ಪ್ರವಾಸ ಮುಗಿಸಿ ಬಂದಿರುವ ತಂಡದ ಜೊತೆಗೆ ಇದ್ದರು. ತಂಡದಲ್ಲಿ ಸೋಂಕು ಪತ್ತೆಯಾದ ಕಾರಣ ಆಟಗಾರರ ಕಠಿಣ ಕ್ವಾರಂಟೈನ್ ಅವಧಿಯನ್ನು ವಿಸ್ತರಿಸಲಾಗಿದೆ.

'ತಂಡದ ಆಟಗಾರರು, ಕೋಚ್‌ಗಳು, ಸಹಾಯಕ ಸಿಬ್ಬಂದಿಯನ್ನು ಗುರುವಾರ ಪಿಸಿಆರ್ ಪರೀಕ್ಷೆಗೆ ಒಳಪಡಿಸಲಾಗಿತ್ತು. ಗ್ರ್ಯಾಂಟ್ ಫ್ಲಾವರ್‌ಗೆ ಕೋವಿಡ್ ತಗುಲಿರುವುದು ಮೊದಲು ಪತ್ತೆಯಾಗಿತ್ತು. ಬಳಿಕ ನಿರೋಷನ್‌ಗೆ ಸೋಂಕು ದೃಢಪಟ್ಟಿದೆ. ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಶ್ರೀಲಂಕಾ ಕ್ರಿಕೆಟ್ ಮಂಡಳಿ ತಿಳಿಸಿದೆ.

ಇಂಗ್ಲೆಂಡ್‌ನ ಏಕದಿನ ಅಂತರರಾಷ್ಟ್ರೀಯ ಕ್ರಿಕೆಟ್ ತಂಡದ ಏಳು ಸದಸ್ಯರಲ್ಲಿ ಇತ್ತೀಚೆಗೆ ಕೋವಿಡ್ ಸೋಂಕು ದೃಢಪಟ್ಟಿತ್ತು. ಶ್ರೀಲಂಕಾ ವಿರುದ್ಧದ ಕೊನೆಯ ಏಕದಿನ ಪಂದ್ಯದ ಬಳಿಕ ನಡೆಸಲಾದ ಪರೀಕ್ಷೆಯಲ್ಲಿ ಸೋಂಕು ಪತ್ತೆಯಾಗಿತ್ತು.

ಒಲಿಂಪಿಕ್ಸ್: ಅಥ್ಲೀಟ್ ಇರ್ಫಾನ್, ಶ್ರೀಶಂಕರ್‌ಗೆ ಫಿಟ್‌ನೆಸ್ ಪರೀಕ್ಷೆ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವುದನ್ನು ಖಚಿತಪಡಿಸಲು ಭಾರತದ ಅಥ್ಲೀಟ್ ಎಂ.ಶ್ರೀಶಂಕರ್ ಫಿಟ್‌ನೆಸ್ ಪರೀಕ್ಷೆಯಲ್ಲಿ ಪಾಸಾಗಬೇಕಿದೆ. ನಡಿಗೆ ಸ್ಪರ್ಧಿಗಳಾದ ಭಾವನಾ ಜಾಟ್ ಹಾಗೂ ಕೆ.ಟಿ.ಇರ್ಫಾನ್ ಅವರು ಶುಕ್ರವಾರ ಈ ಪರೀಕ್ಷೆಗೆ ಒಳಗಾದರು.

ಸದ್ಯ ಈ ಮೂವರು ಅಥ್ಲೀಟ್‌ಗಳು ಬೆಂಗಳೂರಿನಲ್ಲಿರುವ ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಕೇಂದ್ರದಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಭಾವನಾ ಮತ್ತು ಇರ್ಫಾನ್ ಅವರು 20 ಕಿ.ಮೀ. ನಡಿಗೆ ಮತ್ತು ಶ್ರೀಶಂಕರ್ ಲಾಂಗ್ ಜಂಪ್ ಸ್ಪರ್ಧಿಗಳಾಗಿದ್ದು, ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ಈ ಮೂವರಿಗೆ ಫಿಟ್‌ನೆಸ್ ಪರೀಕ್ಷೆಯಲ್ಲಿ ಪಾಲ್ಗೊಳ್ಳುವಂತೆ ಸೂಚಿಸಿತ್ತು.


ಕೆ.ಟಿ.ಇರ್ಫಾನ್ –ಎಎಫ್‌ಪಿ ಚಿತ್ರ

ಶ್ರೀಶಂಕರ್ ಅವರು ಇದೇ 21ರಂದು ಫಿಟ್‌ನೆಸ್ ಪರೀಕ್ಷೆಗೆ ಒಳಗಾಗಲಿದ್ದಾರೆ.

'ಫಿಟ್ ಆಗಿಲ್ಲದ ಅಥ್ಲೀಟ್‌ಗಳನ್ನು ಒಲಿಂಪಿಕ್ಸ್‌ಗೆ ಕರೆದೊಯ್ಯಲು ಸಾಧ್ಯವಿಲ್ಲ. ಕ್ರೀಡಾಪಟುಗಳು ಒಲಿಂಪಿಕ್ಸ್ ಅರ್ಹತೆ ಪಡೆದ ಬಳಿಕ ಗಾಯದಿಂದ ಮುಕ್ತರಾಗಿದ್ದು, ಸ್ಪರ್ಧೆಗೆ ಅರ್ಹರಾಗಿದ್ದಾರೆಯೇ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ಇದು ಫಿಟ್‌ನೆಸ್ ಪರೀಕ್ಷೆ ಮಾತ್ರ' ಎಂದು ಎಎಫ್‌ಐ ಅಧ್ಯಕ್ಷ ಆದಿಲ್ ಸುಮರಿವಾಲಾ ಹೇಳಿದ್ದಾರೆ.

ಇರ್ಫಾನ್ ಅವರು ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿದ ಭಾರತದ ಮೊದಲ ಟ್ರ್ಯಾಕ್ ಮತ್ತು ಫೀಲ್ಡ್ ಅಥ್ಲೀಟ್ ಆಗಿದ್ದಾರೆ. 2019ರಲ್ಲಿ ಜಪಾನ್‌ನಲ್ಲಿ ನಡೆದ ಏಷ್ಯನ್ ನಡಿಗೆ ಚಾಂಪಿಯನ್‌ಷಿಪ್‌ನಲ್ಲಿ ಅವರು ಈ ಅರ್ಹತೆ ಗಳಿಸಿದ್ದರು.

ಭಾವನಾ 2020ರ ರಾಷ್ಟ್ರೀಯ ನಡಿಗೆ ಸ್ಪರ್ಧೆಯಲ್ಲಿ ಮತ್ತು ಶ್ರೀಶಂಕರ್ ಅವರು ರಾಷ್ಟ್ರೀಯ ಫೆಡರೇಷನ್ ಕಪ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಮೂಲಕ ಟೋಕಿಯೊ ಕ್ರೀಡಾಕೂಟಕ್ಕೆ ಅರ್ಹತೆ ಗಳಿಸಿದ್ದಾರೆ.

ಪರಿಕ್ರಮ ಎಫ್‌ಸಿಗೆ ಭರ್ಜರಿ ಜಯ

ಬೆಂಗಳೂರು: ಪರಿಕ್ರಮ ಎಫ್‌ಸಿ ತಂಡವು ಭರ್ಜರಿ ಇಲ್ಲಿ ನಡೆಯುತ್ತಿರುವ ಬಿಡಿಎಫ್‌ಎ 'ಎ' ಡಿವಿಷನ್ ಲೀಗ್ ಫುಟ್‌ಬಾಲ್ ಪಂದ್ಯದಲ್ಲಿ 7-0ಯಿಂದ ಬಿಟಿಎಂ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು.

ಇನ್ನೊಂದು ಪಂದ್ಯದಲ್ಲಿ ಜವಾಹರ್ ಯೂನಿಯನ್ ಎಫ್‌ಸಿಯು 2-0ಯಿಂದ ಪೋಸ್ಟಲ್ ಡಿಪಾರ್ಟ್‌ಮೆಂಟ್ ಎಫ್‌ಸಿಯನ್ನು ಸೋಲಿಸಿತು.

ಕ್ರಿಕೆಟ್: ನತಾಲಿ ಅರ್ಧಶತಕ

ನಾರ್ತಾಂಪ್ಟನ್: ನತಾಲಿ ಶಿವರ್ ಅವರು ಗಳಿಸಿದ ಅರ್ಧಶತಕ (55) ಹಾಗೂ ಆ್ಯಮಿ ಜೋನ್ಸ್ (43) ಅವರ ಉತ್ತಮ ಬ್ಯಾಟಿಂಗ್ ನೆರವಿನಿಂದ ಇಂಗ್ಲೆಂಡ್ ಮಹಿಳೆಯರ ತಂಡ ಸವಾಲಿನ ಮೊತ್ತ ಕಲೆಹಾಕಿತು.

ಭಾರತ ತಂಡದ ಎದುರಿನ ಮೊದಲ ಟ್ವೆಂಟಿ–20 ಪಂದ್ಯದಲ್ಲಿ 7 ವಿಕೆಟ್ ಕಳೆದುಕೊಂಡು 177 ರನ್ ಗಳಿಸಿತ್ತು.

ಸಂಕ್ಷಿಪ್ತ ಸ್ಕೋರ್: ಇಂಗ್ಲೆಂಡ್: 20 ಓವರ್‌ಗಳಲ್ಲಿ ಏಳು ವಿಕೆಟ್‌ಗೆ 177 (ನತಾಲಿ ಶಿವರ್ 55, ಆ್ಯಮಿ ಜೋನ್ಸ್ 43; ಶಿಖಾ ಪಾಂಡೆ 22ಕ್ಕೆ 3) (ವಿವರ ಅಪೂರ್ಣ).

ಟೋಕಿಯೊ ಒಲಿಂಪಿಕ್ಸ್‌ಗೆ ಪ್ರೇಕ್ಷಕರ ನಿರ್ಬಂಧ

ಕ್ರೀಡಾಸಂಸ್ಥೆ, ಅಥ್ಲೀಟ್‌ಗಳ ಬೇಸರ

ಟೋಕಿಯೊ (ರಾಯಿಟರ್ಸ್): ಈ ಬಾರಿಯ ಒಲಿಂಪಿಕ್ಸ್ ಕೂಟ ವೀಕ್ಷಣೆಗೆ ಪ್ರೇಕ್ಷಕರಿಗೆ ಅವಕಾಶ ನೀಡದೇ ಇರುವುದಕ್ಕೆ ಕ್ರೀಡಾಸಂಸ್ಥೆಗಳು ಮತ್ತು ಅಥ್ಲೀಟ್‌ಗಳು ಬೇಸರ ವ್ಯಕ್ತಪಡಿಸಿದ್ದಾರೆ. ಇದೇ ವೇಳೆ, ಕ್ರೀಡಾಕೂಟವನ್ನು ನಡೆಸುವುದು ಕೂಡ ಮುಖ್ಯ ಎಂಬ ಅಭಿಪ್ರಾಯವೂ ಅವರಿಂದ ವ್ಯಕ್ತವಾಗಿದೆ.

ಕೋವಿಡ್‌ನಿಂದಾಗಿ ವಿದೇಶಿ ಪ್ರೇಕ್ಷಕರಿಗೆ ಅವಕಾಶ ಇಲ್ಲ ಎಂದು ಈ ಹಿಂದೆಯೇ ಆಯೋಜಕರು ತಿಳಿಸಿದ್ದರು. ಸ್ಥಳೀಯ ಪ್ರೇಕ್ಷಕರಿಗೂ ನಿರ್ಬಂಧ ಹೇರಿ ಗುರುವಾರ ಆದೇಶ ಹೊರಡಿಸಿದೆ. ಜಪಾನ್‌ನಲ್ಲಿ ಆರೋಗ್ಯ ತುರ್ತು ಪರಿಸ್ಥಿತಿ ಹೇರಿದ್ದು, ಅದು ಒಲಿಂಪಿಕ್ಸ್ ಸಂದರ್ಭದಲ್ಲೂ ಜಾರಿಯಲ್ಲಿ ಇರುವುದರಿಂದ ಈ ಕ್ರಮಕ್ಕೆ ಮುಂದಾಗಿದ್ದಾರೆ.

ಒಲಿಂಪಿಕ್ಸ್‌ನಲ್ಲಿ ಮೊದಲ ಪದಕದ ನಿರೀಕ್ಷೆಯಲ್ಲಿರುವ ಅಮೆರಿಕದ 100 ಮೀಟರ್ಸ್ ಹರ್ಡಲ್ಸ್ ಪಟು, ವಿಶ್ವ ದಾಖಲೆಯ ಒಡತಿ ಕೆಂಡ್ರಾ ಹ್ಯಾರಿಸನ್ 'ಗ್ಯಾಲರಿಯಲ್ಲಿ ಪ್ರೇಕ್ಷಕರಿಲ್ಲದೆ ಟ್ರ್ಯಾಕ್‌ನಲ್ಲಿ ಓಡುವಾಗ ಹುಮ್ಮಸ್ಸು ಕಡಿಮೆಯಾಗುತ್ತದೆ. ಹೀಗಾಗಿ ಸಾಮರ್ಥ್ಯದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುವ ಸಾಧ್ಯತೆ ಇದೆ' ಎಂದು ಹೇಳಿದರು.

ಕ್ರೀಡಾಪಟುಗಳ ಜೊತೆ ಮೋದಿ ಸಂವಾದ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ಗೆ ತೆರಳುವ ಭಾರತದ ಕ್ರೀಡಾಪಟುಗಳ ಜೊತೆ ಪ್ರಧಾನಿ ನರೇಂದ್ರ ಮೋದಿ ಇದೇ 13ರಂದು ಸಂವಾದ ನಡೆಸಲಿದ್ದಾರೆ.

ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳಲು ಭಾರತ ನಡೆಸಿರುವ ಸಿದ್ಧತೆಯ ಕುರಿತು ತಿಳಿಯಲು ಶುಕ್ರವಾರ ಅವರು ಸಭೆ ನಡೆಸಿದರು. ಮೊದಲ ತಂಡ ಟೋಕಿಯೊಗೆ ಹೊರಡುವ ಮೂರು ದಿನಗಳ ಹಿಂದೆ ವರ್ಚುವಲ್ ಆಗಿ ಸಂವಾದ ನಡೆಯಲಿದೆ ಎಂದು ಸಭೆಯ ನಂತರ ತಿಳಿಸಲಾಯಿತು. ದೇಶದ ಎಲ್ಲ ಜನರ ಪರವಾಗಿ ತಾವು ಅಥ್ಲೀಟ್‌ಗಳ ಜೊತೆ ಮಾತನಾಡಲಿರುವುದಾಗಿ ಮೋದಿ ಟ್ವೀಟ್ ಮಾಡಿದ್ದಾರೆ.

ಆನಂದ್‌ಗೆ ಸೋಲು

ಜಗ್ರೆಬ್ (ಪಿಟಿಐ): ಗ್ರ್ಯಾಂಡ್‌ಮಾಸ್ಟರ್, ಭಾರತದ ವಿಶ್ವನಾಥನ್ ಆನಂದ್ ಇಲ್ಲಿ ನಡೆಯುತ್ತಿರುವ ಕ್ರೊವೇಷ್ಯಾ ಗ್ರ್ಯಾಂಡ್ ಚೆಸ್ ಟೂರ್ ರ‍್ಯಾಪಿಡ್ ಸ್ಪರ್ಧೆಯಲ್ಲಿ ಸೋಲುಂಡರು. ಅವರನ್ನು ನೆದರ್ಲೆಂಡ್ಸ್‌ನ ಗ್ರ್ಯಾಂಡ್‌ಮಾಸ್ಟರ್ ಅನೀಶ್ ಗಿರಿ ಮಣಿಸಿದರು.

ಏಳು ಮತ್ತು ಎಂಟನೇ ಸುತ್ತಿನಲ್ಲಿ ಡ್ರಾ ಸಾಧಿಸಿದ್ದ ಆನಂದ್ ಈ ಸೋಲಿನೊಂದಿಗೆ ಒಂಬತ್ತು ಪಾಯಿಂಟ್‌ಗಳಿಗೆ ಸಮಾಧಾನ ಪಟ್ಟುಕೊಳ್ಳಬೇಕಾಯಿತು. ಅಗ್ರ ಶ್ರೇಯಾಂಕದ ರಷ್ಯಾ ಆಟಗಾರ ಇಯಾನ್ ನೆಪೊನಿಯಾಚಿ 11 ಪಾಯಿಂಟ್‌ಗಳೊಂದಿಗೆ ಅಗ್ರ ಸ್ಥಾನ ಉಳಿಸಿಕೊಂಡರೆ 10 ಪಾಯಿಂಟ್‌ಗಳೊಂದಿಗೆ ಗಿರಿ ಎರಡನೇ ಸ್ಥಾನ ಗಳಿಸಿದರು.

ಫುಟ್‌ಬಾಲ್: ಮೆಸ್ಸಿ, ನೇಮರ್‌ಗೆ ಮೊದಲ ಪ್ರಶಸ್ತಿ ಕನಸು

ರಿಯೊ ಡಿ ಜನೈರೊ (ಎಎಫ್‌ಪಿ): ಬಾರ್ಸಿಲೋನಾ ತಂಡದಲ್ಲಿ ಜೊತೆಯಾಗಿ ಕಣಕ್ಕೆ ಇಳಿದಿದ್ದ ಲಯೊನೆಲ್ ಮೆಸ್ಸಿ ಮತ್ತು ನೇಮರ್ ಅವರು ಕೋಪಾ ಅಮೆರಿಕ ಫುಟ್‌ಬಾಲ್ ಟೂರ್ನಿಯ ಫೈನಲ್‌ನಲ್ಲಿ ಭಾನುವಾರ ಮುಖಾಮುಖಿಯಾಗಲಿದ್ದಾರೆ.

ಪ್ರಶಸ್ತಿಗಾಗಿ ನಡೆಯುವ ಸೆಣಸಾಟದಲ್ಲಿ ಅರ್ಜೆಂಟೀನಾ ಪರ ಮೆಸ್ಸಿ ಆಡಲಿದ್ದು ಬ್ರೆಜಿಲ್ ಪಾಳಯದಲ್ಲಿ ನೇಮರ್ ಕಾಣಿಸಿಕೊಳ್ಳಲಿದ್ದಾರೆ. ಇವರಿಬ್ಬರು ಆಡಿರುವ ಸಂದರ್ಭದಲ್ಲಿ ಉಭಯ ತಂಡಗಳು ಈ ವರೆಗೆ ಕೋಪಾ ಅಮೆರಿಕ ಟೂರ್ನಿಯಲ್ಲಿ ಪ್ರಶಸ್ತಿ ಗೆಲ್ಲಲಿಲ್ಲ. ಆದ್ದರಿಂದ ಯಾವ ತಂಡ ಗೆದ್ದರೂ ಈ ಪೈಕಿ ಒಬ್ಬರಿಗೆ ಟೂರ್ನಿಯಲ್ಲಿ ಮೊದಲ ಯಶಸ್ಸು ಆಗಲಿದೆ.

ಮರಕಾನ ಕ್ರೀಡಾಂಗಣದಲ್ಲಿ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಉಭಯ ತಂಡಗಳು ಕೂಡ ಗೆಲ್ಲುವ ನೆಚ್ಚಿನ ಬಳಗಗಳಾಗಿವೆ.

ಆದ್ದರಿಂದ ಕೋಪಾ ಅಮೆರಿಕ ಟೂರ್ನಿಯಲ್ಲಿ ಅರ್ಜೆಂಟೀನಾ ಮತ್ತು ಬ್ರೆಜಿಲ್ ಈ ಹಿಂದೆ ಮೂರು ಬಾರಿ ಫೈನಲ್‌ನಲ್ಲಿ ಸೆಣಸಿದ್ದವು. 1937ರಲ್ಲಿ ಬ್ರೆಜಿಲ್ ವಿರುದ್ಧ ಜಯ ಗಳಿಸಿ ಅರ್ಜೆಂಟೀನಾ ಮೊದಲ ಪ್ರಶಸ್ತಿ ಗೆದ್ದುಕೊಂಡಿತ್ತು. ಬ್ರೆಜಿಲ್ 2004 ಮತ್ತು 2007ರಲ್ಲಿ ಚಾಂಪಿಯನ್ ಆಗಿತ್ತು. ಮೂರನೇ ಸ್ಥಾನಕ್ಕಾಗಿ ಕೊಲಂಬಿಯ ಮತ್ತು ಪೆರು ಶನಿವಾರ ಸೆಣಸಲಿವೆ.

ಲಯೊನೆಲ್ ಮೆಸ್ಸಿ

ಪಂದ್ಯ ಆರಂಭ: ಭಾನುವಾರ ಬೆಳಿಗ್ಗೆ 5.30 (ಭಾರತೀಯ ಕಾಲಮಾನ) **ನೇರ ಪ್ರಸಾರ:** ಸೋನಿ ನೆಟ್‌ವರ್ಕ್

ಯೂರೊ ಕಪ್: ಇಟಲಿಯ ಸಾವಿರ ಪ್ರೇಕ್ಷಕರಿಗೆ ಅವಕಾಶ

ಲಂಡನ್ (ಎಎಫ್‌ಪಿ): ಯೂರೊ ಕಪ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಫೈನಲ್ ಪಂದ್ಯ ವೀಕ್ಷಿಸಲು ಇಟಲಿಯ ಒಂದು ಸಾವಿರ ಪ್ರೇಕ್ಷಕರಿಗೆ ಮಾತ್ರ ಅವಕಾಶ ನೀಡಲಾಗುವುದು ಎಂದು ಬ್ರಿಟನ್ ಸಾರಿಗೆ ಸಚಿವಾಲಯದ ಕಾರ್ಯದರ್ಶಿ ಗ್ರ್ಯಾಂಟ್ ಶಪ್ಸ್ ಶುಕ್ರವಾರ ತಿಳಿಸಿದ್ದಾರೆ.

ಕೊರೊನಾ ಆತಂಕಗಳು ದೂರವಾದ ಹಿನ್ನೆಲೆಯಲ್ಲಿ, ವಿದೇಶದಿಂದ ಮರಳುವ ಇಂಗ್ಲೆಂಡ್ ನಿವಾಸಿಗಳು ಎರಡು ಡೋಸ್ ಲಸಿಕೆ ಪಡೆದಿದ್ದರೆ ಹೆಚ್ಚು ಕಾಲ ಪ್ರತ್ಯೇಕವಾಸದಲ್ಲಿ ಇರಬೇಕಾದ ಅಗತ್ಯವಿಲ್ಲ ಎಂದು ಬ್ರಿಟನ್ ಸರ್ಕಾರ ಗುರುವಾರ ತಿಳಿಸಿದೆ. ಆದರೆ ಯುರೋಪಿಯನ್ ಚಾಂಪಿಯನ್‌ಷಿಪ್ ಫೈನಲ್‌ಗೆ ಇಟಲಿ ಪ್ರೇಕ್ಷಕರು ಬರಬಹುದೇ ಎಂಬ ಸಂದೇಹ ಉಳಿದಿತ್ತು.

ಭಾನುವಾರ ರಾತ್ರಿ ನಡೆಯಲಿರುವ ಫೈನಲ್‌ನಲ್ಲಿ ಆತಿಥೇಯ ಇಂಗ್ಲೆಂಡ್ ಮತ್ತು ಇಟಲಿ ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ. 60 ಸಾವಿರ ಪ್ರೇಕ್ಷಕರು ಪಂದ್ಯ ವೀಕ್ಷಿಸುವ ನಿರೀಕ್ಷೆ ಇದೆ.

ಮುಂಬೈ ಧಾರಣೆ

ಶೇಂಗಾ

09-07-2021

ಜಾವಾ 70/80(ಹೊಸ)	9650-9700
ಜಾವಾ 80/90(ಹೊಸ)	9100-9150
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	9200-9300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1400 (1420)
ಒಂದು ವಾರದ ಡೆಲಿವರಿ	1395 (1415)
ಸೋಯಾ ಕಚ್ಚಾ	1270 (1270)
ಪಾಮ್ ವಾರದ ಡೆಲಿವರಿ	1163(1158)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (1270)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,750 (48,050)
ಬೆಳ್ಳಿ ಕೆ.ಜಿ
68,800 (69,050)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,727
ಇಂದಿನ ಅಂತ್ಯ	15,689
▼	38
ದಿನದ ಗರಿಷ್ಠ	15,730

ವಿನಿಮಯ ದರ

$ ಡಾಲರ್	74.64
£ ಪೌಂಡ್	103
€ ಯುರೊ	88.49
¥ ಯೆನ್ (100ಕ್ಕೆ)	67.69

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹500
12 ಮೊಟ್ಟೆಗೆ	₹70

ಮೈಸೂರು

100 ಮೊಟ್ಟೆಗೆ	₹500

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1390 (1410)
ಸೋಯಾ (ರಿಫೈನ್ಡ್)	₹1325 (1320)
ಸೂರ್ಯಕಾಂತಿ (ರಿಫೈನ್ಡ್)	₹1350 (1350)
ಪಾಮೋಲಿನ್	₹1165 (1160)

ಚಿನ್ನದ ಬೆಲೆ ₹ 451 ಕುಸಿತ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆಯು ಶುಕ್ರವಾರ ಪ್ರತಿ ಗ್ರಾಂಗೆ ₹ 451ರಷ್ಟು ಇಳಿಕೆ ಆಗಿದೆ. ಬೆಳ್ಳಿಯ ದರವು ಪ್ರತಿ ಕೆ.ಜಿ.ಗೆ ₹ 559ರಷ್ಟು ತಗ್ಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ	
ಕೋಕ	10000-22500
ಹೊಸತು	23500-43000
ಹಳತು	42500-52000
ಕಾರ್ಕಳ	
ಹೊಸತು	36000-43000
ಪುತ್ತೂರು	
ಹೊಸತು	30000-43000
ಕುಂದಾಪುರ	
ಹೊಸ ಚಾಲಿ	36000-43000
ಕೊಪ್ಪ	
ಗೊರಬಲು	31990-32699
ರಾಶಿ	41319-41319
ಕುಮಟಾ	
ಚಿಪ್ಪು	30099-32869
ಕೋಕ	20109-30189
ಫ್ಯಾಕ್ಟರಿ	15099-18489
ಹಳೆಚಾಲಿ	41099-42699
ಹೊಸಚಾಲಿ	37189-39399
ಹೊಸನಗರ	
ಬಿಳಿಗೋಟು	22319-29599
ಚಾಲಿ	32509-36399
ಕೆಂಪುಗೋಟು	31899-33689
ರಾಶಿ	39100-42329
ಸಿಪ್ಪೆಗೋಟು	18369-19299
ಶಿವಮೊಗ್ಗ	
ಬೆಟ್ಟೆ	43889-44919
ಗೊರಬಲು	17009-34169
ರಾಶಿ	38072-42209
ಸರಕು	49109-75500
ಸಿದ್ದಾಪುರ	
ಬಿಳಿಗೋಟು	26899-32989
ಚಾಲಿ	35099-38309
ಕೋಕ	20199-31199
ಕೆಂಪುಗೋಟು	30209-30209
ರಾಶಿ	38389-405099
ತಟ್ಟಿಬೆಟ್ಟೆ	32909-36909
ಶಿರಸಿ	
ಬೆಟ್ಟೆ	34299-40030
ಬಿಳಿಗೋಟು	22696-34599
ಚಾಲಿ	33826-39200
ರಾಶಿ	37599-43189
ಯಲ್ಲಾಪುರ	
ಬಿಳಿಗೋಟು	28899-33099
ಚಾಲಿ	33826-39200
ಕೋಕ	21891-30899
ಕೆಂಪುಗೋಟು	29199-32099
ರಾಶಿ	39639-43998
ತಟ್ಟಿಬೆಟ್ಟೆ	34699-39176

ಏಲಕ್ಕಿ ಧಾರಣೆ

ಸಕಲೇಶಪುರ	
ಕೂಳೆ	700- 800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150 -1200
ಹೆರಕಿದ್ದು	1500-1600
ಹಸಿರು ಸಾಧಾರಣ	900- 1000
ಹಸಿರು ಉತ್ತಮ	1100- 1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	385
ಕೊಬ್ಬರಿ	395 (ಅರಸಿಕೆರೆ)

ರೇಷ್ಮೆಗೂಡು

ರಾಮನಗರ	
ಮಿಶ್ರ ತಳಿ (ಸಿ.ಬಿ)	272-377
ದ್ವಿತಳಿ (ಬಿ.ವಿ)	350-480

ಕಾಫಿ ಧಾರಣೆ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	11,600	11,000	10,800	149.95
ಎಸಿ	4,620	4,400	4,275	
ಆರ್‌ಪಿ	5,500	5,500	5,750	ಲಂಡನ್ (ಡಾಲರ್ಸ್)
ಆರ್‌ಸಿ	3,300	3,150	3,375	1717

ಅರ್ಥ ವ್ಯವಸ್ಥೆಯಲ್ಲಿ ಚೇತರಿಕೆ ಲಕ್ಷಣ: ಹಣಕಾಸು ಸಚಿವಾಲಯ

ನವದೆಹಲಿ (ಪಿಟಿಐ): ಕೆಲವು ವಲಯಗಳನ್ನು ಗುರಿಯಾಗಿ ಇರಿಸಿಕೊಂಡು ಘೋಷಿಸಿದ ಆರ್ಥಿಕ ಪ್ಯಾಕೇಜ್ ಹಾಗೂ ತ್ವರಿತಗತಿಯಲ್ಲಿ ಲಸಿಕೆ ನೀಡುತ್ತಿರುವ ಪರಿಣಾಮವಾಗಿ ಅರ್ಥ ವ್ಯವಸ್ಥೆಯಲ್ಲಿ ಚೇತರಿಕೆಯ ಲಕ್ಷಣಗಳು ಕಾಣಿಸುತ್ತಿವೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಶುಕ್ರವಾರ ಹೇಳಿದೆ.

'ಆರ್ಥಿಕ ಪ್ಯಾಕೇಜ್‌ನ ಮೊತ್ತ ₹ 6.29 ಲಕ್ಷ ಕೋಟಿ. ಮಾರುಕಟ್ಟೆಯು ಭೀತಿಗೆ ಒಳಗಾಗದಂತೆ ನೋಡಿಕೊಳ್ಳುವ ಪ್ರಯತ್ನ ಹಾಗೂ ವಿವಿಧ ವಲಯಗಳ ಪುನಶ್ಚೇತನದ ಕೆಲಸ ಆರ್‌ಬಿಐ ಕಡೆಯಿಂದ ನಡೆದಿದೆ' ಎಂದು ಸಚಿವಾಲಯವು ಮಾಸಿಕ ವರದಿಯಲ್ಲಿ ಹೇಳಿದೆ.

ಕೋವಿಡ್ ಸಾಂಕ್ರಾಮಿಕದ ಆರ್ಥಿಕ ದುಷ್ಪರಿಣಾಮಗಳನ್ನು ತಗ್ಗಿಸುವ ಉದ್ದೇಶದಿಂದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಹಿಂದಿನ ತಿಂಗಳಲ್ಲಿ ಎಂಟು ಆರ್ಥಿಕ ಕ್ರಮಗಳನ್ನು ಘೋಷಿಸಿದ್ದರು.

ಈಚೆಗೆ ಘೋಷಿಸಿರುವ ಆರ್ಥಿಕ ಪುನಶ್ಚೇತನ ಪ್ಯಾಕೇಜ್, ಬಂಡವಾಳ ವೆಚ್ಚಕ್ಕೆ ನೆರವಾಗುತ್ತದೆ ಎಂಬ ನಿರೀಕ್ಷೆ ಇದೆ ಎಂದು ವರದಿಯಲ್ಲಿ ಹೇಳಲಾಗಿದೆ. ಆತ್ಮನಿರ್ಭರ ಭಾರತ ರೋಜಗಾರ್ ಯೋಜನೆಯು ಉದ್ಯೋಗ ನೀಡುವುದಕ್ಕೆ ಉತ್ತೇಜನ ಕೊಡುವುದರಿಂದಾಗಿ, ಮಾರುಕಟ್ಟೆಯಲ್ಲಿ ಬೇಡಿಕೆ ಜಾಸ್ತಿ ಆಗಬಹುದು. ನಗರಗಳಲ್ಲಿನ ಬಡವರಿಗೆ ಸಾಲ ಪಡೆಯಲು ನೆರವು ನೀಡುವ ಕ್ರಮ ಹಾಗೂ ಭಾರತ್‌ನೆಟ್ ಯೋಜನೆಯ ವಿಸ್ತರಣೆ ಕೂಡ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಳಕ್ಕೆ ಸಹಾಯ ಮಾಡಬಹುದು ಎಂದು ವರದಿಯು ಅಂದಾಜು ಮಾಡಿದೆ.

ಉಚಿತವಾಗಿ ಆಹಾರ ಧಾನ್ಯಗಳನ್ನು ಪೂರೈಸುವ ಕ್ರಮ ಮತ್ತು ರಸಗೊಬ್ಬರಕ್ಕೆ ಸಬ್ಸಿಡಿ ನೀಡುವ ಕ್ರಮವು ಗ್ರಾಮೀಣ ಪ್ರದೇಶಗಳಲ್ಲಿ ಬೇಡಿಕೆ ಸೃಷ್ಟಿಸಲು ನೆರವಾಗಬಹುದು. 'ಕೋವಿಡ್ ಲಸಿಕೆ ಕೊಡುವುದರ ವೇಗ ತಗ್ಗದೆ ಇರುವಂತೆ ನೋಡಿಕೊಳ್ಳುವುದು ಹಾಗೂ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಆರೋಗ್ಯ ಸೇವಾ ಮೂಲಸೌಕರ್ಯ ಹೆಚ್ಚಿಸುವುದು ದೇಶದ ಆರ್ಥಿಕ ಪುನಶ್ಚೇತನಕ್ಕೆ ಹೆಚ್ಚು ಸುಸ್ಥಿರ ಕೊಡುಗೆ ನೀಡಬಲ್ಲದು' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಮಲಬಾರ್ ಗೋಲ್ಡ್: ಐದು ಸಾವಿರ ಹುದ್ದೆಗಳಿಗೆ ನೇಮಕಾತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಾಭರಣಗಳ ಮಾರಾಟ ಕಂಪನಿಯಾಗಿರುವ 'ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್' ಐದು ಸಾವಿರಕ್ಕೂ ಹೆಚ್ಚು ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುತ್ತಿರುವುದಾಗಿ ಹೇಳಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಕಂಪನಿಯ ಅಸ್ತಿತ್ವವನ್ನು ಚಿಲ್ಲರೆ ಮಾರಾಟ ಕ್ಷೇತ್ರದಲ್ಲಿ ಇನ್ನಷ್ಟು ಹೆಚ್ಚಿಸಲು ಈ ನೇಮಕಾತಿ ನಡೆಯಲಿದೆ ಎಂದು ಅದು ತಿಳಿಸಿದೆ.

ಶೇಕಡ 50ರಷ್ಟು ಹುದ್ದೆಗಳು ಅರ್ಹ ಮಹಿಳಾ ಅಭ್ಯರ್ಥಿಗಳಿಗೆ ಮೀಸಲಾಗಿವೆ ಎಂದು ಕಂಪನಿ ಹೇಳಿದೆ. 'ಸರಿಯಾದ ಅರ್ಹತೆಗಳು ಇರುವವರನ್ನು ನೇಮಕ ಮಾಡಿಕೊಳ್ಳುವುದು, ಅವರಿಗೆ ಕಲಿಕೆ ಹಾಗೂ ಬೆಳವಣಿಗೆಗೆ ಅವಕಾಶ ಕಲ್ಪಿಸುವುದು ನಮ್ಮ ಪಾಲಿಗೆ ಯಾವತ್ತಿಗೂ ಆದ್ಯತೆಯ ಕೆಲಸಗಳು' ಎಂದು ಮಲಬಾರ್ ಸಮೂಹದ ಅಧ್ಯಕ್ಷ ಎಂ.ಪಿ. ಅಹಮದ್ ಹೇಳಿದ್ದಾರೆ. ಆಸಕ್ತರು ಕಂಪನಿಯ ವೆಬ್‌ಸೈಟ್ (www.malabargroup.com/careers/) ಮೂಲಕ ಅರ್ಜಿ ಸಲ್ಲಿಸಬಹುದು.

ಟಿಸಿಎಸ್‌ನಿಂದ 40 ಸಾವಿರ ಜನರ ನೇಮಕ

ಮುಂಬೈ (ಪಿಟಿಐ): ಭಾರತದ ಅತಿದೊಡ್ಡ ಐ.ಟಿ. ಸೇವಾ ಕಂಪನಿಯಾಗಿರುವ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಪ್ರಸಕ್ತ ಹಣಕಾಸು ವರ್ಷದಲ್ಲಿ ಒಟ್ಟು 40 ಸಾವಿರಕ್ಕಿಂತ ಹೆಚ್ಚು ಜನರಿಗೆ ಕ್ಯಾಂಪಸ್ ನೇಮಕಾತಿ ಮೂಲಕ ಉದ್ಯೋಗ ನೀಡಲಿದೆ.

ದೇಶದ ಖಾಸಗಿ ವಲಯದ ಕಂಪನಿಗಳ ಪೈಕಿ ಅತಿ ಹೆಚ್ಚು ಜನರಿಗೆ ಉದ್ಯೋಗ ನೀಡಿರುವ ಹೆಗ್ಗಳಿಕೆ ಕೂಡ ಟಿಸಿಎಸ್‌ಗೆ ಇದೆ. ಐದು ಲಕ್ಷಕ್ಕೂ ಹೆಚ್ಚು ಉದ್ಯೋಗಿಗಳನ್ನು ಕಂಪನಿ ಹೊಂದಿದೆ. 'ಹಿಂದಿನ ಹಣಕಾಸು ವರ್ಷದಲ್ಲಿ ಕಂಪನಿಯು ನಲವತ್ತು ಸಾವಿರ ಪದವೀಧರರಿಗೆ ಕ್ಯಾಂಪಸ್ ನೇಮಕಾತಿ ಮೂಲಕ ಉದ್ಯೋಗ ಕಲ್ಪಿಸಿತ್ತು. ಈ ವರ್ಷ ಇನ್ನೂ ಹೆಚ್ಚಿನ ಸಂಖ್ಯೆಯ ಪದವೀಧರರನ್ನು ನೇಮಕ ಮಾಡಿಕೊಳ್ಳಲಾಗುವುದು' ಎಂದು ಕಂಪನಿಯ ಜಾಗತಿಕ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಮಿಲಿಂದ್ ಲಕ್ಕಡ್ ಹೇಳಿದರು. ಕೋವಿಡ್‌ನಿಂದಾಗಿ ಜಾರಿಗೆ ಬಂದಿರುವ ನಿರ್ಬಂಧಗಳು ನೇಮಕಾತಿ ಪ್ರಕ್ರಿಯೆಗಳಿಗೆ ಅಡ್ಡಿ ಉಂಟುಮಾಡುವುದಿಲ್ಲ. ಕಳೆದ ವರ್ಷದಲ್ಲಿ ಒಟ್ಟು 3.6 ಲಕ್ಷ ಜನ ವರ್ಚುವಲ್ ಆಗಿ ಪ್ರವೇಶ ಪರೀಕ್ಷೆ ಬರೆದಿದ್ದರು ಎಂದು ತಿಳಿಸಿದರು.

ಎಸ್‌ವಿಸಿ ಬ್ಯಾಂಕ್ ಲಾಭ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಪ್ರಮುಖ ಸಹಕಾರ ಬ್ಯಾಂಕ್‌ಗಳಲ್ಲಿ ಒಂದಾಗಿರುವ 'ಎಸ್‌ವಿಸಿ ಸಹಕಾರ ಬ್ಯಾಂಕ್', ಮಾರ್ಚ್‌ಗೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ಒಟ್ಟು ₹ 150.21 ಕೋಟಿ ಲಾಭ ಗಳಿಸಿದೆ. ಹಿಂದಿನ ವರ್ಷ ಬ್ಯಾಂಕ್ ಒಟ್ಟು ₹ 142.01 ಕೋಟಿ ಲಾಭ ಗಳಿಸಿತ್ತು.

ಮಾರ್ಚ್ 31ಕ್ಕೆ ಕೊನೆಗೊಂಡ ವರ್ಷದಲ್ಲಿ ಬ್ಯಾಂಕ್‌ನ ಒಟ್ಟು ವಹಿವಾಟು ₹ 29,659ಕ್ಕೆ ಹೆಚ್ಚಳ ಆಗಿದೆ. ಹಿಂದಿನ ಹಣಕಾಸು ವರ್ಷದಲ್ಲಿ ಒಟ್ಟು ವಹಿವಾಟು ₹ 28,108 ಕೋಟಿ ಆಗಿತ್ತು ಎಂದು ಪ್ರಕಟಣೆ ತಿಳಿಸಿದೆ.

ಸವಾಲಿನ ಈ ಸಂದರ್ಭದಲ್ಲಿಯೂ ಬ್ಯಾಂಕ್‌ನ ಒಟ್ಟು ಎನ್‌ಪಿಎ ಪ್ರಮಾಣ ಶೇಕಡ 1.81ರಷ್ಟು ಮಾತ್ರ ಇದೆ ಎಂದು ಕೂಡ ಪ್ರಕಟಣೆಯಲ್ಲಿ ಹೇಳಲಾಗಿದೆ.